ಶನಿವಾರ, ಏಪ್ರಿಲ್ 8, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ರೇಲರ್ ಬಿಡುಗಡೆ

ಮುಂಬೈನಲ್ಲಿ ನಡೆದ 'ಶಾಕುಂತಲಂ' ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಚಿತ್ರನಟ ಸಮಂತಾ ಋತ್ ಪ್ರಭು ಪಾಲ್ಗೊಂಡಿದ್ದರು




ಮಾದರಿ ಕ್ಷೇತ್ರ: ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸುತ್ತೀರಿ? ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಏ.9ರ ಮಧ್ಯಾಹ್ನ 2ರೊಳಗೆ ಕಳುಹಿಸಿ.

ಕ್ಷೇತ್ರಗಳು: ● ಯಲಹಂಕ ● ಚಾಮರಾಜಪೇಟೆ ● ಗಾಂಧಿನಗರ

96060 38256

ಬಸವನಗುಡಿ



ಬಸವನಗುಡಿ ವಿಧಾನಸಭೆ ಕ್ಷೇತ್ರದಲ್ಲಿ ದೇವಸ್ಥಾನ ಹಾಗೂ ಪಾರಂಪರಿಕ ತಾಣಗಳು ಹೆಚ್ಚು, ಅಲ್ಲಿಗೆ ಬರುವ ಜನರ ಸಂಖ್ಯೆಯೂ ಅಧಿಕ. ಆದರೆ, ಈ ತಾಣಗಳ ಸುತ್ತ ಅಭಿವೃದ್ಧಿ ಕಾರ್ಯಗಳದ್ದೇ ಕೊರತೆ ಎಂಬುದು ಜನರ ಅಳಲು.

ಆಟದ ಮೈದಾನ ಉಳಿಸಿ



ಬಂಡಿ ಮಹಾಕಾಳಿ ದೇವಸ್ಥಾನದ ಬಳಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮತ್ತು ಅಮಾವಾಸ್ಯೆ ದಿನ ವಿಶೇಷ ಪೂಜೆ ಇರುತ್ತದೆ. ಭಕ್ತಾದಿಗಳು ರಸ್ತೆಯಲ್ಲೇ ವಾಹನ ನಿಲ್ಲಿಸುತ್ತಾರೆ. ದೇವಾಸ್ಥಾನದ ಮುಂಭಾಗದಲ್ಲಿ ಸರ್ಕಾರಿ ಜಾಗ ಇದೆ. ಅಲ್ಲಿ ಪಾರ್ಕಿಂಗ್ ವ್ಯವಸ್ಥೆ ಆಗಲಿ. ಮದ್ದೂರಮ್ಮ ದೇವಸ್ಥಾನದ ಆಟದ ಮೈದಾನದ ಬದಲು ಬೇರೆ ಕಡೆ ಪದವಿ ಪೂರ್ವ ಕಾಲೇಜು ನಿರ್ಮಾಣ ಮಾಡಬೇಕು. ಇದರಿಂದ ಮಕ್ಕಳಿಗೆ ಆಟವಾಡಲು ಮೈದಾನ ಉಳಿಯುತ್ತದೆ. ಇಲ್ಲದಿದ್ದರೆ ಹನುಮಂತನಗರದಲ್ಲಿ ಆಟದ ಮೈದಾನವೇ ಇಲ್ಲವಾಗುತ್ತದೆ.

ಗಿರೀಶ್, ಬೃಂದಾವನನಗರ, ಹನುಮಂತ ನಗರ

ಜಿಂಕೆ ಪಾರ್ಕ್‌ಗೆ ಮುಕ್ತಿ ನೀಡಿ



ಜಿಂಕೆ ಪಾರ್ಕ್‌ನಲ್ಲಿ ಸ್ಥಾಪಿಸಿದ್ದ ಗಾಜಿನ ಮನೆ ಸಾರ್ವಜನಿಕರಿಗೆ ಉಪಯೋಗಕ್ಕೆ ಇನ್ನೂ ಸಿಕ್ಕಿಲ್ಲ. ಈ ಪಾರ್ಕ್‌ನಲ್ಲಿ ಆಟ ಆಡಲು ನಿರ್ಮಿಸಿದ್ದ ಪುಟಾಣಿ ರೈಲು ನಿಂತುಹೋಗಿದೆ, ಅದನ್ನು ಮತ್ತೆ ಆರಂಭಿಸಬೇಕು. ಕೆಂಪೇಗೌಡ ಈಜುಕೊಳವನ್ನು ಮರುಸ್ಥಾಪನೆ ಮಾಡಿ, ಕ್ಷೇತ್ರದ ಜನತೆಗೆ ವಿಶೇಷ ಈಜು ತರಬೇತಿ ಕೇಂದ್ರವನ್ನಾಗಿ ಮಾಡಬೇಕು. ಜಿಂಕೆ ಪಾರ್ಕ್ ಕಾಂಪೌಂಡ್ ಸುತ್ತಮುತ್ತ ಪೋಲಿ ಹುಡುಗರು ಅಕ್ರಮ ಚಟುವಟಿಕೆ ನಡೆಸುತ್ತಾರೆ. ಪೊಲೀಸರನ್ನು ಇಲ್ಲಿ ನೇಮಿಸಿ ಇಂತಹ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.

ಚೆಲುವರಾಜ್ ಎಸ್.ಸಿ.
ಕಾಳಿದಾಸ ಲೇಔಟ್, ಶ್ರೀನಗರ

ವ್ಯವಸ್ಥೆ ನಿರ್ವಹಣೆ ಅಗತ್ಯ



ಬಸವನಗುಡಿ ಪ್ರದೇಶ ಸಾಕಷ್ಟು ಅಭಿವೃದ್ಧಿಯನ್ನು ಕಂಡಿದೆ. 40 ವರ್ಷಗಳ ಹಿಂದಿದ್ದ ಪ್ರದೇಶಗಳಿಗೂ ಈಗಿನ ಪ್ರದೇಶಗಳಿಗೂ ಸಾಕಷ್ಟು ವ್ಯತ್ಯಾಸವಿದೆ. ಇದು ಎಲ್ಲ ಭಾಗದಲ್ಲೂ ಆಗಬೇಕು. ಉದ್ಯಾನಗಳು ಅಭಿವೃದ್ಧಿಗೊಂಡಿವೆ. ವ್ಯಾಯಾಯಕ್ಕೆ ಪರಿಕರಗಳಿವೆ. ಆದರೆ, ಇವುಗಳು ನಿತ್ಯವೂ ಸ್ವಚ್ಛವಾಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಮೆರೆಯಬೇಕು. ಬಸವನಗುಡಿಯಲ್ಲಿ ಸ್ವಚ್ಛತೆ ಮತ್ತಷ್ಟು ಹೆಚ್ಚಾಗಬೇಕು.

ಎಸ್.ಪಿ. ಲಕ್ಷ್ಮಿಕಾಂತ್
ವಿವೇಕಾನಂದನಗರ

ದಾಸರಹಳ್ಳಿ



ಕೈಗಾರಿಕೆಗಳ ತಾಣವಾಗಿರುವ ದಾಸರಹಳ್ಳಿ ವಿಧಾನಸಭೆ ಕ್ಷೇತ್ರದಲ್ಲಿ ವಲಸಿಗರೇ ಹೆಚ್ಚಿದ್ದಾರೆ. ಅಭಿವೃದ್ಧಿಯ ಯೋಜನೆಗಳು ಅನುಷ್ಠಾನವಾಗಿದ್ದರೂ ಅವುಗಳು ಇನ್ನಷ್ಟು ಉತ್ತಮಗೊಳ್ಳಬೇಕು ಎಂಬುದು ನಾಗರಿಕರ ಆಶಯ.

ಸೌಲಭ್ಯಗಳು ಉತ್ತಮವಾಗಬೇಕು



ದಾಸರಹಳ್ಳಿ ಕೈಗಾರಿಕೆ ಹಾಗೂ ಹಳೆಯ ಗ್ರಾಮೀಣ ಪ್ರದೇಶಗಳನ್ನೂ ಒಳಗೊಂಡಿರುವುದರಿಂದ ಮೂಲ ಸೌಕರ್ಯಗಳ ಕೊರತೆ ಇನ್ನೂ ನೀಗಿಲ್ಲ. ಇನ್ನೂ ಉತ್ತಮವಾದ ರಸ್ತೆಗಳ ನಿರೀಕ್ಷೆ ಇದೆ. ಸರ್ಕಾರಿ ಶಾಲೆಗಳು, ಆಸ್ಪತ್ರೆಗಳಲ್ಲಿ ಹೆಚ್ಚಿನ ಸೌಲಭ್ಯಗಳ ಜೊತೆಗೆ ಸಕಲ ಚಿಕಿತ್ಸೆ ಲಭ್ಯವಾಗಬೇಕಿದೆ. ಒಳಚರಂಡಿ ವ್ಯವಸ್ಥೆ ಉನ್ನತೀಕರಿಸಬೇಕಿದ್ದು, ಉದ್ಯಾನಗಳ ನಿರ್ವಹಣೆ ಮಟ್ಟ ಹೆಚ್ಚಾಗಬೇಕಿದೆ. ರಾಜಕಾಲುವೆಗಳಿಗೆ ತಡೆಗೋಡೆ ನಿರ್ಮಿಸಬೇಕು. ವಿದ್ಯುತ್ ದೀಪಗಳ ಅಳವಡಿಕೆಯಾಗಬೇಕು. ಇವೆಲ್ಲವೂ ಆದರೆ, ಕ್ಷೇತ್ರ ಮಾದರಿಯಾಬಲ್ಲದು.

ವಿ.ಜಿ. ರಂಗಸ್ವಾಮಿ, ಅಧ್ಯಕ್ಷ, ಬೆಲ್ಮಾರು ಲೇಔಟ್ ರಾಶಿಗಳ ಕ್ಷೇಮಾಭಿವೃದ್ಧಿ ಸಂಘ

ಕಾರ್ಮಿಕರಿಗೆ ರಕ್ಷಣೆ ಬೇಕು



ಅತಿ ಹೆಚ್ಚು ವಲಸಿಗರನ್ನು ಹೊಂದಿರುವ ದಾಸರಹಳ್ಳಿ ಕ್ಷೇತ್ರದಲ್ಲಿ ಮೂಲ ಸೌಕರ್ಯಗಳ ಅವಶ್ಯಕತೆ ಸಾಕಷ್ಟಿದೆ. ಕೈಗಾರಿಕೆಗಳಲ್ಲಿ ಹಗಲು ರಾತ್ರಿ ದುಡಿಯುವವರಿಗೆ ಸುರಕ್ಷತೆ ಬೇಕು. ಪ್ರತಿ ರಸ್ತೆಗೂ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿ ರಕ್ಷಣೆ ನೀಡಬೇಕು. ರಸ್ತೆಗಳನ್ನು ಅಭಿವೃದ್ಧಿಗೊಳಿಸಿ ಬೀದಿ ದೀಪಗಳನ್ನು ಹೆಚ್ಚಿಸಬೇಕು. ಗ್ರಂಥಾಲಯ ಸ್ಥಾಪಿಸಬೇಕು.

ವೈ.ಬಿ.ಎಚ್. ಜಯದೇವ್, ಅಧ್ಯಕ್ಷ, ಕನ್ನಡ ಜಾನಪದ ಪರಿಷತ್ ದಾಸರಹಳ್ಳಿ ಘಟಕ.

ರಸ್ತೆ–ಮೋರಿ ಅಭಿವೃದ್ಧಿಯಿಲ್ಲ



ದಾಸರಹಳ್ಳಿ ಕ್ಷೇತ್ರದಲ್ಲಿ ಬರೀ ರಸ್ತೆ, ಮೋರಿ, ಚರಂಡಿ ಅಭಿವೃದ್ಧಿಯಲ್ಲ. ಜನರಿಗೆ ಉದ್ಯೋಗ, ಶಿಕ್ಷಣ, ಆರೋಗ್ಯಕ್ಕೆ ಶಾಸಕರು ಹೆಚ್ಚಿನ ಗಮನ ಹರಿಸಬೇಕು. ಕ್ಷೇತ್ರದಲ್ಲಿ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಕಲಾಭವನದ ಅವಶ್ಯಕತೆ ಇದೆ. ಕೈಗಾರಿಕೆಗಳನ್ನು ನಂಬಿರುವ ಜನರಿಗೆ ಸೂರು ಕಲ್ಪಿಸಲು ಪ್ರಯತ್ನಿಸಬೇಕು.

ಕೆ.ಜಿ. ಕುಮಾರ್
ಅಧ್ಯಕ್ಷ, ಹಸಿರು ಪ್ರತಿಷ್ಠಾನ, ಹೆಗ್ಗನಹಳ್ಳಿ


ಕೆರೆಗಳನ್ನು ಉಳಿಸಿ



ದಾಸರಹಳ್ಳಿ ಕ್ಷೇತ್ರದಲ್ಲಿನ ಕೆರೆಗಳ ಒತ್ತುವರಿ ತೆರವುಗೊಳಿಸಿ ಕೆರೆಗಳನ್ನು ಸ್ವಚ್ಛತೆಯಿಂದ ಕಾಪಾಡಬೇಕು. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ ರಾಜಕಾಲುವೆ ಒತ್ತುವರಿಯಾಗದಂತೆ ಕಾಪಾಡಬೇಕು. ಸರ್ಕಾರಿ ಶಾಲೆಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ವಾರ್ಡ್‌ನಲ್ಲಿ ಗುಣಮಟ್ಟದ ರಸ್ತೆ, ಉದ್ಯಾನ ಕೆಲವೊಂದು ಕಡೆಗೆ ಬಸ್ಸಿನ ಸೌಲಭ್ಯ ಕಲ್ಪಿಸಬೇಕು. ಕಸದ ಸಮಸ್ಯೆ, ಟ್ರಾಫಿಕ್ ಸಮಸ್ಯೆ, ನಿವಾರಿಸಬೇಕು.

ದಾರಿದೀಪ ಮಂಜು
ಅಧ್ಯಕ್ಷರು, ದಾರಿದೀಪ ಸೇವಾ ತಂಡ

ಮಹಾಲಕ್ಷ್ಮಿ ಲೇಔಟ್



ಮಹಾಲಕ್ಷ್ಮಿ ಲೇಔಟ್ ವಿಧಾನಸಭೆ ಕ್ಷೇತ್ರದಲ್ಲಿ ಮೂಲಸೌಕರ್ಯಗಳು ಸಾಕಷ್ಟು ಪ್ರಮಾಣದಲ್ಲಿ ಆಗಿದ್ದರೂ ಪರಿಸರ ಕಾಳಜಿಯಲ್ಲಿ ಹಿಂದಿದೆ. ಅಲ್ಲದೆ, ಮೇಲ್ಸೇತುವೆಯಂತಹ ಬೃಹತ್ ಕಾಮಗಾರಿಗಳು ನಡೆದಿಲ್ಲ. ಅವುಗಳಿಗೆ ವೇಗ ಸಿಗಬೇಕು ಎಂಬುದು ಜನರ ಆಶಯ.

ಸ್ವಚ್ಛ ಪರಿಸರ ರೂಪಿಸಿ



ಪರಿಸರ ಕಾಳಜಿ ಮತ್ತು ಪರಿಸರ ಕಾಪಾಡುವುದು ನಾಡಿನ ಪ್ರತಿಯೊಬ್ಬ ಪ್ರಜೆಯ ಪ್ರಮುಖ ಜವಾಬ್ದಾರಿ. ಮಹಾಲಕ್ಷ್ಮಿ ಬಡಾವಣೆಯ ಪ್ರತಿ ವಾರ್ಡ್‌ನಲ್ಲಿ ಗಿಡಗಳನ್ನು ನೆಟ್ಟು, ಬೆಳೆಸಬೇಕು. ಎಲ್ಲೆಡೆ ಸ್ವಚ್ಛತೆ ಕಾಪಾಡಬೇಕು. ಮುಂದಿನ ಪೀಳಿಗೆಗೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಪರಿಸರ ಕಾಪಾಡುವುದು ನಮ್ಮ ಹೊಣೆಯಾಗಿದೆ. ಇದನ್ನು ಮುಂದಿನ ಶಾಸಕರು ಅರಿತು ಕಾರ್ಯೋನ್ಮುಖರಾಗಬೇಕು. ಕ್ಷೇತ್ರದಲ್ಲಿ ಮಕ್ಕಳಿಗೆ ಆಟದ ಮೈದಾನಗಳ ಕೊರತೆ ಇದ್ದು ಪ್ರತಿ ವಾರ್ಡ್‌ನಲ್ಲೂ ಅತ್ಯುತ್ತಮ ಗುಣಮಟ್ಟ ಹಾಗೂ ಸೌಲಭ್ಯಗಳುಳ್ಳ ಆಟದ ಮೈದಾನಗಳನ್ನು ನಿರ್ಮಿಸಬೇಕು.

ಸತೀಶ್, ನಾಗಪುರ

ಮೇಲ್ಸೇತುವೆ ಪೂರ್ಣಗೊಳಿಸಿ

ಕುರುಬರಹಳ್ಳಿ ವೃತ್ತದಿಂದ ಹೊರ ವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆಗಾಗಿ ಸಾಕಷ್ಟು ವರ್ಷಗಳ ಬೇಡಿಕೆ ಇದೆ. ವೃಷಭಾವತಿ ಕಾಲುವೆ ಮೇಲೆ ಸೇತುವ ನಿರ್ಮಿಸುವ ಯೋಜನೆಗೆ ಶಂಕುಸ್ಥಾಪನೆಯಾಗಿದ್ದು ಬಿಟ್ಟರೆ ಕೆಲಸವಾಗಿಲ್ಲ. ಇಂತಹ ಅಗತ್ಯ ಕೆಲಸಗಳನ್ನು ಬೇಗ ಪೂರೈಸಬೇಕು. ಕ್ಷೇತ್ರದ ಹಲವು ಪ್ರದೇಶಗಳಲ್ಲಿ ಫುಟ್‌ಪಾತ್‌ಗಳು ಚೆನ್ನಾಗಿವೆ. ಆದರೆ, ಕಮಲಾನಗರ, ಕುರುಬರಹಳ್ಳಿ, ವೃಷಭಾವತಿನಗರದ ಕೆಲವು ರಸ್ತೆಗಳಲ್ಲಿ ಫುಟ್‌ಪಾತ್ ಇದ್ದೂ ಇಲ್ಲದಂತಾಗಿದೆ.

ವಿಜಯ್ ಸಂತೋಷ್
ವೃಷಭಾವತಿನಗರ

ಮಹತ್ವಾಕಾಂಕ್ಷೆಯ ಉಪನಗರ ರೈಲು ಯೋಜನೆ: ಚುನಾವಣೆಯಲ್ಲಿ ಚರ್ಚೆಗೆ ಬಾರದ ವಿಷಯ

ಶೇ 40 ಸಮಯ ಪೂರ್ಣ; ಶೇ 1ರಷ್ಟು ಕಾಮಗಾರಿ

● ವಿಜಯ್‌ಕುಮಾರ್ ಎಸ್.ಕೆ

ರಾಜಧಾನಿ ಒಡಲ ಧ್ವನಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರೇ ಗಡುವು ನಿಗದಿ ಮಾಡಿದ್ದರೂ ಉಪನಗರ ರೈಲು ಯೋಜನೆಯ ಗಾಲಿ ಒಂದೇ ಒಂದು ಸುತ್ತು ಕೂಡ ಮುಂದಕ್ಕೆ ಸಾಗಿಲ್ಲ. ನಗರದ ಸಂಚಾರ ದಟ್ಟಣೆಗೆ ದೊಡ್ಡ ಪರಿಹಾರ ನೀಡುವ ಈ ಯೋಜನೆಯು ವಿಧಾನಸಭೆ ಚುನಾವಣೆಯಲ್ಲಿ ಚರ್ಚಿತ ವಿಷಯವಾಗದೆ ಮರೆಗೆ ಸರಿದಿದೆ.

ನಗರಕ್ಕೆ ಪ್ರತ್ಯೇಕವಾಗಿ ರೈಲು ಸೇವೆ ಆರಂಭಿಸುವ ಬಗ್ಗೆ ರೈಲ್ವೆ ಇಲಾಖೆ 1983ರಲ್ಲೇ ಪ್ರಸ್ತಾವ ಸಿದ್ಧಪಡಿಸಿತ್ತು. 2010ರಲ್ಲಿ ಸಿಸ್ಟುಪ್–ಪ್ರಜಾ ಸಂಘಟನೆಗಳ ಒತ್ತಾಸೆಯಿಂದ ಈ ಕೂಗು ತೀವ್ರಗೊಂಡಿತು. 2014ರಲ್ಲಿ ಡಿ.ವಿ. ಸದಾನಂದಗೌಡ ಅವರು ರೈಲ್ವೆ ಸಚಿವರಾಗಿದ್ದಾಗ ಬಜೆಟ್‌ನಲ್ಲೇ ಈ ಯೋಜನೆಯ ಅಗತ್ಯದ ಬಗ್ಗೆ ಪ್ರಸ್ತಾಪಿಸಿದ್ದರು. ಕೊನೆಗೂ 2019ರ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಯನ್ನು ಉಲ್ಲೇಖಿಸಲಾಯಿತು. 2020ರ ಅಕ್ಟೋಬರ್ 21ರಂದು ರೈಲ್ವೆ ಮಂಡಳಿಯಿಂದ ಇದಕ್ಕೆ ಅನುಮೋದನೆಯೂ ದೊರೆಯಿತು.

ಯೋಜನೆ ಅನುಷ್ಠಾನದ ಹೊಣೆ ಹೊತ್ತಿರುವ ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ-ರೈಡ್) ಈ ಯೋಜನೆಯನ್ನು ನಾಲ್ಕು ಕಾರಿಡಾರ್‌ಗಳನ್ನಾಗಿ ವಿಂಗಡಿಸಿದೆ. 2,190 ದಿನಗಳ (6 ವರ್ಷ) ಕಾಲಮಿತಿ ನಿಗದಿ ಮಾಡಿಕೊಂಡಿದೆ. ಅದರಲ್ಲಿ ಈಗ ಶೇ 40ರಷ್ಟು ದಿನಗಳು ಪೂರ್ಣಗೊಂಡಿವೆ. ಆದರೆ, ಕಾಮಗಾರಿ ಭೌತಿಕವಾಗಿ ಶೇ1ರಷ್ಟು ಮಾತ್ರ ಪ್ರಗತಿ ಕಂಡಿದೆ.

ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಮಾರ್ಗದಲ್ಲಿ ಹೆಬ್ಬಾಳ ಬಳಿ ಕಾಮಗಾರಿ ಆರಂಭವಾಗಿದೆ. ಅದನ್ನು ಬಿಟ್ಟರೆ ಬೇರೆಲ್ಲೂ ಕಾಮಗಾರಿ ಆರಂಭವೇ ಆಗಿಲ್ಲ. ಹೀಲಳಿಗೆ–ರಾಜಾನುಕುಂಟೆ, ಸಿಟಿ ರೈಲು ನಿಲ್ದಾಣ–ದೇವನಹಳ್ಳಿ ಮಾರ್ಗಗಳ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಇನ್ನೂ ನಡೆಯಬೇಕಿದ್ದು, ಸಿದ್ಧತೆ ಆರಂಭವಾಗಿದೆ. ಕೆಂಗೇರಿ–ವೈಟ್‌ಫೀಲ್ಡ್ ಮಾರ್ಗದಲ್ಲಿ ಸಿದ್ಧತೆಯೂ ಆಗಿಲ್ಲ. ಇನ್ನು ಕಾಮಗಾರಿ ಆರಂಭವಾಗುವುದು ಯಾವಾಗ ಎಂದು ರೈಲ್ವೆ ಹೋರಾಟಗಾರರು ಪ್ರಶ್ನಿಸಿತ್ತಾರೆ.

2022ರ ಜೂನ್ 20ರಂದು ಪ್ರಧಾನಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಿ 40 ತಿಂಗಳ ಗಡುವು ನಿಗದಿ ಮಾಡಿದ್ದರು. ಅದಾಗಿ 10 ತಿಂಗಳು ಪೂರ್ಣಗೊಂಡಿದೆ. ಅಂದರೆ ಗಡುವಿನಲ್ಲಿ ಶೇ 25ರಷ್ಟು ಸಮಯ ಮುಗಿದಿದೆ.

ಈ ಯೋಜನೆ ಅನುಷ್ಠಾನದಲ್ಲಿ ರಾಜ್ಯ ಸರ್ಕಾರದ ಪಾತ್ರ ದೊಡ್ಡದಿದೆ. ಕಾಮಗಾರಿ ನಿರ್ವಹಿಸುತ್ತಿರುವ ಕೆ-ರೈಡ್, ಸರ್ಕಾರದ ಹಿಡಿತದಲ್ಲಿರುವ ಸಂಸ್ಥೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧೀನದಲ್ಲಿ ಸಂಸ್ಥೆ ಕಾರ್ಯ ನಿರ್ವಹಿಸುತ್ತದೆ. ಕಾಮಗಾರಿಗೆ ಸಂಬಂಧಿಸಿದ ಒಪ್ಪಿಗೆಗಳನ್ನು ತ್ವರಿತವಾಗಿ ನೀಡಬೇಕಾಗುತ್ತದೆ. ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸದೆ ಇರುವುದರಿಂದ ಯೋಜನೆ ನನೆಗುದಿಗೆ ಬಿದ್ದಿದೆ ಎನ್ನುತ್ತಾರೆ ರೈಲ್ವೆ ಹೋರಾಟಗಾರರು.

‘ಜನಪ್ರತಿನಿಧಿಗಳ ಬೇಜವಾಬ್ದಾರಿಯೇ ಕಾರಣ’



ರಾಜಕುಮಾರ್ ದುಗಾರ್

ಕೆ-ರೈಡ್ ಕಾರ್ಯ ನಿರ್ವಹಣೆಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಸಹಕಾರ ನೀಡಿದ್ದರೆ ವಿಳಂಬ ಆಗುತ್ತಿರಲಿಲ್ಲ. ಆಗಿರುವ ವಿಳಂಬಕ್ಕೆ ಜನಪ್ರತಿನಿಧಿಗಳೇ ಹೊಣೆಗಾರರು. ಯೋಜನೆ ಅನುಷ್ಠಾನಕ್ಕೆ ಸಂಸದರು ಅಧಿಕಾರಿಗಳ ಬೆನ್ನು ಹತ್ತಬೇಕು. ಚುನಾವಣೆ ಎದುರಾಗುತ್ತಿದೆ ಎಂಬ ಕಾರಣಕ್ಕಾದರೂ ಕಾಮಗಾರಿಗೆ ವೇಗ ನೀಡುತ್ತಿಲ್ಲ. ಅಷ್ಟೊಂದು ದಪ್ಪ ಚರ್ಮವನ್ನು ಜನಪ್ರತಿನಿಧಿಗಳು ಹೊಂದಿದ್ದಾರೆ. ಸ್ವತಃ ಪ್ರಧಾನಿಯೇ ಭರವಸೆ ನೀಡಿದ ನಂತರ ಯುದ್ಧೋಪಾದಿಯಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದು ಭಾವಿಸಿದ್ದೆವು. ಆದರೆ, ಕಾಮಗಾರಿಯ ಸ್ಥಿತಿ ನೋಡಿದರೆ ನಾಚಿಕೆಯಾಗುತ್ತದೆ. ಪ್ರಧಾನಿ ಶಂಕುಸ್ಥಾಪನೆ ನೆರವೇರಿಸಿ 10 ತಿಂಗಳಾದರೂ ಕೆಲಸ ಮಾತ್ರ ಒಂದು ಹೆಜ್ಜೆಯಷ್ಟೂ ಮುಂದಕ್ಕೆ ಹೋಗಿಲ್ಲ. ಮೋದಿ ಅವರು ಹೇಳಿದ ಬಳಿಕವಾದರೂ ಸ್ಥಳೀಯ ಜನಪ್ರತಿನಿಧಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕಿತ್ತು.

ರಾಜಕುಮಾರ್ ದುಗಾರ್,
ಸಿಟಿಜನ್ ಫಾರ್ ಸಿಟಿಜನ್ ಸಂಘಟನೆ ಸಂಸ್ಥಾಪಕ

ಅಂಕಿ-ಅಂಶಗಳು



₹15,767 ಕೋಟಿ ಯೋಜನೆಯ ಒಟ್ಟು ಮೊತ್ತ

20:20:60 ಕೇಂದ್ರ, ರಾಜ್ಯ ಮತ್ತು ಬಾಹ್ಯ ಹಣಕಾಸು ಸಂಸ್ಥೆಗಳು ಭರಿಸುವ ಪಾಲು

2,190 ಯೋಜನೆ ಪೂರ್ಣಗೊಳಿಸಲು ನಿಗದಿ ಮಾಡಿರುವ ದಿನಗಳು

2020ರ ಏ.21 ಯೋಜನೆಗೆ ಅನುಮೋದನೆ ದೊರೆತ ದಿನಾಂಕ

1,293 ಬಾಕಿ ಇರುವ ದಿನಗಳು

ಸೆಲೆಬ್ರಿಟಿ ಮಾತು



ನೈತಿಕ ಅರ್ಹತೆಗಾಗಿ ಮತದಾನ ಮಾಡಿ

ರಂಜನಿ ರಾಘವನ್
ಚಿತ್ರ ನಟಿ, ಕಥೆಗಾರ್ತಿ

ಮತದಾನ ನಮ್ಮೆಲ್ಲರ ಹಕ್ಕು. ಯೋಗ್ಯ ವ್ಯಕ್ತಿಯ ಕೈಗೆ ಆಡಳಿತದ ಚುಕ್ಕಾಣಿ ನೀಡುವ ಅದ್ಭುತ ಅವಕಾಶ. ಮತದಾನದ ಹಕ್ಕನ್ನು ಚಲಾಯಿಸಿದರೆ ಮಾತ್ರ ಪ್ರತಿಯಾಗಿ ನಮ್ಮ ನಾಯಕರನ್ನು ಪ್ರಶ್ನಿಸಲು ನಮಗೆ ನೈತಿಕ ಅರ್ಹತೆಯಿದೆ. ಯಾವುದೇ ರಾಜಕಾರಣಿಗಳ ಮೇಲೆ, ಪಕ್ಷದ ಮೇಲೆ ನಮಗೆ ಅಸಮಾಧಾನ ಸಹಜ. ಹಾಗೆಂದುಕೊಂಡು ನಮ್ಮ ಮತಚಲಾಯಿಸದೇ ಇರುವುದು ಸರಿಯಲ್ಲ. ನೋಟಾ ಆಯ್ಕೆಯೂ ನಮಗಿದೆಯಲ್ಲಾ. ಅದನ್ನಾದರೂ ಚಲಾಯಿಸಿ ನಿಮ್ಮ ಅಭಿಪ್ರಾಯ ದಾಖಲಿಸಿ. ಉತ್ತಮರ ಆಯ್ಕೆ ನಮ್ಮ ಕರ್ತವ್ಯ. ಜವಾಬ್ದಾರಿಯಿಂದ ಮತ ಚಲಾಯಿಸಿ.

ಚುನಾವಣಾ ಮೈತ್ರಿ: ಯಡಿಯೂರಪ್ಪ ಎಐಎಡಿಎಂಕೆ ನಾಯಕ ಪುಗಳೇಂದಿ ಭೇಟಿ

ಚೆನ್ನೈ (ಪಿಟಿಐ): ಎಐಎಡಿಎಂಕೆ ಪಕ್ಷವು ಕರ್ನಾಟಕ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಒಲವು ತೋರಿದೆ. ಆ ಪಕ್ಷದ ನಾಯಕ ವಿ.ಪುಗಳೇಂದಿ ಬೆಂಗಳೂರಿನಲ್ಲಿ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ ಮೈತ್ರಿ ಕುರಿತು ಚರ್ಚಿಸಿದ್ದಾರೆ.

ಕರ್ನಾಟಕದಲ್ಲಿ ತಮಿಳರು ಹೆಚ್ಚಿನ ಸಂಖ್ಯೆಯಲ್ಲಿರುವ ಕಡೆ ಪಕ್ಷ ಕಣಕ್ಕಿಳಿಯುವ ಕುರಿತು ಚರ್ಚೆ ನಡೆದಿದೆ. ಇದನ್ನು ಯಡಿಯೂರಪ್ಪ ಅವರಿಗೂ ಮನವರಿಕೆ ಮಾಡಿಕೊಡಲಾಗಿದೆ. ಬಿಜೆಪಿ ಈ ಕುರಿತು ಪ್ರತಿಕ್ರಿಯಿಸಬಹುದು ಎಂದು ಆಶಿಸಿದ್ದೇವೆ' ಎಂದೂ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಕರ್ನಾಟಕದಲ್ಲಿ ಬಿಜೆಪಿ ಜೊತೆಗೆ ಮೈತ್ರಿ ಕುರಿತಂತೆ ಯಡಿಯೂರಪ್ಪ ಅವರೊಂದಿಗೆ ಮಾತುಕತೆ ನಡೆದಿದೆ. ಅಲ್ಲದೆ, ನಾವು ಮುಂದಿನ ವರ್ಷ ಲೋಕಸಭೆ ಚುನಾವಣೆಗೂ ಸ್ಪರ್ಧಿಸಲಿದ್ದೇವೆ’ ಎಂದು ಎಐಎಡಿಎಂಕೆ ಮುಖಂಡ ಒ.ಪನ್ನೀರ್‌ಸೆಲ್ವಂ ಹೇಳಿದ್ದಾರೆ.

ಶೇ 40ರ ಲಂಚದ ಸರ್ಕಾರಕ್ಕೆ ಬೆಂಬಲ ಸರಿಯೆ: ಸುದೀಪ್‌ಗೆ ಪ್ರಿಯಾಂಕ್ ಖರ್ಗೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡದ ಅಸ್ಮಿತೆಯ ವಿಚಾರ ಬಂದಾಗ ಸದಾ ಮುಂಚೂಣಿಯಲ್ಲಿ ನಿಲ್ಲುವ ಚಿತ್ರನಟ ಸುದೀಪ್ ಅವರು ಶೇಕಡ 40ರ ಲಂಚದ ಆರೋಪ ಹೊತ್ತಿರುವ ಸರ್ಕಾರವನ್ನು ಬೆಂಬಲಿಸುವುದು ಸರಿಯೆ’ ಎಂದು ಕೆಪಿಸಿಸಿ ಮಾಧ್ಯಮ ಹಾಗೂ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಪಕ್ಷದ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸುದೀಪ್ ಅವರು ಯಾವುದೇ ರಾಜಕೀಯ ಪಕ್ಷವನ್ನು ಬೆಂಬಲಿಸಲು ಸ್ವತಂತ್ರರು. ಆದರೆ, ಜನವಿರೋಧಿಯಾದ ಸರ್ಕಾರವನ್ನು ಬೆಂಬಲಿಸುತ್ತಿರುವುದು ಸರಿಯಲ್ಲ. ಈ ವಿಚಾರದಲ್ಲೂ ಅವರು ಜನಪರವಾಗಿ ಯೋಚಿಸಬೇಕಿತ್ತು’ ಎಂದರು.

‘ಪರಿಶಿಷ್ಟ ಜಾತಿಯ ಮೀಸಲಾತಿ ಹೆಚ್ಚಿಸುವಂತೆ ಆ ಸಮುದಾಯದ ಸ್ವಾಮೀಜಿಗಳು ಧರಣಿ ಕೂತಿದ್ದರು. ಆಗ ಇವರು ಬೆಂಬಲ ನೀಡಿದ್ದರೆ ಬೊಮ್ಮಾಯಿ ಮಾಮ ಅವರು ಮೀಸಲಾತಿ ಹೆಚ್ಚಿಸುತ್ತಿದ್ದರೇನೊ?’ ಎಂದು ಹೇಳಿದರು.

ಏಕೆ ಮಾತನಾಡುವುದಿಲ್ಲ?: ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಕರ್ನಾಟಕದ ಹಿತಾಸಕ್ತಿಗಳ ಪರವಾಗಿ ಮಾತನಾಡುತ್ತಿಲ್ಲ. ನೆರೆಯ ಮಹಾರಾಷ್ಟ್ರ ಸರ್ಕಾರ ನಮ್ಮ ರಾಜ್ಯದ ಗಡಿಯೊಳಗೆ ಬಂದು ಆರೋಗ್ಯ ವಿಮೆ ಯೋಜನೆ ಸೌಲಭ್ಯ ನೀಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕರ್ನಾಟಕಕ್ಕೆ ಬಂದಾಗಲೂ ಈ ಬಗ್ಗೆ ಏಕೆ ಮಾತನಾಡುವುದಿಲ್ಲ’ ಎಂದು ಪ್ರಿಯಾಂಕ್ ಪ್ರಶ್ನಿಸಿದರು.

‘ರಾಜ್ಯದ ಬಿಜೆಪಿ ನಾಯಕರೂ ಮಹಾರಾಷ್ಟ್ರ ಸರ್ಕಾರದ ಉಪಟಳದ ಬಗ್ಗೆ ಮಾತನಾಡುತ್ತಿಲ್ಲ. ಬಿಜೆಪಿಗೆ ರಾಜ್ಯದ ಜನರ ಮತ ಬೇಕು, ಆದರೆ ಕನ್ನಡದ ಅಸ್ಮಿತೆ ಬೇಕಾಗಿಲ್ಲ. ಕನ್ನಡ ಮತ್ತು ಕರ್ನಾಟಕದ ಅಸ್ಮಿತೆ ಕಾಪಾಡುವ ಯೋಗ್ಯತೆ ಸರ್ಕಾರಕ್ಕೆ ಇಲ್ಲವೆ? ಬೊಮ್ಮಾಯಿ ಮಾಮ ಎಲ್ಲಿದ್ದಾರೆ’ ಎಂದರು.

ಸುದೀಪ್ ಚಿತ್ರ ಪ್ರಸಾರ ತಡೆಗೆ ಜೆಡಿಎಸ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದೀಪ್ ಅಭಿನಯಿಸಿದ ಚಿತ್ರಗಳು, ಭಾಗವಹಿಸಿದ ರಿಯಾಲಿಟಿ ಶೋಗಳು, ಪೋಸ್ಟರ್, ಜಾಹೀರಾತುಗಳ ಪ್ರಸಾರದ ಮೇಲೆ ನಿರ್ಬಂಧ ಹೇರಬೇಕು ಎಂದು ಚುನಾವಣಾ ಆಯೋಗಕ್ಕೆ ಜೆಡಿಎಸ್ ಮನವಿ ಸಲ್ಲಿಸಿದೆ.

ಬಿಜೆಪಿ ಪರ ಪ್ರಚಾರ ಮಾಡುವುದಾಗಿ ನಟ ಸುದೀಪ್ ಹೇಳಿದ್ದಾರೆ. ಅವರ ಚಿತ್ರಗಳು, ಟಿ.ವಿ ರಿಯಾಲಿಟಿ ಶೋಗಳು ಜನರ ಮೇಲೆ ಪ್ರಭಾವ ಬೀರುತ್ತವೆ. ಹಾಗಾಗಿ, ತಡೆ ಹಾಕಬೇಕು ಎಂದು ಮನವಿ ಮಾಡಿದೆ.

ನಗರದ ಕೆಲವೆಡೆ ನಡೆಯುತ್ತಿರುವ ರಸ್ತೆಗಳ ಡಾಂಬರೀಕರಣ ಕಾಮಗಾರಿಗಳಿಗೆ ತಡೆ ನೀಡಬೇಕು ಎಂದೂ ಜೆಡಿಎಸ್‌ನ ಕಾನೂನು ವಿಭಾಗ ಆಗ್ರಹಿಸಿದೆ. ಮಾದರಿ ನೀತಿ ಸಂಹಿತೆ ಜಾರಿ ನಂತರವೂ ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಾರಪ್ಪನ ಪಾಳ್ಯ, ಮಹಾಲಕ್ಷ್ಮಿಪುರ, ನಂದಿನಿ ಲೇಔಟ್ ವಾರ್ಡ್‌ಗಳಲ್ಲಿ ಡಾಂಬರೀಕರಣ ಮಾಡಲಾಗುತ್ತಿದೆ. ಸ್ಥಳೀಯ ಶಾಸಕರ ಆಪ್ತ ಅಧಿಕಾರಿಗಳು ಇಂತಹ ಕಾಮಗಾರಿಗಳ ಮೂಲಕ ಮತದಾರರ ಮೇಲೆ ಪ್ರಭಾವ ಬೀರುತ್ತಿದ್ದಾರೆ’ ಎಂದು ದೂರಿನಲ್ಲಿ ಹೇಳಿದೆ.

ಬಂಡಾಯದ ಭಯ: ಟಿಕೆಟ್ ಘೋಷಣೆ ವಿಳಂಬ

ಚಿಕ್ಕಪೇಟೆಯೇ ‘ಕೈ’ಗೆ ದೊಡ್ಡ ಕಗ್ಗಂಟು

● ಆದಿತ್ಯ ಕೆ.ಎ.

ಬೆಂಗಳೂರು: ರಾಜಧಾನಿಯಲ್ಲಿ ಬಾಕಿಯಿರುವ ಏಳು ಕ್ಷೇತ್ರಗಳ ಪೈಕಿ ಚಿಕ್ಕಪೇಟೆ ಕ್ಷೇತ್ರದಲ್ಲಿನ ಅಭ್ಯರ್ಥಿ ಆಯ್ಕೆಯು ‘ಕೈ’ ನಾಯಕರಿಗೆ ‘ದೊಡ್ಡ’ ಕಗ್ಗಂಟ್ಟಾಗಿದೆ.


ಬಹುಭಾಷಿಕರ ನೆಲೆಯಾದ ಚಿಕ್ಕಪೇಟೆಯಲ್ಲಿನ ಮತದಾರರ ಮನಸ್ಸು ಗೆಲ್ಲುವ ಹಾಗೂ ಬಿಜೆಪಿಗೆ ಪೈಪೋಟಿಯೊಡ್ಡುವ ಅಭ್ಯರ್ಥಿ ಆಯ್ಕೆಗೆ ಕಾಂಗ್ರೆಸ್ ಹೈಕಮಾಂಡ್ ಕಸರತ್ತು ನಡೆಸುತ್ತಿದ್ದು, ಹೆಸರು ಘೋಷಣೆ ವಿಳಂಬವಾಗುತ್ತಿದೆ.

ಕ್ಷೇತ್ರದಲ್ಲಿ ಹಿಡಿತ ಸಾಧಿಸಿದ್ದರೂ ಕಾಂಗ್ರೆಸ್ ಕಳೆದ ಚುನಾವಣೆಯಲ್ಲಿ ಬಿಜೆಪಿಗೆ ಬಿಟ್ಟುಕೊಟ್ಟಿತ್ತು. ಮರಳಿ ಕ್ಷೇತ್ರವನ್ನು ವಶ ಪಡಿಸಿಕೊಳ್ಳಲು ಮುಂದಾಗಿರುವ ‘ಕೈ’ಪಡೆಗೆ ಅಭ್ಯರ್ಥಿ ಆಯ್ಕೆಯೇ ಸವಾಲಾಗುತ್ತಿದೆ. ‘ಅಭ್ಯರ್ಥಿ ಹೆಸರು ಘೋಷಣೆ ತಡವಾಗುತ್ತಿರುವ ಕಾರಣ ನಾವೂ ಗೊಂದಲದಲ್ಲಿದ್ದೇವೆ’ ಎಂದು ಕಾರ್ಯಕರ್ತರು ಹೇಳುತ್ತಾರೆ.

ಎರಡನೇ ಪಟ್ಟಿಯಲ್ಲಿ ಹೆಸರು ಘೋಷಣೆ ನಿರೀಕ್ಷೆಯಲ್ಲಿ ಆಕಾಂಕ್ಷಿಗಳಿದ್ದರು. ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್, ಆರ್.ವಿ. ದೇವರಾಜ್, ಅವರ ಪುತ್ರ ಯುವರಾಜ್, ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಹಾಗೂ ಕಾಂಗ್ರೆಸ್‌ನಿಂದ ಅಮಾನತುಗೊಂಡು, ಮತ್ತೆ ಪಕ್ಷಕ್ಕೆ ಮರಳಿರುವ ಕೆಜಿಎಫ್ ಬಾಬು ಅವರು ಒತ್ತಡ ಹೇರುತ್ತಿರುವ ಪರಿಣಾಮ ಆಯ್ಕೆ ತಡವಾಗುತ್ತಿದೆ. ಹೀಗಾಗಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಪ್ರಚಾರ ಚುರುಕು ಪಡೆದಿಲ್ಲ.



ಇದುವರೆಗೂ 6 ಮಂದಿ ಮಹಿಳೆಯರಿಗೆ ಟಿಕೆಟ್ ನೀಡಲಾಗಿದೆ. ಮಹಿಳಾ ಕೋಟಾದ ಅಡಿ ನನಗೇ ಟಿಕೆಟ್ ದೊರೆಯುವ ಭರವಸೆ ಇದೆ
ಗಂಗಾಂಬಿಕೆ, ಟಿಕೆಟ್ ಆಕಾಂಕ್ಷಿ



ಇತರೆ ಆಕಾಂಕ್ಷಿಗಳ ಬಗ್ಗೆ ಏನೂ ಹೇಳುವುದಿಲ್ಲ. 45 ವರ್ಷಗಳಿಂದ ಪಕ್ಷಕ್ಕಾಗಿ ದುಡಿದಿದ್ದು ನನಗೆ ಟಿಕೆಟ್ ನೀಡುವ ವಿಶ್ವಾಸವಿದೆ
ಆರ್.ವಿ. ದೇವರಾಜ್, ಟಿಕೆಟ್ ಆಕಾಂಕ್ಷಿ

ಇನ್ನೊಂದು ಕಡೆ ಚಿಕ್ಕಪೇಟೆಯಿಂದ ಬಿಜೆಪಿಯ ಹಾಲಿ ಶಾಸಕ ಉದಯ್ ಗರುಡಾಚಾರ್‌ಗೆ ಟಿಕೆಟ್ ನೀಡುವ ಸಾಧ್ಯತೆ ಹೆಚ್ಚಿದೆ. ಈ ಎಲ್ಲ ಲೆಕ್ಕಾಚಾರ ನೋಡಿಕೊಂಡೇ ಕಾಂಗ್ರೆಸ್ ಈ ಕ್ಷೇತ್ರದಲ್ಲಿ ಅಭ್ಯರ್ಥಿ ಹೆಸರು ಘೋಷಣೆ ಮಾಡುವ ಸಾಧ್ಯತೆಯಿದೆ.

‘ಕಾಂಗ್ರೆಸ್ ಮಹಿಳೆಯರಿಗೆ ಆದ್ಯತೆ ನೀಡುವ ಪಕ್ಷ. ನನಗೇ ಟಿಕೆಟ್ ದೊರೆಯುವ ಅವಕಾಶ ಹೆಚ್ಚಿದೆ. ಮೇಯರ್ ಆಗಿದ್ದ ಅವಧಿಯಲ್ಲಿ ನನ್ನ ಕೆಲಸವನ್ನು ಪಕ್ಷ ಗುರುತಿಸಿದೆ. ಕ್ಷೇತ್ರಕ್ಕೆ ₹ 350 ಕೋಟಿ ಅನುದಾನ ಮಂಜೂರು ಮಾಡಿದ್ದೆ. ಏಳು ವಾರ್ಡ್‌ನಲ್ಲೂ ಜನಸಂಪರ್ಕದಲ್ಲಿದ್ದೇನೆ. ಕೋವಿಡ್ ವೇಳೆ ಹೆಚ್ಚಿನ ಕೆಲಸಗಳನ್ನು ಮಾಡಿದ್ದೆ’ ಎಂದು ಮಾಜಿ ಮೇಯರ್ ಗಂಗಾಂಬಿಕೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಒಟ್ಟು 109 ಮಂದಿ ಮಹಿಳೆಯರು ಟಿಕೆಟ್‌ಗೆ ಅರ್ಜಿ ಸಲ್ಲಿಸಿದ್ದೆವು. ಅದರಲ್ಲಿ 30 ಮಂದಿಗೆ ಟಿಕೆಟ್ ನೀಡುವಂತೆ ಕೋರಲಾಗಿತ್ತು. 3ನೇ ಪಟ್ಟಿಯಲ್ಲಿ ನಾನೂ ಸೇರಿದಂತೆ ಹಲವು ಕ್ಷೇತ್ರಕ್ಕೆ ಮಹಿಳೆಯರಿಗೆ ಟಿಕೆಟ್ ಸಿಗಲಿದೆ’ ಎಂದು ಗಂಗಾಂಬಿಕೆ ವಿಶ್ವಾಸ ವ್ಯಕ್ತಪಡಿಸುತ್ತಾರೆ.

‘ನನ್ನ ಪುತ್ರ ಯುವರಾಜ್ ಅರ್ಜಿ ಸಲ್ಲಿಸಿಲ್ಲ. ನಾನೇ ಪ್ರಬಲ ಆಕಾಂಕ್ಷಿ. ನಮ್ಮಂತೆಯೇ ಪಕ್ಷದಲ್ಲಿರುವ ಮುಖಂಡರೂ ಟಿಕೆಟ್‌ಗೆ ಪ್ರಯತ್ನಿಸಬಹುದು’ ಎಂದು ಆರ್.ವಿ. ದೇವರಾಜ್ ಹೇಳುತ್ತಾರೆ.

ಕೆಜಿಎಫ್ ಬಾಬು ಅವರು ತೆರೆಮರೆಯಲ್ಲಿ ಟಿಕೆಟ್‌ಗಾಗಿ ಪ್ರಯತ್ನ ಮುಂದುವರಿಸಿದ್ದಾರೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲು ಕಂಡಿದ್ದರು. ಕೋವಿಡ್ ಕಾಲಘಟ್ಟ ಹಾಗೂ ಕೋವಿಡ್ ನಂತರದ ದಿನಗಳಲ್ಲಿ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆ ಎಂದು ಹೇಳುತ್ತಲೇ ಅವರೂ ಟಿಕೆಟ್‌ಗೆ ದುಂಬಾಲು ಬಿದ್ದಿದ್ದಾರೆ. ಕ್ಷೇತ್ರದಲ್ಲಿ ಕೆಜಿಎಫ್ ಪ್ರಭಾವ ಹೆಚ್ಚಿದೆ. ಹೀಗಾಗಿ ಬಂಡಾಯದ ಭಯವು ಪಕ್ಷದ ವರಿಷ್ಠರಿಗೆ ಕಾಡುತ್ತಿದೆ.

‘ಮೋದಿ– ಬಿಎಸ್‌ವೈ ಜೋಡಿ ಪ್ರಚಾರದ ಕೇಂದ್ರ ಬಿಂದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಮತ್ತೆ ಬಹುಮತ ಪಡೆದು ಅಧಿಕಾರಕ್ಕೇರಲು ಪ್ರಧಾನಿ ನರೇಂದ್ರ ಮೋದಿ ಮತ್ತು ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರೇ ಚುನಾವಣಾ ಪ್ರಚಾರದ ಮುಂಚೂಣಿಯಲ್ಲಿ ಇರಲಿದ್ದಾರೆ. ಅಧಿಕಾರ ಹಿಡಿಯಲು ಇಬ್ಬರೂ ತಮ್ಮೆಲ್ಲ ಶಕ್ತಿಯನ್ನು ಧಾರೆ ಎರೆಯಲಿದ್ದಾರೆ’ ಎಂದು ರಾಜ್ಯ ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ತಿಳಿಸಿದರು.

‘2024ರ ಲೋಕಸಭಾ ಚುನಾವಣೆಗೆ ಕರ್ನಾಟಕ ವಿಧಾನಸಭೆ ಚುನಾವಣೆ ಅಡಿಪಾಯವಾಗಲಿದ್ದು, ಲೋಕಸಭೆ ಚುನಾವಣೆಯನ್ನೂ ಗಮನದಲ್ಲಿಟ್ಟುಕೊಂಡು ತಂತ್ರ ರೂಪಿಸಲಾಗುತ್ತಿದೆ. ಮೋದಿ, ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಯಡಿಯೂರಪ್ಪ ಅವರ ಪ್ರಚಾರಕ್ಕೆ ಭಾರಿ ಬೇಡಿಕೆ ಇದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಮಗನಿಗೆ ಟಿಕೆಟ್ ಕೇಳಿದ್ದೇನೆ: ಎಂಟಿಬಿ ನಾಗರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಈ ಬಾರಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ನನ್ನ ಮಗನಿಗೆ ಟಿಕೆಟ್ ನೀಡಬೇಕು ಎಂದು ಪಕ್ಷಕ್ಕೆ ಮನವಿ ಮಾಡಿದ್ದೇನೆ’ ಎಂದು ಸಚಿವ ಎಂಟಿಬಿ ನಾಗರಾಜ್ ಹೇಳಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಶುಕ್ರವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

‘ಹೊಸಕೋಟೆ ಕ್ಷೇತ್ರದಲ್ಲಿ ನನ್ನ ಮಗನಿಗೆ ಟಿಕೆಟ್ ನೀಡಬೇಕು ಎಂದು ಯಡಿಯೂರಪ್ಪ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದೇನೆ. ಪಕ್ಷದ ಪ್ರಮುಖ ನಾಯಕರ ಸಭೆಯಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ನನ್ನ ಬೇಡಿಕೆಗೆ ಮನ್ನಣೆ ಸಿಗುತ್ತದೆ ಎಂಬ ವಿಶ್ವಾಸವಿದೆ’ ಎಂದು ತಿಳಿಸಿದರು.

ರೋಷನ್ ಬೇಗ್ ಭೇಟಿ: ಮಾಜಿ ಸಚಿವ ರೋಷನ್ ಬೇಗ್ ಅವರೂ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಶಿವಾಜಿನಗರ ಕ್ಷೇತ್ರದಿಂದ ತಮ್ಮ ಪುತ್ರನ ಸ್ಪರ್ಧೆಗೆ ಅವಕಾಶ ನೀಡಬೇಕು ಎಂದು ಬೇಗ್ ಮನವಿ ಮಾಡಿದ್ದಾಗಿ ಮೂಲಗಳು ಹೇಳಿವೆ.

ವಾರ್ಡ್ ಸಮಿತಿ ಸಭೆ ಸ್ಥಗಿತಕ್ಕೆ ಆಕ್ರೋಶ

ಬೆಂಗಳೂರು: ವಿಧಾನಸಭೆ ಚುನಾವಣೆಯ ಮಾದರಿ ನೀತಿ ಸಂಹಿತೆ ಹೆಸರಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳು, ವಾರ್ಡ್ ಸಮಿತಿ ಸಭೆಗಳನ್ನು ಸ್ಥಗಿತಗೊಳಿಸಿರುವುದು ಸರಿಯಾದ ಕ್ರಮವಲ್ಲ ಎಂದು ಬೆಂಗಳೂರು ನವ ನಿರ್ಮಾಣ ಪಕ್ಷದ(ಬಿಎನ್‌ಪಿ) ಮುಖಂಡರು ತಿಳಿಸಿದ್ದಾರೆ.

‘ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳಿಗೆ ಮಾತ್ರ ನೀತಿ ಸಂಹಿತೆ ಅನ್ವಯವಾಗಲಿದೆ. ನೀತಿ ಸಂಹಿತೆ ನೆಪದಲ್ಲಿ ನಗರದ ಅಭಿವೃದ್ಧಿ ಕಾರ್ಯಗಳನ್ನು ಸ್ಥಗಿತಗೊಳಿಸುವುದು ಎಷ್ಟರ ಮಟ್ಟಿಗೆ ಸರಿ’ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್ ಹಾಗೂ ಕೋರ್ ಕಮಿಟಿ ಸದಸ್ಯರಾದ ಬಿ.ವಿ. ಲಲಿತಾಂಬಾ ಪ್ರಶ್ನಿಸಿದ್ದಾರೆ.

‘ಜನರ ಸಂಕಷ್ಟ ನಿವಾರಣೆ, ನಾಡು– ನುಡಿ ರಕ್ಷಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಜನಹಿತ ಪಕ್ಷದ ಕುಕ್ಕರ್ ಚಿಹ್ನೆ ಹಾಗೂ ಚುನಾವಣೆ ಪ್ರಣಾಳಿಕೆಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಂಜುನಾಥ್ ವಿಶ್ವಕರ್ಮ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಎಸ್.ಬಿ. ರಮೇಶ್ ಶುಕ್ರವಾರ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಮಂಜುನಾಥ್, ‘ಜನರ ಸಂಕಷ್ಟ ನಿವಾರಣೆ ಮತ್ತು ನಾಡು, ನುಡಿ ಹಾಗೂ ಮೂಲ ಸಮಸ್ಯೆ ಬಗೆಹರಿಸುವುದಕ್ಕಾಗಿ ಹೊಸ ಪಕ್ಷ ಸ್ಥಾಪಿಸಲಾಗಿದೆ. ರಾಜ್ಯದ 224 ಕ್ಷೇತ್ರಗಳಲ್ಲೂ ಸಮಾಜಮುಖಿ ಸೇವೆ ಸಲ್ಲಿಸುವ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ’ ಎಂದು ಹೇಳಿದರು.

‘ಶಿಕ್ಷಣ, ಆರೋಗ್ಯ ಸೌಲಭ್ಯ ಹಾಗೂ ನಿರುದ್ಯೋಗ ಸಮಸ್ಯೆ ನಿವಾರಣೆಗೆ ತಲಾ ₹ 15 ಲಕ್ಷದ ಗ್ಯಾರಂಟಿ ಕಾರ್ಡ್‌ಗಳನ್ನು ನೀಡಲಾಗುವುದು. ಉನ್ನತ ವೈದ್ಯಕೀಯ ಸೌಲಭ್ಯ, ಶಿಕ್ಷಣ, ಆರೋಗ್ಯ, ರೈತರ ಬದುಕು ಸಾಗಿಸಲು ಹಾಗೂ ನಿರುದ್ಯೋಗ ನಿವಾರಣೆಗಾಗಿ ಗ್ಯಾರಂಟಿ ಕಾರ್ಡ್ ವಿತರಿಸಲಾಗುವುದು. ರೈತರ ಬೆಳೆಗೆ ಯೋಗ್ಯ ಬೆಂಬಲ ಬೆಲೆ ನಿಗದಿಗೆ ಆದ್ಯತೆ ನೀಡಲಾಗುವುದು’ ಎಂದರು.

ಶನಿವಾರ, ಏಪ್ರಿಲ್ 8, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 97 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮಕ್ಕಳಲ್ಲಿರುವ ಆಸಕ್ತಿ- ಅಭಿರುಚಿಯನ್ನು ಎಳವೆಯಿಂದಲೇ ಅರಿಯುವುದು ಹೇಗೆ?




ಚರ್ಚೆ
ಕರ್ನಾಟಕ ಸರ್ಕಾರವು ಮೀಸಲಾತಿ ಪ್ರಮಾಣ ಹೆಚ್ಚಳ ಮತ್ತು ಮರುಹಂಚಿಕೆ ಮಾಡಿರುವುದು ಸರಿಯೇ?

‘ರಾಜ್ಯಕ್ಕೆ ಹೊರೆಯಾದ ಮೋದಿ ಭೇಟಿ’ 4

ಆಕಾಂಕ್ಷಿಗಳು ‘ಕೈ’ ಕೊಡುವ ಆತಂಕ 6

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹62,410 (ಬೆಂಗಳೂರು) ▲	₹76,100 (ಬೆಂಗಳೂರು) ▲





ಸಕ್ಷಮ ಪ್ರಾಧಿಕಾರಗಳಲ್ಲಿ 500 ಪ್ರಕರಣ ಬಾಕಿ • ನೆನಪೋಲೆಗೂ ಸ್ಪಂದನೆ ಇಲ್ಲ

ಭ್ರಷ್ಟಾಚಾರ: ಪ್ರಕರಣಗಳ ಭಾರ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಭ್ರಷ್ಟಾಚಾರದ ಪ್ರಕರಣಗಳಲ್ಲಿ ಶಾಸಕರು, ಅಧಿಕಾರಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಹಾಗೂ ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಲು ಅನುಮತಿ ಕೋರಿರುವ 500 ಪ್ರಸ್ತಾವಗಳು ದೀರ್ಘ ಕಾಲದಿಂದ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಮುಂದೆ ಬಾಕಿ ಇವೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ದಾಖಲಾಗಿದ್ದ 100 ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಗಳಿಗೆ ಆರೋಪಪಟ್ಟಿ ಸಲ್ಲಿಸಲು ತನಿಖಾಧಿಕಾರಿಗಳು ಕಾಯುತ್ತಿದ್ದಾರೆ. ಇದಕ್ಕಾಗಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಸೆಕ್ಷನ್ 19ರನ್ವಯ ಅನುಮತಿ ಕೋರಿ 2014ರಿಂದ 2022ರ ಅವಧಿಯಲ್ಲಿ ಈ ಪ್ರಸ್ತಾವಗಳನ್ನು ಸಲ್ಲಿಸಲಾಗಿದೆ. ಇವುಗಳನ್ನು ಸಕ್ಷಮ ಪ್ರಾಧಿಕಾರಗಳು ಬಾಕಿ ಉಳಿಸಿಕೊಂಡಿದ್ದು, ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸಲು ತೊಡಕು ಉಂಟಾಗಿದೆ.

4ನೇ ಪುಟ ನೋಡಿ



ಪ್ರಮುಖ ಅಧಿಕಾರಿಗಳ ಪ್ರಕರಣಗಳ ಪಟ್ಟಿ

- **ಗಾಯತ್ರಿ ನಾಯಕ್**, ಕೆಎಎಸ್ ಅಧಿಕಾರಿ
- **ಡಾ.ದಾಸೇಗೌಡ**, ಕೆಎಎಸ್ ಅಧಿಕಾರಿ
- **ಇ. ಪ್ರಕಾಶ್**, ಭೂ ದಾಖಲೆಗಳು ಮತ್ತು ಭೂ ಮಾಪನ ಇಲಾಖೆ ಉಪ ನಿರ್ದೇಶಕ
- **ಕೃಷ್ಣೇಗೌಡ**, ಮುಖ್ಯ ಎಂಜಿನಿಯರ್, ಹೇಮಾವತಿ ಜಲಾಶಯ ಯೋಜನೆ
- **ಭೀಮಪ್ಪ ವೈ. ಜುಮ್ನಾಳ್**, ಮುಖ್ಯ ಎಂಜಿನಿಯರ್, ಕೃಷ್ಣಾ ಭಾಗ್ಯ ಜಲನಿಗಮ
- **ಎಚ್.ಎಸ್. ರವೀಂದ್ರ**, ಪಬ್ಲಿಕ್ ಪ್ರಾಸಿಕ್ಯೂಟರ್, ಶಿವಮೊಗ್ಗ
- **ಡಾ. ರಾಜೇಶ್**, ಜಿಲ್ಲಾ ಆರೋಗ್ಯಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
- **ಚಂದ್ರಗೌಡ ಗಸನಗೌಡ ಪಾಟೀಲ**, ಎಸಿಎಫ್, ಖಾನಾಪುರ ಉಪ ವಿಭಾಗ

ನಿವೃತ್ತರು

- **ವಿ. ಶಂಕರ್**, ನಿವೃತ್ತ ಐಎಎಸ್ ಅಧಿಕಾರಿ
- **ರಾಮೇಗೌಡ**, ಬಿಬಿಎಂಪಿ ನಿವೃತ್ತ ಮುಖ್ಯ ಎಂಜಿನಿಯರ್

ಸ್ಪೀಕರ್ ಮುಂದಿರುವ ಪ್ರಕರಣಗಳು

ಶಾಸಕರು ಮತ್ತು ಮಾಜಿ ಶಾಸಕರ ವಿರುದ್ಧ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ಹಾಗೂ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿರುವ ನಾಲ್ಕು ಪ್ರಸ್ತಾವಗಳು ವಿಧಾನಸಭೆ ಅಧ್ಯಕ್ಷರ ಮುಂದೆ ಬಾಕಿ ಇವೆ.

• **ಎಸ್.ಟಿ. ಸೋಮಶೇಖರ್**
ಬಿಡಿಎಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಖಾಸಗಿ ದೂರು ಆಧರಿಸಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆಗಿರುವ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ವಿರುದ್ಧ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿರುವ ಪ್ರಸ್ತಾವ 2022ರ ನವೆಂಬರ್ 10ರಿಂದ ಬಾಕಿ ಇದೆ

• **ರೇಣುಕಾಚಾರ್ಯ**
ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಖಾಸಗಿ ದೂರು ಆಧರಿಸಿ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ವಿರುದ್ಧ ತನಿಖೆ ನಡೆಸಲಾಗಿತ್ತು. ಆರೋಪ ದೃಢಪಟ್ಟಿರುವ ಕಾರಣದಿಂದ ರೇಣುಕಾಚಾರ್ಯ, ಅವರ ಸಹೋದರರಾದ ಎಂ.ಪಿ. ರಮೇಶ್, ಎಂ.ಪಿ.ಆರಾಧ್ಯ ಮತ್ತು ಎಂ.ಪಿ. ಬಸವರಾಜಯ್ಯ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಕೋರಿ ಎಸಿಬಿ ಅಧಿಕಾರಿಗಳು 2022ರ ಜುಲೈ 1ರಂದು ಪ್ರಸ್ತಾವ ಸಲ್ಲಿಸಿದ್ದರು. ಈವರೆಗೂ ಅನುಮತಿ ಸಿಕ್ಕಿಲ್ಲ

• **ಕೆ.ಎಸ್. ಈಶ್ವರಪ್ಪ**
ಮಾಜಿ ಸಚಿವರೂ ಆದ ಶಾಸಕ ಕೆ.ಎಸ್.ಈಶ್ವರಪ್ಪ ಹಾಗೂ ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ವಿರುದ್ಧ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿ ಸಲ್ಲಿಸಿರುವ ಪ್ರಸ್ತಾವ 2022ರ ಡಿಸೆಂಬರ್ 12ರಿಂದ ಬಾಕಿ ಇದೆ

• **ಬಿ.ಸುರೇಶಗೌಡ**
ತುಮಕೂರು ಗ್ರಾಮಾಂತರ ಕ್ಷೇತ್ರದ ಮಾಜಿ ಶಾಸಕ ಬಿ.ಸುರೇಶ್ ಗೌಡ ವಿರುದ್ಧ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿದ್ದ ಕಡತ 2019ರ ಜೂನ್ ತಿಂಗಳಿನಿಂದ ಬಾಕಿ ಉಳಿದಿದೆ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಿಡಿಲಿಗೆ 15 ಜಾನುವಾರು ಮೃತ: ಹಲವೆಡೆ ರಸ್ತೆಗಳು ಜಲಾವೃತ

ಭಾರಿ ಮಳೆ: ನಾಲ್ಕು ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರವೂ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗಿದೆ. ಮಳೆ ಸಂಬಂಧಿತ ಅವಘಡಗಳಿಂದ ನಾಲ್ಕು ಮಂದಿ ಮೃತಪಟ್ಟಿದ್ದಾರೆ. ಹದಿಮೂರು ಜಾನುವಾರುಗಳು ಸಾವನ್ನಪ್ಪಿವೆ.

ಕುರಿ ಮೇಯಿಸಲು ಹೋಗಿದ್ದಾಗ ಸಿಡಿಲು ಬಡಿದು ಗದಗ ತಾಲ್ಲೂಕಿನ ಲಿಂಗದಾಳ ಗ್ರಾಮದ ಶರಣಪ್ಪ ಪುರದ (19) ಹಾಗೂ ದೇವರಾಜ ಹನುಮಂತಪ್ಪ (19) ಮೃತಪಟ್ಟಿದ್ದಾರೆ. ಮತ್ತೊಬ್ಬ ಕುರಿಗಾಹಿ ಸುನೀಲ್ ಎಂಬಾತ ಗಾಯಗೊಂಡಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಜಾಲಿಹಾಳ ಗ್ರಾಮದಲ್ಲಿ ಗುರುವಾರ ಮಧ್ಯರಾತ್ರಿ ಮಳೆಯಿಂದ ಮನೆ ಚಾವಣಿ ಕುಸಿದು ಯಂಕುಬಾಯಿ ಕುಲಕರ್ಣಿ (79), ಶಾರವ್ವ ಪತ್ತಾರ (58) ಮೃತಪಟ್ಟಿದ್ದಾರೆ.

ಸಿಡಿಲು ಬಡಿದು ಕೊಪ್ಪಳದಲ್ಲಿ ಎರಡು ಜಾನುವಾರುಗಳು, ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ 5 ಜಾನುವಾರುಗಳು ಮತ್ತು ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ 6 ಜಾನುವಾರುಗಳು, ಅಫಜಲಪುರ ತಾಲ್ಲೂಕಿನ ತೆಲ್ಲೋಣಗಿ ಗ್ರಾಮದಲ್ಲಿ ಬಸವರಾಜ ಮಾಗಣಗೇರಿ ಅವರಿಗೆ ಸೇರಿರುವ ಎರಡು ಎತ್ತುಗಳು ಸಾವನ್ನಪ್ಪಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ವಿವಿಧೆಡೆ ಆಲಿಕಲ್ಲು ಮಳೆಯಾಗಿದೆ. ಉಜಿರೆ, ಧರ್ಮಸ್ಥಳ, ಮುಂಡಾಜೆ ಭಾಗದಲ್ಲಿ ಆಲಿಕಲ್ಲು ಮಳೆಯಾಗಿದ್ದು, ನಾರಾವಿ, ವೇಣೂರು, ಅಳದಂಗಡಿ ಭಾಗದಲ್ಲೂ ಉತ್ತಮ ಮಳೆಯಾಗಿದೆ.

4ನೇ ಪುಟ ನೋಡಿ

ಶುದ್ಧವಾದ ನೈಸರ್ಗಿಕವನ್ನು ಅನುಭವಿಸಿ

ORGANIC™ HARVEST

ಮೊಟ್ಟ ಮೊದಲ ಬಾರಿಗೆ#

100% ಅಮೆರಿಕನ್ ಸರ್ಟಿಫೈಡ್ ಆರ್ಗ್ಯಾನಿಕ್*



ಬ್ರೈಟನಿಂಗ್ ಫೇಸ್ ಕ್ರೀಮ್



ನಿಮ್ಮ ನೈಸರ್ಗಿಕ ಕ್ರೀಮ್ ಎಷ್ಟು ನೈಸರ್ಗಿಕವಾಗಿದೆ?

ನಿಮಗಿದು ಗೊತ್ತೇ? ನೀವು ಯಾವುದು ನೈಸರ್ಗಿಕವಾಗಿದೆ ಎಂದು ತಿಳಿದಿರುವಿರೋ, ಅದು ವಾಸ್ತವದಲ್ಲಿ ನೈಸರ್ಗಿಕವಾಗಿಲ್ಲದಿರಬಹುದು?

"ನೈಸರ್ಗಿಕ ಉತ್ಪನ್ನಗಳಿಗೆ" ಯಾವುದೇ ಪ್ರಮಾಣಿತ ಮಾರ್ಗಸೂಚಿಗಳು ಅಥವಾ ಆದೇಶಗಳು ಇಲ್ಲದಿದ್ದಾಗ, ಅವುಗಳಲ್ಲಿ ವಾಸ್ತವವಾಗಿ ನೈಸರ್ಗಿಕ ವಸ್ತುಗಳ ಸಣ್ಣ ಪ್ರಮಾಣವಿರಬಹುದು, ಆದರೆ ಉಳಿದ ಫಾರ್ಮುಲಾದಲ್ಲಿ ನೀವು ಚಿಂತಿಸುವ ಕೆಮಿಕಲ್ಸ್ ಇರಬಹುದು.

ಆರ್ಗ್ಯಾನಿಕ್ ಹಾರ್ವೆಸ್ಟ್ ನಲ್ಲಿ, ನಮ್ಮ ಉತ್ಪನ್ನಗಳನ್ನು ನಿಖರತೆಯೊಂದಿಗೆ ಪರಿಪೂರ್ಣವಾಗಿ ವಿನ್ಯಾಸಗೊಳಿಸಲಾಗಿದೆ.

ಎಲ್ಲಾ ಇತರ ಉತ್ಪನ್ನಗಳು ಜಾಗತಿಕವಾಗಿ ವಿಶ್ವಾಸಾರ್ಹವಾಗಿರುವ, ಸ್ವತಂತ್ರ ಮಾನದಂಡವಾಗಿರುವ USDA ಯಿಂದ 100% ಸಾವಯವ ಎಂದು ಪ್ರಮಾಣೀಕೃತವಾಗಿವೆ, ಅಂದರೆ ನಮ್ಮ ಪದಾರ್ಥಗಳು ನೈಸರ್ಗಿಕ ಅಥವಾ ಸಾವಯವ ಮೂಲಗಳಿಂದ ಬಂದಿರುವಂತಹವು ಎಂದರ್ಥ.

*USDA ಯಿಂದ ಪ್ರಮಾಣಿಕೃತಾಗಿದೆ. #ಆರ್ಗ್ಯಾನಿಕ್ ಹಾರ್ವೆಸ್ಟ್ ನಿಂದ ^ನಿಯಮ ಮತ್ತು ಷರತ್ತು ಅನ್ವಯ

ನಿಮ್ಮ ಉಚಿತ ಟ್ರಯಲ್ ಕಿಟ್^ ಅನ್ನು ಕ್ಲೇಮ್ ಮಾಡಲು ನಿಮ್ಮ ಆ್ಯಪ್ ಅಥವಾ ವೆಬ್‌ಸೈಟ್‌ನಲ್ಲಿ OHFCFREE ಕೋಡ್ ಅನ್ನು ಬಳಸಿ

ಡೌನ್‌ಲೋಡ್ ಮಾಡಿ
Organic Harvest App

ಇಲ್ಲಿ ಸಹ ಲಭ್ಯವಿದೆ

amazon | NYKAA.com | Flipkart | Myntra | ನಿಮ್ಮ ಹತ್ತಿರದ ಎಲ್ಲಾ ಪ್ರಮುಖ ಅಂಗಡಿಗಳಲ್ಲಿ ಸಹ ಲಭ್ಯವಿದೆ



ಬೆಂಗಳೂರು ನಗರದ ಪ್ರಸಿದ್ಧ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ಧರ್ಮರಾಯಸ್ವಾಮಿ ದೇವಸ್ಥಾನದಿಂದ ಹೂವಿನ ಕರಗವನ್ನು ಹೊತ್ತುಕೊಂಡು ಅರ್ಚಕ ಜ್ಞಾನೇಂದ್ರ ಕಿಕ್ಕಿರಿದ ಜನಸ್ತೋಮದ ಮಧ್ಯೆ ಸಾಗಿದರು – ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ರಾತ್ರಿಯಿಡೀ ಗೋವಿಂದ ಜಪ, ಬೆಳಿಗ್ಗೆಯಿಂದ ರಥಗಳ ಸೊಬಗು

ಕರಗ ಉತ್ಸವದಲ್ಲಿ ಭಕ್ತ ಸಾಗರ



ಕರಗಕ್ಕೆ ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ನಮನ ಸಲ್ಲಿಸಿದರು



ನಗರದ ಹೂವಿನ ಕರಗ ಕಾಟನ್‌ಪೇಟೆಯ ಹಜರತ್ ತವಕ್ಕಲ್ ಮಸ್ತಾನ್ ದರ್ಗಾಕ್ಕೆ ಬಂದ ಕ್ಷಣ – ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಆರ್. ಮಾರುಕಟ್ಟೆ ಸುತ್ತಮುತ್ತ ಗುರುವಾರ ರಾತ್ರಿಯಿಡೀ ಹಾಗೂ ಶುಕ್ರವಾರ ಸಂಜೆಯವರೆಗೆ ಜನಜಂಗುಳಿ. ಬೆಳಗಿನ ಜಾವದವರೆಗೆ ಕರಗ ಉತ್ಸವದ ಸಂಭ್ರಮ, ಸಡಗರ. ನಂತರ ನಗರದ ವಿವಿಧ ಭಾಗಗಳಿಂದ ಆಗಮಿಸಿದ್ದ ತೇರು–ರಥಗಳಿಗೆ ಭಕ್ತಿಭಾವ.

ಬೆಂಗಳೂರಿನ ಸಾಂಪ್ರದಾಯಿಕ ಹಾಗೂ ಪ್ರಸಿದ್ಧ ಕರಗ ಉತ್ಸವದ ಚಿತ್ರಣ ಇದು. ಕೋವಿಡ್ ನಂತರ ಅತ್ಯಂತ ವಿಜೃಂಭಣೆಯಿಂದ ಉತ್ಸವ ನಡೆಯಿತು. ತಿಗಳರಪೇಟೆಯಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನದಿಂದ ತಡರಾತ್ರಿ 2.30ರ ವೇಳೆಗೆ ಕರಗ ಉತ್ಸವ ಆರಂಭವಾಯಿತು. ಅರ್ಚಕ ಜ್ಞಾನೇಂದ್ರ ಅವರು ಪೂರ್ವ ಪೂಜಾಕ್ರಮಗಳನ್ನು ಪೂರೈಸಿ 12.30ರ ವೇಳೆಗೆ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಆಗಮಿಸಿದರು.

ದೇವಸ್ಥಾನದ ಒಳಗೆ ಹಸಿ ಕರಗವನ್ನು ಸ್ಥಾಪಿಸಿದ್ದ ಸ್ಥಳದಲ್ಲಿ ಧಾರ್ಮಿಕ ವಿಧಿ–ವಿಧಾನಗಳು ಸುಮಾರು ಒಂದೂವರೆ ತಾಸು ನಡೆದವು. ಹೊರಭಾಗದಲ್ಲಿ ಧರ್ಮರಾಯಸ್ವಾಮಿ ರಥದ ಸಿದ್ಧತೆ ನಡೆದಿತ್ತು. ಉತ್ಸವ ಮೂರ್ತಿಗಳನ್ನು ತಂದು ಸಿಂಗರಿಸಲಾಗಿತ್ತು. ಸಹಸ್ರಾರು ಸಂಖ್ಯೆಯಲ್ಲಿದ್ದ ವೀರಕುಮಾರರು ದೀ ಧಿತ್ತಿ... ಎಂಬ ಉದ್ಗಾರದೊಂದಿಗೆ ಕತ್ತಿಯನ್ನು ಎದೆಗೆ ಬಡಿದುಕೊಂಡು ನಮಸ್ಕರಿಸುತ್ತಿದ್ದರು. ಗೋವಿಂದ... ಗೋವಿಂದಾ.. ಎಂಬ ಘೋಷಣೆ ಮೊಳಗುತ್ತಿತ್ತು.

ಸಾವಿರಾರು ಕಣ್ಣುಗಳು ಕರಗ ಉತ್ಸವ ದೇವಸ್ಥಾನದಿಂದ ಹೊರ ಬರುವುದನ್ನೇ ದಿಟ್ಟಿಸಿ ಕಾಯುತ್ತಿದ್ದವು. ಎಲ್ಲ ಪೇಟೆಗಳ ಗಲ್ಲಿಗಳಲ್ಲಿ ಜನ ಕಾಯುತ್ತಿದ್ದರು. ಭಕ್ತಾದಿಗಳಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ತಮ್ಮ ಸೋದರ ಹಾಗೂ ಪುತ್ರಿಯೊಂದಿಗೆ 12.30ರ ವೇಳೆಗೆ ಬಂದು, ದೇವಸ್ಥಾನದ ಬಳಿ ಕರಗ ಉತ್ಸವ ನೋಡಲು ಕಾದಿದ್ದರು.

ತಡರಾತ್ರಿ ಸುಮಾರು 2 ಗಂಟೆ ವೇಳೆಗೆ ದೇವಸ್ಥಾನದ ದ್ವಾರದಲ್ಲಿ ಕರಗ ಒಂದು ಬಾರಿ ಕಾಣಿಸಿತು. ನಂತರದ ಅರ್ಧ ಗಂಟೆ ದೇವಸ್ಥಾನದ ಗರ್ಭಗುಡಿಯಲ್ಲಿ ಸುತ್ತ ವಿಧಿಗಳನ್ನು ಪೂರೈಸಿದ ನಂತರ ಕರಗ ಧರ್ಮರಾಯ ಸ್ವಾಮಿ ಗುಡಿಯ ಹೊರಗೆ ಬಂದಿತು. ಭಕ್ತರು ಮಲ್ಲಿಗೆ ಹೂವಿನ ಅಭಿಷೇಕ ಮಾಡಿದರು. ಮೂರ್ನಾಲ್ಕು ಸುತ್ತು ಹಾಕಿದ ಮೇಲೆ, ಹಲಸೂರು ಪೇಟೆಯ ಆಂಜನೇಯಸ್ವಾಮಿ, ರಾಮ ದೇವಾಲಯದಲ್ಲಿ ಪೂಜೆ ಸ್ವೀಕರಿಸಿತು. ವಿಶೇಷ ಆಹ್ವಾನಿತರಾಗಿದ್ದ ವೀರೇಂದ್ರ ಹೆಗ್ಗಡೆ ಅವರು ಇರುವಲ್ಲಿಗೆ ಕರಗ ಬಂದಿತು. ಹೆಗ್ಗಡೆ ಕುಟುಂಬ ಮಲ್ಲಿಗೆ ಹೂವನ್ನು ಸಮರ್ಪಿಸಿತು. ಅರ್ಚಕ ಜ್ಞಾನೇಂದ್ರ ನಿಂಬೆಹಣ್ಣು ನೀಡಿದರು. ವಿಧಾನಪರಿಷತ್ ಸದಸ್ಯ ಪಿ.ಆರ್. ರಮೇಶ್ ಇದ್ದರು.

ನಂತರ, ನಗರ್ತಪೇಟೆ, ಸಿದ್ದಣ್ಣ ಗಲ್ಲಿ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯಿಂದ ಕೆ.ಆರ್. ಮಾರುಕಟ್ಟೆ ತಲುಪಿ, ಮಸ್ತಾನ್ ಸಾಬ್ ದರ್ಗಾಕ್ಕೆ ಭೇಟಿ ನೀಡಿ ಪೂಜೆ ಸ್ವೀಕರಿಸಿತು.. ಬಳೇಪೇಟೆ ಹಳೇಗರಡಿ, ಅಣ್ಣಮ್ಮನ ದೇವಾಲಯ, ಕಿಲಾರಿ ರಸ್ತೆ, ಯಲಹಂಕ ಗೇಟ್, ಅವೆನ್ಯೂ ರಸ್ತೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರ ಪೇಟೆಗಳಲ್ಲಿ ಸಾಗಿದ ಕರಗ ಮುಂಜಾನೆ ಧರ್ಮರಾಯಸ್ವಾಮಿ ದೇವಸ್ಥಾನ ತಲುಪಿತು. ಈ ಎಲ್ಲ ರಸ್ತೆ–ಗಲ್ಲಿಗಳಲ್ಲಿ ಜನಜಂಗುಳಿಯಿತ್ತು.

ಕರಗ ಉತ್ಸವ ಹೊರಟ ನಂತರ ಧರ್ಮರಾಯಸ್ವಾಮಿ ರಥೋತ್ಸವ ಮುಖ್ಯ ರಸ್ತೆಗಳಲ್ಲಿ ಸಾಗಿತು. ಭಕ್ತರು ಬಾಳೆಹಣ್ಣನ್ನು ಎಸೆದು ಭಕ್ತಿ ಮೆರೆದರು. ಈ ರಥದ ಹಿಂದೆ ನಗರದ ಹಲವು ಭಾಗಗಳಿಂದ ಆಗಮಿಸಿದ್ದ ನೂರಾರು ತೇರು–ರಥಗಳು ಸಾಗಿದವು. ಶುಕ್ರವಾರ ಬೆಳಿಗ್ಗೆಯಿಂದ ಈ ತೇರು–ರಥಗಳು ಅವೆನ್ಯೂ ರಸ್ತೆ, ಕೆ.ಆರ್. ಮಾರುಕಟ್ಟೆ ಸುತ್ತಮುತ್ತ ನಿಂತಿದ್ದವು. ಬೆಳಿಗ್ಗೆಯಿಂದ ಸಂಜೆಯವರೆಗೂ ತಂಡೋಪತಂಡವಾಗಿ ಬಂದ ನಾಗರಿಕರು, ತೇರು–ರಥಗಳಿಗೆ ಪೂಜೆ ಸಲ್ಲಿಸಿದರು.

ಪೀಣ್ಯ ಮೇಲ್ಸೇತುವೆ: ತಜ್ಞರ ಸಲಹೆಯಂತೆ ಕಾಮಗಾರಿ


ಎಲ್ಲಾ ಕೇಬಲ್ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ರಸ್ತೆ ಪೀಣ್ಯ ಮೇಲ್ಸೇತುವೆಯಲ್ಲಿ ಬಾಗಿರುವ ಕೇಬಲ್‌ಗಳು ಮಾತ್ರವಲ್ಲದೇ 5 ಕಿಲೋ ಮೀಟರ್ ಉದ್ದದ ಸೇತುವೆಯಲ್ಲಿ ಎಲ್ಲಾ ಕೇಬಲ್‌ಗಳನ್ನೂ ಬದಲಿಸಲು ಎನ್‌ಎಚ್‌ಎಐ ನಿರ್ಧರಿಸಿದೆ.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ತಜ್ಞರ ಸಲಹೆಯಂತೆ ಎರಡು ಹಂತಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಮೊದಲ ಹಂತದ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪೂರ್ಣಗೊಳಿಸಿದೆ. ಪ್ರೆಸಿನೇಟ್ ಕಂಪನಿ ಗುತ್ತಿಗೆ ವಹಿಸಿಕೊಂಡಿದೆ.

ಸೇತುವೆಯ ಪ್ರತಿ ಸೆಗ್ಮೆಂಟ್‌ನಲ್ಲಿ 10 ಕೇಬಲ್‌ಗಳಿದ್ದು, ಮೊದಲ ಹಂತದಲ್ಲಿ ಎರಡು ಕೇಬಲ್‌ಗಳನ್ನು ಹೆಚ್ಚುವರಿಯಾಗಿ ಅಳವಡಿಸಿ ಸೇತುವೆಯನ್ನು ಬಲಿಷ್ಠಗೊಳಿಸಲಾಗುತ್ತದೆ. ಈ ಕಾಮಗಾರಿ ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಇರುವ ಕೇಬಲ್‌ಗಳು ಭವಿಷ್ಯದಲ್ಲಿ ತುಕ್ಕು ಹಿಡಿಯಬಹುದು ಎಂಬ ಕಾರಣಕ್ಕೆ ಬದಲಿಸಬೇಕು ಎಂಬ ಶಿಫಾರಸನ್ನು ಐಐಎಸ್‌ಸಿ ಮಾಡಿದೆ.



ಪೀಣ್ಯ ಮೇಲ್ಸೇತುವೆ

‘ಹೆಚ್ಚುವರಿ ಕೇಬಲ್ ಅಳವಡಿಕೆ ಮಾಡಿ ಸೇತುವೆ ಸದೃಢವಾದ ಬಳಿಕ ಬಸ್, ಲಾರಿ ಸೇರಿ ಎಲ್ಲಾ ವಾಹನಗಳ ಸಂಚಾರಕ್ಕೆ ಅನುವು ಮಾಡಲಾಗುವುದು. ಎರಡನೇ ಹಂತದಲ್ಲಿ ಎಲ್ಲಾ ಕೇಬಲ್‌ಗಳನ್ನು ಬದಲಿಸುವ ಕಾಮಗಾರಿ ಮುಂದುವರಿಯಲಿದ್ದು, ಈ ಕಾಮಗಾರಿ ಪೂರ್ಣಗೊಳ್ಳಲು ಕನಿಷ್ಠ ಒಂದೂವರೆ ವರ್ಷ ಬೇಕಾಗಲಿದೆ’ ಎಂದು ಐಐಎಸ್‌ಸಿ ತಜ್ಞ ಚಂದ್ರ ಕಿಶನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಾಹನ ಸಂಚಾರಕ್ಕೆ ಒಂದೂವರೆ ವರ್ಷದ ತನಕ ಕಾಯಬೇಕಿಲ್ಲ. ಮೊದಲ ಹಂತದ ಕಾಮಗಾರಿ ಪೂರ್ಣಗೊಳ್ಳುವ ತನಕ ನಾಲ್ಕು ತಿಂಗಳು ಕಾಯ–ಬೇಕಾಗುತ್ತದೆ’ ಎಂದು ಹೇಳಿದರು.

ಐದು ಕಿಲೋ ಮೀಟರ್ ಉದ್ದದ ಮೇಲ್ಸೇತುವೆಯಲ್ಲಿ 120 ಪಿಲ್ಲರ್‌ಗಳಿದ್ದು, ಕೇಬಲ್ ಬದಲಾವಣೆ ಕಾರ್ಯ ಏಪ್ರಿಲ್ 20ರ ಬಳಿಕ ಆರಂಭವಾಗಲಿದೆ ಎಂದು ಎನ್‌ಎಚ್‌ಎಐ ಮೂಲಗಳು ತಿಳಿಸಿವೆ.

‘ಎನ್‌ಇಪಿ: ಕನ್ನಡದ ಬಗ್ಗೆ ತಪ್ಪು ಮಾಹಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಶಿಕ್ಷಣ ನೀತಿಯಡಿ ಹೊರತಂದಿರುವ ಪಠ್ಯದಲ್ಲಿ ‘ಕನ್ನಡದ ದೇವನಾಗರಿ ಲಿಪಿ ಇಂಗ್ಲಿಷ್‌ಗಿಂತಲೂ ಹೆಚ್ಚು ಸಂಕೀರ್ಣ’ ಎಂದು ಹೇಳಿರುವುದು ಖಂಡನೀಯ. ಇದು ಎಳೆಯ ಮನಸ್ಸುಗಳ ಮೇಲೆ ಭಾಷೆಯ ಕುರಿತು ತಪ್ಪಾದ ಅಭಿಪ್ರಾಯ ಬೆಳೆಯಲು ಕಾರಣವಾಗುತ್ತದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಆತಂಕ ವ್ಯಕ್ತಪಡಿಸಿದ್ದಾರೆ.

‘ಎನ್‌ಸಿಇಆರ್‌ಟಿ ಪಠ್ಯ ಕ್ರಮದಲ್ಲಿ ‘ಕನ್ನಡ ಭಾಷೆಯ ಅಕ್ಷರ ಜೋಡಣೆಯ ನಿಯಮಗಳು ಸಂಕೀರ್ಣವಾಗಿವೆ. ಮೂಲಾಕ್ಷರಕ್ಕೆ ವಿಭಿನ್ನ ರೀತಿಯಲ್ಲಿ ಸ್ವರಗಳ ಜೋಡಣೆಯಾಗುತ್ತವೆ. ಹೀಗಾಗಿ, ಕನ್ನಡ ಲಿಪಿಯಲ್ಲಿ ಹಿಡಿತ ಸಾಧಿಸಲು ಬಹಳ ವರ್ಷಗಳೇ ಬೇಕಾಗುತ್ತವೆ’ ಎನ್ನಲಾಗಿದೆ. ಕನ್ನಡದ ಮಕ್ಕಳು ತಿಂಗಳೊಳಗೆ ಕನ್ನಡ ಅಕ್ಷರ ಮಾಲೆಯನ್ನು ಸುಲಲಿತವಾಗಿ ಕಲಿಯುತ್ತಿರುವುದನ್ನು ನಾವು ಹಿಂದಿನಿಂದಲೂ ನೋಡಿಕೊಂಡು ಬಂದಿದ್ದೇವೆ’ ಎಂದು ಅವರು ಹೇಳಿದ್ದಾರೆ.

‘ಕವಿ ಮಹಾಲಿಂಗರಂಗ ಅವರು ಕನ್ನಡ ಭಾಷೆ ಎಂದರೆ ‘ಸುಲಿದ ಬಾಳೆಯ ಹಣ್ಣಿನಷ್ಟು ಸರಳ’ ಎಂದು ಹೇಳಿದ್ದಾರೆ. ‘ಕನ್ನಡ ಭಾಷೆ ಜಗತ್ತಿನಲ್ಲಿಯೇ ಅತ್ಯಂತ ವೈಜ್ಞಾನಿಕ ಭಾಷೆ’ ಎಂದು ಸಂಶೋಧಕ ಎಂ.ಗೋವಿಂದ ಪೈ ಹೇಳಿದ್ದಾರೆ. ಪ್ರಪಂಚದ ಬಹುತೇಕ ಭಾಷಾ ತಜ್ಞರು ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ, ಒಪ್ಪಿ–ಕೊಂಡಿದ್ದಾರೆ. ಜಗತ್ತಿನ ಪರಿಪೂರ್ಣ ಎಂದು ಗುರುತಿಸಿಕೊಂಡ ಮೂರು ಭಾಷೆಗಳಲ್ಲಿ ಕನ್ನಡವೂ ಒಂದು ಎನ್ನುವುದು ಹೆಮ್ಮೆಯ ಸಂಗತಿ. ಈ ಕಾರಣದಿಂದಲೇ ಆಚಾರ್ಯ ವಿನೋಬಾ ಭಾವೆಯವರು ಕನ್ನಡವನ್ನು ‘ಲಿಪಿಗಳ ರಾಣಿ’ ಎಂದು ಕರೆದಿದ್ದಾರೆ’ ಎಂದು ತಿಳಿಸಿದ್ದಾರೆ.

‘ಅಕ್ಷರ ಮಾಲೆಯ ಮೇಲೆ ಪರಿಣಿತಿ ಸಾಧಿಸಲು ಬೇಕಾಗುವ ಸಮಯದ ಬಗ್ಗೆ ಪಠ್ಯ ಪುಸ್ತಕ ರೂಪಿಸಿದವರಿಗೆ ಸ್ಪಷ್ಟ ತಿಳಿವಳಿಕೆಯಿಲ್ಲ. ರಾಜ್ಯ ಸರ್ಕಾರ ಇತ್ತೀಚೆಗೆ ಪ್ರಕಟಿಸಿರುವ ಕರ್ನಾಟಕ ಪಠ್ಯಕ್ರಮದ ಚೌಕಟ್ಟು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಒಂದನೇ ತರಗತಿಯಲ್ಲಿ ಸ್ವರ ಚಿಹ್ನೆಯನ್ನು, ಎರಡನೇ ತರಗತಿಯಲ್ಲಿ ಗುಣಿತಾಕ್ಷರಗಳನ್ನು ಕಲಿಯಬಹುದು ಎನ್ನುವುದು ವಿನ್ಯಾಸಕಾರರ ಅಭಿಮತ. ಪಠ್ಯದಲ್ಲಿ ತಪ್ಪು ಮಾದರಿ ನೀಡಿದರೆ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಅದು ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಆದ್ದರಿಂದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕನ್ನಡ ಕಲಿಕಾ ಕ್ರಮದಲ್ಲಿನ ದೋಷವನ್ನು ಈ ಕೂಡಲೇ ಸರಿಪಡಿಸಬೇಕು’ ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ವಿಶೇಷ ಪ್ರಾಸಿಕ್ಯೂಟರ್ ನೇಮಕ

ಜಯಲಲಿತಾ ಅವರಿಂದ ಜಪ್ತಿ ಮಾಡಿದ್ದ ವಸ್ತುಗಳ ಹರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಜಯಲಲಿತಾ ಅವರಿಂದ ಜಪ್ತಿ ಮಾಡಲಾಗಿದ್ದ ಕೋಟ್ಯಂತರ ರೂಪಾಯಿ ಬೆಲೆಬಾಳುವ ವಸ್ತುಗಳ ವಿಲೇವಾರಿ ಕಾನೂನು ಪ್ರಕ್ರಿಯೆ ಕೈಗೊಳ್ಳಲು ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್-1 ಕಿರಣ್ ಎಸ್. ಜವಳಿ ಅವರನ್ನು ಪ್ರಕರಣದ ‘ವಿಶೇಷ ಪ್ರಾಸಿಕ್ಯೂಟರ್’ ಆಗಿ ನೇಮಕ ಮಾಡಲಾಗಿದೆ. ಜಯಲಲಿತಾ ವಿರುದ್ಧದ ಪ್ರಕರಣವನ್ನು ವಿಚಾರಣೆ ನಡೆಸಿದ್ದ ನಗರದ ವಿಶೇಷ ನ್ಯಾಯಾಲಯ (ಬೆಂಗಳೂರಿನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ) ಬರೆದ ಪತ್ರವನ್ನು ಆಧರಿಸಿ ರಾಜ್ಯ ಕಾನೂನು ಇಲಾಖೆ ಮಾರ್ಚ್ 27ರಂದು ಆದೇಶ ಹೊರಡಿಸಿದೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ವಿಶೇಷ ನ್ಯಾಯಾಲಯವು ಜಯಲಲಿತಾಗೆ 4 ವರ್ಷ ಜೈಲು ಮತ್ತು ₹ 100 ಕೋಟಿ ದಂಡ ವಿಧಿಸಿ 2014ರ ಸೆಪ್ಟೆಂಬರ್ 27ರಂದು ಆದೇಶಿಸಿತ್ತು. ‘ಜಪ್ತಿ ಮಾಡಲಾಗಿದ್ದ ಬೆಲೆಬಾಳುವ ವಸ್ತುಗಳನ್ನು ಆರ್‌ಬಿಐ, ಎಸ್‌ಬಿಐಗೆ ಅಥವಾ ಸಾರ್ವಜನಿಕ ಹರಾಜು ಮೂಲಕ ಮಾರಾಟ ಮಾಡಬೇಕು. ಅದರಿಂದ ಬಂದ ಹಣವನ್ನು ದಂಡ ಮೊತ್ತಕ್ಕೆ ಹೊಂದಾಣಿಕೆ ಮಾಡಬೇಕು’ ಎಂದು ನಿರ್ದೇಶಿಸಲಾಗಿತ್ತು.

7 ಕೆ.ಜಿ ಚಿನ್ನ, 740 ಚಪ್ಪಲಿ

7.04 ಕೆ.ಜಿ ತೂಕದ 468 ಬಗೆಯ ಚಿನ್ನ ಹಾಗೂ ವಜ್ರಖಚಿತ ಆಭರಣಗಳು, 700 ಕೆ.ಜಿ. ತೂಕದ ಬೆಳ್ಳಿ ಆಭರಣಗಳು, 740 ದುಬಾರಿ ಚಪ್ಪಲಿಗಳು, 11,344 ರೇಷ್ಮೆ ಸೀರೆಗಳು, 250 ಶಾಲು, 12 ರೆಫ್ರಿಜರೇಟರ್, 10 ಟಿವಿ ಸೆಟ್, 8 ವಿಸಿಆರ್, 1 ವಿಡಿಯೊ ಕ್ಯಾಮರಾ, 4 ಸಿಡಿ ಪ್ಲೇಯರ್, 2 ಆಡಿಯೊ ಡೆಕ್, 24 ಟೂ-ಇನ್ ಒನ್ ಟೇಪ್ ರೆಕಾರ್ಡರ್, 1040 ವಿಡಿಯೊ ಕ್ಯಾಸೆಟ್, 3 ಐರನ್ ಲಾಕರ್, ₹ 1,39,202 ನಗದು ಸೇರಿದಂತೆ ಹಲವು ವಸ್ತುಗಳನ್ನು ಜಯಲಲಿತಾ ಅವರಿಂದ ಜಪ್ತಿ ಮಾಡಲಾಗಿತ್ತು. ಈಗ ಇವುಗಳನ್ನು ವಿಲೇವಾರಿ ಮಾಡಬೇಕಿದೆ.

ವೂಡೇ ಪಿ. ಕೃಷ್ಣ ನೇಮಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೇಂದ್ರೀಯ ಗಾಂಧಿ ಸ್ಮಾರಕ ನಿಧಿಗೆ ಮುಂದಿನ 5 ವರ್ಷಗಳ ಅವಧಿಗೆ ಟ್ರಸ್ಟಿಯಾಗಿ ವೂಡೇ ಪಿ. ಕೃಷ್ಣ ನೇಮಕ–ವಾಗಿದ್ದಾರೆ.

ಮಾ ಚ್ ೯ ವೂಡೇ ಪಿ. ಕೃಷ್ಣ 26ರಿಂದಲೇ ಈ ನೇಮಕಾತಿ ಜಾರಿಗೆ ಬಂದಿದ್ದು, 2028ರ ಮಾರ್ಚ್ 25ರವರೆಗೂ ಅವರು ಟ್ರಸ್ಟಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಗಾಂಧಿ ಸ್ಮಾರಕ ನಿಧಿಯಲ್ಲಿ ಅವರ ಸಕ್ರಿಯ ಪಾಲ್ಗೊಳ್ಳುವಿಕೆ ಗುರುತಿಸಿ ಈ ಹುದ್ದೆ ನೀಡಲಾಗಿದೆ ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ರಾಮ್ ಚಂದ್ರ ರಾಹಿ ಪತ್ರದಲ್ಲಿ ತಿಳಿಸಿದ್ದಾರೆ.

ಚಿತ್ರಾವಳಿ



ಶ್ರೀರಾಮಸೇವಾ ಮಂಡಳಿಯು ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ರಾಮಕೃಷ್ಣನ್ ಮೂರ್ತಿ ಶುಕ್ರವಾರ ಗಾಯನ ಪ್ರಸ್ತುತಪಡಿಸಿದರು. ಚಾರುಮತಿ ರಘುರಾಂ ಸಾಥ್ ನೀಡಿದರು. –ಪ್ರಜಾವಾಣಿ ಚಿತ್ರ



ಉತ್ತರಹಳ್ಳಿಯಲ್ಲಿ ನಡೆದ ಅಣ್ಣಮ್ಮದೇವಿ, ಹನುಮಂತನಗರದ ಬಂಡೆ ಮಹಾಕಾಳಿದೇವಿ, ಕಬ್ಬಾಳಮ್ಮ ತ್ರಿದೇವಿಯರ ಉತ್ಸವದಲ್ಲಿ ಗೋಸೇವಕ ಮಹೇಂದ್ರ ಮುಣೋತ್ ಅವರು ಕಲಾವಿದರನ್ನು ಸನ್ಮಾನಿಸಿದರು.

ಐಪಿಎಲ್ ಕ್ರಿಕೆಟ್: ನಕಲಿ ಟಿಕೆಟ್ ಮಾರಾಟ ಜಾಲ ಪತ್ತೆ

ಬೆಂಗಳೂರು: ಟಾಟಾ ಐಪಿಎಲ್ ಕ್ರಿಕೆಟ್ ಪಂದ್ಯಗಳ ವೀಕ್ಷಣೆಯ ನಕಲಿ ಟಿಕೆಟ್ ಮಾರಾಟ ಜಾಲ ಪತ್ತೆಯಾಗಿದ್ದು, ಈ ಸಂಬಂಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಟಿಕೆಟ್‌ಜಿನಿಯಾ ಸೊಲ್ಯೂಷನ್ಸ್ ಕಂಪನಿಯ ಪ್ರತಿನಿಧಿ ಶ್ರವಣ್‌ಕುಮಾರ್ ಅವರು ನಕಲಿ ಟಿಕೆಟ್‌ಗಳ ಬಗ್ಗೆ ಇತ್ತೀಚೆಗೆ ದೂರು ನೀಡಿದ್ದಾರೆ. ಆರೋಪಿಗಳಾದ ಜಿತೇಂದ್ರ ಹಾಗೂ ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 2ರಂದು ಮುಂಬೈ ಇಂಡಿಯನ್ಸ್ ಹಾಗೂ ಆರ್‌ಸಿಬಿ ತಂಡಗಳ ನಡುವೆ ಕ್ರಿಕೆಟ್ ಪಂದ್ಯವಿತ್ತು. ಕ್ರೀಡಾಂಗಣದ ಪ್ರತಿಯೊಂದು ಪ್ರವೇಶ ದ್ವಾರದ ಬಳಿ ಜನರ ಟಿಕೆಟ್ ತಪಾಸಣೆ ನಡೆಸಲಾಗುತ್ತಿತ್ತು.’

‘ಕ್ರೀಡಾಂಗಣ ಹೊರಭಾಗದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳಾದ ಜಿತೇಂದ್ರ ಹಾಗೂ ಶಿವಕುಮಾರ್, ₹1,201 ಹಾಗೂ ₹ 2,310 ಬೆಲೆಯ ಎರಡು ಟಿಕೆಟ್‌ಗಳನ್ನು ಜನರಿಗೆ ಮಾರುತ್ತಿದ್ದರು. ಅದನ್ನು ಗಮನಿಸಿದ್ದ ದೂರುದಾರ, ಆರೋಪಿಗಳನ್ನು ಹಿಡಿದುಕೊಂಡಿದ್ದರು. ಟಿಕೆಟ್ ಪರಿಶೀಲನೆ ನಡೆಸಿದಾಗ, ನಕಲಿ ಎಂಬುದು ತಿಳಿಯಿತು.’

‘ಟಿಕೆಟ್ ಸುಪರ್ದಿಗೆ ಪಡೆದಿದ್ದ ದೂರುದಾರ, ಠಾಣೆಗೆ ಒಪ್ಪಿಸಿದ್ದಾರೆ. ಅಸಲಿ ಟಿಕೆಟ್‌ಗಳ ಫೋಟೊ ತೆಗೆದುಕೊಂಡು, ಕಂಪ್ಯೂಟರ್ ಸಹಾಯದಿಂದ ನಕಲಿ ಟಿಕೆಟ್ ಸೃಷ್ಟಿಸಿ ಮುದ್ರಿಸಲಾಗಿತ್ತು. ಅದೇ ನಕಲಿ ಟಿಕೆಟ್‌ಗಳನ್ನು ಆರೋಪಿಗಳು ಮಾರುತ್ತಿದ್ದರು. ಈ ಆರೋಪಿಗಳ ಹಿನ್ನೆಲೆ ಬಗ್ಗೆ ತಿಳಿದುಕೊಳ್ಳಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇಬ್ಬರು ಪತ್ನಿಯರ ಕುಟುಂಬ ನಿರ್ವಹಣೆಗಾಗಿ ಕಳ್ಳತನಕ್ಕಿಳಿದ ಪತಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಣನಕುಂಟೆ ಠಾಣೆ ವ್ಯಾಪ್ತಿಯಲ್ಲಿ ನಿಲ್ಲಿಸಿದ್ದ ಲಾರಿ ಕಳ್ಳತನ ಮಾಡಿದ್ದ ಆರೋಪಿ ಎ.ದೀನ್ ದಯಾಳನ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ವೆಲ್ಲೂರು ಜಿಲ್ಲೆಯ ದೀನ್ ದಯಾಳನ್, ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ಏಪ್ರಿಲ್ 6ರಂದು ಗೊಟ್ಟಿಗೆರೆ ಬಳಿ ನಿಲ್ಲಿಸಿದ್ದ ಲಾರಿ ಕದ್ದು ಪರಾರಿಯಾಗಿದ್ದ. ಪ್ರಕರಣ ದಾಖಲಾದ 11 ಗಂಟೆಯೊಳಗೆ ಈತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೀನ್ ದಯಾಳನ್‌ಗೆ ಇಬ್ಬರು ಪತ್ನಿಯರು. ಅವರಿಬ್ಬರಿಗೂ ಆರೋಪಿ ಪ್ರತ್ಯೇಕ ಮನೆ ಮಾಡಿಕೊಟ್ಟಿದ್ದ. ಅವರ ಜೀವನ ನಿರ್ವಹಣೆಗೆ ಹಣ ಹೊಂದಿಸಲು ಕಳ್ಳತನಕ್ಕೆ ಇಳಿದಿದ್ದ. ಈತನಿಂದ ₹ 35 ಲಕ್ಷ ಮೌಲ್ಯದ ಲಾರಿ ಜಪ್ತಿ ಮಾಡಲಾಗಿದೆ. ಮತ್ತಷ್ಟು ಕಳ್ಳತನ ಪ್ರಕರಣಗಳಲ್ಲಿ ಆರೋಪಿ ಭಾಗಿಯಾಗಿರುವುದು ಗೊತ್ತಾಗಿದೆ’ ಎಂದರು.

ಹಣ ಪಾವತಿಸಲು ನಿರಾಕರಣೆ: ಎಂ.ಡಿ.ಗೆ ಜೀವ ಬೆದರಿಕೆ

ಭೂಸಿರಿ ಚಿಟ್ಸ್ ಕಂಪನಿ: ₹ 1.63 ಕೋಟಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೂಸಿರಿ ಚಿಟ್ಸ್ ಕಂಪನಿಯ ₹ 1.63 ಕೋಟಿ ಮೊತ್ತವನ್ನು ಹಣಕಾಸು ನಿರ್ದೇಶಕ ಎಸ್. ಮನೋಜ್, ಅವರ ತಂದೆ ಸಿದ್ದೇಗೌಡ ಹಾಗೂ ಇತರರು ದುರುಪಯೋಗಪಡಿಸಿಕೊಂಡಿದ್ದಾರೆ. ಹಣ ವಾಪಸ್ ಪಾವತಿಸಲು ಹೇಳಿದರೆ, ಜೀವ ಬೆದರಿಕೆಯೊಡ್ಡುತ್ತಿದ್ದಾರೆ’ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಬಿ.ವೈ. ತಿಮ್ಮೇಗೌಡ ಅವರು ಬಸವನಗುಡಿ ಠಾಣೆಗೆ ದೂರು ನೀಡಿದ್ದಾರೆ.

‘ಚಿಟ್ ಹಣ ದುರುಪಯೋಗ ಸಂಬಂಧ ಹಿಂದೆಯೇ ಒಂದು ಪ್ರಕರಣ ದಾಖಲಾಗಿತ್ತು. ಇದೀಗ, ಎಂ.ಡಿ ಮತ್ತೊಂದು ದೂರು ನೀಡಿದ್ದಾರೆ. ಹಣಕಾಸು ನಿರ್ದೇಶಕ ಮನೋಜ್, ಕಂಪನಿ ಉಪಾಧ್ಯಕ್ಷರಾದ ತಂದೆ ಸಿದ್ದೇಗೌಡ ಹಾಗೂ ಅಧ್ಯಕ್ಷ ಚಂದ್ರೇಗೌಡ ವಿರುದ್ಧ ಮಾರ್ಚ್ 14ರಂದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮನೋಜ್‌ನನ್ನು ಈ ಹಿಂದೆಯೇ ಬಂಧಿಸಲಾಗಿತ್ತು. ಕೆಲ ದಿನ ಜೈಲಿನಲ್ಲಿದ್ದ ಆತ, ಜಾಮೀನು ಮೇಲೆ ಹೊರ ಬಂದಿದ್ದಾನೆ. ತಾವು ಹಣ ಪಡೆದಿಲ್ಲವೆಂದು ವಾದಿಸಿ ಪ್ರಕರಣ ಮುಚ್ಚಿಹಾಕಲು ಯತ್ನಿಸುತ್ತಿರುವ ಆರೋಪಿಗಳು, ಎಂ.ಡಿ ಅವರಿಗೆ ಬೆದರಿಕೆಯೊಡ್ಡಿರುವ ಆರೋಪ ಕೇಳಿಬಂದಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದರು.

ಪ್ರಕರಣದ ವಿವರ: ‘ಆರೋಪಿ ಎಸ್. ಮನೋಜ್‌ನನ್ನು 2017ರ ಮಾರ್ಚ್ 17ರಂದು ಕಂಪನಿಯ ಹಣಕಾಸು ನಿರ್ದೇಶಕನಾಗಿ ನೇಮಕ ಮಾಡಲಾಗಿತ್ತು. ಇದೇ ಅವಧಿಯಲ್ಲಿ ಆಶ್ರಿತ ಹೌಸ್ ಬಿಲ್ಡಿಂಗ್ ಸೊಸೈಟಿಯವರು ತಲಾ ₹ 1 ಕೋಟಿ ಮೌಲ್ಯದ 3 ಚೀಟಿಗಳಿಗೆ ಚಂದಾದಾರರಾಗಿದ್ದರು. ಪ್ರತಿ ಚೀಟಿ ಅವಧಿ 25 ತಿಂಗಳಾಗಿತ್ತು’ ಎಂದು ಬಿ.ವೈ. ತಿಮ್ಮೇಗೌಡ ದೂರಿನಲ್ಲಿ ತಿಳಿಸಿದ್ದಾರೆ.

‘ಅಧ್ಯಕ್ಷ ಚಂದ್ರೇಗೌಡ, ಉಪಾಧ್ಯಕ್ಷ ಸಿದ್ದೇಗೌಡ ಅವರು ಮನೋಜ್ ಮುಂದಾಳತ್ವದಲ್ಲಿ ಒಂದಾಗಿದ್ದರು. ‘ಆಶ್ರಿತ ಹೌಸ್ ಬಿಲ್ಡಿಂಗ್ ಸೊಸೈಟಿಯ ನಿರ್ದೇಶಕರು ಕುಟುಂಬ ಸಮೇತ ಹೊರದೇಶದ ಪ್ರವಾಸಕ್ಕೆ ಹೊರಟಿದ್ದು, ತುರ್ತಾಗಿ ಹಣ ಬೇಕಿದೆ. 3 ಚೀಟಿಗಳ ಪೈಕಿ ಒಂದು ಚೀಟಿಯನ್ನು ತಕ್ಷಣ ಬಿಡ್ ಮಾಡಿ’ ಎಂದು ಕೋರಿದ್ದರು. ಅವರ ಮನವಿಯಂತೆ ₹ 1 ಕೋಟಿ ಬಿಡ್ ಮಂಜೂರಾಗಿತ್ತು.’

‘ಮಂಜೂರಾದ ಹಣವನ್ನು ಸೊಸೈಟಿಗೆ ನೀಡದೇ ದುರುಪಯೋಗಪಡಿಸಿಕೊಂಡಿದ್ದ ಮನೋಜ್, ತಂದೆ ಸಿದ್ದೇಗೌಡ, ಅಧ್ಯಕ್ಷ ಚಂದ್ರೇಗೌಡ ಹಾಗೂ ಇತರರಿಗೆ ನಗದು ರೂಪದಲ್ಲಿ ಕೊಡಿಸಿದ್ದರು. ಇದಾದ ನಂತರ, ಹಣ ವಾಪಸ್ ತುಂಬಿರಲಿಲ್ಲ. ಇದರಿಂದ ಸೊಸೈಟಿಗೂ ವಂಚನೆಯಾಗಿತ್ತು. ಇದೇ ಪ್ರಕರಣದಲ್ಲಿ ಮನೋಜ್ ಜೈಲಿಗೆ ಹೋಗಿ ಬಂದಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಜೈಲಿನಿಂದ ಹೊರಬಂದಿರುವ ಮನೋಜ್, ಇತರರ ಜೊತೆ ಸೇರಿ ವಂಚನೆ ಪ್ರಕರಣ ಮುಚ್ಚಿಹಾಕಲು ಯತ್ನಿಸುತ್ತಿದ್ದಾರೆ. ಹಣ ವಾಪಸು ಪಾವತಿಸುವಂತೆ ಹೇಳಿದಾಗ, ಜೀವ ಬೆದರಿಕೆಯೊಡ್ಡುತ್ತಿದ್ದಾರೆ. ಇವರೆಲ್ಲರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂದು ತಿಮ್ಮೇಗೌಡ ಆಗ್ರಹಿಸಿದ್ದಾರೆ.

ರೌಡಿಶೀಟ್‌ನಲ್ಲಿ ಹೆಸರು ಮುಂದುವರಿಕೆಗೆ ತಡೆ

ಬೆಂಗಳೂರು: ರೌಡಿ ಶೀಟ್‌ನಲ್ಲಿ ಫೈಟರ್ ರವಿ ಅಲಿಯಾಸ್ ಬಿ.ಎಂ. ಮಲ್ಲಿಕಾರ್ಜುನ ಅವರ ಹೆಸರನ್ನು ಮುಂದುವರಿಸುವುದಕ್ಕೆ ಹೈಕೋರ್ಟ್ ತಡೆ ನೀಡಿದೆ.

ರೌಡಿ ಶೀಟ್‌ನಿಂದ ಹೆಸರು ಕೈಬಿಡಲು ನಿರಾಕರಿಸಿದ್ದ ಪೊಲೀಸ್ ಇಲಾಖೆಯ ಕ್ರಮವನ್ನು ಪ್ರಶ್ನಿಸಿ ಮಲ್ಲಿಕಾರ್ಜುನ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ.

ಈ ಮೊದಲು ಮಲ್ಲಿಕಾರ್ಜುನ ತಮ್ಮ ಹೆಸರನ್ನು ರೌಡಿ ಶೀಟ್‌ನಲ್ಲಿ ಸೇರಿಸಿರುವುದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. 2019ರಲ್ಲಿ ಈ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ‘ರೌಡಿ ಶೀಟ್‌ನಿಂದ ಮಲ್ಲಿಕಾರ್ಜುನ ಅವರ ಹೆಸರು ತೆಗೆಯುವ ಕುರಿತಾದ ಮನವಿಯನ್ನು ಪರಿಗಣಿಸಿ’ ಎಂದು ಪೊಲೀಸ್ ಇಲಾಖೆಗೆ ನಿರ್ದೇಶಿಸಿತ್ತು. ಆದರೆ, ಮಲ್ಲಿಕಾರ್ಜುನ ಅವರು ಸಲ್ಲಿಸಿದ್ದ ಮನವಿಯನ್ನು ಪೊಲೀಸ್ ಇಲಾಖೆ 2020ರಲ್ಲಿ ತಿರಸ್ಕರಿಸಿ, ರೌಡಿಶೀಟ್‌ನಲ್ಲಿ ಹೆಸರನ್ನು ಮುಂದುವರಿಸಿತ್ತು. ಇದನ್ನು ಆಕ್ಷೇಪಿಸಿ ಮಲ್ಲಿಕಾರ್ಜುನ ಇದೇ 5ರಂದು ಮತ್ತೆ ರಿಟ್ ಅರ್ಜಿ ಸಲ್ಲಿಸಿದ್ದರು.

‘ಈ ಹಿಂದೆ ನನ್ನ ವಿರುದ್ಧ ದಾಖಲಾಗಿದ್ದ ಆರು ಅಪರಾಧ ಪ್ರಕರಣಗಳನ್ನು ಹೈಕೋರ್ಟ್ ಈಗಾಗಲೇ ರದ್ದುಪಡಿಸಿದೆ. ಮತ್ತೊಂದು ಪ್ರಕರಣದ ತನಿಖೆಗೆ ಹೈಕೋರ್ಟ್ ತಡೆ ಆದೇಶವಿದೆ. ಹೀಗಾಗಿ, ಸದ್ಯ ನನ್ನ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ. ಆದರೂ ಪ್ರತಿ ವರ್ಷ ರೌಡಿ ಶೀಟ್‌ನಲ್ಲಿ ನನ್ನ ಹೆಸರನ್ನು ಮುಂದುವರಿಸಲಾಗುತ್ತಿದೆ’ ಎಂದು ಮಲ್ಲಿಕಾರ್ಜುನ ರಿಟ್ ಅರ್ಜಿಯಲ್ಲಿ ಆಕ್ಷೇಪಿಸಿದ್ದರು.

ಸುದ್ದಿ 2 ನಿಮಿಷ

ಕೆಎಂಎಫ್‌ಗೆ ನಮ್ಮ ಆದ್ಯತೆ ಶೋಭಾ ಕರಂದ್ಲಾಜೆ

ಬೆಂಗಳೂರು: ‘ಕೆಎಂಎಫ್ ನಮ್ಮ ಹೆಮ್ಮೆ, ಅದನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸಲು ಸರ್ಕಾರ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಿದೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.



‘ಕೆಎಂಎಫ್ ಬೆಳವಣಿಗೆಗೆ ಸರ್ಕಾರದ ವತಿಯಿಂದ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲಾಗುವುದು’ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಅಮುಲ್‌ನವರು ಆನ್‌ಲೈನ್ ಮೂಲಕ ಮಾರಾಟ ಮಾಡುವುದಿದ್ದರೆ ಮಾಡಲಿ. ಹೆಚ್ಚು ಹಣ ಕೊಟ್ಟು ಖರೀದಿಸುವವರು ಇದ್ದರೆ ಖರೀದಿಸುತ್ತಾರೆ. ಅದೇ ರೀತಿ ಬೇರೆ ಬ್ರ್ಯಾಂಡ್‌ನವರೂ ಹಾಲು ಮಾರುತ್ತಿದ್ದಾರೆ. ಆದರೆ, ಕನ್ನಡಿಗರು ಕೆಎಂಎಫ್‌ನ ‘ನಂದಿನಿ’ ಬ್ರ್ಯಾಂಡ್‌ನ ಹಾಲು ಬಿಟ್ಟರೆ ಬೇರೆ ಹಾಲು ಖರೀದಿಸುವುದಿಲ್ಲ. ಅದು ರಾಜ್ಯದ ಹೆಮ್ಮೆಯ ಉತ್ಪನ್ನ’ ಎಂದರು.

ಕುಸಿದ ವಿದೇಶಿ ವಿನಿಮಯ ಮೀಸಲು


ನವದೆಹಲಿ: ದೇಶದ ವಿದೇಶಿ ವಿನಿಮಯ ಮೀಸಲು 2022–23ನೆಯ ಹಣಕಾಸು ವರ್ಷದಲ್ಲಿ 28.03 ಬಿಲಿಯನ್ ಡಾಲರ್‌ನಷ್ಟು (₹ 2.29 ಲಕ್ಷ ಕೋಟಿ) ಇಳಿಕೆ ಆಗಿದೆ.

ರೂಪಾಯಿ ಮೌಲ್ಯವು ತೀವ್ರವಾಗಿ ಕುಸಿಯುವುದನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನಲ್ಲಿದ್ದ ಡಾಲರ್ ಸಂಗ್ರಹವನ್ನು ಮಾರಾಟ ಮಾಡಿದ್ದು ವಿದೇಶಿ ವಿನಿಮಯ ಮೀಸಲು ಕಡಿಮೆ ಆಗಲು ಒಂದು ಕಾರಣ.

2022ರ ಏಪ್ರಿಲ್ 1ರಂದು ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹ 49.64 ಲಕ್ಷ ಕೋಟಿ ಆಗಿತ್ತು. ಇದು 2023ರ ಮಾರ್ಚ್ 31ಕ್ಕೆ ₹ 47.34 ಲಕ್ಷ ಕೋಟಿಗೆ ಇಳಿಕೆಯಾಗಿದೆ.

ರಜೆ ಹಾಕದ ಗಂಡ: ಹೆಂಡತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ನಂದಿನಿ

ಬೆಂಗಳೂರು: ಹೆಣ್ಣೂರು ಬಂಡೆ ಸಮೀಪದ ಮನೆಯೊಂದರಲ್ಲಿ ನಂದಿನಿ (30) ಎಂಬುವವರು ನೇಣು ಹಾಕಿಕೊಂಡು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಹೆಣ್ಣೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಂದಿನಿ ಅವರು ಗೌತಮ್ ಎಂಬುವವರನ್ನು ಪ್ರೀತಿಸಿ 5 ವರ್ಷಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ನಂದಿನಿ ಆತ್ಮಹತ್ಯೆ ಸಂಬಂಧಪತಿ ಗೌತಮ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಹೆಣ್ಣೂರು ಪೊಲೀಸರು ಹೇಳಿದರು.

‘ಸ್ಥಳೀಯ ಸಲೂನ್‌ವೊಂದರಲ್ಲಿಗೌತಮ್ ಕೆಲಸ ಮಾಡುತ್ತಿದ್ದರು. ನಂದಿನಿ, ಮನೆಯಲ್ಲಿರುತ್ತಿದ್ದರು. ಸಣ್ಣ–ಪುಟ್ಟ ವಿಚಾರಕ್ಕೂ ದಂಪತಿ ನಡುವೆ ಆಗಾಗ ಗಲಾಟೆ ಆಗುತ್ತಿತ್ತು. ನಂದಿನಿ ಅವರು ಆಗಾಗ ಮದ್ಯ ಸೇವಿಸುತ್ತಿದ್ದರು. ಸಿಗರೇಟ್ ಸಹ ಸೇದುತ್ತಿದ್ದರು. ಪತಿಯೇ ಎಲ್ಲವನ್ನೂ ತಂದುಕೊಡುತ್ತಿದ್ದರು’ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿದರು.

ರಾತ್ರಿ ಮದ್ಯದ ಪಾರ್ಟಿ: ‘ಬುಧವಾರ ರಾತ್ರಿ ಮದ್ಯ ತಂದು ಕೊಡುವಂತೆ ನಂದಿನಿ ಗಲಾಟೆ ಮಾಡಿದ್ದರು. ಅದಕ್ಕೆ ಒಪ್ಪಿದ್ದ ಗೌತಮ್, ಮದ್ಯ ಹಾಗೂ ಸಿಗರೇಟ್ ತಂದುಕೊಟ್ಟಿದ್ದರು. ಮದ್ಯ ಕುಡಿದಿದ್ದ ನಂದಿನಿ, ‘ನಾಳೆ ಕೆಲಸಕ್ಕೆ ಹೋಗಬೇಡ. ಇಡೀ ದಿನ ನನ್ನ ಜೊತೆ ಮನೆಯಲ್ಲಿ ಇರು’ ಎಂಬುದಾಗಿ ಪತಿಗೆ ಹೇಳಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಲೂನ್ ಬೀಗದ ಕೈ ಗೌತಮ್ ಬಳಿ ಇತ್ತು. ಹೀಗಾಗಿ, ಗುರುವಾರ ಬೆಳಿಗ್ಗೆ ಬಾಗಿಲು ತೆರೆಯಲೆಂದು ಸಲೂನ್‌ಗೆ ಹೋಗಲು ಸಿದ್ಧವಾಗಿದ್ದರು. ಕೋಪಗೊಂಡಿದ್ದ ಪತ್ನಿ, ‘ರಜೆ ಏಕೆ ಹಾಕಲಿಲ್ಲ. ನನ್ನ ಮಾತು ಕೇಳುವುದಿಲ್ಲವೆ?’ ಎಂದು ಪುನಃ ಜಗಳ ಮಾಡಿದ್ದರು. ಬೀಗ ತೆಗೆದು ವಾಪಸು ಬರುವುದಾಗಿ ಹೇಳಿ ಗೌತಮ್ ಮನೆಯಿಂದ ಹೋಗಿದ್ದರು. ಮಧ್ಯಾಹ್ನವಾದರೂ ವಾಪಸು ಬಂದಿರಲಿಲ್ಲ.’

‘ಪತಿಯ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದ ನಂದಿನಿ, ‘ನಾನು ಚಿರನಿದ್ರೆಗೆ ಹೊರಟಿದ್ದೇನೆ. ನೀವು ಆರಾಮಾಗಿ ಬಂದು, ಮಕ್ಕಳಿಬ್ಬರಿಗೆ ಊಟ ಮಾಡಿಸಿ. ಅವರನ್ನು ಚೆನ್ನಾಗಿ ನೋಡಿಕೊಳ್ಳಿ’ ಎಂದಿದ್ದರು.

ಗಾಬರಿಯಾದ ಪತಿ, ಮನೆಗೆ ಬಂದು ನೋಡುವಷ್ಟರಲ್ಲಿ ನಂದಿನಿ ನೇಣಿಗೆ ಶರಣಾಗಿದ್ದರು. ಅವರು ಬರೆದಿದ್ದಾರೆ ಎನ್ನಲಾದ ಮರಣಪತ್ರ ಸಿಕ್ಕಿದೆ.

‘ಅಪ್ಪ–ಅಮ್ಮ, ಪತಿ ಎಲ್ಲರೂ ನನ್ನನ್ನು ಕ್ಷಮಿಸಿ. ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಿ’ ಎಂದು ಪತ್ರದಲ್ಲಿ ಬರೆಯಲಾಗಿದೆ. ಪತ್ರದಲ್ಲಿರುವ ಕೈ ಬರಹ ಪರಿಶೀಲಿಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.



ಗುಡ್ ಫ್ರೈಡೇ ಪ್ರಯುಕ್ತ ಕ್ರೈಸ್ತ ಸಮುದಾಯದವರು ಕೇಂಬ್ರಿಜ್ ರಸ್ತೆಯಲ್ಲಿರುವ ‘ಅವರ್ ಲೇಡಿ ಆಫ್ ಲಾರ್ಡ್ಸ್ ಚರ್ಚ್’ನಲ್ಲಿ ಪ್ರಾರ್ಥನೆ ಸಲ್ಲಿಸಿದರು. – ಪ್ರಜಾವಾಣಿ ಚಿತ್ರ

ಯುವತಿಯರ ಎದುರು ಬಾಲಕನ ಅಸಭ್ಯ ವರ್ತನೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯರು ವಾಸವಿದ್ದ ಮನೆಬಳಿ ಹೋಗಿ ಅಸಭ್ಯವಾಗಿ ವರ್ತಿಸಿದ್ದ ಆರೋಪದಡಿ ಬಾಲಕನೊಬ್ಬನನ್ನು ಸದಾಶಿವನಗರ ಠಾಣೆ ಪೊಲೀಸರು ಸುಪರ್ದಿಗೆ ಪಡೆದು, ಬಾಲ ನ್ಯಾಯಮಂಡಳಿ ಎದುರು ಹಾಜರುಪಡಿಸಿದ್ದಾರೆ.

‘ಅಸಭ್ಯ ವರ್ತನೆ ಸಂಬಂಧ ಸಂತ್ರಸ್ತ ಯುವತಿಯೊಬ್ಬರು ದೂರು ನೀಡಿದ್ದರು. 16 ವರ್ಷದ ಬಾಲಕನನ್ನು ವಶಕ್ಕೆ ಪಡೆದು ಬಾಲನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿತ್ತು. ಸದ್ಯ ಬಾಲಕ ಬಾಲಮಂದಿರದಲ್ಲಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಿಹಾರದ 23 ವರ್ಷದ ಯುವತಿ ನಗರದ ಕಾಲೇಜೊಂದರಲ್ಲಿ ಓದುತ್ತಿದ್ದು, ತಮ್ಮ ಸ್ನೇಹಿತೆಯರ ಜೊತೆ ಬಾಡಿಗೆ ಮನೆಯಲ್ಲಿ ನೆಲೆಸಿದ್ದಾರೆ. ಸ್ಥಳೀಯ ನಿವಾಸಿಯಾದ ಬಾಲಕ, ಕೊಠಡಿ ಬಳಿ ಸುತ್ತಾಡುತ್ತಿದ್ದ. ಯುವತಿಯರನ್ನು ಹಿಂಬಾಲಿಸುತ್ತಿದ್ದ. ಬಾಲಕನಾಗಿದ್ದರಿಂದ ಯುವತಿಯರು ಸುಮ್ಮನಿದ್ದರು. ಏ. 1ರಂದು ರಾತ್ರಿ 9 ಗಂಟೆ ಸುಮಾರಿಗೆ ಬಾಲಕ, ಯುವತಿಯರ ಮನೆ ಬಾಗಿಲು ಬಳಿ ಬಂದು ನಿಂತಿದ್ದ. ಅದನ್ನು ಯುವತಿಯರು ಪ್ರಶ್ನಿಸಿದ್ದರು. ಅವರ ಎದುರು ಲೈಂಗಿಕ ಸನ್ನೆಗಳ ಮೂಲಕ ಅಸಭ್ಯವಾಗಿ ವರ್ತಿಸಿದ್ದ ಬಾಲಕ, ಮನೆಯೊಳಗೆ ನುಗ್ಗಲು ಯತ್ನಿಸಿದ್ದ. ಗಾಬರಿಗೊಂಡ ಯುವತಿಯರು ಬಾಗಿಲು ಹಾಕಿಕೊಂಡಿದ್ದರು. ಸ್ನೇಹಿತರಿಗೆ ಕರೆಮಾಡಿ ಮನೆಗೆ ಕರೆಸಿಕೊಂಡಿದ್ದರು. ಅಷ್ಟರಲ್ಲೇ ಬಾಲಕ ಸ್ಥಳದಿಂದ ಹೊರಟುಹೋಗಿದ್ದ. ದೂರು ದಾಖಲಾಗುತ್ತಿದ್ದಂತೆ, ತಾಂತ್ರಿಕ ಪುರಾವೆಗಳನ್ನು ಸಂಗ್ರಹಿಸಿ ಬಾಲಕನನ್ನು ಪತ್ತೆ ಮಾಡಲಾಗಿದೆ’ ಎಂದು ತಿಳಿಸಿವೆ.

ಸುಧಾ ಓದಿರಿ

ದಾಖಲೆಯಿಲ್ಲದೆ ಹಣ ಸಾಗಣೆ: ಮೂರು ವಾಹನಗಳ ವಶ

ಆನೇಕಲ್: ದಾಖಲೆಗಳಿಲ್ಲದೆ ಹೆಚ್ಚುವರಿ ಹಣ ಸಾಗಿಸುತ್ತಿದ್ದ ಮೂರು ವಾಹನಗಳನ್ನು ಹೆಬ್ಬಗೋಡಿ ಠಾಣೆ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹೆಬ್ಬಗೋಡಿ ಬಳಿ ಪೊಲೀಸ್ ಚೆಕ್‌ಪೋಸ್ಟ್ ಬಳಿ ಎಟಿಎಂಗೆ ಹಣ ತುಂಬಲು ತೆರಳುತ್ತಿದ್ದ ವಾಹನಗಳನ್ನು ನಿಲ್ಲಿಸಿ ತಪಾಸಣೆ ನಡೆಸಲಾಯಿತು.

3 ವಾಹನಗಳ ಪೈಕಿ ಒಂದು ವಾಹನದಲ್ಲಿ ₹2.3 ಕೋಟಿ, 2ನೇ ವಾಹನದಲ್ಲಿ ₹2.37 ಕೋಟಿ ಮತ್ತು 3ನೇ ವಾಹನದಲ್ಲಿ ₹10.46 ಲಕ್ಷ ಇತ್ತು. ಈ ಪೈಕಿ ₹10 ಲಕ್ಷಕ್ಕೆ ಸಮರ್ಪಕ ದಾಖಲೆ ನೀಡಿರಲಿಲ್ಲ. ಕಾರಣ ಮೂರು ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಇನ್‌ಸ್ಪೆಕ್ಟರ್ ಐಯನ್ ರೆಡ್ಡಿ ತಿಳಿಸಿದರು.


ನಗರದಲ್ಲಿ ಇಂದು

ರಾಮೋತ್ಸವ ವಿಶೇಷ: ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಗಿರಿಧರನ್ ಕೆ. ಮತ್ತು ತಂಡ, ಸಂಗೀತ ಕಛೇರಿ: ತ್ರಿಚೂರು ಸಹೋದರರು, ವಿಶ್ವೇಶ್ ಚಂದ್ರಶೇಖರ್, ತ್ರಿಚೂರು ಮೋಹನ್, ಕೋವೈ ಸುರೇಶ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ವಾಣಿ ಎಸ್. ನಾಡಿಗ, ಜುಗಲ್ ಬಂದಿ: ಸುಮಂತ್ ಮಂಜುನಾಥ್, ಸರ್ಫರಾಜ್ ಖಾನ್, ಅನಿರುದ್ಧ ಎಸ್. ಭಟ್, ರಾಜೇಂದ್ರ ನಾಕೋಡ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15 ರಿಂದ


ಶ್ರೀರಾಮೋತ್ಸವ: ದೇವರನಾಮ: ಅದಿತಿ ಚಕ್ರವರ್ತಿ, ಸಂಗೀತ ಕಛೇರಿ: ನಾಗಮಣಿ ಶ್ರೀನಾಥ್, ಉಮಾ ಕುಮಾರ್, ಜ್ಯೋತ್ಸ್ನಾ ಶ್ರೀಕಾಂತ್, ರೇಣುಕಾ ಪ್ರಸಾದ್, ಎ.ಎಸ್.ಎನ್. ಸ್ವಾಮಿ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಸಂಜೆ 5.30ರಿಂದ

ಪ್ರಜಾಪ್ರಭುತ್ವದ ಹಬ್ಬ: ಉದ್ಘಾಟನೆ: ಮನೋಜ್ ಕುಮಾರ್ ಮೀನಾ, ಉಪಸ್ಥಿತಿ: ಉಜ್ವಲ್ ಕುಮಾರ್ ಘೋಷ್, ಆಯೋಜನೆ: ಮುಖ್ಯ ಚುನಾವಣಾಧಿಕಾರಿಗಳ ಕಚೇರಿ, ಸ್ಥಳ: ಚರ್ಚ್ ಸ್ಟ್ರೀಟ್ (ಬ್ರಿಗೇಡ್ ರೋಡ್ ಕಾರ್ನರ್), ಎಂ.ಜಿ ರಸ್ತೆ, ಬೆಳಿಗ್ಗೆ 11



ಮನೋಜ್ ಕುಮಾರ್

ಉಪನ್ಯಾಸ ಹಾಗೂ ಸನ್ಮಾನ: ಗಜಾನನ ಶರ್ಮಾ, ಎಚ್.ಎಸ್. ಗೋಪಾಲ ರಾವ್, ಸಂಗೀತ ಕಾರ್ಯಕ್ರಮ: ಗಣೇಶ ದೇಸಾಯಿ, ಆಯೋಜನೆ ಹಾಗೂ ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10




ಗಜಾನನ ಶರ್ಮಾ

ಶ್ರೀರಾಮೋತ್ಸವ: ದ್ವಂದ್ವ ಪಿಟೀಲು ವಾದನ: ಪ್ರಣವಶ್ರೀ ಯಶಸ್ವಿ ಎಸ್., ಮೋಕ್ಷಿತ್ ಎಸ್., ಅನೂರ್ ವಿನೋದ್ ಶ್ಯಾಮ್, ಉದಯರಾಜ್, ಸುನಾದ್ ಆನೂರು, ಕಾರ್ತಿಕ್ ಪ್ರಣವ್, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ಶ್ರೀರಾಮನವಮಿ ಸಂಗೀತೋತ್ಸವ: ಮೈಸೂರು ಎಂ. ನಾಗರಾಜ್, ಮೈಸೂರು ಎಂ. ಮಂಜುನಾಥ್, ಮೂಶನಂ ರಾಜಾರಾಮ್, ಗಿರಿಧರ್ ಉಡುಪ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ರಾಮನವಮಿ ಕಾರ್ಯಕ್ರಮ: ಗಾಯನ: ಎಸ್. ಶಂಕರ್, ಪಿಟೀಲು: ಎಸ್. ಜನಾರ್ದನ್, ಮೃದಂಗ: ಎಸ್.ಜಿ. ರವಿ, ಘಟ: ಟಿ.ಎನ್. ರಮೇಶ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಗಾಯನ–ಅಭಿನಂದನೆ ಸಮಾರಂಭ: ಮೃತ್ಯುಂಜಯ ದೊಡ್ಡವಾಡ ಅವರ ಸಂಯೋಜನೆಯ ಗೀತೆಗಳ ಗಾಯನ, ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಆರ್.ಕೆ. ನಲ್ಲೂರು ಪ್ರಸಾದ್, ಅಭಿನಂದನಾ ನುಡಿ: ಬಿ.ಆರ್. ಲಕ್ಷ್ಮಣರಾವ್, ಅಭಿನಂದನೆ: ಮೃತ್ಯುಂಜಯ ದೊಡ್ಡವಾಡ, ಮುಖ್ಯ ಅತಿಥಿಗಳು: ನಿರ್ಮಲಾ ಎಲಿಗಾರ್, ಸಂತೀಶ್ ಹಂಪಿಹೊಳಿ, ಆಯೋಜನೆ: ಇಂಚರ ಸುಗಮಸಂಗೀತ ಸಂಸ್ಥೆ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಮೃತ್ಯುಂಜಯ ದೊಡ್ಡವಾಡ

ಡಾ.ಕೆ.ಎಂ. ಮುನ್ಷಿ ಸ್ಮಾರಕ ಉಪನ್ಯಾಸ: ಆರ್. ವೆಂಕಟರಮಣಿ, ವಿಷಯ: ‘ಭಾರತೀಯ ಪೌರತ್ವದ ಹೊಸ ಆಯಾಮಗಳು’, ಅಧ್ಯಕ್ಷತೆ: ನ್ಯಾ.ಆರ್.ವಿ. ರವೀಂದ್ರನ್, ಆಯೋಜನೆ ಹಾಗೂ ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ವಿಚಾರ ಸಂಕಿರಣ: ‘ಬಹಿಷ್ಕೃತ ಭಾರತದಿಂದ ಪ್ರಬುದ್ಧ ಭಾರತದ ಕಡೆಗೆ: ಡಾ.ಬಿ.ಆರ್. ಅಂಬೇಡ್ಕರ್’, ಉದ್ಘಾಟನೆ: ವಿ. ನಾಗರಾಜ್, ಕೃ. ನರಹರಿ, ಪ್ರಾಸ್ತಾವಿಕ ನುಡಿ: ದು.ಗು. ಲಕ್ಷ್ಮಣ್, ‘ಅಂಬೇಡ್ಕರರ ಪ್ರಸ್ತುತತೆ’ ಬಗ್ಗೆ ಉಪನ್ಯಾಸ: ಸಂಜಯ್ ಪಾಸ್ವಾನ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30

‘ನಾಯಿಯಿಪ್ಪ ನಾಟಕ’ ಬಿಡುಗಡೆ: ಸದಾಶಿವ ಸ್ವಾಮೀಜಿ, ಕೃತಿ ಬಗ್ಗೆ ಮಾತು: ರಮೇಶ್ ಚಾಮರಹಳ್ಳಿ, ರುದ್ರೇಶ್ ಅದರಂಗಿ, ಗಾಯನ: ಟಿ. ಗೊಲ್ಲಹಳ್ಳಿ ನಾರಾಯಣಸ್ವಾಮಿ ಮತ್ತು ತಂಡ, ಆಯೋಜನೆ: ಕೌದಿ ಪ್ರಕಾಶನ, ಸ್ಥಳ: ಬುಡ್ಡಿದೀಪ ಪಾಠಶಾಲೆ, ಪಾಪರಾಜನಹಳ್ಳಿ, ಸಂಜೆ 4.30

22 ಕಲಾವಿದರಿಂದ ಸಮೂಹ ಕಲಾ

ಪತ್ರಕರ್ತೆ ನಾಗಮಣಿ ಎಸ್. ರಾವ್ ಸ್ಥಾಪಿತ ದತ್ತಿನಿಧಿ ಉಪನ್ಯಾಸ: ನಿವೃತ್ತ ನ್ಯಾ. ಬಿ.ಎನ್. ಶ್ರೀಕೃಷ್ಣ, ವಿಷಯ: ‘ಅಭಿವ್ಯಕ್ತಿ ಸ್ವಾತಂತ್ರ್ಯ: ಮಾಧ್ಯಮ ಮತ್ತು ನ್ಯಾಯಾಂಗ’, ಉಪಸ್ಥಿತಿ: ನಾಗಮಣಿ ಎಸ್. ರಾವ್, ಪ್ರಸ್ತಾವನೆ: ಚೇತನಾ ಬೆಳಗೆರೆ, ಅಧ್ಯಕ್ಷತೆ: ಪದ್ಮಾ ಶಿವಮೊಗ್ಗ, ಆಯೋಜನೆ: ಕರ್ನಾಟಕ ಪತ್ರಕರ್ತೆಯರ ಸಂಘ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಪ್ರದರ್ಶನ ಮತ್ತು ಪುಸ್ತಕ ಬಿಡುಗಡೆ: ಪ್ರಿಯರಂಜನ್, ಮುಖ್ಯ ಅತಿಥಿ: ಸುಬರ್ಣ ಪಾತ್ರೊ, ಆಯೋಜನೆ: ಆರ್ಟ್ ಹೌಜ್, ಸ್ಥಳ: #63, ಅರಮನೆ ರಸ್ತೆ, ವಸಂತನಗರ, ಮೌಂಟ್ ಕಾರ್ಮೆಲ್ ಕಾಲೇಜ್ ಸಮೀಪ, ಸಂಜೆ 6.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

‘ದ್ರೌಪತಿ ಹೇಳ್ತವ್ಳೆ’ ನಾಟಕ ಪ್ರದರ್ಶನ: ನಿರ್ದೇಶನ: ಗಣೇಶ್ ಮಂದಾರ್ತಿ, ಆಯೋಜನೆ: ರಂಗಾಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7


HARSHA
Happiness. Redefined.
ಸಂಭ್ರಮಿಸಿ
ಸುಮಧುರ ಬಾಂಧವ್ಯದ ಉತ್ಸವ
ಕೊನೆಯ 2 ದಿನಗಳು ಮಾತ್ರ!
ಕೊಡುಗೆಗಳು ಕೊನೆಗೊಳ್ಳುವ ಮುನ್ನವೇ ಖರೀದಿಸಿ!
ನಿಮ್ಮದೇ ಸಂಭ್ರಮ ನಿಮ್ಮದೇ ಉತ್ಸವ
Godrej 1 ton 5-Star AC (MRP: ₹48,990) Now @ ₹35,990 + FREE BOAT Smart Watch worth ₹7,990 + FREE Standard Installation
LG 32 litre Charcoal Convection Microwave (MRP: ₹32,499) Now @ ₹26,499 FREE Bosch Hand Mixer worth ₹3,599 + 10% CASH BACK
LG 55 UHD LED TV (MRP: ₹71,990) Now @ ₹56,990 ₹3,500 CASH BACK + FREE FN5 Tone-Free Earbuds
Sony 65 OLED TV (MRP: ₹3,49,900) Now @ ₹2,37,490 ₹12,500 CASH BACK
Sony 75 4K LED TV (MRP: ₹2,69,900) Now @ ₹1,51,990 ₹9,000 CASH BACK
LG 10kg Front Loading Washing Machine (MRP: ₹58,990) Now @ ₹49,290 15% CASH BACK + FREE LaOpala 23pc Dinner Set
Liebherr TDCS-4740 Refrigerator (MRP: ₹67,230) Now @ ₹51,990 on Exchange + ₹2,250 CASH BACK
Whirlpool DF NEO258 Frost Free Refrigerator (MRP: ₹27,000) Now @ ₹24,090 FREE 3pc Cooking Set
Haier HRS-682 SS Side-by-Side (MRP: ₹1,01,990) Now @ ₹65,490 FREE Smart Watch + ₹5,000 CASH BACK
SMART EMI kotak Kotak Mahindra Bank
Instant Discount up to ₹6,000 on ACs and Refrigerators
ಇಂದು ಖರೀದಿಸಿ, ನಂತರ ಪಾವತಿಸಿ
BAJAJ FINSERV EMI FINANCE
HDB FINANCIAL SERVICES
HDFC BANK
IDFC FIRST Bank
ಇಎಮ್‌ಐ ಲಕ್ಕಿ ಡ್ರಾ
ಖರೀದಿಸಿ ಹಾಗೂ ಗೆಲ್ಲಿರಿ ಎಲ್‌ಜಿ ಬ್ರ್ಯಾಂಡ್‌ನ 65" ಎಲ್‌ಇಡಿ ಟಿವಿ, ಫ್ರಾಸ್ಟ್ ಫ್ರೀ ರೆಫ್ರಿಜರೇಟರ್, ಏರ್ ಕಂಡೀಷನರ್, ವಾಶಿಂಗ್ ಮಶಿನ್, ಮೈಕ್ರೋವೇವ್ ಓವನ್, ಸೌಂಡ್ ಬಾರ್, ಟೋನ್ ಫ್ರೀ ಇಯರ್ ಬಡ್ಸ್
ಇನ್ಸ್ಟಂಟ್ ಲಕ್ಕಿ ಡ್ರಾನೊಂದಿಗೆ ಖಚಿತ ಉಡುಗೊರೆ
ಮೈಕ್ರೋವೇವ್ ಓವನ್
ಸ್ಮಾರ್ಟ್‌ಫೋನ್
ಎಲ್‌ಇಡಿ ಟಿವಿ
ಏರ್ ಕಂಡೀಷನರ್
ಸ್ಮಾರ್ಟ್‌ವಾಚ್
...ಜೊತೆಗೆ ಇನ್ನಷ್ಟು ಉಡುಗೊರೆಗಳು.
HARSHOTSAVA
ANNIVERSARY CELEBRATIONS
6th - 9th April 2023
eHarsha.India
digital_harsha
www.harshaindia.com
Conditions apply. All offers on select models and brands only. Models shown are indicative. Offer valid till stocks last. Finance at the sole discretion of the financier.
Finance available only within city limits. Instant Discount & Cash Bank only on selected bank cards and on selected products.
BLUE STAR
BOSCH
Godrej
Haier
IFB
LG Life's Good
LIEBHERR
Panasonic
SAMSUNG
SONY
VOLTAS
Whirlpool
ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು - 560039. ಫೋ.: 080-26983101

ಸನ್ನದ್ಧ ಸ್ಥಿತಿಯನ್ನು ಖಾತರಿಪಡಿಸಿಕೊಳ್ಳಲು ಇದೇ 10ರಂದು ಅಣಕು ಕಾರ್ಯಾಚರಣೆಗೆ ಸೂಚನೆ

ಕೋವಿಡ್: ಮುಂಜಾಗ್ರತೆಗೆ ಕೇಂದ್ರ ತಾಕೀತು

ನವದೆಹಲಿ (ಪಿಟಿಐ): ‘ಕೋವಿಡ್ ಪ್ರಕರಣಗಳು ದೇಶದಲ್ಲಿ ಏರುಗತಿಯಲ್ಲಿದ್ದು, ಅಗತ್ಯ ಮುಂಜಾಗ್ರತೆಯನ್ನು ವಹಿಸಬೇಕು ಹಾಗೂ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗಿರಬೇಕು’ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಶುಕ್ರವಾರ ಸೂಚಿಸಿದ್ದಾರೆ.

ರಾಜ್ಯಗಳ ಆರೋಗ್ಯ ಸಚಿವರು, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಜೊತೆಗೆ ವರ್ಚುವಲ್ ಆಗಿ ಪರಿಶೀಲನಾ ಸಭೆ ನಡೆಸಿದ ಅವರು, ‘ಅಪಾಯದ ಸಾಧ್ಯತೆಗಳನ್ನು ಗುರುತಿಸಬೇಕು ಹಾಗೂ ಪ್ರಕರಣಗಳ ಏರುಗತಿ ಮೇಲೆ ನಿಗಾವಹಿಸಬೇಕು’ ಎಂದು ಹೇಳಿದರು.


ಅಣಕು ಕಾರ್ಯಾಚರಣೆ: ಪರಿಸ್ಥಿತಿ ಎದುರಿಸಲು ಜಿಲ್ಲೆಗಳಲ್ಲಿ ಆಸ್ಪತ್ರೆಗಳು, ಅಧಿಕಾರಿಗಳು ಸಜ್ಜಾಗಿದ್ದಾರೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ಇದೇ 10, 11ರಂದು ಅಣಕು ಕಾರ್ಯಾಚರಣೆ ನಡೆಸಬೇಕು ಎಂದು ರಾಜ್ಯಗಳ ಆರೋಗ್ಯ ಸಚಿವರಿಗೆ ಅವರು ಸಲಹೆ ಮಾಡಿದರು.

ಅದಕ್ಕೂ ಪೂರ್ವಭಾವಿಯಾಗಿ ಜಿಲ್ಲಾ ಆಡಳಿತ, ಆರೋಗ್ಯ ಇಲಾಖೆಯ ಜಿಲ್ಲಾ ಅಧಿಕಾರಿಗಳ ಜೊತೆಗೆ ಶನಿವಾರ ಮತ್ತು ಭಾನುವಾರ (ಇದೇ 8 ಮತ್ತು 9) ಪರಿಶೀಲನಾ ಸಭೆಯನ್ನು ನಡೆಸಬೇಕು ಎಂದು ಅವರು ತಾಕೀತು ಮಾಡಿದರು.

‘ಸೋಂಕು ತಡೆ ಕ್ರಮವಾಗಿ ಪರೀಕ್ಷೆ ಹಾಗೂ ಲಸಿಕೆ ಹಾಕಿಸುವ ಕಾರ್ಯವನ್ನು ಚುರುಕುಗೊಳಿಸಬೇಕು, ಪರಿಸ್ಥಿತಿಯನ್ನು ಎದುರಿಸಲು ಆಸ್ಪತ್ರೆಗಳಲ್ಲಿ ಅಗತ್ಯ ಮೂಲಸೌಕರ್ಯಗಳಿವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು’ ಎಂದು ಸಲಹೆ ಮಾಡಿದರು.

ದೃಢಪಟ್ಟ ಪ್ರಕರಣಗಳ ಮಾದರಿಗಳನ್ನು ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಒಳಪಡಿಸಿ ಸೋಂಕಿನ ಸ್ವರೂಪ ಅರಿಯಬೇಕು. ಕೋವಿಡ್ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗ್ರತೆ ಕ್ರಮಗಳ ಬಗ್ಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು. ಒಟ್ಟು ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟು ಸಹಭಾಗಿತ್ವದಲ್ಲಿ, ಈ ಹಿಂದಿನಂತೆಯೇ ಕಾರ್ಯನಿರ್ವಹಿಸಬೇಕಿದೆ ಎಂದು ಹೇಳಿದರು.

ಕೊರೊನಾ: ಏಳು ತಳಿಗಳತ್ತ ನಿಗಾ



ನವದೆಹಲಿ (ಪಿಟಿಐ): ಪ್ರಸ್ತುತ, ಕೊರೊನಾ ಸೋಂಕಿನ ಏಳು ರೂಪಾಂತರ ತಳಿಗಳ ಬಗ್ಗೆ ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯುಎಚ್‌ಒ) ಸದ್ಯ ಕೂಲಂಕುಶವಾಗಿ ನಿಗಾ ವಹಿಸಿದೆ ಎಂದು ರಾಜ್ಯಗಳ ಆರೋಗ್ಯ ಸಚಿವರಿಗೆ ಮಾಂಡವೀಯ ಅವರು ಮಾಹಿತಿ ನೀಡಿದರು.

ಅವುಗಳೆಂದರೆ, ಎಕ್ಸ್‌ಬಿಬಿ 1.5 ಮತ್ತು ಇತರೆ ಆರು ತಳಿಗಳಾದ ಬಿಕ್ಯೂ 1, ಬಿಎ 2.75, ಸಿಎಚ್ 1.1, ಎಕ್ಸ್‌ಬಿಬಿ, ಎಕ್ಸ್‌ಬಿಎಫ್, ಎಕ್ಸ್‌ಬಿಇಬಿ 1.16 ತಳಿಗಳಾಗಿವೆ ಎಂದು ಆರೋಗ್ಯ ಇಲಾಖೆಯ ಹೇಳಿಕೆ ತಿಳಿಸಿದೆ.

ಓಮೈಕ್ರಾನ್, ಅದರ ಉಪ ತಳಿಗಳು ಹೆಚ್ಚು ವೇಗವಾಗಿ ಹರಡುತ್ತದೆ. ಇತರೆ ತಳಿಗಳ ಪ್ರಸರಣ ಅಷ್ಟೇನೂ ತೀವ್ರಗತಿಯಲ್ಲಿಲ್ಲ. ಎಕ್ಸ್‌ಬಿಬಿ 1.16 ತಳಿಯ ಸೋಂಕು ಪ್ರಮಾಣ ಫೆಬ್ರುವರಿಯಲ್ಲಿ ಶೇ 21.6ರಷ್ಟಿದ್ದರೆ, 2023ರ ಮಾರ್ಚ್‌ನಲ್ಲಿ ಶೇ 35.8ಕ್ಕೆ ಏರಿತ್ತು. ಆದರೂ, ಆಸ್ಪತ್ರೆಗೆ ರೋಗಿಗಳ ದಾಖಲಾತಿ ಪ್ರಮಾಣದಲ್ಲಿ ಅಂತಹ ಏರಿಕೆ ಕಂಡುಬಂದಿಲ್ಲ ಎಂದು ಹೇಳಿಕೆಯು ತಿಳಿಸಿದೆ.

ಪುದುಚೇರಿ: ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಕಡ್ಡಾಯ

ಪುದುಚೇರಿ (ಪಿಟಿಐ): ಕೋವಿಡ್ –19 ಪ್ರಕರಣಗಳ ಸಂಖ್ಯೆ ಸತತವಾಗಿ ಏರಿಕೆಯಾಗುತ್ತಿರುವ ಕಾರಣ ಪುದುಚೇರಿ ಸರ್ಕಾರವು ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಬಳಕೆಯನ್ನು ಶುಕ್ರವಾರದಿಂದ ಕಡ್ಡಾಯಗೊಳಿಸಿದೆ.

‘ಕೊರೊನಾ ಸೋಂಕು ಪ್ರಸರಣವನ್ನು ತಡೆಯುವ ಉದ್ದೇಶದಿಂದ ತಕ್ಷಣದಿಂದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಗೊಳಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಇ. ವಲ್ಲವನ್ ಹೇಳಿದ್ದಾರೆ.

ಪುದುಚೇರಿಯಲ್ಲಿ ಪ್ರಸ್ತುತ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 206ಕ್ಕೆ ಏರಿಕೆಯಾಗಿದೆ. ಈ ಪೈಕಿ ಏಳು ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, 199 ಮಂದಿ ಮನೆಯಲ್ಲಿ ಪ್ರತ್ಯೇಕವಾಸದಲ್ಲಿದ್ದಾರೆ ಎಂದು ಮೂಲಗಳು ಹೇಳಿವೆ.

ನಿತ್ಯ ಸರಾಸರಿ 4,188 ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಇದೇ 7ಕ್ಕೆ ಅಂತ್ಯವಾದ ಕಳೆದೊಂದು ವಾರದಲ್ಲಿ ನಿತ್ಯ ಸರಾಸರಿ 4,188 ಕೋವಿಡ್ ಪ್ರಕರಣಗಳು ವರದಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ. ಈ ಸಂಖ್ಯೆ ಮಾರ್ಚ್ 17ಕ್ಕೆ ಅಂತ್ಯವಾದ ವಾರದಲ್ಲಿ 571 ಆಗಿತ್ತು.

ಇದೇ ಅವಧಿಯಲ್ಲಿ ವಿಶ್ವದಾದ್ಯಂತ ಹೊಸದಾಗಿ 88,503 ಪ್ರಕರಣಗಳು ವರದಿಯಾಗಿವೆ ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ.

ಹತ್ತು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ. ಕೇರಳ, ಮಹಾರಾಷ್ಟ್ರದಲ್ಲಿ 10ಕ್ಕೂ ಹೆಚ್ಚು ಜಿಲ್ಲೆಗಳು ಮತ್ತು ದೆಹಲಿಯಲ್ಲಿ ಹೊಸ ಪ್ರಕರಣಗಳ ದೃಢೀಕರಣ ಪ್ರಮಾಣ ಶೇ 10ರಷ್ಟಿದೆ. ಕರ್ನಾಟಕ, ಕೇರಳ, ಮಹಾರಾಷ್ಟ್ರ, ದೆಹಲಿ, ಹಿಮಾಚಲಪ್ರದೇಶ, ತಮಿಳುನಾಡು, ಹರಿಯಾಣದ ಐದಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ದೃಢೀಕರಣ ಪ್ರಮಾಣ ಶೇ 5ರಷ್ಟಿದೆ ಎಂದು ತಿಳಿಸಿದೆ.

23 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರೀಕ್ಷೆ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಇದೆ. ಹೊಸ ತಳಿಗಳ ಉಪಸ್ಥಿತಿ ನಡುವೆಯೂ –ಪರೀಕ್ಷೆ, ಗುರುತಿಸುವುದು, ಚಿಕಿತ್ಸೆ, ಲಸಿಕೆ ನೀಡುವ– ಪ್ರಕ್ರಿಯೆ ನಿರಂತರವಾಗಿರಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಸುದ್ದಿ 2 ನಿಮಿಷ

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಾಮೂಹಿಕ ನಕಲು: 16 ಶಿಕ್ಷಕರ ಅಮಾನತು

ಭಾಲ್ಕಿ (ಬೀದರ್ ಜಿಲ್ಲೆ): ಪಟ್ಟಣದ ಶಿವಾಜಿ ಪ್ರೌಢಶಾಲೆ ಸೇರಿ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಇಂಗ್ಲಿಷ್ ವಿಷಯದ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ನಕಲು ಮಾಡಲು ಸಹಕರಿಸಿದ ಆರೋಪದ ಮೇಲೆ 16 ಶಿಕ್ಷಕರನ್ನು ಅಮಾನತುಗೊಳಿಸಿ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಲೀಮ್ ಪಾಶಾ ಆದೇಶ ಹೊರಡಿಸಿದ್ದಾರೆ.

‘ಪರೀಕ್ಷಾ ನಿಯಮಗಳನ್ನು ಪಾಲಿಸದೇ, ಪರೀಕ್ಷಾ ವ್ಯವಸ್ಥೆ ಜವಾಬ್ದಾರಿ ಅರಿಯದೇ ಖುದ್ದಾಗಿ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆಯ ಉತ್ತರಗಳನ್ನು ಸಿದ್ಧಪಡಿಸಿ, ನೀಡಿದ ಆರೋಪದ ಮೇಲೆ ಶಿಕ್ಷಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷಾ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದ ಎಲ್ಲ ಶಿಕ್ಷಕರ ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತು ಮಾಡಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಶಿಕ್ಷಕರಾದ ಬಾಲಾಜಿ ಕಾಂಬಳೆ, ಶೇಷಪ್ಪ, ಸಂಪತ್, ಗೋವಿಂದ, ಕುಪೇಂದ್ರ, ಶಿವಾಜಿ, ಮಾರುತಿ ರಾಠೋಡ, ಶಿವಕುಮಾರ ಬಿರಾದಾರ, ಭೀಮರಾವ್, ದಿನೇಶ ಧಮಕೆ, ಉತ್ತಮ ಬಿರಾದಾರ, ಶೇಷಪ್ಪ, ಅಡವಪ್ಪ ಎಲ್, ಕಮಲಾಕರ ಪಿ, ದತ್ತಾತ್ರಿ. ಎಸ್ ಮತ್ತು ಅನಿಲಕುಮಾರ ಗಾಯಕವಾಡ ಅವರ ವಿರುದ್ಧ ಆರೋಪವಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ವಿರುದ್ಧ ಕ್ರಮ ಕೈಗೊಂಡು ಅಮಾನತುಗೊಳಿಸಲು ಆಯಾ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಗೆ ಪತ್ರ ಬರೆಯಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಮಕ್ಕಳ ಕಳ್ಳರೆಂದು ಇಬ್ಬರಿಗೆ ಥಳಿತ; ಕಾರಿಗೆ ಬೆಂಕಿ



ಬಾಗಲಕೋಟೆ: ಮಕ್ಕಳ ಕಳ್ಳರೆಂದು ತಾಲ್ಲೂಕಿನ ಖಜ್ಜಿಡೋಣಿ ಬಳಿ ಶುಕ್ರವಾರ ಸಂಜೆ ಇಬ್ಬರನ್ನು ತಡೆದಿರುವ ಗ್ರಾಮಸ್ಥರು, ಅವರು ಪ್ರಯಾಣಿಸುತ್ತಿದ್ದ ಕಾರಿಗೆ ಬೆಂಕಿ ಹಚ್ಚಿದ್ದಾರೆ.

ಮುಧೋಳ ತಾಲ್ಲೂಕಿನ ಕೆ.ಡಿ. ಬುದ್ನಿಗೆ ಬಾಗಲಕೋಟೆಯ ರಾಹುಲ್, ಕಿರಣ ಎಂಬುವವರು ಕಾರಿನಲ್ಲಿ ತೆರಳಿದ್ದರು. ಆಗ ಗ್ರಾಮಸ್ಥರು ಇವರನ್ನು ಮಕ್ಕಳ ಕಳ್ಳರೆಂದು ವಿಚಾರಣೆ ಮಾಡಲಾರಂಭಿಸಿದಾಗ ಕೂಡಲೇ ಅವರು ಅಲ್ಲಿಂದ ಬಾಗಲಕೋಟೆಯತ್ತ ಹೊರಟರು.

ಇವರ ಕಾರನ್ನು ಬೆನ್ನತ್ತಿದ್ದ ಗ್ರಾಮಸ್ಥರು ಖಜ್ಜಿಡೋಣಿ ಬಳಿ ಅವರನ್ನು ತಡೆದು ವಿಚಾರಿಸಲು ಆರಂಭಿಸಿದಾಗ ಅಲ್ಲಿನ ಜನರೂ ಸೇರಿದರು.

ಗುಂಪುಗೂಡಿದ್ದ ಜನರು ಅವರ ಮೇಲೆ ಹಲ್ಲೆ ನಡೆಸುತ್ತಿದ್ದಾಗಲೇ ಅಲ್ಲಿಗೆ ಬಂದ ಪೊಲೀಸರು ಅವರನ್ನು ಕೊಠಡಿಯೊಂದರಲ್ಲಿ ಕರೆದುಕೊಂಡು ಹೋಗಿ ಕೂಡಿಸಿದರು. ಇದರಿಂದ ರೊಚ್ಚಿಗೆದ್ದ ಜನರು ಅವರ ಕಾರಿಗೆ ಬೆಂಕಿ ಹಚ್ಚಿದರು. ಅವರನ್ನು ಲೋಕಾಪುರ ಪೊಲೀಸ್ ಠಾಣೆಗೆ ಕರೆದೊಯ್ದಿದ್ದು, ಅಲ್ಲಿಗೆ ಯಾಕೆ ಹೋಗಿದ್ದರು ಎಂದು ವಿಚಾರಣೆ ನಡೆಸಲಾಗುತ್ತಿದೆ.

ಜಿಲ್ಲಾ ಪೊಲೀಸ್ ವರಿಷ್ಠ ಜಯಪ್ರಕಾಶ ಭೇಟಿ ನೀಡಿ, ಪರಿಶೀಲಿಸಿದರು.

ಕರಾವಳಿ, ಮಲೆನಾಡು ವ್ಯಾಪ್ತಿಯಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ಮಲೆನಾಡು ಹಾಗೂ ಉತ್ತರ ಒಳನಾಡು ಜಿಲ್ಲೆಗಳಲ್ಲಿ ಮುಂದಿನ 48 ಗಂಟೆಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಾಗಲಕೋಟೆ, ಬೆಳಗಾವಿ, ಬೀದರ್, ಗದಗ, ಹಾವೇರಿ, ವಿಜಯಪುರ, ಧಾರವಾಡ, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಜೋರು ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲೂ ಮೋಡ ಕವಿದ ವಾತಾವರಣ ಇರಲಿದ್ದು, ರಾತ್ರಿ ಮಳೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಗುರುವಾರ ರಾತ್ರಿ ಹಾಗೂ ಶುಕ್ರವಾರ ಉತ್ತರ ಒಳನಾಡು, ಕರಾವಳಿ, ದಕ್ಷಿಣ ಒಳನಾಡಿನ ಹಲವೆಡೆ ಮಳೆಯಾಗಿದೆ. ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಲಬುರಗಿ ಜಿಲ್ಲೆಯ ಕಮಲಾಪುರ, ಯಡ್ರಾಮಿ, ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ 5 ಸೆಂ.ಮೀ, ಕಲಬುರಗಿಯ ಆಳಂದ, ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ 4 ಸೆಂ.ಮೀ ಮಳೆಯಾಗಿದೆ.

ರಾಯಚೂರಿನ ಗಬ್ಬೂರು, ವಿಜಯಪುರ, ಆಲಮಟ್ಟಿ, ಚಿಕ್ಕಮಗ ಳೂರು, ಬೀದರ್‌ನ ಹುಮನಾ ಬಾದ್, ಕಲಬುರಗಿಯ ಖಜೂರಿಯಲ್ಲಿ 2 ಸೆಂ.ಮೀ ಮಳೆಯಾಗಿದೆ. ಧಾರವಾಡದ ಕುಂದಗೋಳ, ಯಾದಗಿರಿಯ ಕೆಂಬಾವಿ, ಚಿಕ್ಕಮಗಳೂರಿನ ಎನ್. ಆರ್.ಪುರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

‘ರಾಜ್ಯಕ್ಕೆ ಹೊರೆಯಾದ ಮೋದಿ ಭೇಟಿ’

ಐಐಟಿ ಉದ್ಘಾಟನಾ ಕಾರ್ಯಕ್ರಮಕ್ಕೆ ₹ 9.49 ಕೋಟಿ ಖರ್ಚು: ಜೆಡಿಎಸ್ ದೂರು

ಪ್ರಜಾವಾಣಿ ವಾರ್ತೆ



ಗುರುರಾಜ ಹುಣಸಿಮರದ

ಧಾರವಾಡ: ‘ಐಐಟಿ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಧಾರವಾಡ ಭೇಟಿಗಾಗಿ ಜಿಲ್ಲಾಡಳಿತವು ರಾಜ್ಯ ಸರ್ಕಾರದ ₹9.49ಕೋಟಿ ಖರ್ಚು ಮಾಡಿದೆ. ಚುನಾವಣೆ ಸಂದರ್ಭದಲ್ಲಿ ಮೋದಿ ಭೇಟಿ ಬಿಜೆಪಿಗೆ ಅನಿವಾರ್ಯವಿರಬಹುದು. ಆದರೆ ರಾಜ್ಯದ ಜನತೆಗೆ ಹೊರೆಯಾಗಿದೆ’ ಎಂದು ಜೆಡಿಎಸ್‌ನ ಮಹಾನಗರ ಜಿಲ್ಲಾ ಘಟಕದ ಅಧ್ಯಕ್ಷ ಗುರುರಾಜ ಹುಣಸಿಮರದ ದೂರಿದರು.

‘ರಾಜ್ಯಕ್ಕೆ ಬರಬೇಕಾದ ಜಿಎಸ್‌ಟಿ ಹಣ ಕೊಡದ ಹಾಗೂ ಕೇಂದ್ರದ ವಿಶೇಷ ಅನುದಾನ ನೀಡದ ಪ್ರಧಾನಿ ಚುನಾವಣೆ ಸಂದರ್ಭದಲ್ಲಿ ಪದೇ ಪದೇ ಬರುತ್ತಿದ್ದಾರೆ. ರಾಜ್ಯದ ಜನರ ತೆರಿಗೆ ಹಣವನ್ನು ಬಿಜೆಪಿ ತನ್ನ ಚುನಾವಣೆ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದು ಅಕ್ಷಮ್ಯ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

‘ಎಲ್‌ಇಡಿ ಪರದೆ, ಸಿಸಿಟಿವಿ, ಸೌಂಡ್ ಸಿಸ್ಟಮ್‌ಗೆ ₹40ಲಕ್ಷ, ಜರ್ಮನ್ ಟೆಂಟ್, ವೇದಿಕೆ, ಪೆಂಡಾಲು, ಗ್ರೀನ್ ರೂಂ, ಬ್ಯಾರಿಕೇಡ್‌ಗಾಗಿ ₹4.68ಕೋಟಿ, ಊಟಕ್ಕಾಗಿ ₹86ಲಕ್ಷ, ಕಾರ್ಯಕ್ರಮದ ಪ್ರಚಾರಕ್ಕಾಗಿ ₹61ಲಕ್ಷ, ಕಾರ್ಯಕ್ರಮ ನಿರ್ವಹಣೆಗಾಗಿ ₹8.6ಲಕ್ಷ ಹಾಗೂ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ 1500ಕ್ಕೂ ಹೆಚ್ಚು ಬಸ್ಸುಗಳಿಗಾಗಿ ₹2.83ಕೋಟಿ ಸೇರಿ ಒಟ್ಟು ₹9.49ಕೋಟಿ ಖರ್ಚು ಮಾಡಲಾಗಿದೆ. ಇದನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಜಿಲ್ಲಾಡಳಿತವೇ ನೀಡಿದೆ’ ಎಂದು ಹೇಳಿದರು.

‘ಈ ಅಧಿಕೃತ ಖರ್ಚನ್ನು ಹೊರತುಪಡಿಸಿ, ಇತರ ಮಾರ್ಗದಲ್ಲಿ ₹10 ಕೋಟಿಗೂ ಹೆಚ್ಚು ಖರ್ಚು ಮಾಡಿರುವ ಶಂಕೆ ಇದೆ. ಈ ಹಣದಲ್ಲಿ ಕನಿಷ್ಠ 200ರಿಂದ 300 ಬಡವರಿಗೆ ಮನೆ ನಿರ್ಮಿಸಿ ಕೊಡಬಹುದಿತ್ತು. ಆದರೆ ಚುನಾವಣೆಯಲ್ಲಿ ತಮ್ಮ ಗೆಲುವಿಗೆ ಜನರ ಹಣವನ್ನು ಪೋಲು ಮಾಡುತ್ತಿರುವುದನ್ನು ರಾಜ್ಯದ ಜನತೆ ಸಹಿಸುವುದಿಲ್ಲ. ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುವುದಾದರೆ ಪ್ರಧಾನಿ ರಾಜ್ಯಕ್ಕೆ ಭೇಟಿ ನೀಡುವುದಾದರೂ ಏಕೆ’ ಎಂದು ಪ್ರಶ್ನಿಸಿದರು.

1,600 ಬಸ್‌ಗಳಿಗೆ ₹ 3.94 ಕೋಟಿ ಪಾವತಿ

ಶಿವಮೊಗ್ಗ: ಇಲ್ಲಿನ ಸೋಗಾನೆ ವಿಮಾನ ನಿಲ್ದಾಣದ ಲೋಕಾರ್ಪಣೆಗಾಗಿ ಫೆಬ್ರುವರಿ 27ರಂದು ನಡೆದಿದ್ದ ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ಕೆಎಸ್‌ಆರ್‌ಟಿಸಿ ಸಾಂದರ್ಭಿಕ ಒಪ್ಪಂದದ ಮೇರೆಗೆ 1,600 ಬಸ್‌ಗಳನ್ನು ಒದಗಿಸಿದೆ. ಅದರ ವೆಚ್ಚವಾದ ₹ 3.94 ಕೋಟಿಯನ್ನು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಪಾವತಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ವಿಮಾನ ನಿಲ್ದಾಣದ ಉದ್ಘಾಟಿಸಿದ್ದರು. ಶಿವಮೊಗ್ಗದ ಆಕಾಶ್ ಪಾಟೀಲ್ ಎಂಬುವವರು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದು, ಕೆಎಸ್‌ಆರ್‌ಟಿಸಿ ಸಾರ್ವಜನಿಕ ಮಾಹಿತಿ ಅಧಿಕಾರಿ ಈ ಮಾಹಿತಿ ಒದಗಿಸಿದ್ದಾರೆ.



ತಂಪೆರೆದ ಮಳೆ... ಕೊಪ್ಪಳದಲ್ಲಿ ಶುಕ್ರವಾರ ಸುರಿದ ಮಳೆಯಿಂದ ರಸ್ತೆ ಜಲಾವೃತಗೊಂಡಿತ್ತು

ದುಬಾರಿ ಶುಲ್ಕ; ಸಂಘಟನೆಗಳ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬಾರಿ ಶುಲ್ಕ ಸಂಗ್ರಹದ ವಿರುದ್ಧ ಶಾಲಾ ಸಂಘಟನೆಗಳೇ ತಿರುಗಿ ಬಿದ್ದಿದ್ದು, ಶೇ 15ಕ್ಕಿಂತ ಹೆಚ್ಚು ಶುಲ್ಕ ವಸೂಲಿ ಮಾಡುವ ಶಾಲೆಗಳ ಆಡಳಿತ ಮಂಡಳಿ ವಿರುದ್ಧ ದೂರು ಸಲ್ಲಿಸಲು ಪೋಷಕರಿಗೆ ಮನವಿ ಮಾಡಿವೆ.

ರಾಜ್ಯದ ಕೆಲ ಖಾಸಗಿ ಅನುದಾನರಹಿತ ಶಾಲೆಗಳು ವಿಪರೀತವಾಗಿ ಶುಲ್ಕ ಹೆಚ್ಚಿಸಿರುವ ನಿರ್ಧಾರ ಸರಿಯಲ್ಲ. ಶಾಲೆಗಳಿಗೆ ಸಮಂಜಸ ಶುಲ್ಕ ಹೆಚ್ಚಳಕ್ಕೆ ಅವಕಾಶವಿದೆ. ಶಾಲೆಗಳ ಮೂಲಸೌಕರ್ಯಗಳಿಗೆ ಅನುಗುಣವಾಗಿ ವಾರ್ಷಿಕ ಶೇ 10ರಿಂದ ಶೇ 15ರಷ್ಟು ಶುಲ್ಕ ಹೆಚ್ಚಿಸುವುದು ನ್ಯಾಯಸಮ್ಮತ. ಆದರೆ, ಶೇ 40ರಿಂದ ಶೇ 50ರಷ್ಟು ಹೆಚ್ಚಳಕ್ಕೆ ಸಂಘಟನೆಗಳ ಬೆಂಬಲವಿಲ್ಲ ಎಂದು ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿ (ಕೆಪಿಎಂಟಿಸಿಸಿ) ಸಂಚಾಲಕ ಡಿ. ಶಶಿಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಅಧಿಕ ಶುಲ್ಕ ಸಂಗ್ರಹಿಸುವ ಶಾಲೆಗಳ ವಿರುದ್ಧ ಶಿಕ್ಷಣ ಇಲಾಖೆ ನೇರವಾಗಿ ಅಥವಾ ಸಿಬಿಎಸ್‌ಸಿ, ಐಸಿಎಸ್‌ಸಿ ಖಾಸಗಿ ಶಾಲೆಗಳನ್ನು ಪ್ರತಿನಿಧಿಸುವ ಸಂಘಟನೆಗಳಿಗೆ ಪೋಷಕರು ದೂರು (080–28371264) ಸಲ್ಲಿಸಬೇಕು. ಇಂತಹ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲು ಸಮಿತಿಯು ಇಲಾಖೆಯನ್ನು ಒತ್ತಾಯಿಸುತ್ತದೆ ಎಂದರು.

‘ಖಾಸಗಿ ಶಾಲೆಗಳ ಆಡಳಿತ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಶಿಕ್ಷಣ ಇಲಾಖೆಯ ನಿರ್ಧಾರದ ವಿರುದ್ಧ ಕಾನೂನು ಹೋರಾಟ ನಡೆಸಿದ್ದು ನಿಜ. ಲೆಕ್ಕ ತಪಾಸಣೆ, ಅಗ್ನಿಶಾಮಕ ಮತ್ತು ಸುರಕ್ಷತಾ ಸಮಸ್ಯೆಗಳೂ ಸೇರಿದಂತೆ ಹಲವು ವಿಷಯಗಳಲ್ಲಿ ನಮ್ಮ ಆಕ್ಷೇಪಗಳಿವೆ. ಹಾಗಂತ, ಮಿತಿ ಮೀರಿದ ಶುಲ್ಕ ವಸೂಲಿ ಕ್ರಮವನ್ನು ಒಪ್ಪಲಾಗದು’ ಎಂದು ಕೆಪಿಎಂಟಿಸಿಸಿ ಉಪಾಧ್ಯಕ್ಷ ಎಂ. ಶ್ರೀನಿವಾಸನ್ ಹೇಳಿದರು.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನಧಿಕೃತ ಶಾಲೆಗಳ ಪಟ್ಟಿಯನ್ನು ಶಿಕ್ಷಣ ಇಲಾಖೆ ಬಿಡುಗಡೆ ಮಾಡಬೇಕು. ದೂರು ಬಂದರೂ ಕ್ರಮ ಕೈಗೊಳ್ಳದೆ ಸಮಯ ವ್ಯರ್ಥ ಮಾಡಬಾರದು. ಪಟ್ಟಿ ಒದಗಿಸಿದರೆ ಪೋಷಕರಿಗೂ ಅನುಕೂಲ. ಮಕ್ಕಳನ್ನು ಸೇರಿಸುವ ಮೊದಲು ಪೋಷಕರು ಶಾಲಾ ಪೂರ್ವಾಪರ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಅನಗತ್ಯ

ಖಾಸಗಿ ಶಾಲೆಗಳ ಆಡಳಿತ, ಶುಲ್ಕ ನಿಗದಿಯಲ್ಲಿ ಶಿಕ್ಷಣ ಇಲಾಖೆ ಹಸ್ತಕ್ಷೇಪ ಮಾಡಬಾರದು ಎಂದು ಹೈಕೋರ್ಟ್ ತೀರ್ಪು ನೀಡಿದೆ. ಎರಡೂವರೆ ದಶಕಗಳ ಕಾನೂನು ಹೋರಾಟ ಅಂತ್ಯವಾಗಿದೆ. ಸುಪ್ರೀಂಕೋರ್ಟ್ ನಿರ್ದೇಶನದಂತೆಯೇ ಹೈಕೋರ್ಟ್ ತೀರ್ಪು ನೀಡಿದೆ. ಶಿಕ್ಷಣ ಇಲಾಖೆ ಯಾವ ನೈತಿಕತೆಯ ಮೇಲೆ ಮತ್ತೆ ಕೋರ್ಟ್‌ಗೆ ಹೋಗಿದೆ ಎನ್ನುವುದು ತಿಳಿದಿಲ್ಲ. ಕೋರ್ಟ್ ಬದಲು ಖಾಸಗಿ ಶಾಲಾ ಆಡಳಿತ ಮಂಡಳಿಗಳ ಜತೆ ಮಾತುಕತೆಯ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು ಎಂದು ಶಶಿಕುಮಾರ್ ಸಲಹೆ ನೀಡಿದರು.

ಮಸ್ಕಿ: ಪೌರಕಾರ್ಮಿಕ ನೀರುಪಾಲು

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಪೌರಕಾರ್ಮಿಕ, ಮಸ್ಕಿ ನಿವಾಸಿ ಜಂಬಯ್ಯ ರಾಯಚೂರು ಎಂಬುವರು ಸ್ನಾನಕ್ಕೆಂದು ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ಇಳಿದ ವೇಳೆ ಕಾಲು ಜಾರಿ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.

‘ರಾಯಚೂರಿನಿಂದ ಗುರುವಾರ ರಾತ್ರಿ ಜಂಬಯ್ಯ ಮತ್ತು ಇತರ ಸಿಬ್ಬಂದಿ ಮತಯಂತ್ರಗಳನ್ನು (ಇವಿಎಂ) ಪಟ್ಟಣದ ದೇವನಾಂಪ್ರಿಯ ಕಾಲೇಜಿನ ಸ್ಟ್ರಾಂಗ್ ರೂಮ್‌ಗೆ ತಂದು ಇಳಿಸಿದ್ದರು. ಶುಕ್ರವಾರ ಬೆಳಿಗ್ಗೆ ಅವರು ಸ್ನಾನಕ್ಕೆಂದು ಕಾಲುವೆಗೆ ಇಳಿದಿದ್ದ ವೇಳೆ ನೀರಿನಲ್ಲಿ ಕೊಚ್ಚಿ ಹೋದರು. ಅವರ ರಕ್ಷಣೆಗೆ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಅವರ ಪತ್ತೆಗಾಗಿ ಶೋಧ ಕಾರ್ಯ ಮುಂದುವರೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರಿ ಮಳೆ: 4 ಮಂದಿ ಸಾವು

ಒಂದನೇ ಪುಟದಿಂದ...

ಉಡುಪಿಯ ಕೆಲವು ಭಾಗಗಳಲ್ಲೂ ತುಂತುರು ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ವಿವಿಧೆಡೆ ಗುಡುಗು, ಮಿಂಚು, ಸಿಡಿಲು, ಆಲಿಕಲ್ಲು ಸಮೇತ ಮಳೆ ಸುರಿದಿದೆ. ಎಲ್.ಬಿ. ನಗರ ಬಡಾವಣೆಯ ಸೀತಾರಾಮ್ ಆಚಾರ್ ಎಂಬುವವರ ಮನೆಯ ಮೇಲೆ ಮರ ಬಿದ್ದು ಹಾನಿಯಾಗಿದೆ. ಹೊಸನಗರ ತಾಲ್ಲೂಕು, ಶಿಕಾರಿಪುರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ತುಂತುರು ಮಳೆ ಸುರಿದಿದೆ.

ದಾವಣಗೆರೆ ನಗರ ಹಾಗೂ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಕೆಲವೆಡೆ, ಕಲಬುರಗಿ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಿದೆ. ರಸ್ತೆಗಳಲ್ಲಿ ನೀರು ನಿಂತಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆ ಯಾಯಿತು. ತಗ್ಗು ಪ್ರದೇಶಗಳಲ್ಲಿನ ಮನೆ ಮತ್ತು ಅಂಗಡಿಗಳಲ್ಲಿ ನೀರು ನುಗ್ಗಿತು. ನಸುಕಿನಲ್ಲೇ ಆರಂಭವಾದ ಮಳೆಯು ಮಧ್ಯಾಹ್ನದವರೆಗೆ ಸುರಿಯಿತು.

ವಿಜಯನಗರ, ಹಾಸನ, ಬೆಳಗಾವಿ, ಧಾರವಾಡ, ಉತ್ತರಕನ್ನಡ, ಗದಗ, ವಿಜಯನಗರ ಜಿಲ್ಲೆಗಳ ಹಲವೆಡೆ ಮಳೆಯಾಗಿದೆ. ಶಿರಸಿ ನಗರವೂ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ. ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಪಟ್ಟಣದ ಗವಿಸಿದ್ಧೇಶ್ವರ ಶಾಖಾ ಮಠದ ಆವರಣದಲ್ಲಿರುವ ತೆಂಗಿನ ಮರಕ್ಕೆ ಸಿಡಿಲು ಬಡಿದು ಮರಕ್ಕೆ ಬೆಂಕಿ ಹೊತ್ತಿಕೊಂಡಿತ್ತು.

ಭ್ರಷ್ಟಾಚಾರ: ಪ್ರಕರಣಗಳ ಭಾರ

ಒಂದನೇ ಪುಟದಿಂದ

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ, ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತು ಅವರ ಸಹೋದರರು, ಕೆಎಎಸ್ ಅಧಿಕಾರಿಗಳು, ವಿವಿಧ ಇಲಾಖೆಗಳ ಮುಖ್ಯ ಎಂಜಿನಿಯರ್‌ಗಳ ವಿರುದ್ಧದ ಪ್ರಕರಣಗಳು ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ಪಟ್ಟಿಯಲ್ಲಿವೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ, ಇಂಧನ, ಕಂದಾಯ, ಲೋಕೋಪಯೋಗಿ, ಸಿಬ್ಬಂದಿ, ಆಡಳಿತ ಸುಧಾರಣಾ ಇಲಾಖೆಗಳಲ್ಲಿ ಹೆಚ್ಚಿನ ಪ್ರಸ್ತಾವಗಳು ಬಾಕಿ ಇವೆ.

ಲೋಕಾಯುಕ್ತದ ಪೊಲೀಸ್ ವಿಭಾಗದಿಂದ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ವರ್ಗಾವಣೆಗೊಂಡು, ಅಲ್ಲಿನ ಅಧಿಕಾರಿಗಳು ತನಿಖೆ ಪೂರ್ಣಗೊಳಿಸಿದ್ದ ಪ್ರಕರಣಗಳಲ್ಲೂ ಅನುಮತಿ ದೊರಕಿಲ್ಲ. ಎಸಿಬಿ ರದ್ದುಗೊಂಡ ಬಳಿಕ ಪುನಃ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ತನಿಖೆ ಕೈಗೆತ್ತಿಕೊಂಡಿರುವ ಲೋಕಾಯುಕ್ತ ಪೊಲೀಸರು, ಸಕ್ಷಮ ಪ್ರಾಧಿಕಾರಗಳಿಗೆ ಪತ್ರ ಬರೆದು ಅನುಮತಿ ಕೋರಿದ್ದಾರೆ.

‘2014ರ ಡಿಸೆಂಬರ್‌ನಿಂದ ಇಂಥ ಪ್ರಕರಣಗಳು ಬಾಕಿ ಇವೆ. ಕೆಲ ಪ್ರಕರಣಗಳಲ್ಲಿ ನಾಲ್ಕಾರು ಬಾರಿ ನೆನಪೋಲೆ ಬರೆದರೂ ಪ್ರತಿಕ್ರಿಯೆ ನೀಡುತ್ತಿಲ್ಲ. ಕೆಲವು ಸಕ್ಷಮ ಪ್ರಾಧಿಕಾರಗಳು, ಕಾನೂನಿಗೆ ವಿರುದ್ಧವಾಗಿ ಪರ್ಯಾಯ ವಿಚಾರಣೆ ನಡೆಸುತ್ತಾ ಬಾಕಿ ಉಳಿಸಿಕೊಂಡಿವೆ’ ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಜನಪ್ರತಿನಿಧಿಗಳು ಮತ್ತು ಸರ್ಕಾರಿ ನೌಕರರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಿದ ಮೂರು ತಿಂಗಳೊಳಗೆ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವುದು ಕಡ್ಡಾಯ ಎಂಬ ಸುಪ್ರೀಂ ಕೋರ್ಟ್ ಆದೇಶವಿದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರೂ ಹಲವು ಬಾರಿ ಈ ಸಂಬಂಧ ಸುತ್ತೋಲೆ ಹೊರಡಿಸಿದ್ದರು. ಆದರೆ, ಬಹುತೇಕ ಪ್ರಕರಣಗಳಲ್ಲಿ ಈ ಕಾಲಮಿತಿ ಪಾಲಿಸುತ್ತಿಲ್ಲ’ ಎನ್ನುತ್ತಾರೆ ಅವರು.

ತನಿಖೆಗೂ ಅಡ್ಡಗಾಲು: ಸಾರ್ವಜನಿಕರಿಂದ ಸಲ್ಲಿಕೆಯಾಗುವ ದೂರುಗಳು ಹಾಗೂ ಖಚಿತ ಮಾಹಿತಿ ಆಧರಿಸಿ ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸಿ, ಪ್ರಬಲ ಸಾಕ್ಷ್ಯವಿರುವ ಪ್ರಕರಣಗಳಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿರುವ 400 ಪ್ರಕರಣಗಳು ಸಕ್ಷಮ ಪ್ರಾಧಿಕಾರಗಳ ಮುಂದೆ ಬಾಕಿ ಇವೆ.


‘ಇಂತಹ ಪ್ರಕರಣಗಳಲ್ಲಿ ಪ್ರಾಥಮಿಕ ತನಿಖಾ ವರದಿಗಳನ್ನು ಸಕ್ಷಮ ಪ್ರಾಧಿಕಾರಗಳ ಮುಂದೆ ಮಂಡಿಸಿರುವ ತನಿಖಾಧಿಕಾರಿಗಳು, ಎಫ್‌ಐಆರ್ ದಾಖಲಿಸಲು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ ‘17ಎ’ ಅಡಿಯಲ್ಲಿ ಪೂರ್ವಾನುಮತಿ ಕೋರಿದ್ದಾರೆ. 2018ರಿಂದ ಸಲ್ಲಿಕೆಯಾಗಿರುವ ಪ್ರಸ್ತಾವಗಳನ್ನು ವಿಲೇವಾರಿ ಮಾಡದೇ ತನಿಖೆಗೆ ಸತಾಯಿಸುತ್ತಿದ್ದಾರೆ. ಬಾಕಿ ಇರುವ ಪ್ರಸ್ತಾವಗಳ ಕುರಿತು ನೆನಪೋಲೆ ಬರೆದರೂ ಸ್ಪಂದಿಸುತ್ತಿಲ್ಲ’ ಎನ್ನುತ್ತವೆ ಲೋಕಾಯುಕ್ತದ ಮೂಲಗಳು.

ಬಿಡಿಎ, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಗೆ ಅನುಮತಿ ಕೋರಿರುವ 50ಕ್ಕೂ ಹೆಚ್ಚು ಪ್ರಸ್ತಾವಗಳು ನಗರಾಭಿವೃದ್ಧಿ ಇಲಾಖೆಯ ಮುಂದೆ ಬಾಕಿ ಇವೆ. ಹಲವು ಕೆಎಎಸ್ ಅಧಿಕಾರಿಗಳ ವಿರುದ್ಧದ ಪ್ರಸ್ತಾವಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಬಾಕಿ ಇರಿಸಿಕೊಂಡಿದೆ. ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಜಲ ಸಂಪನ್ಮೂಲ, ಲೋಕೋಪಯೋಗಿ, ಇಂಧನ, ಗೃಹ ಇಲಾಖೆಗಳಲ್ಲಿ ಹೆಚ್ಚಿನ ಪ್ರಕರಣಗಳನ್ನು ಬಾಕಿ ಇರಿಸಿಕೊಳ್ಳಲಾಗಿದೆ.

ಆರೋಪಪಟ್ಟಿಗೆ ಅನುಮತಿ : ಹೆಚ್ಚು ಪ್ರಕರಣ ಬಾಕಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	18
ನಗರಾಭಿವೃದ್ಧಿ	10
ಇಂಧನ	7
ಕಂದಾಯ	6
ಲೋಕೋಪಯೋಗಿ	5

‘ಈ ವರ್ತನೆ ಸಹಿಸಲಾಗದು’



‘ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ತನಿಖೆಗೆ ಪೂರ್ವಾನುಮತಿ ನೀಡಲು ಹಾಗೂ ಆರೋಪಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ನೀಡಲು ವಿಳಂಬ ಮಾಡುತ್ತಿರುವ ಸಕ್ಷಮ ಪ್ರಾಧಿಕಾರಗಳು ತನಿಖೆಯ ಉದ್ದೇಶವನ್ನೇ ವಿಫಲಗೊಳಿಸುತ್ತಿವೆ. ಅಧಿಕಾರಿಗಳ ಈ ಧೋರಣೆ ಸಹಿಸಲು ಸಾಧ್ಯವಿಲ್ಲ’ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಧ್ರುವನಾರಾಯಣ ಪತ್ನಿ ವೀಣಾ ನಿಧನ

ಪ್ರಜಾವಾಣಿ ವಾರ್ತೆ



ವೀಣಾ

ಮೈಸೂರು: ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್. ಧ್ರುವನಾರಾಯಣ ಅವರ ಪತ್ನಿ ವೀಣಾ (54) ಶುಕ್ರವಾರ ನಿಧನರಾದರು. ಮಾರ್ಚ್ 11ರಂದು ಧ್ರುವನಾರಾಯಣ ನಿಧನ ಹೊಂದಿದ್ದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಹಲವು ವರ್ಷಗಳಿಂದ ನಿರಂತರ ಚಿಕಿತ್ಸೆ ಪಡೆಯುತ್ತಿದ್ದರು. ಕೆಲ ದಿನಗಳ ಹಿಂದೆ ಅವರನ್ನು ಇಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪತಿಯ ಅಗಲಿಕೆಯಿಂದ ನೊಂದಿದ್ದ ಅವರು ಮತ್ತಷ್ಟು ಕುಸಿದಿದ್ದರು. ಅವರಿಗೆ ಪುತ್ರರಾದ ದರ್ಶನ್ ಹಾಗೂ ಧೀರೇನ್ ಇದ್ದಾರೆ.

ಮೈಸೂರಿನ ವಿಜಯನಗರದ ಮನೆಯಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಚಾಮರಾಜನಗರ ಜಿಲ್ಲೆಯ ಸ್ವಗ್ರಾಮ ಹೆಗ್ಗವಾಡಿಯಲ್ಲಿ ಶನಿವಾರ ಬೆಳಿಗ್ಗೆ 11.30ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಧ್ರುವನಾರಾಯಣ ನಿಧನದ ಬಳಿಕ ಹಿರಿಯ ಪುತ್ರ ದರ್ಶನ್ ಅವರಿಗೆ ನಂಜನಗೂಡು ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ನೀಡಿದೆ. ಅವರು ಚುನಾವಣಾ ಪ್ರಚಾರದಲ್ಲಿ ತೊಡಗಿರುವಾಗಲೇ ತಾಯಿಯನ್ನೂ ಕಳೆದುಕೊಂಡಿದ್ದಾರೆ. ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ಅಪ್ಪ–ಅಮ್ಮ ಇಬ್ಬರನ್ನೂ ಕಳೆದುಕೊಂಡ ದುಃಖವನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ’ ಎಂದು ಹೇಳಿದರು.

ನಿಧನ ವಾರ್ತೆ

ಮಳ್ಳಪ್ಪ ಕೊಪ್ಪದ



ಮಳ್ಳಪ್ಪ ಕೊಪ್ಪದ

ಹಾವೇರಿ: ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಬ್ಯಾಡಗಿ ತಾಲ್ಲೂಕಿನ ಹಿರೇಅಣಜಿಯ ಮಳ್ಳಪ್ಪ ಶಿದ್ದಪ್ಪ ಕೊಪ್ಪದ (106) ಶುಕ್ರವಾರ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ಸ್ವಗ್ರಾಮ ಹಿರೇಅಣಜಿಯಲ್ಲಿ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸ್ವಾತಂತ್ರ್ಯ ಹೋರಾಟಗಾರ ಸಂಗೂರ ಕರಿಯಪ್ಪ ಅವರ ಜೊತೆಗೂಡಿ ಜೈಲು ಶಿಕ್ಷೆ ಅನುಭವಿಸಿದ್ದರು. ‘ಬ್ರಿಟಿಷರೇ ಭಾರತ ಬಿಟ್ಟು ತೊಲಗಿ’ ಮತ್ತು ‘ ಮಾಡು ಇಲ್ಲವೇ ಮಡಿ’ ಕರೆಗೆ ಓಗೊಟ್ಟು ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಸಾಂದರ್ಭಿಕ ಚಿತ್ರ



ಸಾಂದರ್ಭಿಕ ಚಿತ್ರ

ಮನೆಯಲ್ಲಿರಲಿ 'ಕ್ರಿಯೇಟಿವ್ ಕಾರ್ನರ್'

ರೂಪಾ ಕೆ.ಎಂ.

ಮಕ್ಕಳನ್ನು ಹೇಗೆ ಬೆಳೆಸಬೇಕು? ಅವರ ಆಸಕ್ತಿ-ಅಭಿರುಚಿಗಳನ್ನು ಅರಿತು, ಅವನ್ನು ನಿರ್ದಿಷ್ಟವಾಗಿ ಕೇಂದ್ರೀಕರಿಸುವ ಬಗೆ ಹೇಗೆ? ಅನ್ನುವುದು ಬಹುತೇಕ ಎಲ್ಲ ತಂದೆ ತಾಯಂದಿರನ್ನು ಕಾಡುವ ಪ್ರಶ್ನೆಗಳೇ.

ಮಕ್ಕಳ ಅಭಿರುಚಿಯನ್ನು ಅರಿತು, ಪೋಷಿಸಿದರೆ ಬದುಕಿನ ಹಾದಿ ಸುಗಮವಾಗುತ್ತದೆ. ಆದರೆ, ಅದನ್ನು ಅರಿಯುವುದು ಅಷ್ಟು ಸುಲಭದ ಮಾತೇ?. ನಿರ್ದಿಷ್ಟ ಪ್ರಕಾರವನ್ನು ಕಲಿಸುವ ಶಿಬಿರಗಳು ಬೇಸಿಗೆ ರಜೆಯಲ್ಲಿ ಹೇರಳವಾಗೇನೋ ಇವೆ. ಅಭಿರುಚಿ, ಹವ್ಯಾಸಗಳು ಮಗುವಿನ ವ್ಯಕ್ತಿತ್ವಕ್ಕೆ ಮೆರುಗು ತಂದರೆ ಅದಕ್ಕಿಂತ ಖುಷಿ ಬೇರೇನಿರುತ್ತದೆ. ಎಳವೆಯಿಂದಲೇ ಮನೆಯಲ್ಲಿ ಇವನ್ನು ಗುರುತಿಸಿ, ಪೋಷಿಸುವ ಕೆಲಸವಾದರೆ ಶಿಬಿರಕ್ಕೆ ಕಳುಹಿಸಲೇಬೇಕೆಂಬ ಅಗತ್ಯ ಇರುವುದಿಲ್ಲ.

> ಮಕ್ಕಳ ಆಸಕ್ತಿ–ಅಭಿರುಚಿಯನ್ನು ಅರಿತು ಅದನ್ನು ಪೋಷಿಸಲು ಈ ಬೇಸಿಗೆಯ ರಜೆಯೊಂದು ನೆಪವಾಗಲಿ. ಶಿಬಿರದಲ್ಲಿ ಅಷ್ಟೆ ಅಲ್ಲ ಮನೆಯಲ್ಲಿಯೂ ಮಕ್ಕಳು ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಪೋಷಕರು ಪ್ರೇರೇಪಿಸುವಂತಾಗಲಿ.

ಮಕ್ಕಳ ಆಸಕ್ತಿ ಅರಿಯಲು ಪೋಷಕರಾದವರಿಗೆ ತಾಳ್ಮೆ, ಸಂಯಮ ಬಹಳ ಮುಖ್ಯ. ಅದನ್ನು ಅರಿತುಕೊಳ್ಳುವ ಧಾವಂತದಲ್ಲಿ ಮಕ್ಕಳ ಮೇಲೆ ಚಟುವಟಿಕೆಗಳನ್ನು ಹೇರುವ ಕೆಲಸ ಮಾಡಬಾರದು. ಸಣ್ಣ ವಯಸ್ಸಿಗೆ ಆಸಕ್ತಿ ಬಾರದೇ ಇರಬಹುದು. ಪ್ರಬುದ್ಧರಾದ ಹಾಗೇ ಆಸಕ್ತಿ ತಳೆಯಬಹುದು. ಅಲ್ಲಿಯವರೆಗೆ ಕಾಯಬೇಕು. ಏನನ್ನು ನೋಡಿದಾಗ, ಕೇಳಿದಾಗ ಅವರ ಕಣ್ಣಲ್ಲಿ ಖುಷಿ ಕಾಣುತ್ತೆ ಅನ್ನುವುದನ್ನು ಗಮನಿಸುವ ಸೂಕ್ಷ್ಮತೆ ಪೋಷಕರಿಗೆ ಇರಬೇಕು.

ಫೈನ್ ಮೋಟಾರ್ ಸ್ಕಿಲ್ಸ್ (ಉತ್ತಮ ಕೌಶಲಗಳು) ಕಲಿಯಲು ಮನೆಗಿಂತ ಬೇರೆ ತಾಣವಿಲ್ಲ. ಅದರಲ್ಲಿಯೂ ಅಡುಗೆ ಮನೆಯ ಪರಿಕರಗಳನ್ನು ಸಮರ್ಥವಾಗಿ ಬಳಸಿಕೊಂಡರೆ ಮಕ್ಕಳು ಈ ಕೌಶಲಗಳನ್ನು ಕಲಿಯಬಲ್ಲರು. ತರಕಾರಿ ಹೆಚ್ಚುವುದು, ರಂಗೋಲಿ ಹಾಕುವುದು, ಕಸೂತಿ ಬಿಡಿಸುವುದು, ಹೊಲಿಗೆ, ಆಟಿಕೆಗಳ ಬಿಡಿಭಾಗಗಳನ್ನು ಬಿಡಿಸಿ ಅವುಗಳನ್ನು ಮರು ಜೋಡಿಸುವುದು.. ಹೀಗೆ ಇವೆಲ್ಲವನ್ನು ಲಿಂಗಭೇದವಿಲ್ಲದೇ ಕಲಿಯಲು ಮಕ್ಕಳಿಗೆ ಅನುವು ಮಾಡಿಕೊಡಬೇಕು.

ಈ ಮಾತಿಗೆ ಪೂರಕವಾಗಿ ತನ್ನ ಏಳು ವರ್ಷದ ಮಗಳು ಸುರಗಿ ಜತೆ ಹಲವು ಪ್ರಯೋಗಗಳನ್ನು ನಡೆಸಿರುವ ವನಿತಾ ಅಣ್ಣಯ್ಯ ಯಾಜಿ ಅವರ ಅನುಭವ ಹೀಗಿದೆ; 'ಪೋಷಕರು ಏನು ಮಾಡುತ್ತಾರೋ ಅದನ್ನೇ ಮಕ್ಕಳು ಮಾಡುವುದು. ಹಾಗಾಗಿ ಗರ್ಭಿಣಿಯಾಗಿದ್ದಾಗಿನಿಂದಲೂ ನಾನು ಪೋಷಕಳಾಗಿ ಏನು ಮಾಡಬೇಕು ಎಂಬುದರ ಬಗ್ಗೆ ಸ್ಪಷ್ಟತೆಯಿತ್ತು. ಸುರಗಿಗೆ ಚನ್ನಪಟ್ಟಣದ ಆಟಿಕೆಗಳು ಮತ್ತು ನಾನೇ ಬಟ್ಟೆಯಲ್ಲಿ ತಯಾರಿಸಿದ ಗೊಂಬೆಗಳನ್ನು ಆಡಲು ಕೊಡುತ್ತಿದ್ದೆ. ಎಂಟು ತಿಂಗಳು ಮಗುವಾಗಿದ್ದಾಗಿನಿಂದ ಅವಳನ್ನು ಪಕ್ಕದಲ್ಲಿ ಕೂರಿಸಿಕೊಂಡೇ ಹೊಲಿಗೆ, ಕಸೂತಿ ಕೆಲಸವನ್ನೂ ಮಾಡುತ್ತಿದ್ದೆ. ನಾದ ಹೊಮ್ಮಿಸುವ ಚನ್ನಪಟ್ಟಣದ ಆಟಿಕೆಗಳು ಅವಳಲ್ಲಿ ಸಂಗೀತ ಹಾಗೂ ವಾದ್ಯದ ಬಗೆಗೆ ಆಸಕ್ತಿ ಮೂಡಿಸಿದವು. ಅವಳೀಗ ಕ್ರೋಶೆಯ ಮೊದಲ ಹಂತವನ್ನು ಕಲಿಯುತ್ತಿದ್ದಾಳೆ. ಎಂಬ್ರಾಯಡರಿ ಕೂಡ ಮಾಡುತ್ತಾಳೆ' ಎಂದು ವನಿತಾ ನೆನಪಿಸಿಕೊಂಡರು.

'ನಾನು ವಿವಿಧ ಕಲಾಪ್ರಕಾರಗಳನ್ನು ಕಲಿಸುವ ಶಿಕ್ಷಕಿಯಾಗಿರುವುದರಿಂದ ಇಂಥವನ್ನೆಲ್ಲ ಮಗುವಿಗೆ ಹೇಳಿಕೊಡಲು ತಕ್ಕ ಮಟ್ಟಿಗೆ ಸಹಾಯವಾಯಿತು. ನನ್ನ ವಿದ್ಯಾರ್ಥಿಗಳನ್ನು ಕಂಡು ಅವಳೂ ಕಲಿತಳು. ಅಷ್ಟೇ ಅಲ್ಲ, ಅವಳು ಸ್ವಭಾವತಃ ಸ್ವ ಅಭ್ಯಾಸಿ. ಹೀಗಾಗಿ ಯೂಟ್ಯೂಬ್ ನೋಡಿಕೊಂಡೇ ಸಂಗೀತ ಮತ್ತು ನೃತ್ಯವನ್ನೂ ಕಲಿಯುತ್ತಿದ್ದಾಳೆ. ಟಿ.ವಿ. ಇಟ್ಟುಕೊಂಡಿಲ್ಲ. ವಾರಕ್ಕೆ ಎರಡು ದಿನ ಮಾತ್ರ ಎರಡು ಗಂಟೆಗಳ ಕಾಲ ಮೊಬೈಲ್ ನೋಡುವ ಹಾಗೆ ಹೇಳಿಕೊಟ್ಟಿದ್ದೇನೆ. ಅವಳೇ, ಇಡೀ ವಾರ ಏನು ನೋಡಬೇಕು. ತಿಳಿದುಕೊಳ್ಳಲು ಹೊಸತು ಏನಿದೆ ಎನ್ನುವುದರ ಪಟ್ಟಿ ಮಾಡಿಕೊಳ್ಳುತ್ತಾಳೆ. ಇವು ಅವಳ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗಿವೆ' ಎಂದು ಖುಷಿಯಿಂದ ಹೇಳುತ್ತಾರೆ ವನಿತಾ.

ಮಕ್ಕಳಿಗೆಂದೇ ಸ್ಪೇಸ್ ಇರಲಿ

ನಿರ್ದಿಷ್ಟ ಶಿಬಿರಕ್ಕೆ ಹೋದಾಗ ಮಕ್ಕಳು ಒಂದೇ ಪ್ಯಾಟರ್ನ್ ಚಟುವಟಿಕೆಯನ್ನು ಕಲಿಯವ ಸಾಧ್ಯತೆಯೇ ಹೆಚ್ಚಿರುತ್ತದೆ. ಆದರೆ, ಮನೆಯಲ್ಲಿಯೇ ಮಕ್ಕಳ ಎದುರು ಪ್ರಾಯೋಗಿಕ ಪ್ರಪಂಚವನ್ನೇ ತೆರೆದಿಡಬೇಕು. 'ಅಯ್ಯೊ ಅದು ಹಾಳಾಗುತ್ತದೆ, ಇದು ದೂಳಾಗುತ್ತದೆ' ಎಂಬ ಚಿಂತೆ ಬಿಟ್ಟು, ಅವರಿಗಾಗಿಯೇ ಸ್ಪೇಸ್‌ವೊಂದನ್ನು ಸೃಷ್ಟಿಸಬೇಕು. ಆ ಸ್ಪೇಸ್‌ನಲ್ಲಿ ಮಗುವಿಗೆ ತನ್ನದು ಎನಿಸುವ ಎಲ್ಲ ವಸ್ತುಗಳನ್ನು ಅದರ ಕೈಗೆ ತಾಗುವಂತೆ ಇಡಬೇಕು. ಪುಸ್ತಕ, ಬಣ್ಣದ ಬಣ್ಣದ ಪೆನ್ಸಿಲು, ಪೆನ್ನು, ಒಣಗಿದರೂ ಬಿಸಾಡದ ಹೂವುಗಳು, ಕ್ಲೇ ಇತ್ಯಾದಿ...

ಮನೆಯಲ್ಲಿ ಮಗುವಿಗೆಂದೇ ಮಾಡಿದ ಸ್ಪೇಸ್‌ನಲ್ಲಿ ಅಗತ್ಯವಾಗಿ ಮಕ್ಕಳು ಓದುವಂಥ ಪುಸ್ತಕಗಳಿರಲಿ. ಕ್ರಮೇಣ ಅದು ಆ ಮಗುವಿನ ಗ್ರಂಥಾಲಯದಂತೆ ಭಾಸವಾಗಲಿ. ಅಕ್ಷರವೊಂದು ಸಂಗಾತಿಯಾಗಿ ಬಿಟ್ಟರೆ ಮಗು ತನ್ನ ಪ್ರಪಂಚವನ್ನು ತಾನೇ ಸೃಷ್ಟಿಸಿಕೊಳ್ಳುತ್ತದೆ. ಹಾಗಾಗಿ ಪೋಷಕರು ನಿತ್ಯ ಮಕ್ಕಳ ಮುಂದೆ ಕಥೆ ಓದುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಇದರಿಂದ ಮಗುವಿನಲ್ಲಿ ಕೇಳಿಸಿಕೊಳ್ಳುವ, ಕಲ್ಪಿಸಿಕೊಳ್ಳುವ ಕೌಶಲ ಹೆಚ್ಚುತ್ತದೆ.

ಸ್ಕ್ರೀನ್ ಟೈಮ್‌ಗೆ ಮಿತಿಯಿರಲಿ

ಇದಂತೂ ಡಿಜಿಟಲ್ ಯುಗ. ಮಕ್ಕಳನ್ನು ಮೊಬೈಲ್, ಟ್ಯಾಬ್ ಸೇರಿ ಎಲೆಕ್ಟ್ರಾನಿಕ್ಸ್ ಗ್ಯಾಜೆಟ್‌ಗಳು ಮೋಡಿ ಮಾಡಿವೆ. ಮಕ್ಕಳ ಬಾಲ್ಯದ ತುಂಬಾ ರೀಲ್ಸು, ಸ್ನ್ಯಾಪ್‌ಚಾಟ್, ಲೈಕ್ಸು, ವ್ಲಾಗ್ಸುಗಳು ಜಾಗ ಪಡೆದಿವೆ. ಇದು ಪೋಷಕರನ್ನು ಆತಂಕಕ್ಕೆ ದೂಡಿರುವುದಂತೂ ನಿಜ. ಅಂಬೆಗಾಲು ಇಡುತ್ತಿದ್ದ ಮಗುವಿಗೆ ತುತ್ತು ತಿನಿಸಲು ಆಪ್ತನಂತೆ ಒದಗಿ ಬರುತ್ತಿದ್ದ ಕಾರ್ಟೂನ್‌ಗಳು ಕ್ರಮೇಣ ಗೀಳಾಗುತ್ತಿದೆಯಲ್ಲ ಎಂಬ ಅಳಲು ಹಲವು ತಾಯಂದಿರದ್ದು. ಮಕ್ಕಳನ್ನು ಇಂಥ ಗ್ಯಾಜೆಟ್ ಗೀಳಿನಿಂದ ತಪ್ಪಿಸಲು ಯಾವುದಾದರೂ ಶಿಬಿರಕ್ಕೆ ಹಾಕಿಬಿಡೋಣ್ವಾ? ಎಂದು ಯೋಚಿಸುವ ಪೋಷಕರೇ ಹೆಚ್ಚು.

ಕೊರೊನಾ ನಂತರ ಪಠ್ಯಕ್ಕೂ ಮೊಬೈಲ್‌ಗೂ ಗಾಢವಾದ ಸಂಬಂಧವೇ ಇರುವುದರಿಂದ ಅಷ್ಟು ಸುಲಭಕ್ಕೆ ಅದರಿಂದ ದೂರವಿಡಲು ಆಗದು. ಇದರ ನಡುವೆ ಡೇಟಾ ಕ್ರಾಂತಿಯಿಂದಾಗಿ ಅಂಗೈಯಲ್ಲಿರುವ ಜಗತ್ತನ್ನು ಎಷ್ಟು ತೋರಿಸಬೇಕು ಎಂಬ ಜವಾಬ್ದಾರಿ ಕೂಡ ಪೋಷಕರ ಮೇಲಿದೆ. ಮೊಬೈಲ್‌ನಲ್ಲಿ ಏನನ್ನು, ಎಷ್ಟು ಸಮಯ ನೋಡಬೇಕು. ಎಂಥದ್ದನ್ನೂ ನೋಡಿದರೆ ಮಗುವಿನ ಬೆಳವಣಿಗೆಗೆ ಪೂರಕವಾಗಬಲ್ಲದು ಎಂಬುದರ ಬಗ್ಗೆಯೂ ಪೋಷಕರಿಗೆ ಅರಿವಿರಬೇಕು. ಮಗುವಿನ ಜತೆಗೆ ಪೋಷಕರು ಸ್ಕ್ರೀನ್ ಟೈಮ್‌ಗೆ ಮಿತಿ ಹಾಕಿಕೊಳ್ಳಬೇಕು.

ಇದಕ್ಕೆ ವನ್ಯಜೀವಿ ಛಾಯಾಗ್ರಾಹಕಿ ಪ್ರಿಯಾ ಕುಂಜಿರ್ಕಾನ ಹೇಳುವುದಿಷ್ಟು; 'ಸಾಧ್ಯವಾದಷ್ಟು ಮಗುವಿನ ಮುಂದೆ ನಾನಾ ಅನುಭವಗಳ ಜಗತ್ತನ್ನು ತೆರೆದಿಡಬೇಕು. ಆಸಕ್ತಿ–ಅಭಿರುಚಿಯನ್ನು ಗುರುತಿಸುವ ಮುಂಚೆ ನಾನಾ ಜಗತ್ತಿನ ಪರಿಚಯವನ್ನು ಕಡ್ಡಾಯವಾಗಿ ಮಾಡಿಸಬೇಕು. ಮಕ್ಕಳ ಮೂಡ್ ಬದಲಾಗುತ್ತಲೇ ಇರುತ್ತದೆ. ಇವತ್ತು ಬಣ್ಣ ಇಷ್ಟ ಅಂದರೆ, ನಾಳೆ ಮಣ್ಣು ಇಷ್ಟ ಎನ್ನುತ್ತಾರೆ. ಒಂದು ಹಂತದವರೆಗೆ ಮಗುವಿಗೆ ಇದೇ ಆಸಕ್ತಿ ಎಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲವೇನೋ. ಆದರೆ, ಮಗುವನ್ನು ಹಲವು ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸುವ ಕೆಲಸ ಮಾಡಬೇಕು. ಇದರಿಂದ ಮುಂದಿನ ದಾರಿ ಸ್ಪಷ್ಟವಾಗುವುದು ನಿಶ್ಚಿತ'.

ತಮ್ಮ ಮಗಳು ಬೆಳೆಯುತ್ತಿರುವ ರೀತಿಯನ್ನು ಅವರಿಲ್ಲಿ ಹಂಚಿಕೊಂಡಿದ್ದಾರೆ. 'ಮಗಳು ಅನಾಯಳಿಗೆ ಈಗ 9 ವರ್ಷ. ಅವಳಿಗೆ ಬಾಹ್ಯಾಕಾಶ ಹಾಗೂ ಫೋಟೋಗ್ರಫಿಯಲ್ಲಿ ಆಸಕ್ತಿ ಬಂದಿದೆ. ಅವಳು 3 ತಿಂಗಳ ಮಗುವಾಗಿದ್ದಲೇ ಚಾರಣಕ್ಕೆ ಕರೆದುಕೊಂಡು ಹೋಗಿದ್ದಿದೆ. ಮಗುವಿಗೆ ಆದಷ್ಟು ಪರಿಸರದ ಜತೆ ಒಡನಾಟವಿರಬೇಕು ಎಂಬುದು ನನ್ನ ಉದ್ದೇಶವಾಗಿತ್ತು' ಎಂದು ಆರಂಭದ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ ಅವರು.

'ಮೊದ ಮೊದಲು ಇರುವೆಗೂ ಹುಳ ಬಂತು ಎಂದು ಹೆದರುತ್ತಿದ್ದ ಮಗಳೀಗ ನಿರ್ಭಿಡೆಯಾಗಿ ಪರಿಸರದ ಜತೆ ಬೆರೆಯುತ್ತಿರುವುದಕ್ಕೆ ಖುಷಿ ಇದೆ. ಬೆಳಕಿನ ಮಾಲಿನ್ಯವೇ ಇಲ್ಲದ ಕತ್ತಲಿನಲ್ಲಿ ನಕ್ಷತ್ರಪುಂಜ ನೋಡಲು ಊರಿಗೆ ಹೋಗೋಣವೆಂದು ತವಕಿಸುತ್ತಾಳೆ. ನದಿ, ಹಕ್ಕಿ, ಪ್ರಾಣಿ, ಕಾಡು ಹೀಗೆ ಎಲ್ಲದರ ಬಗ್ಗೆ ಆಸಕ್ತಿ ಬಂದಿದೆ. ಗಿಡದಿಂದ ನೆಲಕ್ಕೆ ಬಿದ್ದ ಹೂವು ಮಾತ್ರ ಬಳಕೆಗೆ, ಹೂವನ್ನು ಕೊಯ್ಯುವ ಹಕ್ಕಿಲ್ಲ ಎಂದು ವಾದಿಸುವಷ್ಟು ಕಾಳಜಿ ಬಂದಿದೆ' ಎನ್ನುತ್ತಾರೆ ಅವರು.


'ಮಗಳಿಗೆ ಸಂಗೀತ, ನೃತ್ಯ ಪ್ರಕಾರದಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸಿದ್ದೆ. ಆದರೆ, ಅವಳು ಸಂಗೀತದ ಬಗ್ಗೆ ಆಸಕ್ತಿ ತೋರಲಿಲ್ಲ. ನಾನೂ ಬಲವಂತ ಮಾಡಲಿಲ್ಲ. ಈಗ ಪ್ರಕೃತಿಯ ಒಡನಾಟದಿಂದ ತುಂಬಾ ತಾಳ್ಮೆ ಬೇಡುವ ಹೈಡ್ ಫೋಟೋಗ್ರಫಿ ಮಾಡುತ್ತಿದ್ದಾಳೆ. ಹೀಗೆ, ಮಕ್ಕಳಿಗೆ ಎಲ್ಲವನ್ನು ಪರಿಚಯಿಸುವ ಕೆಲಸ ಮಾಡಬೇಕು. ಆಸಕ್ತಿ ಇಲ್ಲದ್ದರ ಬಗ್ಗೆ ಒತ್ತಾಯ ಮಾಡಬಾರದು' ಎಂದು ತಮ್ಮ ಅನುಭವ ಹಂಚಿಕೊಂಡರು.

ದುಡಿಯುವ ಅಪ್ಪ ಅಮ್ಮಂದಿರಿಗೆ ಸಮಯದ ಅಭಾವ. ಮಕ್ಕಳಿಗೆ ಸಮಯ ನೀಡಲು ಆಗದೇ ಅವರನ್ನು ಶಿಬಿರಗಳಿಗೆ ಕಳುಹಿಸುವುದಕ್ಕೂ ಮೊದಲು ಇರುವ ಸಮಯದಲ್ಲಿ ಸೃಜನಶೀಲತೆಯಿಂದ ತೊಡಗಿಕೊಳ್ಳುವಂತೆ ಹುರಿದುಂಬಿಸಿ. ಮನೆಯಲ್ಲಿಯೇ ಮಕ್ಕಳಿಗೆ 'ಕ್ರಿಯೇಟಿವ್ ಕಾರ್ನರ್' ಒಂದನ್ನು ರೂಪಿಸಿ.

'ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ. ನಿಮ್ಮ ಮೂಲಕ ಬರುವ ದೈವಸೃಷ್ಟಿ' ಎನ್ನುವ ಕವಿವಾಣಿಯಂತೆ ಅತಿ ನಿರೀಕ್ಷೆಯ ಭಾರವನ್ನು ಮಕ್ಕಳ ಮೇಲೆ ಹೇರದೇ, ಆಯಾ ವಯಸ್ಸಿಗೆ ಬೇಕಿರುವಷ್ಟು ಸ್ವಾತಂತ್ರ್ಯವನ್ನು ಮಕ್ಕಳ ಪಾಲಿಗಿಟ್ಟು, ತೀವ್ರವಾಗಿ ಬದುಕುವುದನ್ನು ಕಲಿಸೋಣ. ❖

ಪೋಷಕ– ಮಗುವಿನ ಬಂಧ ಗಟ್ಟಿಯಿರಲಿ

ಮುಖ್ಯವಾಗಿ ಮಕ್ಕಳಲ್ಲಿರುವ ಅಭಿರುಚಿಯನ್ನು ಪ್ರೋತ್ಸಾಹಿಸುವ ಮುಂಚೆ ಪೋಷಕರು ಮತ್ತು ಮಗುವಿನ ನಡುವೆ ಭಾವಾನಾತ್ಮಕ ಸಂಬಂಧ ಚೆನ್ನಾಗಿರಬೇಕು. ಪರಸ್ಪರ ನಂಬುಗೆ, ಪ್ರೀತಿ, ವಿಶ್ವಾಸ ಗಟ್ಟಿಯಾಗಿರಬೇಕು. ಇಲ್ಲವಾದರೆ ಏನೇ ಹೇಳಿದರೂ ಮಗುವಿಗೆ ಅದು ಹೇರಿಕೆ ಎನಿಸುವ ಸಾಧ್ಯತೆ ಹೆಚ್ಚಿರುತ್ತದೆ. ಹೇಳಿದ್ದನ್ನು ಮಾಡದೇ ಅದಕ್ಕೆ ವಿರುದ್ಧವಾದದ್ದನ್ನು ಮಾಡುವ ಸಾಧ್ಯತೆಯೂ ಇರುತ್ತದೆ.



ಪ್ರತಿ ಮಗುವು ಅನುರೂಪ (ಯುನಿಕ್). ಇದು ಪೋಷಕರ ತಲೆಯಲ್ಲಿ ಸದಾ ಇರಬೇಕು. ವರ್ಷದಿಂದ ವರ್ಷಕ್ಕೆ, ದಿನದಿಂದ ದಿನಕ್ಕೆ ಮಗುವಿನ ಆಸಕ್ತಿ ಬದಲಾಗಬಹುದು. ಹಾಗಾಗಿ ಒಂದು ಹವ್ಯಾಸ ದಿನಚರಿಯ ಭಾಗವಾಗುವಂತೆ ನೋಡಿಕೊಳ್ಳಿ. ಇದರಿಂದ ಶಿಸ್ತು ಬರುತ್ತದೆ. ಹವ್ಯಾಸದ ಮೇಲೆ ನಿರಂತರ ಆಸಕ್ತಿಯೂ ಉಳಿಯುತ್ತದೆ. ಆಸಕ್ತಿ ಬದಲಾಗುತ್ತಿದ್ದರೆ, ಹವ್ಯಾಸ ಅರ್ಧಕ್ಕೆ ನಿಂತರೆ ಬೇಸರ ಮಾಡಿಕೊಳ್ಳದೇ, ಅದಕ್ಕೆ ಕಾರಣ ಹುಡುಕಿ.

ಯಾವುದೇ ಹವ್ಯಾಸವೇ ಇರಲಿ, ಅದರಲ್ಲಿ ತೊಡಗಿಕೊಂಡಾಗ ಶ್ಲಾಘನೆ ಮಾಡಿ. ತಪ್ಪಾದಾಗ ಹಂಗಿಸದೆ ತಪ್ಪುಗಳಿಂದಲೇ ದೊಡ್ಡವರಾಗೋದು ಎನ್ನುವುದನ್ನು ಮನದಟ್ಟು ಮಾಡಿ. ಬೇಸಿಗೆ ಶಿಬಿರ ಮಕ್ಕಳಲ್ಲಿ ನಾಯಕತ್ವ, ಟೀಂ ವರ್ಕ್ ಕಲಿಸುತ್ತದೆ. ಆದಷ್ಟು ಪರಿಸರದ ಜತೆ ಬೆರೆಯುವಂಥ ಶಿಬಿರಗಳಿಗೆ ಕಳಿಸಿ.

ಡಾ. ಅರುಣಾ ಯಡಿಯಾಳ್, ಮನೋವೈದ್ಯೆ, ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜು, ಮಂಗಳೂರು.

ಅರೆರೆ...! 'ಆರಿ ವರ್ಕ್'

ಕಲಾವತಿ ಬೈಚಬಾಳ


ಫ್ಯಾಷನ್

ಬೇಸಿಗೆ ರಜೆಯ ಜೊತೆಗೆ, ಸಾಲು ಮದುವೆ, ಮುಂಜಿಯಂಥ ಶುಭ ಸಮಾರಂಭಗಳೂ ಶುರುವಾಗುತ್ತವೆ. ಮದುವೆಗೆ ತಕ್ಕನಾದ ರೇಷ್ಮೆ ಸೀರೆ, ಅದಕ್ಕೆ ತಕ್ಕನಾದ ಗ್ರ್ಯಾಂಡ್ ಎನಿಸುವ ರವಿಕೆ ಇಲ್ಲದಿದ್ದರೆ ಹೇಗೆ?

ಮನಸೂರೆಗೊಳಿಸುವಂಥ, ವ್ಹಾ! ಎಂದು ಉದ್ಗರಿಸುವ, ಸೀರೆಗಳ ಅಂದ ಹೆಚ್ಚಿಸುವ 'ಆರಿ ವರ್ಕ್' ಬಗ್ಗೆ ಒಂದಿಷ್ಟು ತಿಳಿಯೋಣ.

ಹಬ್ಬ ಮಾತ್ರವಲ್ಲ, ಎಲ್ಲ ಶುಭ ಸಮಾರಂಭಗಳಲ್ಲೂ ಉಡುವ ಸೀರೆಗಳ ಜೊತೆಗೆ ಹುಬ್ಬೇರಿಸಿ ನೋಡುವಂಥ ಡಿಸೈನರಿ ಬ್ಲೌಸ್‌ಗಳನ್ನು ತೊಡುವುದು ಇತ್ತೀಚೆಗೆ ಫ್ಯಾಷನ್ ಆಗಿದೆ.

ಕನಿಷ್ಠ ನಾಲ್ಕರಿಂದ ಐದು ಸಾವಿರ ರೂಪಾಯಿ ಕೊಟ್ಟು ತರುವ ಸೀರೆಗೂ ಆರಿ ವರ್ಕ್ ಇರುವ ರವಿಕೆ ತೊಟ್ಟಾಗಲೇ ಅದರ ಅಂದ ದುಪ್ಪಟ್ಟಾಗೋದು ಎನ್ನುವ ಅಭಿಪ್ರಾಯ ಹೆಣ್ಮಕ್ಕಳದ್ದು. ಹೀಗಿರುವಾಗ ಮದುಮಗಳ ಸೀರೆ, ಬ್ಲೌಸೆ ಕತೆ ನೀವೆ ಊಹಿಸಿ.



ಬಗೆ ಬಗೆಯ ವಿನ್ಯಾಸಗಳು

ಆರಿ ವರ್ಕ್‌ಗೆ ಇತ್ತೀಚೆಗೆ ಬಹು ಬೇಡಿಕೆ ಬಂದಿದೆ. ಬಗೆಬಗೆಯ ವಿನ್ಯಾಸಗಳನ್ನು ಹೊಂದಿರುವುದೇ ಇದರ ವಿಶೇಷ. ಇದರಲ್ಲಿ ಚೈನ್ ಸ್ಟಿಚ್, ಜರದೋಶಿ, ಕುಂದನ್ ವರ್ಕ್, ಥ್ರೆಡ್ ವರ್ಕ್, ಗಂಟನ್ ವರ್ಕ್, ಬೀಟ್ಸ್, ಕವರಿಂಗ್, ಕಟಿಂಗ್ ವರ್ಕ್, ನೆಟ್ ಕ್ಲಾಥ್ ವರ್ಕ್, ಲಕ್ಷ್ಮಿ ಪೆಂಡೆಂಟ್, ಕಾಯಿನ್ಸ್ ವರ್ಕ್... ಹೀಗೆ ಹಲವು ವಿಧಗಳನ್ನು ಕಾಣಬಹುದು.

ಅಲ್ಲದೇ, ಯಂತ್ರದ ಮೂಲಕ ಮತ್ತು ಕೈಯಿಂದಲೇ ವಿನ್ಯಾಸ ಮಾಡುವ 'ಆರಿ ವರ್ಕ್' ಸಹ ಇದೆ. ಕೈಯಿಂದ ಮಾಡುವ ವಿನ್ಯಾಸಗಳು ಹೆಚ್ಚು ಬಾಳಿಕೆ, ತಾಳಿಕೆ ಬರುವಂಥವು. ಹಾಗಾಗಿ ಇದಕ್ಕೆ ಹೆಚ್ಚು ಬೇಡಿಕೆ. ಈ ಕಲಾತ್ಮಕ ವಿನ್ಯಾಸ ಮಾಡಿಸಲು ಹೆಚ್ಚು ಸಮಯ ಬೇಕಾಗುತ್ತದೆ. ಕಡಿಮೆ ಅವಧಿ ಇರುವವರು ಯಂತ್ರದ ಮೂಲಕ ಮಾಡುವ ವಿನ್ಯಾಸಗಳನ್ನೇ ನೆಚ್ಚಿಕೊಳ್ಳಬೇಕಾಗುತ್ತದೆ.

ಸರಳ ಸಮಾರಂಭಗಳಿಗೆ ಬಾರ್ಡರ್, ಥ್ರೆಡ್ ವರ್ಕ್ ಇರುವ, ಅದ್ದೂರಿ ಸಮಾರಂಭಗಳಿಗೆ ಹೆವಿ ವರ್ಕ್ ಡಿಸೈನರಿ ಬ್ಲೌಜ್‌ಗಳನ್ನು ಧರಿಸಬಹುದು.

ವಧುವಿಗಾಗೆ ವಿಶೇಷ ವಿನ್ಯಾಸಗಳು: ಮದುವೆಯಲ್ಲಿ ವಧುವಿನ ಅಲಂಕಾರ ಎಲ್ಲರ ಗಮನವನ್ನೂ ಸೆಳೆಯುವಂಥದ್ದು. ಹಾಗಾಗಿ, ವಧುವಿಗಾಗಿಯೇ ವಿಶಿಷ್ಟವಾದ ಆರಿ ವರ್ಕ್ ಬ್ಲೌಸ್ ವಿನ್ಯಾಸ ಮಾಡಲಾಗುತ್ತದೆ. ಈ ರೀತಿ ವಿಶೇಷ ವಿನ್ಯಾಸಕ್ಕೆ ಬಹು ಬೇಡಿಕೆಯೂ ಇದೆ. ಅಷ್ಟೇ ಅಲ್ಲ, ಬ್ಲೌಸ್– ಸೀರೆ ಮೇಲೆ ವಧುವರರ ಚಿತ್ರವಿರುವ, ಧಾರೆ ಎರೆಯುವ, ಅಂಬಾರಿ, ಪಲ್ಲಕ್ಕಿಯಲ್ಲಿ ವಧು, ವರರು ಬರುವಂತಹ ದೃಶ್ಯಗಳ ವಿನ್ಯಾಸವನ್ನೂ ಮಾಡಿಸಬಹುದು.

ಸಾಧಾರಣ ವಿನ್ಯಾಸಗಳಿಗೆ ಕನಿಷ್ಟ ₹1,000 ದಿಂದ ₹ 4,000, ಅತ್ಯಧಿಕ ಅಲಂಕಾರಯುತ ವಿನ್ಯಾಸಗಳಿಗೆ ಗರಿಷ್ಟ ₹20,000 - ₹30,000 ವರೆಗೂ ದರವಿದೆ. ವಿನ್ಯಾಸದ ಆಯ್ಕೆ, ಬಳಸುವ ಸಾಮಗ್ರಿ, ಬೇಕಾಗುವ ಸಮಯದ ಮೇಲೆ ದರ ನಿರ್ಧಾರವಾಗುತ್ತದೆ ಎನ್ನುತ್ತಾರೆ ವಿಜಯಪುರದ ಆರಿ ವರ್ಕ್ ಡಿಸೈನರ್ ರಾಣಿ ಬಿ.

ಮದುವೆ, ಹಬ್ಬದ ಸೀಸನ್‌ಗಳಲ್ಲಿ ಆರ್ಡರ್‌ಗಳು ಹೆಚ್ಚಾಗಿರುತ್ತವೆ. ಬಹುತೇಕರು ಕೈಯಿಂದ ಮಾಡುವ ವಿನ್ಯಾಸಗಳನ್ನೇ ಹೆಚ್ಚು ಆಯ್ಕೆ ಮಾಡಿಕೊಳ್ಳುತ್ತಾರೆ ಎನ್ನುವುದು ಅವರ ಅಭಿಪ್ರಾಯ.

ಹೆಚ್ಚು ತಾಳ್ಮೆ, ಸಮಯ ಬೇಡುವ ಕಲೆ: 'ಇದು ಹೆಚ್ಚು ತಾಳ್ಮೆ, ಸಮಯ ಬೇಡುವ ಕಲೆ. ಇತ್ತೀಚೆಗೆ ಬಹುತೇಕ ಹೆಣ್ಣುಮಕ್ಕಳು ಈ ಕಲೆ ಕಲಿಯುವತ್ತ ಆಸಕ್ತಿ ತೋರುತ್ತಿದ್ದಾರೆ. ನಾವು ಉದ್ಯೋಗ ಮಾಡುತ್ತಲೇ, ಈ ಕಲೆಯನ್ನು ಬೇರೆಯವರಿಗೂ ಕಲಿಸುತ್ತಿದ್ದೇವೆ. ಮೂರು, ಆರು ತಿಂಗಳ ತರಬೇತಿ ಪಡೆದು ಉದ್ಯೋಗಿಗಳಾಗುತ್ತ, ಸ್ವಾವಲಂಬಿಗಳಾಗುತ್ತಿದ್ದಾರೆ' ಎನ್ನುವುದು ಅವರ ಮಾತು.

ಸಿದ್ಧ ಬ್ಲೌಸ್‌ಗಳು ಲಭ್ಯ: ಈಗೀಗ ಅಂಗಡಿಗಳಲ್ಲೂ ರೆಡಿಮೇಡ್ ಆರಿ ವರ್ಕ್ ವಿನ್ಯಾಸದ ಸೀರೆ, ಬ್ಲೌಸ್‌ಗಳು ಸಿಗುತ್ತಿವೆ. ವೈವಿಧ್ಯಮಯ ವಿನ್ಯಾಸಗಳ ಬ್ಲೌಸ್‌ಗಳೂ ಸಿಗುತ್ತವೆ. ಅವುಗಳ ಗುಣಮಟ್ಟ ಆಧರಿಸಿ ಖರೀದಿಸುವುದು ಸೂಕ್ತ. ❖

ದೇಹಕ್ಕೆ ತಂಪು ಹೆಸರುಬೇಳೆ ತಿನಿಸು

ನಳಪಾಕ

ಹೆಸರುಬೇಳೆಯ ತಿನಿಸುಗಳು ದೇಹವನ್ನು ತಂಪಾಗಿಸುವ ಜೊತೆಗೆ, ಶಕ್ತಿಯನ್ನು ನೀಡುತ್ತವೆ. ಹಾಗಾಗಿಯೇ ಬೇಸಿಗೆಯಲ್ಲಿ ಈ ಬೇಳೆಯ ಖಾದ್ಯಗಳನ್ನು ಹೆಚ್ಚಾಗಿ ತಯಾರಿಸುತ್ತಾರೆ. ಇಂಥ ಹೆಸರುಬೇಳೆಯ ಇನ್ನಷ್ಟು ವಿಶೇಷ ಖಾದ್ಯಗಳ ರೆಸಿಪಿಗಳನ್ನು ಪರಿಚಯಿಸುತ್ತಿದ್ದಾರೆ ಕೆ.ವಿ.ರಾಜಲಕ್ಷ್ಮಿ

ಹೆಸರುಬೇಳೆ ಹಲ್ವ

ಬೇಕಾಗುವ ಸಾಮಗ್ರಿ: ಬೇಯಿಸಿದ ಹೆಸರು ಬೇಳೆ 1/2 ಕಪ್ , ಬೆಲ್ಲದ ಪುಡಿ 1/2 ಕಪ್, ಗೋಡಂಬಿ 5 ರಿಂದ 6, ತುಪ್ಪ 1/2 ಕಪ್.

ಮಾಡುವ ವಿಧಾನ: ಬಾಣಲೆಗೆ ಒಂದು ಚಮಚ ತುಪ್ಪ ಹಾಕಿ. ಅದಕ್ಕೆ ಬೇಯಿಸಿದ ಹೆಸರು ಬೇಳೆಯನ್ನು ಒಂದೆರಡು ನಿಮಿಷ ಮಗುಚಿ. ನಂತರ ಬೆಲ್ಲದ ಪುಡಿ ಬೆರೆಸಿ. ಸಣ್ಣ ಉರಿಯಲ್ಲಿ, ಸ್ವಲ್ಪ ಸ್ವಲ್ಪವಾಗಿ ತುಪ್ಪ ಸೇರಿಸುತ್ತ, ತಳಹಿಡಿಯ ದಂತೆ ಮಗುಚುತ್ತಿರಿ. ಮಿಶ್ರಣ ಹಲ್ವದ ಹದಕ್ಕೆ ಬಂದ ಕೂಡಲೇ ಬೇರೊಂದು ಪಾತ್ರೆಗೆ ವರ್ಗಾಯಿಸಿ. ಗೋಡಂಬಿ ತುಂಡುಗಳಿಂದ ಅಲಂಕರಿಸಿ. ಈಗ ಹೆಸರುಬೇಳೆ ಹಲ್ವಾ ಸವಿಯಲು ಸಿದ್ಧ.



ಸ್ಟಾರ್ ಪೇಡ



ಬೇಕಾಗುವ ಸಾಮಗ್ರಿ : ಹುರಿಗಡಲೆ ಪುಡಿ ಕಾಲು ಕಪ್, ಹುರಿದ ಅಕ್ಕಿ ಹಿಟ್ಟು ಎರಡು ಚಮಚ, ಬಾದಾಮಿ ಪುಡಿ ಒಂದು ಚಮಚ, ಸಕ್ಕರೆ ಅರ್ಧ ಕಪ್, ತುಪ್ಪ ಸ್ವಲ್ಪ ಅಥವಾ ಅಗತ್ಯಕ್ಕೆ ತಕ್ಕಷ್ಟು.

ಮಾಡುವ ವಿಧಾನ: ದಪ್ಪ ತಳದ ಬಾಣಲೆಗೆ ಸಕ್ಕರೆ ಹಾಗೂ ಸ್ವಲ್ಪ ನೀರು ಹಾಕಿ ಸಣ್ಣ ಉರಿಯಲ್ಲಿ ಬಿಸಿ ಮಾಡಿ ಕರಗಿಸಿ. ನೊರೆ ಬರುವ ಹಂತದಲ್ಲಿ ಹುರಿಗಡಲೆ, ಹಾಲಿನ ಪುಡಿ, ಬಾದಾಮಿ ಪುಡಿ, ಅಗತ್ಯವಿದ್ದಷ್ಟು ತುಪ್ಪ ಹಾಕಿ ಚೆನ್ನಾಗಿ ಕೈಯಾಡಿಸುತ್ತಿರಿ. ಮಿಶ್ರಣ ಪಾತ್ರೆ ಬಿಟ್ಟು ಬರುತ್ತಿದ್ದಂತೆ, ಜಿಡ್ಡು ಸವರಿದ ತಟ್ಟೆಗೆ ಸುರಿಯಿರಿ. ಸ್ವಲ್ಪ ತಣಿದ ಮೇಲೆ ಸ್ಟಾರ್ ಅಚ್ಚಿನಲ್ಲಿ ಕತ್ತರಿಸಿ. ಸ್ಟಾರ್ ಪೇಡ ಸವಿಯಲು ಸಿದ್ದ.

ರವಿಚಂದ್ರ



ಬೇಕಾಗುವ ಸಾಮಗ್ರಿ: ಹಾಲಿನ ಪುಡಿ 1 ಕಪ್, ಹುರಿದ ಗೋಧಿ ಹಿಟ್ಟು 1/2 ಕಪ್, ಸಕ್ಕರೆ ಒಂದೂವರೆ ಕಪ್, ಗೋಡಂಬಿ ರುಚಿಗೆ ತಕ್ಕಷ್ಟು, ತುಪ್ಪ ಸ್ವಲ್ಪ.

ಮಾಡುವ ವಿಧಾನ: ದಪ್ಪತಳದ ಪಾತ್ರೆಗೆ ಸಕ್ಕರೆ ಮತ್ತು ಅದು ಕರಗುವಷ್ಟು ಮಾತ್ರ ನೀರು ಹಾಕಿ. ಸಣ್ಣ ಉರಿಯಲ್ಲಿ ಬಿಸಿ ಮಾಡಿ. ಸಕ್ಕರೆ ಪಾಕ ಬರುವಾಗ ಹಾಲಿನ ಪುಡಿ, ಹುರಿದ ಗೋಧಿ ಹಿಟ್ಟು ಹಾಕಿ, ಕೈಯಾಡಿಸುತ್ತಿರಿ. ಅವಶ್ಯಕತೆಗೆ ತಕ್ಕಂತೆ ತುಪ್ಪ ಹಾಕಿ ಚೆನ್ನಾಗಿ ಮಗುಚಿ.

ಇನ್ನೊಂದೆಡೆ ತಟ್ಟೆಗೆ ತುಪ್ಪವನ್ನು ಸವರಿ ಇಡಿ. ಸ್ಟೌ ಮೇಲಿಟ್ಟ ಪಾತ್ರೆಯಲ್ಲಿ ಮಿಶ್ರಣ ಬಿಟ್ಟು ಬರುತ್ತಿದ್ದಂತೆ, ಅದನ್ನು ತುಪ್ಪ ಸವರಿದ ತಟ್ಟೆಗೆ ಸುರಿಯಿರಿ. ಬಿಸಿಯಿದ್ದಾಗಲೇ ಸ್ವಲ್ಪ ಸ್ವಲ್ಪ ಮಿಶ್ರಣ ತೆಗೆದುಕೊಂಡು ಅಂಗೈನಲ್ಲಿ ವೃತ್ತಾಕಾರವಾಗಿ ತಟ್ಟಿ. ನಂತರ ಸಣ್ಣ ಮುಚ್ಚಳದಿಂದ ಮತ್ತೊಂದು ವೃತ್ತದಂತೆ ಮೆದುವಾಗಿ ಗುರುತು ಹಾಕಿ. ಮಧ್ಯೆ ಗೋಡಂಬಿಯನ್ನು ಇಡಿ. ಆಕರ್ಷಕವಾದ, ರುಚಿಯಾದ ರವಿಚಂದ್ರ ಸಿದ್ದ.

ಅತಿಯಾದ ಋತುಸ್ರಾವ: ಪರಿಹಾರವೇನು?

ಸ್ಪಂದನ



ಡಾ. ವೀಣಾ ಎಸ್. ಭಟ್

● ನನಗೆ 45 ವರ್ಷಗಳು. ಎರಡು ಮಕ್ಕಳು. ಟ್ಯುಬೆಕ್ಟಮಿಯಾಗಿದೆ. ಕಳೆದ ಆರೇಳು ತಿಂಗಳುಗಳಿಂದ ತಡವಾಗಿ ಮುಟ್ಟಾಗುತ್ತಿದೆ. ಮುಟ್ಟಿನಲ್ಲಿ ತುಂಬಾ ರಕ್ತಸ್ರಾವವಾಗುತ್ತಿದೆ. 7 ರಿಂದ 8 ದಿನ ಮುಟ್ಟು ಹೋಗುತ್ತಿದೆ. ಸ್ಕ್ಯಾನಿಂಗ್ ಮಾಡಿಸಿದಾಗ ದೊಡ್ಡ ತೊಂದರೆ ಏನಿಲ್ಲ ಎಂದು ಹೇಳಿದ್ದಾರೆ. ಆದರೂ ಸುಸ್ತಾಗುವ ಅನುಭವವಾಗುತ್ತಿದೆ. ಈಗ ನಾನು ಗರ್ಭಕೋಶ ತೆಗೆಸಬೇಕೇ? ಸಲಹೆ ಕೊಡಿ?

ವಿಜಯಾ ಕಡೂರು

ವಿಜಯಾರವರೇ, ನಿಮಗೆ ಮುಟ್ಟಿನಲ್ಲಿ ಅಧಿಕ ರಕ್ತಸ್ರಾವ ಆಗುತ್ತಿದೆ. ಆದ್ದರಿಂದ ರಕ್ತಹೀನತೆ ಉಂಟಾಗಿರಬಹುದು. ಆದ್ದರಿಂದ ಈ ರೀತಿ ಸುಸ್ತಿನ ಅನುಭವವಾಗುತ್ತಿದೆ. ಗರ್ಭಕೋಶದಲ್ಲಿ ನಾರುಗಡ್ಡೆಗಳಿದ್ದರೆ, ಅಂಡಾಶಯದ ಗಡ್ಡೆಗಳಿದ್ದರೆ ಎಂಡೋಮೆಟ್ರಿಯೋಸಿಸ್, ಅಡಿನೋಮಯೋಸಿಸ್, ಪಿ.ಸಿ.ಓ.ಡಿ ಅಥವಾ ಗರ್ಭಕೋಶದ ಸೋಂಕು ಇತ್ಯಾದಿಗಳಿದ್ದಾಗ ಅಧಿಕ ರಕ್ತಸ್ರಾವ ಆಗಬಹುದು.

ಆದರೆ ನೀವೇ ತಿಳಿಸಿದ ಹಾಗೆ ಸ್ಕ್ಯಾನಿಂಗ್‌ನಲ್ಲಿ ಹೆಚ್ಚಿನ ತೊಂದರೆ ಇಲ್ಲ ಎಂದು ತಿಳಿದುಬಂದಿರುವುದಾಗಿ ಹೇಳಿದ್ದೀರಿ. ಹಾಗಾಗಿ, ನಿಮಗೆ ಹಾರ್ಮೋನು ಅಸಮತೋಲನದಿಂದ ಈ ಸಮಸ್ಯೆಯಾಗಿರಬಹುದು. ಅಂದರೆ ಹೆಣ್ತನದ ಮುಖ್ಯ ಹಾರ್ಮೋನಾದ ಈಸ್ಟ್ರೋಜನ್ ಮಟ್ಟಕ್ಕೆ ತಕ್ಕದಾದ ಪ್ರೊಜೆಸ್ಟ್ರೋಜನ್ ಹಾರ್ಮೋನು ಇರದೇ ಗರ್ಭಕೋಶದ ಒಳಾವರಣವು (ಎಂಡೋಮೆಟ್ರಿಯಂ) ಹೆಚ್ಚು ಹೆಚ್ಚು ಬೆಳೆದು ಅದು ತಡವಾಗಿ ಕಳಚಿ ಮುಟ್ಟಿನಸ್ರಾವವಾಗಿ ಹೊರಬರುವಾಗ, ಹೆಚ್ಚು ಹೆಚ್ಚು ರಕ್ತಸ್ರಾವ ಆಗುತ್ತದೆ.

ನಿಮ್ಮ ವಯಸ್ಸಿನ ಹೆಚ್ಚಿನ ಮಹಿಳೆಯರಿಗೆ ಈ ತರಹದ ರಕ್ತಸ್ರಾವದ ಸಮಸ್ಯೆಯಾಗುತ್ತದೆ. ನೀವು ತಕ್ಷಣ ಗರ್ಭಕೋಶ ತೆಗೆಸುವ ನಿರ್ಣಯ ಮಾಡಬೇಡಿ. ಇದಕ್ಕೆ ಹಲವಾರು ರೀತಿಯ ಚಿಕಿತ್ಸೆಗಳಿವೆ. ಭರವಸೆದಾಯಕ ಚಿಕಿತ್ಸೆ ಎಂದರೆ ಲಿವೊನಾರ್ಜೆಸ್ಟಿರಾಲ್ ಐ.ಯು.ಡಿ. (LNG IUD) ಅಳವಡಿಕೆ. ಇದು ಕೃತಕ ಪ್ರೊಜೆಸ್ಟಿರಾನ್ ಹಾರ್ಮೋನ್ ಅನ್ನು ನಿಯಮಿತವಾಗಿ ಬಿಡುಗಡೆಗೊಳಿಸುವ ಗರ್ಭಾಶಯದೊಳಗೆ ಅಳವಡಿಸುವ ಕಾಪರ್ಟಿಯಂತಹ ಸಾಧನ. ಇದು ಬಹುತೇಕ ತಜ್ಞವೈದ್ಯರು ಚಿಕಿತ್ಸೆಗಾಗಿ ಬಳಸುವ ಸಾಧನವಾಗಿದೆ. ಇದು ಪ್ರತಿನಿತ್ಯ 20 ಮೈಕ್ರೋಗ್ರಾಂನಷ್ಟು ಪ್ರೊಜೆಸ್ಟ್ರಾನ್ ಹಾರ್ಮೋನನ್ನು ಸ್ಥಳಿಯವಾಗಿ ಬಿಡುಗಡೆಮಾಡುತ್ತದೆ. ಈಸ್ಟ್ರೋಜನ್ ಹೆಚ್ಚಳದಿಂದಾಗುವ ಅತಿರಕ್ತಸ್ರಾವವನ್ನು ಹೆಚ್ಚಿನ ಸಂದರ್ಭಗಳಲ್ಲಿ ನಿಯಂತ್ರಣಕ್ಕೆ ತರುತ್ತದೆ. ಹೆಚ್ಚು ದುಬಾರಿ ಕೂಡಾ ಅಲ್ಲ. ಹಲವು ಮಹಿಳೆಯರು ಇಂತಹ ಚಿಕಿತ್ಸೆ ಪಡೆದು ಗರ್ಭಕೋಶ ತೆಗೆಸುವ ನಿರ್ಧಾರವನ್ನು ಕೈಬಿಟ್ಟಿದ್ದಾರೆ. ಎಷ್ಟೋ ಮಂದಿಗೆ ಎರಡು–ಮೂರು ವರ್ಷಗಳಲ್ಲಿ ಮುಟ್ಟು ನಿಂತು ಹೋಗಬಹುದು. ಗರ್ಭಕೋಶ ತೆಗೆಸಿದಾಗ ಆಗುವ ಮೂಳೆಸವೆತ, ಹೃದಯ ದೌರ್ಬಲ್ಯದಂತಹ ಸಮಸ್ಯೆಗಳೂ ಹೆಚ್ಚು ಕಾಡವುದಿಲ್ಲ. ಆದರೆ ಈ ಚಿಕಿತ್ಸೆಯನ್ನು ತಜ್ಞವೈದ್ಯರು ಅವರ ಮೇಲ್ವಿಚಾರಣೆಯಲ್ಲಿಯೇ ಅವಶ್ಯಕ ಪರೀಕ್ಷೆಗಳನ್ನು ಮಾಡಿಸಿ ನಿರ್ಧರಿಸುತ್ತಾರೆ. ಇದಲ್ಲದೇ ಸೂಕ್ತ ಹಾರ್ಮೋನುಗಳ ಮಾತ್ರೆಗಳು, ಇಂಜೆಕ್ಷನ್ ಇತ್ಯಾದಿಗಳಿಂದಲೂ ಅತಿರಕ್ತಸ್ರಾವವನ್ನು ಕಡಿಮೆ ಮಾಡಬಹುದು. ಆದರೆ ಚಿಕಿತ್ಸೆ ಪಡೆಯದೇ ನಿರ್ಲಕ್ಷಿಸ ಬೇಡಿ. ರಕ್ತಹೀನತೆಯಿಂದ ಬಳಲುತ್ತಿದ್ದರೆ ಕಬ್ಬಿಣಾಂಶಗಳ ಮಾತ್ರೆ ಹಾಗೂ ಸೂಕ್ತ ಪೌಷ್ಟಿಕ ಆಹಾರವನ್ನು ಸೇವಿಸಿ. ನಿಮ್ಮ ಸಮಸ್ಯೆ ಸರಿಹೋಗುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ prajavani.net/health ಜಾಲತಾಣಕ್ಕೆ ಭೇಟಿ ನೀಡಬಹುದು

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

'ಜೈ ಭಾರತ್' ಸಮಾವೇಶ– ರಾಹುಲ್ ಮೊದಲ ಚುನಾವಣಾ ರ್‍ಯಾಲಿ • ಖರ್ಗೆ, ಪ್ರಿಯಾಂಕಾ, ಮೂವರು ಸಿ.ಎಂ ಭಾಗಿ

ಹೋರಾಟಕ್ಕೆ ವೇದಿಕೆ, ಪ್ರಚಾರಕ್ಕೆ ಚಾಲನೆ

• ಕೆ.ಓಂಕಾರ ಮೂರ್ತಿ

ಕೋಲಾರ: ರಾಹುಲ್ ಗಾಂಧಿ ಮೇಲಿನ ಶಿಕ್ಷೆ ಹಾಗೂ ಸಂಸತ್ ಸದಸ್ಯತ್ವದ ಅನರ್ಹತೆ ಹಿನ್ನೆಲೆಯಲ್ಲಿ ಸಂವಿಧಾನದ ರಕ್ಷಣೆ ವಿಚಾರವನ್ನು ಮುಂದಿಟ್ಟುಕೊಂಡು ಬೃಹತ್ ಹೋರಾಟಕ್ಕೆ ಮುನ್ನುಡಿ ಬರೆಯಲು ಹಾಗೂ ರಾಜ್ಯ ವಿಧಾನಸಭಾ ಚುನಾವಣೆಯ ಪ್ರಚಾರಕ್ಕೆ ಚಾಲನೆ ನೀಡಲು 'ಜೈ ಭಾರತ್' ಸಮಾವೇಶಕ್ಕೆ ನಗರದಲ್ಲಿ ಕಾಂಗ್ರೆಸ್‌ನಿಂದ ಭರದ ಸಿದ್ಧತೆ ನಡೆದಿದೆ.

ಏ. 10ರಂದು ಬೆಳಿಗ್ಗೆ 11.30ಕ್ಕೆ ಆರಂಭವಾಗಲಿರುವ ಸಮಾವೇಶದಲ್ಲಿ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಆಡಳಿತದ ಮೂರು ರಾಜ್ಯದ ಮುಖ್ಯಮಂತ್ರಿಗಳು, ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ಸೇರಿದಂತೆ ರಾಷ್ಟ್ರ ಹಾಗೂ ರಾಜ್ಯ ನಾಯಕರು ಪಾಲ್ಗೊಳ್ಳಲಿದ್ದಾರೆ. ಸಮಾವೇಶಕ್ಕೂ ಮುನ್ನ ಪ್ರತಿಭಟನಾ ರ್‍ಯಾಲಿ ನಡೆಸಲೂ ಪಕ್ಷ ಯೋಜನೆ ರೂಪಿಸಿದೆ.


'ಜೈ ಭಾರತ್' ಸಮಾವೇಶಕ್ಕೆ ಕೋಲಾರದಲ್ಲಿ ಕಾಂಗ್ರೆಸ್ ಸಿದ್ಧಪಡಿಸುತ್ತಿರುವ ವೇದಿಕೆ

ಸಮಾವೇಶಕ್ಕೆ ನಗರ ಹೊರವಲಯದ ಟಮಕದಲ್ಲಿ 11 ಎಕರೆ ವಿಶಾಲ ಪ್ರದೇಶದಲ್ಲಿ ಬೃಹತ್ ವೇದಿಕೆ ಸಿದ್ಧಪಡಿಸಲಾಗುತ್ತಿದೆ. ಪಕ್ಕದ ಆರ್.ಎಲ್. ಜಾಲಪ್ಪ ಆಸ್ಪತ್ರೆಗೆ ಸೇರಿದ ಜಾಗದಲ್ಲಿ ಮೂರು ಹೆಲಿಪ್ಯಾಡ್ ನಿರ್ಮಿಸಲಾಗುತ್ತಿದೆ. ಜಿಲ್ಲಾಧಿಕಾರಿ ಕಚೇರಿ ಬಳಿ 20 ಎಕರೆಯಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗುತ್ತಿದೆ.

2019ರ ಲೋಕಸಭಾ ಚುನಾವಣೆಯ ಪ್ರಚಾರದ ವೇಳೆ 'ಮೋದಿ ಉಪನಾಮ' ಉವಾಚ ಮಾಡಿದ ಕಾರಣ ರಾಹುಲ್ ಎರಡು ವರ್ಷ ಶಿಕ್ಷೆ ಹಾಗೂ ಸಂಸತ್ ಸದಸ್ಯತ್ವದ ಅನರ್ಹತೆಗೆ ಕಾರಣವಾಗಿದ್ದೇ ಕೋಲಾರ. ಹಾಗಾಗಿ, ಇಲ್ಲಿಂದಲೇ ಹೋರಾಟ ಆರಂಭಿಸಿ ಬಿಜೆಪಿಗೆ ಸಂದೇಶ ರವಾನಿಸಲು ಕಾಂಗ್ರೆಸ್ ಸಜ್ಜಾಗುತ್ತಿದೆ.

ಕನಿಕರ ಗಿಟ್ಟಿಸಲು ವೇದಿಕೆ: ಬಹುತೇಕ ಕ್ಷೇತ್ರಗಳಿಗೆ ಟಿಕೆಟ್ ಘೋಷಣೆಯಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿಂದಲೇ ಚುನಾವಣಾ ಪ್ರಚಾರದ ಕಹಳೆ ಮೊಳಗಿಸಲು ಈ ವೇದಿಕೆಯನ್ನೇ ಬಳಕೆ ಮಾಡಿಕೊಳ್ಳಲು ಕಾಂಗ್ರೆಸ್ ಮುಂದಾಗಿದೆ. ರಾಹುಲ್ ಮೇಲಿನ ಶಿಕ್ಷೆ ಹಾಗೂ ಅನರ್ಹತೆಯ ಕನಿಕರ ಗಿಟ್ಟಿಸಿಕೊಳ್ಳುವ ವೇದಿಕೆ ಇದಾಗಿದೆ ಎನ್ನಲಾಗುತ್ತಿದೆ.

ಅಭ್ಯರ್ಥಿ ಘೋಷಣೆ?: ಕೋಲಾರ ಕ್ಷೇತ್ರದಿಂದಲೂ ಸಿದ್ದರಾಮಯ್ಯ ಅವರನ್ನೇ ಕಣಕ್ಕಿಳಿಸುವಂತೆ ರಾಹುಲ್ ಮೇಲೆ ಒತ್ತಡ ಹೇರಲು ಕಾರ್ಯಕರ್ತರು ಸಿದ್ಧತೆ ನಡೆಸಿದ್ದಾರೆ. ಈಚೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಷಣಕ್ಕೆ ಕಾರ್ಯಕರ್ತರು ಅಡ್ಡಿಪಡಿಸಿದ್ದನ್ನು ಸ್ಮರಿಸಬಹುದು. ಎರಡನೇ ಪಟ್ಟಿಯಲ್ಲೂ ಕೋಲಾರಕ್ಕೆ ಅಭ್ಯರ್ಥಿ ಘೋಷಿಸಿಲ್ಲ. ಹೀಗಾಗಿ, ಅಂದೇ ಕೋಲಾರದ ಅಭ್ಯರ್ಥಿಯನ್ನು ಖುದ್ದಾಗಿ ರಾಹುಲ್ ಗಾಂಧಿ ಪ್ರಕಟಿಸುವ ನಿರೀಕ್ಷೆ ಇದೆ ಎಂದು ಪಕ್ಷದ ಮೂಲಗಳು ಹೇಳಿವೆ.

'ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸಲು ಮಾನಸಿಕವಾಗಿ ಸಿದ್ಧನಿದ್ದೇನೆ' ಎಂದು ಹೇಳಿರುವ ಸಿದ್ದರಾಮಯ್ಯ, ಈಗ ರಾಹುಲ್ ಒಪ್ಪಿಗೆಗೆ ಕಾಯುತ್ತಿದ್ದಾರೆ. ಈಗಾಗಲೇ, ವರುಣದಲ್ಲಿ ಅವರಿಗೆ ಟಿಕೆಟ್ ಘೋಷಣೆಯಾಗಿದೆ. ಸಮಾವೇಶಕ್ಕೆ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ ಜನರನ್ನು ಸೇರಿಸಲು ಪಕ್ಷದಿಂದ ಸಿದ್ಧತೆ ನಡೆಸಿದೆ.

ಮುಖ್ಯಾಂಶಗಳು

- 11 ಎಕರೆ ಪ್ರದೇಶದಲ್ಲಿ ವೇದಿಕೆ ನಿರ್ಮಾಣ– 3 ಹೆಲಿಪ್ಯಾಡ್ ಸಜ್ಜು
- ಅನರ್ಹತೆಗೆ ಕಾರಣವಾದ ಸ್ಥಳದಿಂದಲೇ ಹೋರಾಟ
- ಸಮಾವೇಶದಲ್ಲೇ ಕೋಲಾರಕ್ಕೆ ಅಭ್ಯರ್ಥಿ ಘೋಷಣೆ?

ಸಂವಿಧಾನ, ಪ್ರಜಾಪ್ರಭುತ್ವದ ರಕ್ಷಣೆಗೆ ನಡೆಯುತ್ತಿರುವ ಪ್ರತಿಭಟನಾ ರ್‍ಯಾಲಿ ಇದು. ಬಿಜೆಪಿಯ ದಮನಕಾರಿ ಕೆಲಸಗಳ ವಿರುದ್ಧ ಹೋರಾಟ ನಡೆಯಲಿದೆ

ಸಿ. ಲಕ್ಷ್ಮಿನಾರಾಯಣ
ಅಧ್ಯಕ್ಷ, ಜಿಲ್ಲಾ ಕಾಂಗ್ರೆಸ್ ಘಟಕ

ವಿನಯ ವರ್ಸಸ್ ಅಮೃತ: ಅಭಿಮಾನಿಗಳಲ್ಲಿ ವಾಕ್ಸಮರ

ಧಾರವಾಡ: ವಿನಯ ಕುಲಕರ್ಣಿಗೆ ಕಾಂಗ್ರೆಸ್ ಟಿಕೆಟ್ ಘೋಷಣೆಯಾಗುತ್ತಿದ್ದಂತೆ ಧಾರವಾಡ ಕ್ಷೇತ್ರ ವ್ಯಾಪ್ತಿಯನ್ನೂ ಒಳಗೊಂಡಂತೆ ಜಿಲ್ಲೆಯ ಹಲವೆಡೆ ಯುವಕರು ತಮ್ಮ ಮೊಬೈಲ್ ಸ್ಟೇಟಸ್‌ನಲ್ಲಿ ವಿನಯ ಕುಲಕರ್ಣಿ ಚಿತ್ರ ಹಾಗೂ ಹಿಂದೆ ಅವರು ಆಡಿದ, 'ನಾನೇ ಹತ್ತು ಜನರಿಗೆ ಟಿಕೆಟ್ ಕೊಡಿಸಿದ್ದೇನೆ. ನನ್ನ ಟಿಕೆಟ್ ತಪ್ಪಿಸುವವರು ಯಾರು?' ಎಂಬ ಮಾತಿನ ತುಣಕನ್ನು ಇಟ್ಟು ಸಂಭ್ರಮಿಸಿದರು.

'ಗಾಡಿಯಲ್ಲಿ ಗುದ್ದಲಿ ಇಟ್ಟುಕೊಂಡು ತಿರುಗಾಡುವ ಶೋಕಿ ಶಾಸಕ ಸಾಕು. ಅಭಿವೃದ್ಧಿಯ ಹರಿಕಾರ, ಕೆಲಸಗಾರ ಕುಲಕರ್ಣಿ ಬೇಕು', 'ಮೋದಿ ಹೆಸರಿನಲ್ಲಿ ಚುನಾವಣೆ ಮಾಡುವವರು ಅವರ ಕೆಲಸ ಹೇಳಿ. ನಾನು ವಿನಯ ಕುಲಕರ್ಣಿ ಅಣ್ಣ ಮಾಡಿದ ಕೆಲಸ ಹೇಳುವೆ. ಓಪನ್ ಚಾಲೆಂಜ್' ಎಂಬ ಒಕ್ಕಣೆಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ದೇಸಾಯಿ ಪರ ಪೋಸ್ಟ್ ಹಾಕಿರುವ ಕೆಲವರು, 'ಮನೆಮನೆಗೆ ನೀರು ತಂದವರು ಬಿಜೆಪಿಯವರು', 'ನೆನಪಿಟ್ಟುಕೊಳ್ಳಿ ಜಿಲ್ಲೆಯಿಂದ ಏಕೆ ಹೊರಗಿಟ್ಟಿರೋದು' ಎಂಬಿತ್ಯಾದಿ ಪ್ರತ್ಯುತ್ತರದ ಪೋಸ್ಟ್‌ಗಳನ್ನು ಹಾಕಿ ವಿನಯ ಅಭಿಮಾನಿಗಳಿಗೆ ತಿರುಗೇಟು ನೀಡಿದ್ದಾರೆ.

'ಬಾರೋ ಬಾರೋ ಎಂದು ಕರೆಯುತ್ತಿದ್ದೆ. ನಾವು ಬಂದಾಯ್ತು. ನೀನೆಲ್ಲಿದ್ದೀಯೋ? ನಿಂದೇ ಗ್ಯಾರಂಟಿ ಇಲ್ವಲ್ಲ' ಎಂದೂ ದೇಸಾಯಿ ಅವರನ್ನು ಉದ್ದೇಶಿಸಿ ಕೆಲವರು ಕಿಚಾಯಿಸಿದ್ದಾರೆ. ಕಾಂಗ್ರೆಸ್ ಟಿಕೆಟ್ ಘೋಷಣೆ ನಂತರ ನಡೆದಿರುವ ಈ ಬೆಳವಣಿಗೆ, ಚುನಾವಣೆ ಸಮೀಪಿಸುವಾಗ ಇನ್ನಷ್ಟು ರಂಗೇರುವ ಲಕ್ಷಣ ಕುರಿತು ಜನರು ಚರ್ಚಿಸುತ್ತಿದ್ದಾರೆ.


ಮತದಾನ ಜಾಗೃತಿ
ಗದಗ ಜಿಲ್ಲೆ ಲಕ್ಷ್ಮೇಶ್ವರ ಸಮೀಪದ ಗೊಜನೂರುನಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುತ್ತಿರುವವರಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ ಶುಕ್ರವಾರ ಮತದಾನ ಕುರಿತು ಜಾಗೃತಿ ಮೂಡಿಸಲಾಯಿತು –ಪ್ರಜಾವಾಣಿ ಚಿತ್ರ

ಆಕಾಂಕ್ಷಿಗಳು 'ಕೈ' ಕೊಡುವ ಆತಂಕ

ಎರಡನೇ ಪಟ್ಟಿ ಪ್ರಕಟಿಸಿದ ಬೆನ್ನಲ್ಲೇ ಕಾಂಗ್ರೆಸ್ ಪಕ್ಷಕ್ಕೆ ಬಂಡಾಯದ ಬಿಸಿ ತಟ್ಟಿದೆ. ಟಿಕೆಟ್ ಸಿಗದ ಆಕಾಂಕ್ಷಿಗಳು ಪಕ್ಷ ತೊರೆಯಲು ಸಜ್ಜಾಗಿರುವುದು ಪಕ್ಷಕ್ಕೆ ತಲೆನೋವು ತರಿಸಿದೆ. ಬಂಡಾಯ ಶಮನಕ್ಕೆ ಪಕ್ಷ ಕಸರತ್ತು ನಡೆಸುತ್ತಿದೆಯಾದರೂ, ಅತೃಪ್ತರ ಮನವೊಲಿಸುವುದು ಕಷ್ಟಕರವಾಗಿ ಪರಿಣಮಿಸಿದೆ. ಕೆಲವರು ಪಕ್ಷ ತೊರೆದು ಅನ್ಯ ಪಕ್ಷ ಸೇರಿ, ಚುನಾವಣಾ ಕಣಕ್ಕೆ ಇಳಿಯುವುದಾಗಿ ಪ್ರಕಟಿಸಿದ್ದರೆ, ಇನ್ನೂ ಕೆಲವರು ಪಕ್ಷೇತರವಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ

14ರಂದು ರಘು ಆಚಾರ್ ಜೆಡಿಎಸ್ ಸೇರ್ಪಡೆ

ಚಿತ್ರದುರ್ಗ: ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ಬಂಡಾಯದ ಕಹಳೆ ಮೊಳಗಿಸಿರುವ ವಿಧಾನ ಪರಿಷತ್ ಮಾಜಿ ಸದಸ್ಯ ಜಿ.ರಘು ಆಚಾರ್ ಇದೇ 14ರಂದು ಜೆಡಿಎಸ್ ಸೇರುವುದಾಗಿ ಘೋಷಿಸಿದ್ದಾರೆ.

ಚುನಾವಣೆಯಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವ ಸಾಧ್ಯತೆ ಇದ್ದು, ಇದೇ 17ರಂದು ನಾಮಪತ್ರ ಸಲ್ಲಿಸಬಹುದು ಎಂದು ಮೂಲಗಳು ತಿಳಿಸಿವೆ.

'ನಾನು ಅಧಿಕಾರದ ಹಿಂದೆ ಹೋದವನಲ್ಲ. ಸ್ವಾಭಿಮಾನಕ್ಕೆ ಚ್ಯುತಿಯುಂಟು ಮಾಡಿದವರಿಗೆ ತಕ್ಕ ಉತ್ತರ ನೀಡಲಿದ್ದೇನೆ. ಪೂರ್ವ ಷರತ್ತು ವಿಧಿಸದೇ ಜೆಡಿಎಸ್ ಸೇರ್ಪಡೆಯಾಗುತ್ತಿದ್ದೇನೆ. ಟಿಕೆಟ್ ವಿಚಾರ ಇನ್ನೂ ತೀರ್ಮಾನವಾಗಿಲ್ಲ' ಎಂದು ಅವರು ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಅವರೊಂದಿಗೆ ಚರ್ಚಿಸಿದ ಬಳಿಕ ತಿಳಿಸಿದರು. 'ವಿಶ್ವಕರ್ಮ ಸಮುದಾಯದ ರಘು ಆಚಾರ್ ಅವರನ್ನು ಕಾಂಗ್ರೆಸ್ ನಿರ್ಲಕ್ಷಿಸಿದೆ. ಅವರಿಗೆ ಆಗಿರುವ ಅನ್ಯಾಯ ಗಮನಕ್ಕೆ ಬಂದಿದೆ. ಮನೆಗೆ ಭೇಟಿ ನೀಡಿ ಅವರನ್ನು ಪಕ್ಷಕ್ಕೆ ಆಹ್ವಾನಿಸಿದ್ದೇನೆ. ಬೇಷರತ್ತಾಗಿ ಒಪ್ಪಿದ್ದಾರೆ. ಬೆಂಗಳೂರಿನಲ್ಲಿ ಪಕ್ಷ ಸೇರಲಿದ್ದಾರೆ' ಎಂದು ಟಿ.ಎ.ಶರವಣ ಮಾಹಿತಿ ನೀಡಿದರು.

ಮನವೊಲಿಕೆ ಯತ್ನ ವಿಫಲ: ಕಾಂಗ್ರೆಸ್ ಅಭ್ಯರ್ಥಿ ಕೆ.ಸಿ. ವೀರೇಂದ್ರ ನೇತೃತ್ವದ ನಿಯೋಗ ರಘು ಆಚಾರ್ ಅವರ ಮನೆಗೆ ಭೇಟಿ ನೀಡಿ ಮನವೊಲಿಸಲು ಯತ್ನಿಸಿದರೂ ಅವರು ತಮ್ಮ ನಿಲುವು ಬದಲಿಸಲಿಲ್ಲ.

ಬಿಕ್ಕಿ ಬಿಕ್ಕಿ ಅತ್ತ ತಹಸೀಲ್ದಾರ್

ಹಾನಗಲ್ (ಹಾವೇರಿ) : '50 ವರ್ಷಗಳಿಂದ ಕಟ್ಟಿಬೆಳೆಸಿದ ಕಾಂಗ್ರೆಸ್ ಪಕ್ಷವನ್ನು ತೊರೆಯುತ್ತಿದ್ದೇನೆ' ಎಂದು ಇತ್ತೀಚೆಗಷ್ಟೇ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗಿರುವ ಮಾಜಿ ಶಾಸಕ ಮನೋಹರ ತಹಸೀಲ್ದಾರ್ ಬಿಕ್ಕಿಬಿಕ್ಕಿ ಅತ್ತರು.

ಶುಕ್ರವಾರ ಹಾನಗಲ್ ನಲ್ಲಿ ನಡೆದ ಪಂಚರತ್ನ ಯಾತ್ರೆ ಬಹಿರಂಗ ಸಮಾವೇಶದಲ್ಲಿ ಅವರು ಮಾತನಾಡಿದರು.

'ಜೆಡಿಎಸ್ ನನಗೆ ರಾಜಕೀಯವಾಗಿ ಮರುಜನ್ಮ ನೀಡಿದೆ. ಉಪ ಚುನಾವಣೆಯಲ್ಲಿ ನಾನು ತಿರುಗಿ ಬಿದ್ದಿದ್ದರೆ ಕಾಂಗ್ರೆಸ್ ಮಾನ ಅಂದೇ ಹೋಗುತ್ತಿತ್ತು' ಎಂದು ಹೇಳಿದರು.

'ಜೆಡಿಎಸ್ ನಂಬಿ ಬಂದಿರುವ ಮನೋಹರ ತಹಸೀಲ್ದಾರ್ ಅವರ ಅಳಿವು ಉಳಿವಿನ ಪ್ರಶ್ನೆ ಇಲ್ಲಿನ ಮತದಾರರ ಕೈಯಲ್ಲಿದೆ. ಐದು ದಶಕದ ಅವರ ಸೇವೆಗೆ ಮತದಾರರು ಸ್ಪಂದಿಸಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮನವಿ ಮಾಡಿದರು.

ಪಕ್ಷೇತರ ಸ್ಪರ್ಧೆ: ಕೃಷ್ಣಮೂರ್ತಿ

ಉಡುಪಿ: ಉಡುಪಿ ವಿಧಾನಸಭಾ ಕ್ಷೇತ್ರದ ಟಿಕೆಟ್ ಕೈತಪ್ಪಿದ ಬೆನ್ನಲ್ಲೇ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದ ಕೃಷ್ಣಮೂರ್ತಿ ಆಚಾರ್ಯ, ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ನಿರ್ಧರಿಸಿದ್ದಾರೆ.

18 ವರ್ಷಗಳಿಂದ ನಿಷ್ಠೆಯಿಂದ ಪಕ್ಷಕ್ಕಾಗಿ ದುಡಿದರೂ ಟಿಕೆಟ್ ಸಿಗಲಿಲ್ಲ. ಆದ್ದರಿಂದ, ಕಾರ್ಯಕರ್ತರ ಹಾಗೂ ಅಭಿಮಾನಿಗಳ ಸಲಹೆಯಂತೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ತೀರ್ಮಾನಿಸಿರುವುದಾಗಿ ಕೃಷ್ಣಮೂರ್ತಿ ಆಚಾರ್ಯ ತಿಳಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿಯಾಗಲು ಹರಪಳ್ಳಿ ರವೀಂದ್ರ ಚಿಂತನೆ

ಮಡಿಕೇರಿ: ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ಆಕಾಂಕ್ಷಿ ಹರಪಳ್ಳಿ ರವೀಂದ್ರ ಬಂಡಾಯದ ಸುಳಿವು ನೀಡಿದ್ದಾರೆ.

'ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಚಿಂತನೆ ನಡೆಸಿರುವೆ. ಏ.8ರಂದು ಬೆಂಬಲಿಗರ ಸಭೆಯಲ್ಲಿ ನಿರ್ಧಾರ ಕೈಗೊಳ್ಳುವೆ' ಎಂದು ಅವರು ಹೇಳಿ ದ್ದಾರೆ. ಜಿಲ್ಲಾ ಕಾಂಗ್ರೆಸ್ ಸಭೆಗೂ ಅವರನ್ನು ಆಹ್ವಾನಿಸಿರಲಿಲ್ಲ.

ಕಾಂಗ್ರೆಸ್ ತೊರೆದ ಶಫಿ ಅಹ್ಮದ್

ತುಮಕೂರು: ತುಮಕೂರು ನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ತಮ್ಮ ಅಳಿಯ ಹಾಗೂ ಮಾಜಿ ಶಾಸಕ ರಫೀಕ್ ಅಹ್ಮದ್ ಅವರಿಗೆ ಟಿಕೆಟ್ ಸಿಗದಿರುವುದರಿಂದ ಬೇಸತ್ತು ಮಾಜಿ ಶಾಸಕ ಶಫಿ ಅಹ್ಮದ್ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜೀನಾಮೆ ಪತ್ರ ಕಳುಹಿಸಿಕೊಟ್ಟಿದ್ದಾರೆ. '50 ವರ್ಷಗಳ ಕಾಲ ಪಕ್ಷಕ್ಕೆ ದುಡಿದಿದ್ದು, ಎರಡು ಬಾರಿ ಶಾಸಕನಾಗಿ ಕಾರ್ಯ ನಿರ್ವಹಿಸಿದ್ದೇನೆ. ರಫೀಕ್ ಅಹ್ಮದ್ ಒಮ್ಮೆ ಶಾಸಕರಾಗಿದ್ದರು. ಆದರೆ, ನಮ್ಮನ್ನು ಕಡೆಗಣಿಸಲಾಗಿದೆ' ಎಂದು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಕಲ್ಲು ತೂರಾಟ: 18 ಮಂದಿ ಬಂಧನ

ಯಾದಗಿರಿ: ಜಿಲ್ಲೆಯ ಹುಣಸಗಿ ತಾಲ್ಲೂಕಿನ ಕೋಡೆಕಲ್ಲ ಗ್ರಾಮದಲ್ಲಿ ಗುರುವಾರ ನಡೆದ ಬಿಜೆಪಿ- ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ 18 ಜನರನ್ನು ಬಂಧಿಸಲಾಗಿದೆ. ಸುರಪುರದ ಬಿಜೆಪಿ ಶಾಸಕ ನರಸಿಂಹ ನಾಯಕ (ರಾಜೂಗೌಡ), ಮಾಜಿ ಶಾಸಕ, ಕಾಂಗ್ರೆಸ್‌ನ ರಾಜಾ ವೆಂಕಟಪ್ಪ ನಾಯಕ ವಿರುದ್ಧ ಕೋಡೆಕಲ್ಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಲ್ಲು ತೂರಾಟ ಪ್ರಕರಣದ ಹಿನ್ನೆಲೆಯಲ್ಲಿ ನಾಲ್ಕು ಪ್ರಕರಣ ದಾಖಲಾಗಿದ್ದು, 120 ಆರೋಪಿಗಳು ಭಾಗಿಯಾಗಿದ್ದಾರೆ. ರಾಜಾ ವೆಂಕಟಪ್ಪ ನಾಯಕ ಸೇರಿ 59 ಕಾಂಗ್ರೆಸ್ ಕಾರ್ಯಕರ್ತರು ಮತ್ತು ರಾಜೂಗೌಡ ಸೇರಿ 59 ಬಿಜೆಪಿ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪರಿಸ್ಥಿತಿ ಹತೋಟಿಯಲ್ಲಿದ್ದು, ಏಪ್ರಿಲ್ 8ರವರೆಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ವೇದಮೂರ್ತಿ ತಿಳಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರಾದ ಬಸವರಾಜ್ ಪ್ರಭು ಅಮಲ್ಯಾಳ, ಹನುಮಂತ್ರಾಯ ಹನುಮಂತಪ್ಪ ಮಾರನಾಳ, ಮಂಜುನಾಥ ಬಂಡೊಳ್ಳಿ, ಹನುಮಂತಪ್ಪ ಅವರಿಗೆ ಗಾಯಗಳಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಸುರಪುರ ಕ್ಷೇತ್ರದಲ್ಲಿ ಭಯದ ವಾತಾವರಣ ನಿರ್ಮಿಸಲು ರಾಜಾ ವೆಂಕಟಪ್ಪ ನಾಯಕ ಉದ್ದೇಶಪೂರ್ವಕವಾಗಿ ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ ನಡೆಸಲು ಕಾಂಗ್ರೆಸ್ ಕಾರ್ಯಕರ್ತರನ್ನು ಪ್ರಚೋದಿಸಿದ್ದಾರೆ' ಎಂದು ನರಸಿಂಹ ನಾಯಕ (ರಾಜೂಗೌಡ) ಆರೋಪಿಸಿದ್ದಾರೆ.

'ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಬಿಜೆಪಿ ಕಾರ್ಯಕರ್ತರು ಕಲ್ಲು ತೂರಾಟ ಮಾಡಿದ್ದಾರೆ. ನಾವು ಪೂರ್ವನಿಯೋತವಾಗಿ ಮಾಡಿದ್ದರೆ ಅದು ಬೇರೆಯಾಗುತ್ತಿತ್ತು. ನಮ್ಮ ವಾಹನಗಳು ಜಖಂ ಆಗಿವೆ. ಕಾಂಗ್ರೆಸ್ ಪಕ್ಷದ ಕಚೇರಿಗೆ ತೆರಳಲು ನಾನು ಯಾರಿಂದ ಯಾಕೆ ಅನುಮತಿ ಪಡೆಯಬೇಕು' ಎಂದು ರಾಜಾ ವೆಂಕಟಪ್ಪ ನಾಯಕ ಪ್ರಶ್ನಿಸಿದ್ದಾರೆ.

ಬಾಗೇಪಲ್ಲಿ ಚೆಕ್‌ಪೋಸ್ಟ್: 5.5 ಕೆ.ಜಿ ಚಿನ್ನ ಜಪ್ತಿ

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ (ಚಿಕ್ಕಬಳ್ಳಾಪುರ ಜಿಲ್ಲೆ): ಬಾಗೇಪಲ್ಲಿ ಚೆಕ್‌ಪೋಸ್ಟ್‌ನಲ್ಲಿ ಗುರುವಾರ ಕಾರಿನಲ್ಲಿ ಸಾಗಿಸುತ್ತಿದ್ದ ₹ 2.66 ಕೋಟಿ ಮೌಲ್ಯದ 5.585 ಕೆ.ಜಿ ಚಿನ್ನವನ್ನು ಚುನಾವಣಾಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಆಂಧ್ರಪ್ರದೇಶದ ಕರ್ನೂಲಿನ ಚಿನ್ನಾಭರಣ ಮಾರಾಟ ಅಂಗಡಿಯಿಂದ ವಿಜಯವಾಡದ ಚಿನ್ನಾಭರಣ ಮಾರಾಟ ಅಂಗಡಿಗೆ ಈ ಚಿನ್ನ ಸಾಗಿಸಲಾಗುತ್ತಿತ್ತು ಎಂದು ಸಾಗಾಣಿಕೆದಾರರು ತಿಳಿಸಿದ್ದಾರೆ. ಆದರೆ, ಗಡಿ ಭಾಗದ ಬಾಗೇಪಲ್ಲಿ ಚೆಕ್ ಪೋಸ್ಟ್‌ಗೆ ಏಕೆ ಬಂದರು ಎಂದು ಅಧಿಕಾರಿಗಳು ಅನುಮಾನಿಸಿದ್ದಾರೆ.

'ನಮ್ಮ ಗಡಿ ಭಾಗದ ಚೆಕ್‌ಪೋಸ್ಟ್‌ಗೆ ಬಂದಿದ್ದರಿಂದ ಚಿನ್ನ ವಶಕ್ಕೆ ಪಡೆದು ದೂರು ದಾಖಲಿಸಲಾಗಿದೆ. ಸದ್ಯಕ್ಕೆ ಚಿನ್ನವನ್ನು ನ್ಯಾಯಾಲಯದ ವಶಕ್ಕೆ ನೀಡಲಾಗಿದೆ' ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಬೆಳ್ಳಿ, ಬಿಸ್ಕತ್,ನಗದು ಜಪ್ತಿ (ಮುಳಬಾಗಿಲು ವರದಿ): ಪ್ರತ್ಯೇಕ ಪ್ರಕರಣಗಳಲ್ಲಿ ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ ₹ 3 ಲಕ್ಷ ಮೌಲ್ಯದ 4.9 ಕೆ.ಜಿ ತೂಕದ ಬೆಳ್ಳಿ ಬಿಸ್ಕತ್ ಹಾಗೂ ₹ 5 ಲಕ್ಷ ನಗದನ್ನು ಮುಳಬಾಗಿಲು ಗ್ರಾಮಾಂತರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಅವಿರೋಧ ಆಯ್ಕೆ ಬೇಡ, ಕುಸ್ತಿನೇ ಬೇಕು'

ಹಾವೇರಿ: 'ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿರುವ ಇತಿಹಾಸ ಇದೆ. ಆದರೆ, ನನಗೆ ಅವಿರೋಧ ಆಯ್ಕೆ ಬೇಡ. ಕುಸ್ತಿನೇ ಬೇಕು. ಯಾರು ಬೇಕಾದರೂ ಕಣಕ್ಕೆ ಬನ್ನಿ, ಕುಸ್ತಿ ಆಡಲು ಸಿದ್ಧನಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾಂಗ್ರೆಸ್ ಅಭ್ಯರ್ಥಿಗೆ ಪಂಥಾಹ್ವಾನ ನೀಡಿದರು.

ಶಿಗ್ಗಾವಿ ಪಟ್ಟಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಕಾಂಗ್ರೆಸ್ ಮುಖಂಡರನ್ನು ಬಿಜೆಪಿಗೆ ಬರಮಾಡಿಕೊಂಡ ನಂತರ ಅವರು ಮಾತನಾಡಿದರು.

'ಇಂಟರ್ ನ್ಯಾಷನಲ್ ಪಕ್ಷ ಸೇರಲು ಹೋದವರು ದತ್ತ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ವೈಎಸ್‌ವಿ ದತ್ತ ಅವರ ಬಗ್ಗೆ ನನಗೆ ಗೊತ್ತಿಲ್ಲ. ಅವರೆಲ್ಲ ದೊಡ್ಡವರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಶುಕ್ರವಾರ ವ್ಯಂಗ್ಯವಾಡಿದರು.

ಬೀರೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮದು ಸಣ್ಣ ಪಕ್ಷ. ಅವರು ಇಂಟರ್‌ನ್ಯಾಷನಲ್ ಪಕ್ಷ ಸೇರಲು ಹೋದವರು. ಜೆಡಿಎಸ್‌ನಲ್ಲಿ ಅವರಿಗೇನು ಸಿಗುತ್ತದೆ' ಎಂದು ಛೇಡಿಸಿದರು. 'ಈಗಾಗಲೇ ಟಿಕೆಟ್ ಘೋಷಣೆ ಯಾಗಿರುವ ಕ್ಷೇತ್ರದಲ್ಲಿ ಅಭ್ಯರ್ಥಿ ಕ್ರಿಯಾಶೀಲರಾಗಿಲ್ಲದಿದ್ದರೆ ಕರೆಸಿ ಚರ್ಚಿಸುತ್ತೇನೆ. ಬದಲಾವಣೆ ಮಾಡಬೇಕಾದ ಸಂದರ್ಭ ಬಂದರೆ ಮಾಡುತ್ತೇವೆ' ಎಂದು ತಿಳಿಸಿದರು.

ಅಭಿಮಾನಿಗಳಿಗೆ ದತ್ತ ಪತ್ರ

ವೈಎಸ್‌ವಿ ದತ್ತ ಅವರು ತಮ್ಮ ಮುಂದಿನ ನಡೆಯ ಕುರಿತು ಚರ್ಚಿಸಲು ಇದೇ 9ರಂದು ಕಡೂರಿನಲ್ಲಿ ಅಭಿಮಾನಿಗಳ ಸಭೆ ಕರೆದಿದ್ದಾರೆ. ಈ ಬಗ್ಗೆ ಅಭಿಮಾನಿಗಳಿಗೆ ಪತ್ರ ಬರೆದಿರುವ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ಸಭೆ ಆರಂಭವಾಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಅಭಿಮಾನಿಗಳಲ್ಲಿ ಮನವಿ ಮಾಡಿದ್ದಾರೆ. ಈ ಪತ್ರದ ಪ್ರತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಮೂವರು ಶಾಸಕರಿಂದ ಸಿದ್ದರಾಮಯ್ಯಗೆ ದುಂಬಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ಕೇಂದ್ರೀಯ ಚುನಾವಣಾ ಸಮಿತಿ (ಸಿಇಸಿ) ಪ್ರಕಟಿಸಿರುವ ಎರಡು ಪಟ್ಟಿಗಳಲ್ಲೂ ಟಿಕೆಟ್ ಖಾತರಿಯಾಗದ ಕಾಂಗ್ರೆಸ್‌ನ ಆರು ಶಾಸಕರ ಪೈಕಿ ಮೂವರು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿಮಾಡಿದ್ದು, ಅವಕಾಶ ಕೈತಪ್ಪದಂತೆ ಬೆಂಬಲಕ್ಕೆ ನಿಲ್ಲುವಂತೆ ಒತ್ತಡ ಹೇರಿದ್ದಾರೆ.

ಎಐಸಿಸಿ ಕೇಂದ್ರೀಯ ಚುನಾವಣಾ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳಿದ್ದ ಸಿದ್ದರಾಮಯ್ಯ, ಗುರುವಾರ ರಾತ್ರಿ ಬೆಂಗಳೂರಿಗೆ ವಾಪಸಾದರು. ಪುಲಕೇಶಿನಗರ ಕ್ಷೇತ್ರದ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ, ಹರಿಹರ ಕ್ಷೇತ್ರದ ಶಾಸಕ ಎಸ್. ರಾಮಪ್ಪ ಮತ್ತು ಲಿಂಗಸಗೂರು ಕ್ಷೇತ್ರದ ಶಾಸಕ ಡಿ.ಎಸ್. ಹೂಲಗೇರಿ ಅವರು ತಮ್ಮ ಬೆಂಬಲಿಗರೊಂದಿಗೆ ಬಂದು ಭೇಟಿಮಾಡಿದರು. ತಮಗೆ ಟಿಕೆಟ್ ಕೈತಪ್ಪದಂತೆ ಹೈಕಮಾಂಡ್ ಮೇಲೆ ಒತ್ತಡ ಹೇರಬೇಕು. ವಿಳಂಬ ಆಗದಂತೆ ವರಿಷ್ಠರ ಮನವೊಲಿಸಬೇಕು ಎಂದು ಮೂವರೂ ಶಾಸಕರು ಒತ್ತಡ ಹೇರಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಟಿಕೆಟ್ ಭರವಸೆ ನೀಡಿರಲಿಲ್ಲ'

ಬೆಂಗಳೂರು: 'ಇತರ ಪಕ್ಷಗಳಿಂದ ಕಾಂಗ್ರೆಸ್ ಸೇರಿರುವ ಯಾರಿಗೂ ಟಿಕೆಟ್ ಕೊಡುವ ಭರವಸೆಯನ್ನು ನಾವು ನೀಡಿರಲಿಲ್ಲ. ಎಲ್ಲರೂ ಬೇಷರತ್ತಾಗಿ ಸೇರಿದ್ದು, ಗೆಲುವಿನ ಸಾಧ್ಯತೆಯ ವರದಿಗಳ ಆಧಾರದಲ್ಲೇ ಅಭ್ಯರ್ಥಿಗಳ ಆಯ್ಕೆ ನಡೆಯುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಟಿಕೆಟ್ ಕೈತಪ್ಪಿರುವ ಕುರಿತು ಮಾಜಿ ಶಾಸಕ ವೈ.ಎಸ್.ವಿ. ದತ್ತ ನೀಡಿದ್ದ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಯಾರನ್ನೇ ಪಕ್ಷ ಸೇರಿಸಿಕೊಳ್ಳುವಾಗಲೂ ಕಾಂಗ್ರೆಸ್ ಟಿಕೆಟ್ ಭರವಸೆ ನೀಡುವುದಿಲ್ಲ. ಹಾಲಿ ಶಾಸಕರಿಗೂ ಇದು ಅನ್ವಯ. ಅಸಮಾಧಾನ ಇರುವವರ ಜತೆ ಮಾತನಾಡುತ್ತೇವೆ' ಎಂದರು.

ಸಿಇಸಿ ಸಭೆಯಲ್ಲಿ ಪಾಲ್ಗೊಳ್ಳಲು ಬೊಮ್ಮಾಯಿ, ಬಿಎಸ್‌ವೈ ದೆಹಲಿಗೆ ದೌಡು

ಬಿಜೆಪಿ ಪಟ್ಟಿಗೆ ಇಂದು ಅಂತಿಮ ರೂಪ?

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಬಿಜೆಪಿ ಅಭ್ಯರ್ಥಿಗಳ ಪಟ್ಟಿಗೆ ಅಂತಿಮ ರೂಪ ನೀಡಲು ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಶನಿವಾರ ಹಾಗೂ ಭಾನುವಾರ ಸಭೆ ಸೇರಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪಕ್ಷದ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಶುಕ್ರವಾರ ಸಂಜೆ ದೆಹಲಿಗೆ ಬಂದಿದ್ದಾರೆ. ಶನಿವಾರ ನಡೆಯುವ ಸಭೆಯಲ್ಲಿ ಉಭಯ ನಾಯಕರು ಭಾಗಿಯಾಗಲಿದ್ದಾರೆ.

ಪಕ್ಷದ ರಾಜ್ಯ ಚುನಾವಣಾ ಸಮಿತಿಯು ಈ ವಾರದಲ್ಲಿ ಹಲವು ಸುತ್ತಿನ ಸಭೆಗಳನ್ನು ನಡೆಸಿ ಪ್ರತಿ ಕ್ಷೇತ್ರಕ್ಕೆ 2–3 ಆಕಾಂಕ್ಷಿಗಳ ಹೆಸರನ್ನು ಅಂತಿಮಗೊಳಿಸಿದೆ. ಪಕ್ಷದ ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮತ್ತಿತರರು ಶುಕ್ರವಾರ ಸಭೆ ಸೇರಿಸಿ ಪಟ್ಟಿಯ ಕುರಿತು ಸಮಾಲೋಚನೆ ನಡೆಸಿದರು. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್, ಅರುಣ್ ಸಿಂಗ್ ಮತ್ತಿತರ ಜತೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಶುಕ್ರವಾರ ರಾತ್ರಿ ಸಭೆ ನಡೆಸಿ ಚರ್ಚಿಸಿದರು.

ಚುನಾವಣಾ ಸಮಿತಿ ಸಭೆ ಶನಿವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆಯಲಿದ್ದು, ಆ ಬಳಿಕ ಬಸವರಾಜ ಬೊಮ್ಮಾಯಿ ಅವರು ರಾಜ್ಯಕ್ಕೆ ಸಂಜೆ ನಿರ್ಗಮಿಸಲಿದ್ದಾರೆ. ಬಂಡೀಪುರಕ್ಕೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಭೇಟಿ ನೀಡಲಿದ್ದು, ಈ ವೇಳೆ ಮುಖ್ಯಮಂತ್ರಿ ಇರಲಿದ್ದಾರೆ. ಅಗತ್ಯ ಬಿದ್ದರೆ ಭಾನುವಾರ ಮತ್ತೊಮ್ಮೆ ದೆಹಲಿಗೆ ಬರಲಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರಧಾನಿ ದೆಹಲಿಗೆ ವಾಪಸಾದ ಬಳಿಕ ಭಾನುವಾರ ಸಂಜೆ ಕೇಂದ್ರ ಸಂಸದೀಯ ಮಂಡಳಿಯ ಸಭೆ ನಡೆಯಲಿದೆ. ಭಾನುವಾರ ತಡ ರಾತ್ರಿ ವೇಳೆಗೆ ಮೊದಲ ಪಟ್ಟಿ ಬಿಡುಗಡೆಯಾಗುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹಲವು ಟಿಕೆಟ್ ಆಕಾಂಕ್ಷಿಗಳು ಮುಖ್ಯಮಂತ್ರಿ ಅವರನ್ನು ಶುಕ್ರವಾರ ಭೇಟಿ ಮಾಡುವ ಪ್ರಯತ್ನ ನಡೆಸಿದರು. ಆದರೆ, ಯಾರಿಗೂ ಅವಕಾಶ ಸಿಗಲಿಲ್ಲ.

'ಶನಿವಾರ ಬೆಳಿಗ್ಗೆ 10 ಗಂಟೆಗೆ ಜೆ.ಪಿ.ನಡ್ಡಾ ಮನೆಯಲ್ಲಿ ಸಭೆ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಬಂಡೀಪುರದಿಂದ ಭಾನುವಾರ ವಾಪಸ್ ಬಂದ ಬಳಿಕ ಸಂಜೆ 6ಕ್ಕೆ ಸಂಸದೀಯ ಮಂಡಳಿ ಸಭೆ ನಡೆಯಲಿದೆ' ಎಂದು ಯಡಿಯೂರಪ್ಪ ಅವರು ಸುದ್ದಿಗಾರರಿಗೆ ತಿಳಿಸಿದರು.

ಬಸವರಾಜ್ ತೊಳಲಾಟ

ತುಮಕೂರು ನಗರ ಕ್ಷೇತ್ರದಲ್ಲಿ ಪುತ್ರ ಜ್ಯೋತಿ ಗಣೇಶ್ (ಹಾಲಿ ಶಾಸಕ) ಅವರಿಗೆ ಟಿಕೆಟ್ ತಪ್ಪಿಸಲು ಪಕ್ಷದೊಳಗೆ ಒಂದು ಗುಂಪು ಪ್ರಯತ್ನ ನಡೆಸಿದೆ ಎಂದು ಸುಳಿವು ಅರಿತ ಅಲ್ಲಿನ ಸಂಸದ ಜಿ.ಎಸ್.ಬಸವರಾಜ್ ಅವರು ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಲು ಶುಕ್ರವಾರ ಸಂಜೆ ಯತ್ನಿಸಿದರು. ಆದರೆ, ಅವಕಾಶ ಸಿಗಲಿಲ್ಲ.

ಈ ಕ್ಷೇತ್ರದಲ್ಲಿ ಜ್ಯೋತಿ ಗಣೇಶ್ ಹಾಗೂ ಮಾಜಿ ಸಚಿವ ಸೊಗಡು ಶಿವಣ್ಣ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಜ್ಯೋತಿ ಗಣೇಶ್ ಅವರನ್ನು ಗುಬ್ಬಿಯಲ್ಲಿ ಕಣಕ್ಕಿಳಿಸಿ ತುಮಕೂರು ನಗರದಲ್ಲಿ ಸೊಗಡು ಶಿವಣ್ಣ ಅವರಿಗೆ ಅವಕಾಶ ನೀಡಬೇಕು ಎಂದು ಪಕ್ಷದ ರಾಷ್ಟ್ರೀಯ ನಾಯಕರೊಬ್ಬರು ಪಟ್ಟು ಹಿಡಿದಿದ್ದಾರೆ. ಈ ವಿಷಯದ ಕುರಿತು ರಾಜ್ಯ ಚುನಾವಣಾ ಸಮಿತಿ ಸಭೆಯಲ್ಲೂ ಚರ್ಚೆ ಆಗಿದೆ.

ನವದೆಹಲಿಯಲ್ಲಿ ಮುಖ್ಯಮಂತ್ರಿ ತಂಗಿದ್ದ ಹೋಟೆಲ್‌ಗೆ ಶುಕ್ರವಾರ ಸಂಜೆ ಧಾವಿಸಿದ ಬಸವರಾಜ್ ಅವರು ಬೊಮ್ಮಾಯಿ ಅವರನ್ನು ಭೇಟಿ ಮಾಡಲು ಸುಮಾರು ಒಂದು ತಾಸು ಪ್ರಯತ್ನ ನಡೆಸಿದರು. 'ಯಾರನ್ನೂ ರೂಮಿಗೆ ಕಳುಹಿಸಬೇಡಿ ಎಂಬುದಾಗಿ ಮುಖ್ಯಮಂತ್ರಿ ಸೂಚಿಸಿದ್ದಾರೆ' ಎಂದು ಹೋಟೆಲ್ ಸಿಬ್ಬಂದಿ ಅಸಹಾಯಕತೆ ವ್ಯಕ್ತಪಡಿಸಿದರು. ಬಳಿಕ ಬಸವರಾಜ್ ಬೇಸರದಿಂದಲೇ ನಿರ್ಗಮಿಸಿದರು.

ಬಿಜೆಪಿಯತ್ತ ಛಬ್ಬಿ ಮುಖ?

ಕಲಘಟಗಿ ಕ್ಷೇತ್ರದಲ್ಲಿ ಟಿಕೆಟ್ ಕೈ ತಪ್ಪಿರುವ ವಿಧಾನ ಪರಿಷತ್ ಸದಸ್ಯ ನಾಗರಾಜ ಛಬ್ಬಿ ಅವರನ್ನು ಸೆಳೆಯುವ ಪ್ರಯತ್ನವನ್ನು ಬಿಜೆಪಿ ಆರಂಭಿಸಿದೆ.

ಈ ಸಲದ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಛಬ್ಬಿ ಅವರು 2–3 ವರ್ಷಗಳಿಂದ ಸಿದ್ಧತೆ ನಡೆಸಿದ್ದರು. ಕಲಘಟಗಿ ಕ್ಷೇತ್ರಕ್ಕೆ ಮಾಜಿ ಸಚಿವ ಸಂತೋಷ್ ಲಾಡ್ ಹಾಗೂ ನಾಗರಾಜ ಛಬ್ಬಿ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಪಕ್ಷವು ಲಾಡ್ ಅವರಿಗೆ ಟಿಕೆಟ್ ನೀಡಿದೆ. ಟಿಕೆಟ್ ಸಿಗದ ಕಾರಣಕ್ಕೆ ಛಬ್ಬಿ ಅಸಮಾಧಾನಗೊಂಡಿದ್ದಾರೆ. ಛಬ್ಬಿ ಅವರಿಗೆ ಕಾಂಗ್ರೆಸ್‌ನ ರಾಜ್ಯ ನಾಯಕರು ಕರೆ ಮಾಡಿ ಮನವೊಲಿಸುವ ಪ್ರಯತ್ನ ನಡೆಸಿದ್ದಾರೆ.

ಈ ನಡುವೆ, ಬಿಜೆಪಿಯ ರಾಜ್ಯ ನಾಯಕರೊಬ್ಬರು ಕರೆ ಮಾಡಿ ಪಕ್ಷಕ್ಕೆ ಸೇರುವಂತೆ ಆಹ್ವಾನಿಸಿದ್ದಾರೆ. ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಶನಿವಾರ ಭೇಟಿ ಮಾಡಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕ್ಷೇತ್ರದಲ್ಲಿ ತಳ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಿದರೂ ಕಾಂಗ್ರೆಸ್ ಗುರುತಿಸಿಲ್ಲ. ಪಕ್ಷದ ನಾಯಕರು ಕೆಲವು ಭರವಸೆಗಳನ್ನು ನೀಡಿದ್ದಾರೆ. ಆ ಭರವಸೆಗಳನ್ನು ನಂಬಿ ಕೂರಲು ಸಾಧ್ಯವಿಲ್ಲ. ಟಿಕೆಟ್ ನೀಡಿದರೆ ಮಾತ್ರ ಬಿಜೆಪಿಗೆ ಸೇರ್ಪಡೆಯಾಗುತ್ತೇನೆ. ಸಂತೋಷ್ ಲಾಡ್ ವಿರುದ್ಧ ಈ ಚುನಾವಣೆಯಲ್ಲಿ ಕೆಲಸ ಮಾಡುವುದಂತೂ ಖಚಿತ' ಎಂದು ಛಬ್ಬಿ ಅವರು ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ಬೇಡಿಕೆ ಮುಂದಿಟ್ಟ ಅಲೆಮಾರಿ ಕುಟುಂಬಗಳು

'ಸೂರು ನೀಡದ ಹೊರತು ಮತ ನೀಡೆವು'

ಪ್ರಜಾವಾಣಿ ವಾರ್ತೆ

ತುಮಕೂರು: 'ಹಣ, ಮದ್ಯಕ್ಕೆ ನಮ್ಮ ಮತ ಮಾರಿಕೊಳ್ಳುವುದಿಲ್ಲ. ನಿವೇಶನ, ವಸತಿ ಸೌಲಭ್ಯ ಕಲ್ಪಿಸಿ ಕೊಡದ ಹೊರತು ಮತ ಚಲಾಯಿಸುವುದಿಲ್ಲ' ಎಂದು ಜಿಲ್ಲೆಯ ವಿವಿಧೆಡೆ ಅಲೆಮಾರಿ ನಿವಾಸಿಗಳು ತಮ್ಮ ವಾಸಸ್ಥಳದ ಬಳಿ ಫ್ಲೆಕ್ಸ್ ಮತ್ತು ಫಲಕ ಅಳವಡಿಸಿದ್ದಾರೆ.

ಮಹಾನಗರ ಪಾಲಿಕೆ ವ್ಯಾಪ್ತಿಯ ಹನುಮಂತನಗರದ ರೇಷ್ಮೆ ಇಲಾಖೆಯ ಕಟ್ಟಡದಲ್ಲಿ ತಾತ್ಕಾಲಿಕವಾಗಿ ನೆಲೆಸಿರುವ ಕೆರೆಕೋಡಿ, ನಾಗವಲ್ಲಿ ಗ್ರಾಮದ ಅಲೆ ಮಾರಿಗಳು, ಕೊರಟಗೆರೆ ತಾಲ್ಲೂಕಿನ ಅಮಲಾಪುರ, ಹುಲೀಕುಂಟೆ ಗ್ರಾಮದ ಅಲೆಮಾರಿ ಕುಟುಂಬಗಳು, ಇರಕಸಂದ್ರ ಗ್ರಾಮದ ಎಲ್ಲಾ ಜಾತಿಯ ವಸತಿರಹಿತರು ತಮ್ಮ ವಾಸದ ಸ್ಥಳದಲ್ಲಿ ಫ್ಲೆಕ್ಸ್ ಅಳವಡಿಸಿದ್ದಾರೆ.


ಅಲೆಮಾರಿಗಳು ಗುಡಿಸಲಿನಲ್ಲಿ ಫಲಕ ಅಳವಡಿಸಿರುವುದು

'ಮತ ಬೇಕಾದವರು ಗೆದ್ದ ನಂತರ ಭೂಮಿ, ವಸತಿ ನೀಡುತ್ತೇವೆಂದು ಕರಾರಿನೊಂದಿಗೆ ಬರಬೇಕು' ಎಂದು ಫ್ಲೆಕ್ಸ್‌ನಲ್ಲಿ ಉಲ್ಲೇಖಿಸಿದ್ದಾರೆ.

'ಜಿಲ್ಲೆಯಲ್ಲಿ 30 ಸಾವಿರಕ್ಕೂ ಹೆಚ್ಚು ಅಲೆಮಾರಿ ಸಮುದಾಯದ ಜನಸಂಖ್ಯೆಯಿದೆ. ಹಲವು ವರ್ಷಗಳಿಂದ ಭೂಮಿ ಮತ್ತು ವಸತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಅವರಿಗೆ ಸಮಿತಿ ಸಹಕಾರ ನೀಡಲಿದೆ' ಎಂದು ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ಜಿಲ್ಲಾ ಸಂಚಾಲಕ ಹಂದ್ರಾಳ್ ನಾಗಭೂಷಣ್ 'ಪ್ರಜಾವಾಣಿ'ಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಕುಮಾರಸ್ವಾಮಿ ಜೊತೆ ಚರ್ಚಿಸಿ ನಿರ್ಧಾರ: ಜಿಟಿಡಿ

ಮೈಸೂರು: 'ಕೆಲವೇ ದಿನಗಳ ಅಂತರದಲ್ಲಿ ತಂದೆ–ತಾಯಿ ಕಳೆದುಕೊಂಡಿರುವ ನಂಜನಗೂಡು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ ಅವರ ವಿರುದ್ಧ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಮನಸ್ಸು ಒಪ್ಪುತ್ತಿಲ್ಲ' ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ಹೇಳಿದರು.

ಇಲ್ಲಿ ದಿವಂಗತ ಆರ್. ಧ್ರುವನಾರಾಯಣ ಅವರ ಪತ್ನಿ ವೀಣಾ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, 'ದರ್ಶನ್ ಪೋಷಕರನ್ನು ಕಳೆದುಕೊಂಡು ನೋವಿನಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಜೆಡಿಎಸ್ ಸ್ಪರ್ಧಿಸಬೇಕೇ ಎಂಬ ಬಗ್ಗೆ ಪಕ್ಷದ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಲಾಗುವುದು' ಎಂದರು.

ದೊಡ್ಡನಗೌಡ ಪಾಟೀಲ ವಿರುದ್ಧ ಎಫ್‌ಐಆರ್

ಕುಷ್ಟಗಿ (ಕೊಪ್ಪಳ ಜಿಲ್ಲೆ): ದೇವಸ್ಥಾನದಲ್ಲಿ ಬಿಜೆಪಿ ಪ್ರಚಾರ ಕಾರ್ಯಕ್ರಮ ನಡೆಸುವ ಮೂಲಕ ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ದೊಡ್ಡನಗೌಡ ಪಾಟೀಲ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಶಿಕ್ಷಣ ಸುಧಾರಣೆ; ಇರಲಿ ಸಮಷ್ಟಿದೃಷ್ಟಿ

• ಎಸ್. ಸಂಪತ್

ನಾಡು- ದೇಶವನ್ನು ಮುನ್ನಡೆಸಬಲ್ಲ ನೈಪುಣ್ಯ, ತಿಳಿವಳಿಕೆ ನೀಡುವಂತಹದ್ದು ಶಿಕ್ಷಣ. ಅದಕ್ಕೆ ಪೂರಕವಾದ ಮೂಲಸೌಕರ್ಯ ಕಲ್ಪಿಸುವುದು ಆಡಳಿತ ನಡೆಸುವವರ ಕರ್ತವ್ಯ. ಭವಿಷ್ಯದ ಕಲ್ಪನೆಯೇ ಇಲ್ಲದೇ, ತಮ್ಮ ಸ್ವಾರ್ಥ ರಾಜಕೀಯಕ್ಕಾಗಿ ಶಿಕ್ಷಣವನ್ನು, ಭವಿಷ್ಯದ ಪ್ರಜೆಗಳ ವ್ಯಕ್ತಿತ್ವವನ್ನು ಹಾನಿಗೊಳಿಸುವುದು ನಾಡಿಗೆ ಮಾಡುವ ವಂಚನೆ. ಉತ್ತಮ ಬೋಧನೆಗೆ ಬೇಕಾದ ಯೋಗ್ಯ ಶಿಕ್ಷಕರನ್ನು ಒದಗಿಸುವುದು, ನಲಿಯುತ್ತಾ ಕಲಿಯುವ ತಾಣವನ್ನಾಗಿ ಶೈಕ್ಷಣಿಕ ಆವರಣವನ್ನು ರೂಪಿಸುವುದು ದಕ್ಷ ಆಡಳಿತಗಾರರ ಜವಾಬ್ದಾರಿ. ಇತ್ತೀಚಿನ ವರ್ಷಗಳಲ್ಲಿ ಈ ಉದಾತ್ತ ಹಾದಿಯನ್ನು ತೊರೆದು ಶಿಕ್ಷಣವನ್ನು ರಾಜಕೀಯಗೊಳಿಸುವ ಅಪಾಯಕಾರಿ ನಡೆ ಎದ್ದು ಕಾಣಿಸುತ್ತಿದೆ. ಮುಂದಿನ ದಿನಗಳಲ್ಲಿ ಶಿಕ್ಷಣ ಸುಧಾರಣೆಗೆ ಆದ್ಯತೆ ಕೊಡುವ ಸಮರ್ಥರನ್ನು ಆಯ್ಕೆ ಮಾಡುವ ಹೊಣೆ ಮತದಾರರ ಮೇಲಿದೆ. ಈ ನಿಟ್ಟಿನಲ್ಲಿ ಚರ್ಚೆಯೂ ನಡೆಯಬೇಕಿದೆ.

ರಾಜ್ಯದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದ ಸಮಿತಿ ಮೂಲಕ ಶಾಲಾ ಪಠ್ಯ ಪರಿಷ್ಕರಣೆ ಕಾರ್ಯ ನಡೆಸಿತ್ತು. ಈ ಪಠ್ಯದಲ್ಲಿ ಎಡಪಂಥೀಯ ಚಿಂತನೆಗಳನ್ನು ತುರುಕಲಾಗಿದೆ ಎಂದು ಆರೋಪಿಸಿದ ಈಗಿನ ಬಿಜೆಪಿ ಸರ್ಕಾರ, ರೋಹಿತ್ ಚಕ್ರತೀರ್ಥ ನೇತೃತ್ವದಲ್ಲಿ ಪಠ್ಯ ಪರಿಶೀಲನೆಗೆ ರಚಿಸಿದ್ದ ಸಮಿತಿ ಮೂಲಕ ಪಠ್ಯವನ್ನು ಪುನರ್ ಪರಿಷ್ಕರಿಸಿತು. ಈ ವೇಳೆ ಬಿಜೆಪಿ ತನ್ನ ಬಲಪಂಥೀಯ ಸಿದ್ಧಾಂತ ತುರುಕಿ, 'ಶಿಕ್ಷಣದ ಕೇಸರೀಕರಣ' ಮಾಡುವುದರ ಜತೆಗೆ ಹಲವು ಯಡವಟ್ಟುಗಳನ್ನು ಮಾಡಿತು ಎಂಬ ಆರೋಪವೂ ಇದೆ.

ಶಾಲಾ ಪಠ್ಯ ಪುನರ್ ಪರಿಷ್ಕರಣೆಗೆ ಮುಂದಾದ ರಾಜ್ಯ ಬಿಜೆಪಿ ಸರ್ಕಾರ ಕನ್ನಡ ಭಾಷಾ ಪಠ್ಯಗಳಲ್ಲಿ ಹಲವು ದಲಿತ ಮತ್ತು ಮಹಿಳಾ ಲೇಖಕರ ಪಾಠ ಹಾಗೂ ಪದ್ಯಗಳನ್ನು ಕೈಬಿಟ್ಟಿತ್ತು. ಅಲ್ಲದೆ ಭಗವಾನ್ ಬುದ್ಧ, ಮಹಾವೀರ, ಶಿಶುನಾಳ ಶರೀಫ, ಅಕ್ಕಮಹಾದೇವಿ, ನಾರಾಯಣ ಗುರು, ಪೆರಿಯಾರ್, ಸಾವಿತ್ರಿ ಬಾಯಿ ಫುಲೆ, ಮೈಸೂರು ಒಡೆಯರ್, ಸುರಪುರದ ವೆಂಕಟಪ್ಪ ನಾಯಕ, ಕೆಲ ಮಹಿಳಾ ಸುಧಾರಕಿಯರು ಸೇರಿದಂತೆ ಹಲವು ಮಹಾನ್ ವ್ಯಕ್ತಿಗಳ ಪಠ್ಯ ಭಾಗಗಳನ್ನು ಇತಿಹಾಸ ವಿಷಯದಿಂದ ಕೈಬಿಟ್ಟು ವಿವಾದ ಸೃಷ್ಟಿಸಿತು. ಅಲ್ಲದೆ 'ಹಿಂದೂ ಮತ್ತು ಮುಸ್ಲಿಂ ಭಾವೈಕ್ಯತೆಯ ಹರಿಕಾರ ಗಾಂಧೀಜಿ ಅವರನ್ನು ನಾಥೂರಾಮ್ ಗೋಡ್ಸೆ ಎಂಬುವವನು ಹತ್ಯೆ ಮಾಡಿದನು' ಎಂಬ ವಿವರವನ್ನು ಪರಿಶೀಲನಾ ಸಮಿತಿ ತೆಗೆದು ಹಾಕಿತು. ಇದೇ ಕೆಲಸವನ್ನು ಈಗ ಎನ್‌ಸಿಇಆರ್‌ಟಿ ಮಾಡಿದೆ!

ಜತೆಗೆ ಡಾ. ಬಿ.ಆರ್. ಅಂಬೇಡ್ಕರ್ ಅವರಿಗಿದ್ದ 'ಸಂವಿಧಾನ ಶಿಲ್ಪಿ' ಬಿರುದು ಒಳಗೊಂಡಂತೆ ಹಲವು ಅಂಶಗಳನ್ನು ಪಾಠದಿಂದ ತೆಗೆಯಲಾಯಿತು. ಇದೇ ರೀತಿ ಬಸವೇಶ್ವರ, ಕನಕದಾಸ, ಬೆಂಗಳೂರು ನಿರ್ಮಾತೃ ಕೆಂಪೇಗೌಡ, ಟಿಪ್ಪು ಸುಲ್ತಾನ್, ಕುವೆಂಪು, ಶಿವಕುಮಾರ ಸ್ವಾಮೀಜಿ, ಬಾಲಗಂಗಾಧರನಾಥ ಸ್ವಾಮೀಜಿ, ಕಯ್ಯಾರ ಕಿಂಞಣ್ಣ ರೈ ಅವರ ಪಾಠದಲ್ಲಿ ಕೆಲ ವಿಷಯಾಂಶಗಳನ್ನು ಕಡಿತಗೊಳಿಸಲಾಯಿತು. ಪುನರ್ ಪರಿಷ್ಕರಣಾ ಕಾರ್ಯದಿಂದ ಬೇಸತ್ತ ಸಾಹಿತಿಗಳಾದ ದೇವನೂರ ಮಹಾದೇವ ಹಾಗೂ ಜಿ.ರಾಮಕೃಷ್ಣ ಸೇರಿದಂತೆ ಕೆಲವರು ತಮ್ಮ ಪಾಠ, ಪದ್ಯಗಳನ್ನು ಪಠ್ಯಪುಸ್ತಕದಿಂದ ಕೈಬಿಡುವಂತೆ ಸರ್ಕಾರವನ್ನು ಒತ್ತಾಯಿಸಿದ್ದರು.



ರಾಜಕಾರಣಿಗಳ ಸ್ವ ಹಿತಾಸಕ್ತಿ

ಉಚಿತ ಮತ್ತು ಸಮಾನವಾಗಿ ದೊರೆಯಬೇಕಾದ ಶಿಕ್ಷಣ ಇಂದು ವ್ಯಾಪಾರದ ಸರಕಾಗಿದೆ. ಇಲ್ಲಿ ಖಾಸಗಿ ಪ್ರಭಾವ ಹೆಚ್ಚಾಗುತ್ತಿದ್ದು, ಕಾರ್ಪೊರೇಟ್ ಸಂಸ್ಕೃತಿ ಬೆಳೆದು ನಿಂತಿದೆ. ಉದ್ಯಮಿಗಳು, ರಾಜಕಾರಣಿಗಳು ಈ ಕ್ಷೇತ್ರದಲ್ಲಿ ಬಂಡವಾಳ ಹೂಡಿ, ಲಾಭದ ಫಸಲು ಗಳಿಸುತ್ತಿದ್ದಾರೆ. ರಾಜ್ಯದ ವಿವಿಧ ಪಕ್ಷಗಳಲ್ಲಿನ ಹಲವು ರಾಜಕೀಯ ನಾಯಕರೂ ಶಿಕ್ಷಣ ಸಂಸ್ಥೆಗಳ ಒಡೆಯರಾಗಿದ್ದು, ತಮ್ಮ ಹಿತಾಸಕ್ತಿ ಕಾಯ್ದುಕೊಳ್ಳುವುದಕ್ಕೆ ಪೂರಕವಾಗಿ ನಿಯಮಗಳನ್ನು ರೂಪಿಸುತ್ತಿದ್ದಾರೆ ಎಂಬ ಆರೋಪಗಳೂ ಇವೆ. ಹೀಗಾಗಿಯೇ ಶಿಕ್ಷಣದ ಸಾರ್ವತ್ರೀಕರಣ, ಸಮಾನ ಶಿಕ್ಷಣ, ಏಕರೂಪ ಪಠ್ಯ ವಿಚಾರಗಳು ನನೆಗುದಿಗೆ ಬಿದ್ದಿವೆ. ಇವುಗಳನ್ನು ಜಾರಿಗೊಳಿಸುವ ರಾಜಕೀಯ ಇಚ್ಛಾಶಕ್ತಿ ಯಾವ ಪಕ್ಷದವರಲ್ಲೂ ಇಲ್ಲವಾಗಿದೆ.

ಒಂದೆಡೆ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಅಳೆಯಲು ರಾಜ್ಯದಾದ್ಯಂತ 'ಬೋರ್ಡ್' ಪರೀಕ್ಷೆ ಮಾದರಿಯಲ್ಲಿ ಮೌಲ್ಯಾಂಕನ ಪರೀಕ್ಷೆ ನಡೆಸಿರುವ ಶಿಕ್ಷಣ ಇಲಾಖೆ ಇನ್ನೊಂದೆಡೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಶೇಕಡ 10ರವರೆಗೆ ಕೃಪಾಂಕ ನೀಡುವುದಾಗಿ ಘೋಷಿಸಿದೆ. ಈ ಮೂಲಕ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಹೆಚ್ಚಿಸುವುದು ಇಲಾಖೆಯ ಯೋಜನೆ. ಇದು ಗುಣಮಟ್ಟದಲ್ಲಿ ರಾಜಿ ಮಾಡಿಕೊಂಡಂತೆ ಆಗುವುದಿಲ್ಲವೇ ಎಂಬ ಪ್ರಶ್ನೆ ಸಾರ್ವಜನಿಕರನ್ನು ಕಾಡುತ್ತದೆ.

ಮುಜುಗರ ಅನುಭವಿಸಿದ ಸರ್ಕಾರ: ಲಿಂಗಾಯತ, ಒಕ್ಕಲಿಗ, ದಲಿತ, ಬಂಟ, ಈಡಿಗ, ಮುಸ್ಲಿಂ ಸೇರಿದಂತೆ ಹಲವು ಸಮುದಾಯಗಳ ಮುಖಂಡರು, ಸಂಘಟನೆಗಳು, ಮಠಾಧೀಶರು, ಪ್ರಗತಿಪರರು, ವಿದ್ಯಾರ್ಥಿ ಸಂಘಟನೆಗಳು ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಆದ ಲೋಪಗಳ ವಿರುದ್ಧ ಧ್ವನಿಯೆತ್ತಿ, ಪ್ರತಿಭಟಿಸಿದರು. ಈ ಬೆಳವಣಿಗೆಗಳಿಂದ ಸರ್ಕಾರ ತೀವ್ರ ಮುಜುಗರವನ್ನೂ ಅನುಭವಿಸಿತು. ಕಾಂಗ್ರೆಸ್, ಜೆಡಿಎಸ್ ನಾಯಕರೇ ಅಲ್ಲದೆ ಬಿಜೆಪಿಯ ಕೆಲ ಪ್ರಮುಖ ನಾಯಕರೂ ಪಠ್ಯ ಪರಿಷ್ಕರಣೆ ಕಾರ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಎಚ್ಚೆತ್ತ ಸರ್ಕಾರ ಪರಿಷ್ಕರಣೆ ವೇಳೆ ಕೈಬಿಟ್ಟಿದ್ದ ಕೆಲ ಪಾಠಗಳನ್ನು ಮರು ಸೇರಿಸಿ, ತಿದ್ದೋಲೆ ಹೊರಡಿಸಿತು. ಇದು ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ಸಾಕಷ್ಟು ಗೊಂದಲಗಳನ್ನೂ ಮೂಡಿಸಿ, ಕಲಿಕೆಯ ಮೇಲೆ ಪರಿಣಾಮ ಬೀರಿತು.

ಪಠ್ಯ ಪರಿಷ್ಕರಣೆ ಹೆಸರಲ್ಲಿ ನಡೆದ ಈ ಅಚಾತುರ್ಯಗಳು ಬಿಜೆಪಿಗೆ ಚುನಾವಣೆಯಲ್ಲಿ ಯಾವ ಫಲ ನೀಡುತ್ತವೆ ಎಂಬುದು ಮತದಾನದ ಬಳಿಕವಷ್ಟೇ ಗೊತ್ತಾಗುತ್ತದೆ. ಅಲ್ಲದೆ ಬಿಜೆಪಿ ಪ್ರತಿಪಾದಿಸುತ್ತಿರುವ ನೈತಿಕ ಶಿಕ್ಷಣ, 'ವೇದಿಕ್ ಗಣಿತ'... ಇತ್ಯಾದಿ ವಿಚಾರದಲ್ಲೂ ಪರ, ವಿರೋಧ ವಾದಗಳು ಕೊನೆಗೊಂಡಿಲ್ಲ. ಇದರ ಜತೆಗೆ ಹಿಜಾಬ್ ವಿವಾದ ಶಾಲಾ, ಕಾಲೇಜು ಆವರಣ, ಕೊಠಡಿ ಪ್ರವೇಶಿಸಿ ಶಿಕ್ಷಣ ಸಂಸ್ಥೆಗಳಲ್ಲಿನ ಸೌಹಾರ್ದ ವಾತಾವರಣವನ್ನು ಕಲಕಿದೆ.

ಈ ವಿವಾದಗಳೇ ಮುನ್ನೆಲೆಯಲ್ಲಿದ್ದ ಕಾರಣ ಗುಣಮಟ್ಟ, ಮೌಲ್ಯಯುತ ಶಿಕ್ಷಣ, ಶಾಲಾ, ಕಾಲೇಜುಗಳ ಮೂಲ ಸೌಕರ್ಯಗಳ ವಿಚಾರಗಳು ನೇಪಥ್ಯಕ್ಕೆ ಸರಿದವು. ಕಾಲ ಕಾಲಕ್ಕೆ ಶಿಕ್ಷಕರು, ಉಪನ್ಯಾಸಕರು ಮತ್ತು ಸಹ ಪ್ರಾಧ್ಯಾಪಕರ ನೇಮಕಾತಿ ಆಗದೇ ದೊಡ್ಡ ಮಟ್ಟದಲ್ಲಿ 'ಅತಿಥಿ'ಗಳು ಬೋಧನಾ ಕಾರ್ಯದಲ್ಲಿ ತೊಡಗಿದ್ದಾರೆ. ಶಾಲಾ ಶಿಕ್ಷಣವೂ ದುಬಾರಿಯಾಗಿದ್ದು, ಸಾಮಾನ್ಯರ ಕೈಗೆಟುಕದಂತಾಗಿದೆ. ವೃತ್ತಿ ಶಿಕ್ಷಣ ಕೋರ್ಸ್‌ಗಳಾದ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಪ್ರವೇಶಕ್ಕಿಂತಲೂ ಹೆಚ್ಚಿನ ಶುಲ್ಕವನ್ನು ಹಲವು ಖಾಸಗಿ ಶಾಲೆಗಳು ಪ್ರಾಥಮಿಕ ಶಿಕ್ಷಣ ಹಂತದಿಂದಲೇ ವಸೂಲಿ ಮಾಡುತ್ತಿದ್ದು, ಅದಕ್ಕೆ ಮೂಗುದಾರ ಹಾಕುವ ಕಾರ್ಯದಲ್ಲಿ ಸರ್ಕಾರ ವಿಫಲವಾಗಿದೆ.

ಸಾಕಾರಗೊಳ್ಳದ ಉಚಿತ, ಕಡ್ಡಾಯ ಶಿಕ್ಷಣ: ಮಗುವಿನ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಬಹುಮುಖ್ಯ. ಈ ಮಹತ್ವದ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲಿದೆ. ಹೀಗಾಗಿಯೇ ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿ ಶಿಕ್ಷಣಕ್ಕೆ ಸ್ಥಾನ ಕಲ್ಪಿಸಲಾಗಿದೆ. ಅಲ್ಲದೆ 2002ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಲಾಗಿದೆ. ಅದರಂತೆ 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರೆಯಬೇಕು. ಆದರೆ ಈ ಆಶಯ ಇನ್ನೂ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಂಡಿಲ್ಲ.

ಶಿಕ್ಷಣ ವಂಚಿತರು ಮತ್ತು ಶಾಲೆ ತೊರೆಯುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ತಾರತಮ್ಯದಿಂದ ಕೂಡಿರುವ ಪಠ್ಯಕ್ರಮ, ಭಾಷಾ ಮಾಧ್ಯಮ ವಿಚಾರದಲ್ಲಿನ ಗೊಂದಲ ಮುಂದುವರಿದಿದೆ. ಸಹಸ್ರಾರು ಶಾಲೆಗಳ ಕೊಠಡಿಗಳು ದುರಸ್ತಿ ಆಗಬೇಕಿವೆ. ಕೆಲವೆಡೆ ಕುಡಿಯುವ ನೀರಿನ ಸೌಕರ್ಯ ಮತ್ತು ಶೌಚಾಲಯವೂ ಇಲ್ಲ. ಹಲವೆಡೆ ಆಟದ ಮೈದಾನ, ಗ್ರಂಥಾಲಯ, ಕಂಪ್ಯೂಟರ್‌ಗಳು ಮತ್ತು ಪ್ರಯೋಗಾಲಯಗಳೂ ಇಲ್ಲ. ಇನ್ನೂ ಕೆಲವು ಶಾಲೆಗಳಲ್ಲಿ ಕೆಲ ವಿಷಯಗಳಿಗೆ ಶಿಕ್ಷಕರೇ ಇಲ್ಲ. ಈ ವಿಷಯಗಳನ್ನು ಕಲಿಯದೇ ಮಕ್ಕಳು ಮುಂದಿನ ತರಗತಿಗಳಿಗೆ ಹೋಗುತ್ತಿರುವುದು ವಿಪರ್ಯಾಸ.

ತರಾತುರಿಯಲ್ಲಿ ಬಂದ ಎನ್‌ಇಪಿ: ವಿರೋಧ ಪಕ್ಷಗಳ, ಹಲವು ಸಾಹಿತಿಗಳ, ಶಿಕ್ಷಣ ತಜ್ಞರ, ಬುದ್ಧಿಜೀವಿಗಳ ಮತ್ತು ವಿವಿಧ ಸಂಘಟನೆಗಳ ವಿರೋಧದ ನಡುವೆಯೂ ರಾಜ್ಯ ಸರ್ಕಾರ ನೂತನ ಶಿಕ್ಷಣ ನೀತಿ (ಎನ್‌ಇಪಿ 2020) ಜಾರಿಗೆ ಉತ್ಸುಕತೆ ತೋರಿತು. ವಿರೋಧ ಪಕ್ಷಗಳು ಎನ್‌ಇಪಿಯನ್ನು 'ನಾಗಪುರ ಶಿಕ್ಷಣ ನೀತಿ', 'ಶಿಕ್ಷಣದ ಕೇಸರೀಕರಣ' ಎಂದೆಲ್ಲ ಜರಿದರೂ ತಲೆಕೆಡಿಸಿಕೊಳ್ಳದ ರಾಜ್ಯದ ಬಿಜೆಪಿ ಸರ್ಕಾರ, 2021–22ರಿಂದ ಉನ್ನತ ಶಿಕ್ಷಣದಲ್ಲಿ ಎನ್‌ಇಪಿ ಜಾರಿಗೊಳಿಸಿತು. ಎನ್‌ಇಪಿಗೆ ತಕ್ಕಂತೆ ಕೋರ್ಸ್‌ಗಳಿಗೆ ಹೊಸ ಸ್ವರೂಪ ನೀಡಿ, ಹೊಸ ಪಠ್ಯಕ್ರಮವನ್ನೂ ರಚಿಸಿ, ವಿದ್ಯಾರ್ಥಿಗಳಿಗೆ ಬಹುಶಿಸ್ತೀಯ ವಿಷಯಗಳ ಆಯ್ಕೆಯನ್ನೂ ಒದಗಿಸಿದೆ.

ಆದರೆ, ಈ ಕೋರ್ಸ್‌ಗಳ ಹೊಸ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಅಧ್ಯಾಪಕರಿಗೆ ಯಾವುದೇ ಕಾರ್ಯಾಗಾರ, ವಿಚಾರ ಸಂಕಿರಣಗಳನ್ನು ನಡೆಸುವ ಗೋಜಿಗೆ ಸರ್ಕಾರವಾಗಲಿ ಅಥವಾ ವಿಶ್ವವಿದ್ಯಾಲಯಗಳಾಗಲಿ ಹೋಗಿಲ್ಲ ಎಂದು ಅಧ್ಯಾಪಕರೇ ದೂರುತ್ತಾರೆ. ಇನ್ನು ಹೊಸ ಪಠ್ಯಕ್ಕೆ ತಕ್ಕಂತೆ ಸೂಕ್ತ ಪಠ್ಯ ಪುಸ್ತಕಗಳು ದೊರೆಯದೇ ಇದ್ದರೂ ವಿದ್ಯಾರ್ಥಿಗಳು ಪದವಿ ಕೋರ್ಸ್‌ನ ಮೊದಲ ವರ್ಷವನ್ನು ಪೂರೈಸಿ, ಎರಡನೇ ವರ್ಷಕ್ಕೆ ಕಾಲಿಟ್ಟಿದ್ದಾರೆ! ಈ ವರ್ಷದಿಂದ ಎನ್‌ಇಪಿಯನ್ನು ಪ್ರಾಥಮಿಕ ಶಾಲಾ ಹಂತದಿಂದಲೂ ಜಾರಿಗೊಳಿಸಲು ಸರ್ಕಾರ ಯೋಜನೆ ರೂಪಿಸಿದೆ.

ರಾಜ್ಯದಲ್ಲಿ 1ರಿಂದ 12ನೇ ತರಗತಿಯವರಗೆ 1.2 ಕೋಟಿ ಹಾಗೂ ಉನ್ನತ ಶಿಕ್ಷಣದಲ್ಲಿ 24 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಕೆಲಸ ಮಾಡುವ ಬದ್ಧತೆ ತೋರುವ ಪಕ್ಷಗಳತ್ತ ಮತದಾರರು ಒಲಿಯುತ್ತಾರೆ.

ಶಿಕ್ಷಣ ಕ್ಷೇತ್ರದ ಎಲ್ಲ ಸಮಸ್ಯೆಗಳಿಗೆ ಎನ್‌ಇಪಿಯಲ್ಲಿ ಪರಿಹಾರ ಇದೆ ಎಂದು ಬಿಜೆಪಿ ಸಮರ್ಥಿಸಿಕೊಳ್ಳುತ್ತಿದೆ. ಇದಕ್ಕೆ ವಿರುದ್ಧವಾಗಿ ಪಠ್ಯ ಪುನರ್ ಪರಿಷ್ಕರಣೆಯ ಯಡವಟ್ಟುಗಳು ಮತ್ತು ತರಾತುರಿಯಲ್ಲಿ ಎನ್‌ಇಪಿ ಜಾರಿಗೊಳಿಸಿದ ಬಿಜೆಪಿ ನಡೆಯನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಪ್ರಮುಖ ಚುನಾವಣಾ ವಿಷಯವನ್ನಾಗಿಸಿ ಮತ ಸೆಳೆಯಲು ಮುಂದಾಗಿವೆ.

ಅಭಿಮತ

ದೋಷಗಳನ್ನು ಸರಿಪಡಿಸುತ್ತೇವೆ



ಎನ್‌ಇಪಿ ಮತ್ತು ಪಠ್ಯ ಪರಿಷ್ಕರಣೆ ಹೆಸರಿನಲ್ಲಿ ಈಗಿನ ಬಿಜೆಪಿ ಸರ್ಕಾರ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡವಿದೆ. ಇದು ಬಿಜೆಪಿಯ ರಾಜಕೀಯ ಉದ್ದೇಶದ ಸ್ವರೂಪ ಮತ್ತು ಸಂರಚನೆ ಹೊಂದಿದ್ದು, ಆಘಾತಕಾರಿಯಾಗಿದೆ. ಸಾಕಷ್ಟು ದೋಷಗಳಿಂದ ಕೂಡಿದೆ. 'ನೀಟ್' ವಿಷಯದಲ್ಲಿ ವಿದ್ಯಾರ್ಥಿಗಳಲ್ಲಿ ಸಾಕಷ್ಟು ಗೊಂದಲಗಳಿವೆ. ಇದರಿಂದ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ವೈದ್ಯಕೀಯ ಕೋರ್ಸ್ ಪ್ರವೇಶವನ್ನು ಮೊದಲಿನಂತೆ ಸಿಇಟಿ ಮೂಲಕವೇ ನಡೆಸುವ ಚಿಂತನೆ ಇದೆ. ಬಸವೇಶ್ವರ, ಡಾ. ಬಿ.ಆರ್. ಅಂಬೇಡ್ಕರ್, ಕುವೆಂಪು ಅವರ ಆದರ್ಶದಂತೆ ಕರ್ನಾಟಕ ಸಂಸ್ಕೃತಿಯ ಒಳನೋಟವನ್ನು ಬೀರುವ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುತ್ತೇವೆ.

ಕೆ.ಇ.ರಾಧಾಕೃಷ್ಣ, ಕೆಪಿಸಿಸಿ ಪ್ರಣಾಳಿಕೆ ಸಮಿತಿಯ ಉಪಾಧ್ಯಕ್ಷ

ಎನ್‌ಇಪಿಯಿಂದ ವ್ಯವಸ್ಥೆಗೆ ಬಲ



ಎನ್‌ಇಪಿ ಸಮರ್ಪಕ ಅನುಷ್ಠಾನವಾದರೆ ದೇಶದ ಶಿಕ್ಷಣ ವ್ಯವಸ್ಥೆಯ ಬಹುತೇಕ ಸಮಸ್ಯೆಗಳು ಪರಿಹಾರವಾಗುತ್ತವೆ. ಎನ್‌ಇಪಿಯಿಂದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಬಲಗೊಳ್ಳುತ್ತದೆ. ಈಗಾಗಲೇ ರಾಜ್ಯದಲ್ಲಿ ಉನ್ನತ ಶಿಕ್ಷಣದಲ್ಲಿ ಇದನ್ನು ಜಾರಿಗೊಳಿಸಿದ್ದೇವೆ. ಶಾಲಾ ಶಿಕ್ಷಣದಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುತ್ತೇವೆ. ಮುಂದಿನ ದಿನಗಳಲ್ಲಿ ಎನ್‌ಇಪಿ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ಗರಿಷ್ಠ ಅನುದಾನ ಮೀಸಲಿಡುತ್ತೇವೆ. ಶಿಕ್ಷಕರ ಕೊರತೆ ನೀಗಿಸಲು ಕ್ರಮ ಕೈಗೊಳ್ಳುತ್ತೇವೆ.

ಅರುಣ ಶಹಾಪುರ, ವಿಧಾನ ಪರಿಷತ್ತಿನ ಮಾಜಿ ಸದಸ್ಯ, ಬಿಜೆಪಿ

ಶಿಕ್ಷಣವೇ ಮೊದಲ ಆದ್ಯತೆ



'ಪಂಚರತ್ನ' ಯೋಜನೆಯಲ್ಲಿ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿದ್ದೇವೆ. ಗುಣಮಟ್ಟ ಮತ್ತು ವ್ಯವಸ್ಥಿತ ಶಿಕ್ಷಣವನ್ನು ಉಚಿತವಾಗಿ ನೀಡುವ ಯೋಜನೆಗೆ ಜೆಡಿಎಸ್ ಬದ್ಧವಾಗಿದೆ. ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಒಂದೊಂದು ಮಾದರಿ ಶಾಲೆಗಳನ್ನು ನಿರ್ಮಿಸಿ ಅಲ್ಲಿ ಪೂರ್ವ ಪ್ರಾಥಮಿಕ ಹಂತದಿಂದ 12ನೇ ತರಗತಿವರೆಗೆ ಅವಕಾಶ ಕಲ್ಪಿಸುತ್ತೇವೆ. ಒಂದೇ ರೀತಿಯ ಪಠ್ಯಕ್ರಮಕ್ಕೆ ಒತ್ತು ನೀಡುವುದರ ಜತೆಗೆ ಶಿಕ್ಷಕರ ನೇಮಕಾತಿ, ಕಾಲದಿಂದ ಕಾಲಕ್ಕೆ ನಡೆಯುವಂತೆ ಎಚ್ಚರ ವಹಿಸುತ್ತೇವೆ. ಎನ್‌ಇಪಿ ಕುರಿತು ಅಧ್ಯಯನಕ್ಕೆ ಸಮಿತಿ ರಚಿಸಿ, ಶಿಫಾರಸು ಅನುಷ್ಠಾನಗೊಳಿಸುತ್ತೇವೆ.

ಎಚ್.ಎನ್. ದೇವರಾಜು, ರಾಜ್ಯ ವಕ್ತಾರ, ಜೆಡಿಎಸ್

ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಲಿ



ಹಿಂದುತ್ವದ ರಾಷ್ಟ್ರೀಯತೆಯು ಬಿಜೆಪಿಯ ಗುಪ್ತ ರಾಜಕೀಯ ಕಾರ್ಯಸೂಚಿ. ಅದರ ಜಾರಿಗಾಗಿಯೇ ಕೇಂದ್ರ ಸರ್ಕಾರ ಎನ್‌ಇಪಿ–2020 ಅನ್ನು ರೂಪಿಸಿದೆ. ಸಂಕುಚಿತ ಉದ್ದೇಶ ಹೊಂದಿರುವ ಇದು ಸಾರ್ವಜನಿಕ ಶಿಕ್ಷಣ ಕ್ಷೇತ್ರವನ್ನು ದುರ್ಬಲಗೊಳಿಳಿಸುತ್ತದೆ. ಅಲ್ಲದೆ ಕೇಂದ್ರೀಕರಣ, ಖಾಸಗೀಕರಣ ಮತ್ತು ಕೋಮುವಾದೀಕರಣಕ್ಕೆ ಎಡೆಮಾಡಿಕೊಡುತ್ತದೆ. ಸಾರ್ವಜನಿಕ ಶಿಕ್ಷಣದ ಬಲವರ್ಧನೆಗೆ ಪಕ್ಷಗಳು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಸಮಾನ ಗುಣಮಟ್ಟದ ಶಿಕ್ಷಣವು ಪಕ್ಷಗಳ ಆದ್ಯತೆಯಾಗಬೇಕು. ಈ ಉದ್ದೇಶದ ಈಡೇರಿಕೆಗಾಗಿ ಸಾರ್ವಜನಿಕ ಶಾಲಾ ಶಿಕ್ಷಣ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ ಮಾಡಬೇಕು.

ನಿರಂಜನಾರಾಧ್ಯ.ವಿ.ಪಿ, ಅಭಿವೃದ್ಧಿ ಶಿಕ್ಷಣ ತಜ್ಞ

ವೈಚಾರಿಕ ಶಿಕ್ಷಣ ಅಗತ್ಯ



ವಿದ್ಯಾರ್ಥಿಗಳಲ್ಲಿ ಮಾನವೀಯ ವ್ಯಕ್ತಿತ್ವ ರೂಪಿಸಲು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯಲು ವೈಜ್ಞಾನಿಕ, ವೈಚಾರಿಕ ಶಿಕ್ಷಣ ನೀಡಬೇಕಿದೆ. ಅದಕ್ಕೆ ಪೂರಕವಾಗಿ ಹಿಂದಿನಿಂದಲೂ ಶಿಕ್ಷಣ ಪಠ್ಯರಚನಾ ಚೌಕಟ್ಟು ಸಿದ್ಧಪಡಿಸಲಾಗುತ್ತಿತ್ತು. ಈಗ ಪಠ್ಯ ರಚನೆಯ ಆಶಯವೇ ಬದಲಾಗಿದೆ. ಶಿಕ್ಷಣದ ಉದ್ದೇಶವನ್ನೂ ಆರ್ಥಿಕ ಗುರಿಯಂತೆ ನೋಡಲಾಗುತ್ತಿದೆ. ರಾಷ್ಟ್ರದ ಆಂತರಿಕ ಉತ್ಪನ್ನದ ಶೇ 6ರಷ್ಟನ್ನು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಬೇಕು. ಶಿಕ್ಷಣದ ಗುಣಮಟ್ಟ, ಮಾನವ ಹಕ್ಕುಗಳು, ಸುಸ್ಥಿರ ಸಮಾಜದ ಸೃಷ್ಟಿಯ ಧೋರಣೆಗಳು ರಾಜಕೀಯ ಪಕ್ಷಗಳ ಆದ್ಯತೆಯಾಗಬೇಕು.

ಸರೋಜ. ಎಂ.ಎಸ್, ಪ್ರಗತಿ ಶಿಕ್ಷಣದ ಚಿಂತಕಿ

ಪ್ರಜಾ ಪತ್ರ

ಮೊದಲು ಪ್ರಶ್ನಿಸುವ ಅರ್ಹತೆ ಬೆಳಸಿಕೊಳ್ಳೋಣ



ನಮ್ಮದು ಪ್ರಜಾಪ್ರಭುತ್ವ ದೇಶ. ಸಂವಿಧಾನವು ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡಿದೆ. ಇಲ್ಲಿ ಎಲ್ಲರೂ ಸೇರಿ ಆಡಳಿತ ನಡೆಸುವುದು ನ್ಯಾಯ ಸಮ್ಮತ. ಆದ್ದರಿಂದ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು ಚುನಾವಣಾ ಪದ್ಧತಿ ಇದೆ. ಪ್ರತಿಯೊಬ್ಬರ ಮತಗಳು ಮುಖ್ಯ. ನಾವು ಚುನಾಯಿಸಿದ ವ್ಯಕ್ತಿಗಳು ಆಡಳಿತ ನಡೆಸುತ್ತಿದ್ದಾರೆ ಎಂದರೆ ನಾವೂ ಅದರಲ್ಲಿ ಭಾಗಿಯಾಗಿದ್ದು, ಒಪ್ಪಿಗೆ ಇದೆ ಎಂದು ಸೂಚಿಸಿದಂತೆ. ಈಗ ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ, ಉಡುಗೊರೆ, ಬಾಗಿನ, ಕುಕ್ಕರ್, ಸೀರೆ ಇತ್ಯಾದಿಗಳ ಆಮಿಷವೊಡ್ಡಲಾಗುತ್ತಿದೆ. ಇವೆಲ್ಲವೂ ರಾಜಕೀಯದ ಹುನ್ನಾರ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇಂತಹ ಉಡುಗೊರೆಗಳ ಮೊರೆ ಹೋಗದೆ ಆಡಳಿತ ದೃಷ್ಟಿಯಿಂದ ಸರಿ ಎನಿಸುವ ವ್ಯಕ್ತಿಗೆ ಮತ ಹಾಕಿ. ಹೆಂಡ, ದುಡ್ಡು, ಉಡುಗೊರೆ ಕೊಟ್ಟು ಮತ ಹಾಕಿಸಿಕೊಳ್ಳುವವರು ಎಂದಿಗೂ ನಮ್ಮ ಕಷ್ಟಗಳನ್ನು ಕೇಳುವುದಿಲ್ಲ ಮತ್ತು ಪರಿಹರಿಸುವುದಿಲ್ಲ. ನಾವು ಪ್ರಶ್ನೆ ಮಾಡಲು ಅರ್ಹರಾಗಿದ್ದಾಗ ಮಾತ್ರ ನ್ಯಾಯ ಸಿಗುತ್ತದೆ. ಹೀಗಾಗಿ, ಮೊದಲು ಪ್ರಶ್ನೆ ಮಾಡುವ ಅರ್ಹತೆಯೂ ನಮಗಿರಬೇಕು.

ಎಸ್. ಪೂಜಾ. ಕಲಬುರಗಿ

ಸದೃಢ ಸರ್ಕಾರಕ್ಕೆ ಸಂಕಲ್ಪ ಮಾಡೋಣ



ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ನಮ್ಮನ್ನು ಸೆಳೆಯಲು ಹಣ, ಹೆಂಡ, ಕುಕ್ಕರ್, ಕೋಳಿ, ಸೀರೆ... ಇತ್ಯಾದಿಗಳನ್ನು ಮನೆ- ಮನಸುಗಳಿಗೆ ತಲುಪಿಸುತ್ತಿದ್ದಾರೆ. ಕರ್ನಾಟಕದ ಸಾಕ್ಷರತೆಯ ಪ್ರಮಾಣ ಶೇ 75ರಷ್ಟು ದಾಟಿದ್ದು ಸಾಕ್ಷರರಾಗಿರುವ ನಾವೆಲ್ಲ ಆಮಿಷಗಳಿಗೆ ಮತ ಮಾರಿಕೊಳ್ಳದೆ ನಮ್ಮ ಹಕ್ಕನ್ನು ಅರ್ಹರಿಗೆ ಅಧಿಕಾರಯುತವಾಗಿ ಚಲಾಯಿಸೋಣ. ಶುಭ್ರ ಬಟ್ಟೆಯ ಶೂರರು ಹಣದ ಹಂಗು ತೊರೆದು ಹರಿಸುತ್ತಿರುವ ಆಮಿಷಗಳ ಹೊಳೆಯಲಿ ನಾವೆಲ್ಲ ನೆನೆದು ಹೋಗದೆ, ಗಟ್ಟಿಯಾಗಿ ನಿಂತು ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡೋಣ. ಈ ಮೂಲಕ ಸದೃಢ ಸರ್ಕಾರ ರಚನೆಗೆ ಸಂಕಲ್ಪಕ್ಕೆ ಮಾಡೋಣ.

ಅಂಬರೀಷ ಎಸ್. ಪೂಜಾರಿ, ಬಳ್ಳಾರಿ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಗಾಳಿ ಮಾತು

ಬಂಡಾಯ ಶಮನಕ್ಕೆ 'ಎಂಎಲ್‌ಸಿ' ಗ್ಯಾರಂಟಿ!

ವಿಧಾನಸಭೆ ಚುನಾವಣೆಗೆ ಸಜ್ಜಾಗಿರುವ ಕಾಂಗ್ರೆಸ್ ಪಕ್ಷ ಈಗಾಗಲೇ ನಾಲ್ಕು 'ಗ್ಯಾರಂಟಿ'ಗಳನ್ನು ಘೋಷಿಸಿದೆ. ಜನರಿಗೆ ನೀಡಿದ ಗ್ಯಾರಂಟಿ ಮಾದರಿಯಲ್ಲೇ, ಟಿಕೆಟ್ ಸಿಗದೇ ಇರುವ ಆಕಾಂಕ್ಷಿಗಳಿಗೂ 'ಕಾಂಗ್ರೆಸ್ ಗ್ಯಾರಂಟಿ' ಘೋಷಣೆಯಾಗಿದೆಯಂತೆ.

ರಾಜ್ಯದಲ್ಲಿ ಮೇ 10ರಂದು ನಡೆಯುವ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ 166 ಅಭ್ಯರ್ಥಿಗಳ ಪಟ್ಟಿಯನ್ನು ಈಗಾಗಲೇ ಘೋಷಿಸಿರುವ ಕಾಂಗ್ರೆಸ್, ಗೆಲ್ಲುವ ಸಾಧ್ಯತೆ ಇರುವ ಇಬ್ಬರು ಪ್ರಬಲ ಅಭ್ಯರ್ಥಿಗಳಲ್ಲಿ ಒಬ್ಬರಿಗೆ ಟಿಕೆಟ್ ನೀಡಲಾಗಿದೆ ಎಂದು ಹೇಳಿಕೊಂಡಿದೆ. ಟಿಕೆಟ್ ಸಿಗದೇ ಇರುವವರಿಗೆ, ನೀವು ಅಧಿಕೃತ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬನ್ನಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದು ಗ್ಯಾರಂಟಿ. ಆಗ ನಿಮ್ಮನ್ನು ಎಂಎಲ್‌ಸಿ ಮಾಡುವುದು ಗ್ಯಾರಂಟಿ. ಅಷ್ಟು ಮಾತ್ರವಲ್ಲ; ಸಚಿವ ಸ್ಥಾನ ಕೊಡುವುದೂ ಗ್ಯಾರಂಟಿ ಎಂದು ಹೇಳುತ್ತಿದ್ದಾರಂತೆ.

ಕಾಂಗ್ರೆಸ್ ಮುಖಂಡರ ಇಂತಹ ಸಮನ್ವಯ ಸೂತ್ರಕ್ಕೆ ಮಾರು ಹೋಗಿರುವ ಕೆಲವು ಆಕಾಂಕ್ಷಿಗಳು, 'ಬಂಡಾಯ ಅಭ್ಯರ್ಥಿಗಳಾಗಿ ಕಣಕ್ಕೆ ಇಳಿಯುವುದು ಬೇಡ' ಎಂಬ ನಿರ್ಧಾರಕ್ಕೆ ಬಂದಿದ್ದಾರಂತೆ. ಬಂಡಾಯ ಶಮನದ ಕಾಂಗ್ರೆಸ್ ತಂತ್ರ ಕಂಡ, ಬಿಜೆಪಿ ನಾಯಕರು 'ಪ್ರತಿ ಕ್ಷೇತ್ರದಿಂದ ಮೂವರು ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿರುವ ನಾವೂ ಇಂತಹ ಸೂತ್ರವನ್ನೇ ಇಟ್ಟುಕೊಂಡು ಉಳಿದ ಅಭ್ಯರ್ಥಿಗಳನ್ನು ತೃಪ್ತಿಪಡಿಸೋಣ' ಎಂದು ದೆಹಲಿಯ ವರಿಷ್ಠರಿಗೆ ಮಾಹಿತಿ ಮುಟ್ಟಿಸಿದ್ದಾರಂತೆ.

'ವಿಧಾನ ಪರಿಷತ್ತಿನಲ್ಲಿ ಇರುವುದೇ 75 ಸೀಟು, ಪಕ್ಷಗಳ ಜಗಿತದ ಪರಿಣಾಮ ಈಗ ಮೂರು ಸೀಟು ಖಾಲಿಯಾಗಿವೆ. ಬಂಡಾಯ ಎದ್ದವರನ್ನೆಲ್ಲ ಅಲ್ಲಿ ಹೇಗೆ ಕೂರಿಸುತ್ತಾರೆ. ಇದು ಎಂಎಲ್‌ಸಿ ತುಪ್ಪ' ಎಂದು ಕೆಲವು ಆಕಾಂಕ್ಷಿಗಳು ಕುಹಕವಾಡುತ್ತಿದ್ದಾರಂತೆ.

ಸೆಲೆಬ್ರಿಟಿ ಮಾತು




ಪ್ರಜಾಪ್ರಭುತ್ವ ಉಳಿಸಿ ಬೆಳೆಸಲು ಮತ ಚಲಾಯಿಸಿ

ಹಿರೇಮಗಳೂರು ಕಣ್ಣನ್, ಕನ್ನಡದ ಪೂಜಾರಿ

ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಅಳಿವು- ಉಳಿವು ಪ್ರಜೆಗಳ ಕೈಯಲ್ಲೇ ಇದೆ, ಪ್ರಭುಗಳ ಕೈಯಲ್ಲಲ್ಲ. ಆದ್ದರಿಂದ, ಪ್ರಜೆಗಳು ದೇಶದ ಬಗ್ಗೆ ಕೇವಲ ಕೊರಳೆತ್ತಿ ಘೋಷಿಸಿದರೆ ಸಾಲದು ಚುನಾವಣೆ ಸಂದರ್ಭದಲ್ಲಿ ಸಮರ್ಥ ವ್ಯಕ್ತಿಗೆ ಬೆರಳು ಒತ್ತುವುದರ ಮೂಲಕ ಮತ ಚಲಾಯಿಸಿ ತಮ್ಮ ಅಭಿಪ್ರಾಯವನ್ನು ಅಧಿಕೃತಗೊಳಿಸಿದಾಗ ಮಾತ್ರ ದೇಶ ಬೆಳೆಯಬಲ್ಲದು, ಉಳಿಯಬಲ್ಲದು. ದೇಶದ ಅಳಿವು- ಉಳಿವು ಪ್ರತಿಯೊಬ್ಬ ಪ್ರಜೆಯ ಮತದಾನದಲ್ಲಿ ಅಡಗಿದೆ ಎನ್ನುವುದನ್ನು ಯಾರೂ ಮರೆಯಬಾರದು. ಮತದಾನ ದಾನವಲ್ಲ ಅದು ಪ್ರಜಾಪ್ರಭುತ್ವ ಉಳಿಸುವ ಹಕ್ಕು.

ಮಾತಿನೇಟು



ಕಾಂಗ್ರೆಸ್ ಪಕ್ಷದ ನಾಯಕರು ಶೂರತ್ವದ ಮಾತು ಆಡುತ್ತಿದ್ದಾರೆ. ಆದರೆ, ಅವರಿಗೆ ರಾಜ್ಯದ 60 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳೇ ಸಿಗುತ್ತಿಲ್ಲ. ಅಂತೆಯೇ ಬಿಜೆಪಿಯ ಶಾಸಕರಿಗೆ ಗಾಳ ಹಾಕುತ್ತಿದ್ದಾರೆ. 'ನಿಮಗೆ ಟಿಕೆಟ್ ಕಾಯ್ದಿರಿಸಿದ್ದೇವೆ, ಬನ್ನಿ' ಎಂದು ಸ್ವತಃ ಕೆಪಿಸಿಸಿ ಅಧ್ಯಕ್ಷರೇ ಕಾಂಗ್ರೆಸ್‌ನ ಎರಡನೇ ಪಟ್ಟಿ ಬಿಡುಗಡೆಗೂ ಮುನ್ನ ಬಿಜೆಪಿಯ ಶಾಸಕರಿಗೆ ಕರೆ ಮಾಡಿ ಆಹ್ವಾನ ನೀಡಿದ್ದಾರೆ. ಕಾಂಗ್ರೆಸ್ ಕಳೆದ ಬಾರಿಗಿಂತ ಹೀನಾಯವಾಗಿ ಸೋಲಲಿದೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಮತ ಆಮಿಷ, ಸಿಕ್ಕಿದ್ದೇನು?

₹2.66 ಕೋಟಿ ಮೌಲ್ಯದ ಚಿನ್ನ

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಚೆಕ್‌ಪೋಸ್ಟ್

ಹರಿಹರ: ಅಭ್ಯರ್ಥಿಗೇ ದುಡ್ಡು ಕೊಡುವ ಮತದಾರರು!

• ಚಂದ್ರಶೇಖರ ಆರ್.



ಶಿವಶಂಕರ್

ದಾವಣಗೆರೆ: ಚುನಾವಣಾ ಕಣ ದಲ್ಲಿರುವ ಅಭ್ಯರ್ಥಿಗಳು ಮತದಾರರಿಗೆ ಹಣ, ಪಾತ್ರೆ, ಮದ್ಯ, ಎಲೆಕ್ಟ್ರಾನಿಕ್ ವಸ್ತುಗಳನ್ನು ನೀಡಿ ಆಮಿಷ ಒಡ್ಡುವುದು ಸಾಮಾನ್ಯ. ಆದರೆ, ಜಿಲ್ಲೆಯ ಹರಿಹರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ 18ಕ್ಕೂ ಅಧಿಕ ಗ್ರಾಮಗಳಲ್ಲಿ ಜನರೇ ದೇಣಿಗೆ ಮೂಲಕ ಹಣ ಸಂಗ್ರಹಿಸಿ ಅಭ್ಯರ್ಥಿಗೆ ನೀಡುವ ಪರಿಪಾಠ ಇಟ್ಟುಕೊಂಡಿದ್ದಾರೆ.

ಮಾಜಿ ಸಚಿವ ಹರಿಹರದ ದಿವಂಗತ ಎಚ್.ಶಿವಪ್ಪ ಅವರಿಗೆ ಚುನಾವಣೆ ಸಂದರ್ಭ ದೇಣಿಗೆ ಸಂಗ್ರಹಿಸಿ ಕೈಲಾದ ಸಹಾಯ ಮಾಡುತ್ತಿದ್ದ ಗ್ರಾಮಸ್ಥರು, ಈ ಬಾರಿಯೂ ಸ್ಪರ್ಧೆಗೆ ಅಣಿಯಾಗಿರುವ ಅವರ ಪುತ್ರ, ಎರಡು ಬಾರಿ ಶಾಸಕರಾಗಿದ್ದ ಜೆಡಿಎಸ್‌ನ ಎಚ್.ಎಸ್. ಶಿವಶಂಕರ್ ಪರ ದೇಣಿಗೆ ಸಂಗ್ರಹ ಕಾರ್ಯದಲ್ಲಿ ತೊಡಗಿದ್ದಾರೆ.

ಕಮಲಾಪುರ, ಹೊಳೆಸಿರಿಗೆರೆ, ಭಾನುವಳ್ಳಿ, ದೂಳೆಹೊಳೆ, ನಂದಿಗಾವಿ, ಹೊಸಳ್ಳಿ, ಹಿರೇಹೊಸಳ್ಳಿ, ಸಾಲಕಟ್ಟೆ, ಮಿಟ್ಲಕಟ್ಟೆ, ಬನ್ನಿಕೋಡು, ಸಂಕ್ಲಿಪುರ, ನಂದಿಗುಡಿ, ವಾಸನ, ಕೊಕ್ಕನೂರು, ಬೆಳ್ಳೂಡಿ, ಉಕ್ಕಡಗಾತ್ರಿ ಮತ್ತಿತರ ಗ್ರಾಮಗಳ ಜನ ಸ್ವಯಂ ಪ್ರೇರಣೆಯಿಂದಲೇ ದೇಣಿಗೆ ಸಂಗ್ರಹಿಸಿ ಚುನಾವಣೆ ಉಸ್ತುವಾರಿ ವಹಿಸಿಕೊಂಡವರಿಗೆ ನೀಡುತ್ತಾರೆ.

'ಮಧ್ಯಮ, ಕೆಳ ಮಧ್ಯಮ ವರ್ಗದ ಮತದಾರರು ಸಭೆ ಸೇರಿ, ಶಿವಶಂಕರ್ ಅವರ ಚುನಾವಣೆಯ ಖರ್ಚು ನಿಭಾಯಿಸಲು ನೆರವಾಗಲೆಂದೇ ದೇಣಿಗೆ ಸಂಗ್ರಹಿ ಸುವುದು ವಾಡಿಕೆ. ಯಾರ ಮೇಲೂ ಒತ್ತಡ ಹೇರಿ, ಇಂತಿಷ್ಟೇ ಹಣ ಕೊಡಿ ಎಂದೂ ಪೀಡಿಸುವುದಿಲ್ಲ. ಅವರವರ ಶಕ್ತ್ಯಾನುಸಾರ ಹಣ ನೀಡಬಹುದು' ಎಂದು ತಿಳಿಸಿ ದೇಣಿಗೆ ಸಂಗ್ರಹಿಸಲಾಗುತ್ತದೆ.

ಜೆ.ಎಚ್. ಪಟೇಲ್ ಸಂಪುಟದಲ್ಲಿ ಸಚಿವರಾಗಿದ್ದ ಎಚ್.ಶಿವಪ್ಪ ಅವರಿಗೂ 1994ರ ಚುನಾವಣೆಯಲ್ಲಿ ಕ್ಷೇತ್ರದ ಜನ ಧನಸಹಾಯ ಮಾಡಿದ್ದರು. 2013, 2018ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಶಿವಶಂಕರ್ ಅವರಿಗೂ ಜನರ ಸಹಾಯ ಹರಿದು ಬಂದಿತ್ತು.

'ಮತ ಯಾಚಿಸುವ ಕಾರ್ಯಕರ್ತರಿಗಾಗಿ ಮಾಡಲಾಗುವ ವಾಹನ, ಊಟ- ತಿಂಡಿ ವ್ಯವಸ್ಥೆಗೆ, ಮತಗಟ್ಟೆ, ಮತ ಎಣಿಕೆ ಏಜೆಂಟರಿಗೆ ಖರ್ಚು ಮಾಡಲು ನೆರವಾಗಲೆಂದೇ ದೇಣಿಗೆ ಸಂಗ್ರಹಿಸಿ ನೀಡುತ್ತೇವೆ. ಶಿವಪ್ಪ ಅವರ ಕುಟುಂಬದ ಮೇಲಿನ ಅಭಿಮಾನದಿಂದ ಈ ಪದ್ಧತಿ ಅನುಸರಿಸಲಾಗುತ್ತಿದೆ' ಎಂದು ಉಕ್ಕಡಗಾತ್ರಿಯ ಸಂಜೀವ ರೆಡ್ಡಿ ತಿಳಿಸಿದರು.

'ದುಡ್ಡು ಕೊಟ್ಟು ಜನರನ್ನು ಸೇರಿಸುವುದಿಲ್ಲ. ಜನರೇ ಅಭಿಮಾನದಿಂದ ಸಹಾಯ ಮಾಡಲು ಬರುತ್ತಾರೆ' ಎಂದು ವಿಧಾನ ಪರಿಷತ್ ಸದಸ್ಯರೂ ಆಗಿದ್ದ ಎಚ್.ಎಸ್. ಶಿವಶಂಕರ್ ಹೇಳಿದರು.

ಕ್ಷೇತ್ರದ ಕೂಗು

• **ಕ್ಷೇತ್ರ: ಬಾಗಲಕೋಟೆ**
• **ಶಾಸಕ: ವೀರಣ್ಣ ಚರಂತಿಮಠ (ಬಿಜೆಪಿ)**



- 2014ರ ಬಜೆಟ್‌ನಲ್ಲಿ ಘೋಷಣೆಯಾಗಿರುವ ಸರ್ಕಾರಿ ವೈದ್ಯಕೀಯ ಕಾಲೇಜು ಇನ್ನೂ ಆರಂಭವೇ ಆಗಿಲ್ಲ. ಇದು ಇನ್ನೂ ವಿಳಂಬ ಆಗಬಾರದು. ಬಾಗಲಕೋಟೆ ನಗರ ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದು, ಪುನರ್ ವಸತಿ ಕಾರ್ಯ ವೇಗ ಪಡೆದುಕೊಳ್ಳಬೇಕು. ಬಾಗಲಕೋಟೆ ತಾಲ್ಲೂಕಿನ ಅರ್ಧ ಭಾಗಕ್ಕೆ ನೀರು ಒದಗಿಸುವ ಶಿರೂರ, ಭಗವತಿ ಏತ ನೀರಾವರಿಗೆ ಮಂಜೂರಾತಿ ದೊರಕಿದ್ದು, ಕಾಮಗಾರಿ ಆರಂಭವಾಗಬೇಕು.

• **ಕ್ಷೇತ್ರ: ಹುನಗುಂದ**
• **ಶಾಸಕ: ದೊಡ್ಡನಗೌಡ ಪಾಟೀಲ (ಬಿಜೆಪಿ)**



- ₹850 ಕೋಟಿ ವೆಚ್ಚ ಮಾಡಿದ ಮರೋಳ (ರಾಮಥಾಳ) ಹನಿ ನೀರಾವರಿ ಯೋಜನೆಯಿಂದ ರೈತರ ಹೊಲಗಳಿಗೆ ನೀರು ಹರಿದಿಲ್ಲ. ಕೂಡಲೇ ನೀರು ಹರಿಸಲು ಕ್ರಮಕೈಗೊಳ್ಳಬೇಕು. ಕೂಡಲಸಂಗಮ ಅಭಿವೃದ್ಧಿಗೆ ಮಂಡಳಿ ರಚನೆಯಾಗಿದೆ. ಆದರೆ, ಅಭಿವೃದ್ಧಿ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಬಸವಣ್ಣನ ವಚನಗಳ ತತ್ವ ಪ್ರಸಾರಗೊಳಿಸುವ ನಿಟ್ಟನಲ್ಲಿ ಅಭಿವೃದ್ಧಿ ಮಾಡಬೇಕು. ಇಳಕಲ್ ಗ್ರಾನೈಟ್ ಉದ್ಯಮಕ್ಕೆ, ಇಳಕಲ್ ಸೀರೆ ಮಾರುಕಟ್ಟೆಗೆ ಕಾಯಕಲ್ಪ ಒದಗಿಸಬೇಕಿದೆ.

• **ಕ್ಷೇತ್ರ: ತೇರದಾಳ**
• **ಶಾಸಕ: ಸಿದ್ದು ಸವದಿ (ಬಿಜೆಪಿ)**



- ತೇರದಾಳ ಕ್ಷೇತ್ರದಲ್ಲಿ ದೊಡ್ಡ ಸಂಖ್ಯೆಯಲ್ಲಿ ನೇಕಾರರಿದ್ದು, ಉದ್ಯಮ ಸಂಕಷ್ಟದಲ್ಲಿದೆ. ಆ ಕ್ಷೇತ್ರಕ್ಕೆ ಕಾಯಕಲ್ಪ ನೀಡುವ ಕೆಲಸ ಆಗಬೇಕು. ಈಗಾಗಲೇ ಘೋಷಿಸಿದಂತೆ ಜವಳಿ ಪಾರ್ಕ್ ಆರಂಭಕ್ಕೆ ಕ್ರಮ ತೆಗೆದುಕೊಳ್ಳಬೇಕು. ಜವಳಿ ಮಾರುಕಟ್ಟೆಗೆ ವ್ಯವಸ್ಥೆಯಾಗಬೇಕು. ಮುಚ್ಚಿ ಹೋಗಿರುವ ಬನಹಟ್ಟಿ ಸಹಕಾರಿ ನೂಲಿನ ಗಿರಣಿ ಆರಂಭಕ್ಕೆ ಕ್ರಮಕೈಗೊಳ್ಳಬೇಕು. ಕೆರೂರಿಗೆ ಶಾಶ್ವತ ಕುಡಿಯುವ ನೀರು ಪೂರೈಸುವ ಕಾಮಗಾರಿ ನನೆಗುದಿಗೆ ಬಿದ್ದಿದ್ದು, ಅದನ್ನು ಪೂರ್ಣಗೊಳಿಸಬೇಕು. ರಬಕವಿಗೆ ಪ್ರತ್ಯೇಕ ಪೊಲೀಸ್ ಠಾಣೆಯಾಗಬೇಕು.

• **ಕ್ಷೇತ್ರ: ಬೀಳಗಿ**
• **ಶಾಸಕ: ಮುರುಗೇಶ ನಿರಾಣಿ (ಬಿಜೆಪಿ)**



- ಆಲಮಟ್ಟಿ ಹಿನ್ನೀರಿನಲ್ಲಿ ಈಗಾಗಲೇ ಹಲವು ಗ್ರಾಮಗಳು ಮುಳುಗಿವೆ. ಯುಕೆಪಿಯ ಮೂರನೇ ಹಂತದಲ್ಲಿ ಇನ್ನಷ್ಟು ಗ್ರಾಮಗಳು ಮುಳುಗಡೆಯಾಗಲಿವೆ. ಪುನರ್ ವಸತಿ ಆಗಬೇಕಿದೆ. ಹಿಂದೆ ಆಗಿರುವ ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸಬೇಕಿದೆ. ನೀರಾವರಿ ಸೌಲಭ್ಯ ಕಲ್ಪಿಸುವ ಕೆಲಸವೂ ಆಗಬೇಕಿದೆ.

• **ಕ್ಷೇತ್ರ: ಬಾದಾಮಿ**
• **ಶಾಸಕ: ಸಿದ್ದರಾಮಯ್ಯ (ಕಾಂಗ್ರೆಸ್)**



- ಕ್ಷೇತ್ರದಲ್ಲಿ ಬಾದಾಮಿ, ಪಟ್ಟದಕಲ್ಲಿನಂತಹ ವಿಶ್ವವಿಖ್ಯಾತ ಪ್ರವಾಸಿ ತಾಣಗಳಿವೆ. ಆದರೆ, ಮೂಲಸೌಕರ್ಯ ಕೊರತೆ ಇದ್ದು, ಅವುಗಳನ್ನು ಒದಗಿಸುವ ಕೆಲಸ ಆಗಬೇಕಿದೆ. ಬಾದಾಮಿ, ಕೆರೂರಗಳಿಗೆ ಶಾಶ್ವತ ಕುಡಿಯುವ ನೀರಿನ ಕಾಮಗಾರಿ ಪೂರ್ಣಗೊಳಿಸಬೇಕಿದೆ. ಕೆರೂರ ಏತ ನೀರಾವರಿ ಕಾಮಗಾರಿ ಕಾಲಮಿತಿಯಲ್ಲಿ ಪೂರ್ಣಗೊಳಿಸಿ, ಹೊಲಗಳಿಗೆ ನೀರು ಹರಿಸಬೇಕಿದೆ. ಗುಳೇದಗುಡ್ಡ ಖಣಕ್ಕೂ ಮಾರುಕಟ್ಟೆ ವ್ಯವಸ್ಥೆ ಆಗಬೇಕು. ಘೋಷಣೆಯಾಗಿರುವ ಜವಳಿ ಪಾರ್ಕ್ ಆರಂಭಿಸಬೇಕು.

• **ಕ್ಷೇತ್ರ: ಮುಧೋಳ**
• **ಶಾಸಕ: ಗೋವಿಂದ ಕಾರಜೋಳ (ಬಿಜೆಪಿ)**



- ಯುಕೆಪಿ ಯೋಜನೆಯಿಂದ ಮುಳುಗಡೆಯಾಗುವ ಗ್ರಾಮಗಳಲ್ಲಿನ ಪುನರ್ ವಸತಿ ಕಾರ್ಯ ಚುರುಕುಗೊಳ್ಳಬೇಕು. ಮುಧೋಳ–ನಿಪ್ಪಾಣಿ ರಸ್ತೆ ಚತುಷ್ಪಥ ರಸ್ತೆಯಾಗಬೇಕು. ಇಲ್ಲಿ ಕಬ್ಬು ಹೆಚ್ಚು ಬೆಳೆಯಲಾಗುತ್ತದೆ. ಸಕ್ಕರೆ ಕಾರ್ಖಾನೆಗಳೂ ಹೆಚ್ಚಿವೆ. ಹೀಗಾಗಿ ಕಬ್ಬು ಬೆಳೆಯುವ ರೈತರಿಗೆ, ಸಕ್ಕರೆ ಕಾರ್ಖಾನೆಯವರಿಗೆ ನೆರವಾಗುವಂತಹ ಸಂಶೋಧನಾ ಕೇಂದ್ರ ಆರಂಭಿಸಬೇಕು. ಸಿಮೆಂಟ್ ಸಾಗಾಟಕ್ಕೆ ರೈಲ್ವೆ ಮಾರ್ಗ ನಿರ್ಮಾಣವಾಗಬೇಕು.

• **ಕ್ಷೇತ್ರ: ಜಮಖಂಡಿ**
• **ಶಾಸಕ: ಆನಂದ ನ್ಯಾಮಗೌಡ (ಕಾಂಗ್ರೆಸ್)**



- ಜಮಖಂಡಿಯನ್ನು ಜಿಲ್ಲಾ ಕೇಂದ್ರವನ್ನಾಗಿಸಬೇಕು ಎಂಬ ಬೇಡಿಕೆ ಹಲವಾರು ವರ್ಷಗಳಿಂದ ಇದ್ದು, ಅದು ಈಡೇರಬೇಕು. ಸಾವಳಗಿಯನ್ನು ತಾಲ್ಲೂಕು ಕೇಂದ್ರವಾಗಿಸಬೇಕು. ಕುಡಚಿ- ಬಾಗಲಕೋಟೆ ರೈಲ್ವೆ ಮಾರ್ಗ ನಿರ್ಮಾಣ ಮಂದಗತಿಯಲ್ಲಿದ್ದು, ಪೂರ್ಣಗೊಳಿಸಬೇಕು. ಯುಕೆಪಿ ಯೋಜನೆಯಡಿ ಭೂಮಿ ಕಳೆದುಕೊಳ್ಳುವವರಿಗೆ ಪರಿಹಾರ ಕೊಡಬೇಕು. ಕೃಷ್ಣಾ ನದಿ ಪ್ರವಾಹ ಬಾಧಿತರಿಗೆ ಪುನರ್ ವಸತಿ ಕಲ್ಪಿಸಬೇಕು. ಬಜೆಟ್‌ನಲ್ಲಿ ಘೋಷಣೆಯಾಗಿರುವ ಮರೆಗುದ್ದಿ ಏತ ನೀರಾವರಿಗೆ ಅನುದಾನ ನೀಡಬೇಕು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಇನ್ನೊಬ್ಬರ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ, ನಮಗೆ ನಮ್ಮದೇ ಹುಚ್ಚುತನ ಕಾಣಿಸುತ್ತದೆಯೇ?

-ಶಿವರಾಮ ಕಾರಂತ

ಮಾಧ್ಯಮ ಸ್ವಾತಂತ್ರ್ಯ ಎತ್ತಿಹಿಡಿದ ಮರೆಯಲಾಗದ ತೀರ್ಪು

ಮಲಯಾಳ ಭಾಷೆಯ ಸುದ್ದಿವಾಹಿನಿ 'ಮೀಡಿಯಾಒನ್' ಮೇಲೆ ಕೇಂದ್ರ ಸರ್ಕಾರ ಹೇರಿದ್ದ ನಿರ್ಬಂಧವನ್ನು ತೆಗೆಯುವಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಒಂದು ಮೈಲಿಗಲ್ಲು. ಇದು ಮಾಧ್ಯಮಗಳ ಸ್ವಾತಂತ್ರ್ಯವನ್ನು ಎತ್ತಿಹಿಡಿಯುತ್ತದೆ ಮತ್ತು ಆ ಮೂಲಕ ಪ್ರಜೆಗಳೆಲ್ಲರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೂಡ ಎತ್ತಿಹಿಡಿಯುತ್ತದೆ. ಸರ್ಕಾರದ ಕ್ರಮಗಳ ಬಗ್ಗೆ ಈ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ವಿಮರ್ಶಾತ್ಮಕ ಮಾತುಗಳನ್ನು ಆಡಿದೆ. ಸ್ವಾತಂತ್ರ್ಯದ ಮಹತ್ವದ ಬಗ್ಗೆ ಬಹಳ ಮುಖ್ಯವಾದ ಮಾತುಗಳನ್ನು ಹೇಳಿದೆ. ಕೋರ್ಟ್ ಹೇಳಿರುವ ಮಾತುಗಳು ಹೊಸವೇನೂ ಅಲ್ಲ. ಆದರೆ, ಮಾಧ್ಯಮಗಳ ಸ್ವಾತಂತ್ರ್ಯದ ಮೇಲೆ ಗಂಭೀರ ಸವಾಲು ಎದುರಾಗಿರುವ ಕಾಲಘಟ್ಟದಲ್ಲಿ ಈ ಮಾತುಗಳನ್ನು ಪುನರುಚ್ಚರಿಸುವ ಅಗತ್ಯ ಇತ್ತು.



ಪ್ರಜಾತಂತ್ರ ವ್ಯವಸ್ಥೆಯ ಪಾಲಿಗೆ ಅತ್ಯಂತ ಮಹತ್ವದ್ದಾದ ಕೆಲವು ತತ್ವಗಳನ್ನು ಈ ತೀರ್ಪು ಸಾರಿದೆ

ಜಮಾತ್-ಎ-ಇಸ್ಲಾಮಿ ಸಂಘಟನೆಯ ಬೆಂಬಲ ಇರುವ ಮೀಡಿಯಾಒನ್ ಸುದ್ದಿ ವಾಹಿನಿಯು 2020ರಲ್ಲಿ 48 ಗಂಟೆಗಳ ಅವಧಿಗೆ ನಿಷೇಧಕ್ಕೆ ಗುರಿಯಾಗಿತ್ತು. 2020ರ ದೆಹಲಿ ಗಲಭೆಯ ವರದಿಗಾರಿಕೆಗಾಗಿ ವಾಹಿನಿಯ ಮೇಲೆ ನಿಷೇಧ ಹೇರಲಾಗಿತ್ತು. ಭದ್ರತೆಗೆ ಸಂಬಂಧಿಸಿದ ಕಾರಣಗಳನ್ನು ನೀಡಿ 2022ರಲ್ಲಿ ಈ ವಾಹಿನಿಯ ಪರವಾನಗಿಯನ್ನು ನವೀಕರಿಸಲು ಕೇಂದ್ರ ಸರ್ಕಾರ ನಿರಾಕರಿಸಿದಾಗ, ವಾಹಿನಿಯ ಪ್ರಸಾರವು ಸ್ಥಗಿತವಾಯಿತು. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದ ವಿವರಗಳನ್ನು ಪರಿಶೀಲಿಸಿದ ಕೇರಳ ಹೈಕೋರ್ಟ್, ಪರವಾನಗಿ ನವೀಕರಿಸಲು ನಿರಾಕರಿಸಿದ ತೀರ್ಮಾನವನ್ನು ಅನುಮೋದಿಸಿತ್ತು. ವಿವರಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದ ಕಾರಣದಿಂದ, ಪರವಾನಗಿ ನವೀಕರಿಸದೇ ಇದ್ದುದು ಯಾಕೆ ಎಂಬುದನ್ನು ತಿಳಿಯುವ ಅವಕಾಶವು ವಾಹಿನಿಗೆ ಇಲ್ಲವಾಗಿತ್ತು. ಆದರೆ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಕೇರಳ ಹೈಕೋರ್ಟ್‌ನ ತೀರ್ಮಾನವನ್ನು ರದ್ದುಪಡಿಸಿದೆ. ವಾಹಿನಿಯು ಮತ್ತೆ ಪ್ರಸಾರ ಆರಂಭಿಸುವುದಕ್ಕೆ ಅನುವು ಮಾಡಿಕೊಟ್ಟಿದೆ.

ಪ್ರಜಾತಂತ್ರ ವ್ಯವಸ್ಥೆಯ ಪಾಲಿಗೆ ಅತ್ಯಂತ ಮಹತ್ವದ್ದಾದ ಕೆಲವು ತತ್ವಗಳನ್ನು ಈ ತೀರ್ಪು ಸಾರಿದೆ. ಸಾಂವಿಧಾನಿಕ ಹಕ್ಕುಗಳನ್ನು ನಿರಾಕರಿಸಲು ಸರ್ಕಾರವು ನಿರ್ದಿಷ್ಟ ಕಾರಣಗಳನ್ನು ನೀಡದೆ, 'ರಾಷ್ಟ್ರೀಯ ಭದ್ರತೆ'ಯ ನೆಪವನ್ನು ಸಾರಾಸಗಟಾಗಿ ಬಳಕೆ ಮಾಡುವಂತಿಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ನಿರ್ಬಂಧವು ಸಕಾರಣದ್ದಾಗಿರಬೇಕು, ಕಾರಣಕ್ಕೆ ತಕ್ಕ ಪ್ರಮಾಣದಲ್ಲಿ ಮಾತ್ರ ನಿರ್ಬಂಧಗಳು ಇರಬೇಕು ಎಂದು ಕೋರ್ಟ್ ಹೇಳಿದೆ. 'ರಾಷ್ಟ್ರೀಯ ಭದ್ರತೆ'ಯನ್ನು ಯಾವ ಹಿನ್ನೆಲೆಯೂ ಇಲ್ಲದೆ ಬಳಕೆ ಮಾಡಲಾಗದು, ಸರ್ಕಾರವು ಮುಂದಿರಿಸುವ ಕಾರಣವನ್ನು ಸಮರ್ಥಿಸಲು ನಿರ್ದಿಷ್ಟವಾದ ವಾದಗಳು ಇರಬೇಕು, ಆ ವಾದವು ನ್ಯಾಯಾಂಗದ ಪರಾಮರ್ಶೆಯಲ್ಲಿ ಸೋಲುವಂತಿರಬಾರದು. ನಿರ್ಬಂಧಗಳನ್ನು ಪ್ರಶ್ನಿಸಲು ಅವಕಾಶ ಇಲ್ಲ ಎಂದಾದರೆ, ಯಾವ ಹಕ್ಕನ್ನೂ ನಿರ್ಬಂಧಿಸುವಂತೆ ಇಲ್ಲ. ಸರ್ಕಾರ ಹಾಗೂ ಅದರ ನೀತಿಗಳ ಬಗ್ಗೆ ಭಿನ್ನ ನಿಲುವನ್ನು ವ್ಯಕ್ತಪಡಿಸುವುದು, ಅದನ್ನು ವಿಮರ್ಶಿಸುವುದು ಆಡಳಿತ ವಿರೋಧಿ ಎಂದು ಭಾವಿಸಲಾಗದು, ಕೆಲವರು ಸರ್ಕಾರದ ವಿರುದ್ಧ ಇದ್ದಾರೆ ಅಂದಮಾತ್ರಕ್ಕೆ ಅವರ ಹಕ್ಕುಗಳನ್ನು ನಿರ್ಬಂಧಿಸುವಂತೆ ಇಲ್ಲ ಎಂದು ಕೂಡ ಕೋರ್ಟ್ ವಿವರಿಸಿದೆ. ಸರ್ಕಾರವು ತನ್ನನ್ನು ರಾಷ್ಟ್ರದ ಜೊತೆ ಸಮೀಕರಿಸಿಕೊಳ್ಳುವ ಹಾಗೂ ಸರ್ಕಾರವನ್ನು ಟೀಕಿಸುವವರನ್ನು ರಾಷ್ಟ್ರ ವಿರೋಧಿಗಳು ಎಂದು ಜರಿಯುವ ಸಾಮಾಜಿಕ ಸನ್ನಿವೇಶದಲ್ಲಿ ಈ ಮಾತನ್ನು ಹೇಳುವ ಅಗತ್ಯ ಇತ್ತು.

ಪ್ರಜೆಗಳಿಗೆ ಸಂಬಂಧಿಸಿದ ವಿವರಗಳನ್ನು ತಾನು ಗುಪ್ತವಾಗಿ ಸಂಗ್ರಹಿಸಬಹುದು ಹಾಗೂ ಆ ಮಾಹಿತಿಯನ್ನು ಕೋರ್ಟ್‌ನಲ್ಲಿ ತಾನು ಬಹಿರಂಗಪಡಿಸಬೇಕು ಎಂದೇನೂ ಇಲ್ಲ ಎಂದು ಸರ್ಕಾರ ಮುಂದಿರಿಸಿದ್ದ ವಾದವನ್ನು ನ್ಯಾಯಾಲಯವು ಒಪ್ಪಿಲ್ಲ. ಮೀಡಿಯಾಒನ್ ಪ್ರಕರಣದಲ್ಲಿ ಸರ್ಕಾರವು ಈ ರೀತಿಯಾಗಿ ವಾದ ಮಾಡಿತ್ತು. ನ್ಯಾಯದ ಪರವಾಗಿ ನಿಲ್ಲುವ, ಜನರ ಎದುರು ಕಟುವಾಸ್ತವವನ್ನು ತೆರೆದಿರಿಸುವ ಹೊಣೆಯು ಮಾಧ್ಯಮಗಳ ಮೇಲೆ ಇದೆ. ವಿದ್ಯಮಾನಗಳನ್ನು ಏಕರೂಪಿಯಾಗಿ ನೋಡುವುದು ಪ್ರಜಾತಂತ್ರದ ಪಾಲಿಗೆ ಅಪಾಯಕಾರಿ ಆಗಬಹುದು. ನ್ಯಾಯಾಲಯ ಹೇಳಿರುವ ಈ ತತ್ವಗಳು ಹಾಗೂ ಪರಿಕಲ್ಪನೆಗಳು ಮುಕ್ತ ಮತ್ತು ಪ್ರಜಾಸತ್ತಾತ್ಮಕ ದೇಶದಲ್ಲಿ ಮಾಧ್ಯಮಗಳ ಕಾರ್ಯ ನಿರ್ವಹಣೆಗೆ ಶಕ್ತಿಶಾಲಿ ನಿಯಮಗಳಂತಿವೆ. ಇವು ಸರ್ಕಾರಗಳು ಮನಸೋಇಚ್ಛೆ ಕೈಗೊಳ್ಳುವ ತೀರ್ಮಾನಗಳಿಂದ ಮಾಧ್ಯಮಗಳನ್ನು ರಕ್ಷಿಸುವ ಉದ್ದೇಶವನ್ನೂ ಹೊಂದಿವೆ. ಈ ಮಾತುಗಳು ನ್ಯಾಯಾಲಯದ ತೀರ್ಪಿಗೆ ಸೀಮಿತವಾಗಬಾರದು. ಇವುಗಳ ಆಶಯವನ್ನು ಸರ್ಕಾರವು ಪಾಲಿಸಬೇಕು.

ದಿನದ ಟ್ವೀಟ್

ಯಾವ ರೀತಿಯ ಕಷ್ಟ?



'ಕಷ್ಟದ' ಸಮಯದಲ್ಲಿ ಪಕ್ಷ ನಮ್ಮ ಕೈಬಿಟ್ಟಿದೆ ಎಂದು ಟಿಕೆಟ್ ಸಿಗದ ಕೆಲವು ಅಭ್ಯರ್ಥಿಗಳು 'ಕಣ್ಣೀರು' ಹಾಕುವ ವರದಿಯನ್ನು ಓದುತ್ತಿರುತ್ತೇವೆ. ಯಾರ ಕಷ್ಟ? ತಮ್ಮ ವೈಯಕ್ತಿಕ ಕಷ್ಟಗಳನ್ನು ನಿವಾರಿಸಿಕೊಳ್ಳಲು ಚುನಾವಣೆಗಳೇನು ಬಂಡವಾಳ ಹೂಡಿ ಲಾಭ ತಂದುಕೊಟ್ಟು ಅವರ ಕಷ್ಟ ಪರಿಹರಿಸುವ ಉದ್ಯಮಗಳೇ?

ನಾಗತಿಹಳ್ಳಿ ಚಂದ್ರಶೇಖರ, ಚಲನಚಿತ್ರ ನಿರ್ದೇಶಕ

ಕಿಡಿನುಡಿ



ನೆರೆಯ ಮಹಾರಾಷ್ಟ್ರ ಸರ್ಕಾರ ನಮ್ಮ ರಾಜ್ಯದ ಗಡಿಯೊಳಗೆ ಬಂದು ಆರೋಗ್ಯ ವಿಮೆ ಯೋಜನೆ ಸೌಲಭ್ಯ ನೀಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕರ್ನಾಟಕಕ್ಕೆ ಬಂದಾಗಲೂ ಈ ಬಗ್ಗೆ ಏಕೆ ಮಾತನಾಡುವುದಿಲ್ಲ?

ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ

ಬುಧವಾರ, 8-4-1998

• ಕೇಂದ್ರ ಸಂಪುಟಕ್ಕೆ ಮುತ್ತಯ್ಯ ಇಂದು ರಾಜೀನಾಮೆ

ಚೆನ್ನೈ, ಏ. 7– ಕೇಂದ್ರ ಭೂ ಸಾರಿಗೆ ಸಚಿವ ಸೇಡಪಟ್ಟಿ ಆರ್. ಮುತ್ತಯ್ಯ ಹಾಗೂ ಅವರ ಕುಟುಂಬದ ಸದಸ್ಯರ ವಿರುದ್ಧ ಆದಾಯ ಮೂಲಕ್ಕಿಂತ ಹೆಚ್ಚು ಆಸ್ತಿ ಗಳಿಸಿದ್ದಾರೆಂಬ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯ ಆರೋಪ ಹೊರಿಸಿರುವ ಹಿನ್ನೆಲೆಯಲ್ಲಿ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಅವರಿಗೆ ಎಐಡಿಎಂಕೆ ಪ್ರಧಾನ ಕಾರ್ಯದರ್ಶಿ ಜಯಲಲಿತಾ ಅವರು ಸೂಚನೆ ನೀಡಿದ್ದಾರೆ.

ಮುತ್ತಯ್ಯ ಅವರು ನಾಳೆ (ಬುಧವಾರ) ಬೆಳಿಗ್ಗೆ ರಾಜೀನಾಮೆ ಸಲ್ಲಿಸುವರೆಂದು ಜಯಲಲಿತಾ ಅವರು ಖುದ್ದಾಗಿ ಪ್ರಧಾನಮಂತ್ರಿ ವಾಜಪೇಯಿ ಅವರಿಗೆ ದೂರವಾಣಿ ಮೂಲಕ ತಿಳಿಸಿದ್ದಾರೆ.

ಸಾರ್ವಜನಿಕ ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಮತ್ತು ಸಿದ್ಧಾಂತವನ್ನು ಎತ್ತಿ ಹಿಡಿಯಲು ಮುತ್ತಯ್ಯ ಅವರು ರಾಜೀನಾಮೆ ನೀಡಲಿದ್ದಾರೆ ಎಂದು ಇಂದು ರಾತ್ರಿ ಜಯಲಲಿತಾ ಅವರು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

• ಭಾರತ ಗಡಿಯತ್ತ ಪಾಕ್ ಹೊಸ ಕ್ಷಿಪಣಿ ಸ್ಥಾಪನೆ

ಇಸ್ಲಾಮಾಬಾದ್, ಏ. 7 (ಪಿಟಿಐ, ಯುಎನ್‌ಐ)– 1,500 ಕಿ.ಮೀ. ವ್ಯಾಪ್ತಿಯ 'ಘೋರಿ' (ಹಾಫ್ 5) ಕ್ಷಿಪಣಿಯನ್ನು ಸೋಮವಾರ ಯಶಸ್ವಿಯಾಗಿ ಪ್ರಯೋಗಿಸಿದ ಪಾಕಿಸ್ತಾನ, ಅದನ್ನು ಪಾಕ್– ಭಾರತ ಗಡಿಯಲ್ಲಿ ಸ್ಥಾಪಿಸಲಿದೆ ಎಂದು ರಕ್ಷಣಾ ಪಡೆಯ ಮೂಲಗಳು ತಿಳಿಸಿವೆ ಎಂದು ಇಲ್ಲಿನ 'ಜಂಗ್' ಪತ್ರಿಕೆ ವರದಿ ಮಾಡಿದೆ.

ನವದೆಹಲಿ ಜೊತೆಗೆ ಇತರ ಪ್ರಮುಖ ನಗರ ಹಾಗೂ ಅಣುಸ್ಥಾವರಗಳು ಇರುವ ಮುಂಬೈ, ಅಹಮದಾಬಾದ್, ಚೆನ್ನೈ, ಟ್ರಾಂಬೆ, ನಾಗಪುರ, ಜಲಂಧರ್, ಜೈಸಲ್ಮೇರ್ ಕೂಡಾ ಕ್ಷಿಪಣಿಯ ವ್ಯಾಪ್ತಿಯಲ್ಲಿರುತ್ತವೆ ಎಂದು ಪತ್ರಿಕೆ ತಿಳಿಸಿದೆ.

50 ವರ್ಷಗಳ ಹಿಂದೆ

ಭಾನುವಾರ, 8-4-1973

• ಭದ್ರಾವತಿ ಉಕ್ಕು ಕಾರ್ಖಾನೆ ಉತ್ಪನ್ನ ಮಾರಾಟದಲ್ಲಿ ವಿಕ್ರಮ

ಬೆಂಗಳೂರು, ಏ. 7– ಕಳೆದ ಕೆಲ ವರ್ಷಗಳಿಂದ ಹಿಮ್ಮುಖವಾಗಿದ್ದ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, 72–73ನೇ ಸಾಲಿನಲ್ಲಿ ಅನೇಕ ಶಾಖೆಗಳಲ್ಲಿ ಉತ್ಪಾದನೆಯಲ್ಲಿ ವಿಕ್ರಮ ಸಾಧಿಸಿ ಹೊಸ ಅಧ್ಯಾಯವನ್ನಾರಂಭಿಸಿದೆ.

ಕಳೆದ ವರ್ಷ ವಿದ್ಯುತ್ ಖೋತಾ ಮುಂತಾದ ಅನೇಕ ಅಡ್ಡಿ ಆತಂಕಗಳನ್ನು ಎದುರಿಸಿದರೂ ಕಾರ್ಖಾನೆ ಉತ್ತಮವಾಗಿ ಕೆಲಸ ಮಾಡಿದೆಯೆಂದು ಕೈಗಾರಿಕಾ ಸಚಿವ ಎಸ್.ಎಂ. ಕೃಷ್ಣ ಅವರು ಶನಿವಾರ ವರದಿಗಾರರಿಗೆ ತಿಳಿಸಿದರು.

ಮುಂದಿನ ವರ್ಷ 'ಈ ಕಷ್ಟಗಳು' ಇರುವುದಿಲ್ಲವೆಂದು ಆಶಿಸಿದ ಸಚಿವರು ಕಳೆದ ವರ್ಷದ ಪ್ರಗತಿಗಾಗಿ ಕಾರ್ಖಾನೆ ಕಾರ್ಮಿಕರು ಹಾಗೂ ಅಧಿಕಾರಿಗಳನ್ನು ಅಭಿನಂದಿಸಿದರು.

• ಲಿಂಗನಮಕ್ಕಿಯಲ್ಲಿ ವಿದ್ಯುತ್ ಉತ್ಪನ್ನ ಕೇಂದ್ರ ಸ್ಥಾಪನೆಗೆ ಯೋಜನಾ ಆಯೋಗದ ಅಸ್ತು

ನವದೆಹಲಿ, ಏ. 7– ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ ವಿದ್ಯುದಾಗಾರವೊಂದನ್ನು ರಾಜ್ಯದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಳಗೊಂಡಂತೆಯೇ ನಿರ್ಮಿಸಲು ಯೋಜನಾ ಆಯೋಗವು ಅನುಮತಿ ನೀಡಿದೆ.

ವಿದ್ಯುದಾಗಾರ ನಿರ್ಮಿಸಲು 9 ಕೋಟಿ 37 ಲಕ್ಷ ರೂಪಾಯಿ ಖರ್ಚಾಗುವುದು. ತಲಾ 27.5 ಮೆಗಾವಾಟ್ ಸಾಮರ್ಥ್ಯದ ಎರಡು ಜಲವಿದ್ಯುತ್ ಯಂತ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. 1976– 77ರಲ್ಲಿ ಇವನ್ನು ಸ್ಥಾಪಿಸಲಾಗುವುದು.

ಪರಿಸರಸ್ನೇಹಿ ಸೌರ ಒಲೆಗಳ ಬಳಕೆಗೆ ಒತ್ತು ನೀಡಬೇಕಾದ ಅಗತ್ಯ ಇದೆ

ಮರಳಿ ಹೊಗೆಯ ಗೂಡಿಗೆ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಆಂಧ್ರಪ್ರದೇಶದ ಶೇಂಗಾ ಬೆಳೆಗಾರ ಚಂದ್ರಶೇಖರ ರೆಡ್ಡಿ, ಹರಿಯಾಣದ ಗೃಹಿಣಿ ಗೀತಾ, ಗಾಜಿಯಾಬಾದ್‌ನ ಸ್ವಚ್ಛತಾ ಕಾರ್ಮಿಕ ನರೇಶ್, ಸಾಗರದ ರೈತ ಮಹೇಶ ಇವರೆಲ್ಲರಿಗೂ ಈಗ ಅಡುಗೆ ಅನಿಲ ಕೊಳ್ಳಲು ದುಡ್ಡು ಹೊಂದಿಸುವುದೇ ತಾಪತ್ರಯ. ಅಡುಗೆ ಅನಿಲದ ಬೆಲೆ ಸಿಲಿಂಡರಿಗೆ ಸಾವಿರ ರೂಪಾಯಿ ದಾಟಿರುವುದರಿಂದ ಇವರೆಲ್ಲ ಅಡುಗೆ ಸೇರಿದಂತೆ ಗೃಹಕೃತ್ಯಗಳಿಗೆ ಒಣ ಕಟ್ಟಿಗೆಯನ್ನೇ ಉರುವಲನ್ನಾಗಿ ಬಳಸುವ ನಿರ್ಧಾರ ಮಾಡಿದ್ದಾರೆ. ಯಾವ ಹೊಗೆಯಿಂದ ಬಿಡುಗಡೆ ಪಡೆದಿದ್ದರೋ ಅದೇ ಹೊಗೆಯ ವಿಷವರ್ತುಲಕ್ಕೆ ಮತ್ತೆ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಹಳ್ಳಿಗಾಡಿನ ಜನರ ಶ್ವಾಸಕೋಶಗಳು ಅನಾರೋಗ್ಯಕರ ಹೊಗೆಯಿಂದ ತುಂಬಿಹೋಗಲಿವೆ.

ಅರಣ್ಯದಂಚಿನ ಊರುಗಳ ಜನ ಕಾಡಿನ ಕಟ್ಟಿಗೆಯನ್ನೇ ಮನೆಯ ಕೆಲಸಗಳಿಗೆ ಉರುವಲನ್ನಾಗಿ ಬಳಸುತ್ತಿದ್ದ ಕಾಲವಿತ್ತು. ಕೆಲವೆಡೆ ಈಗಲೂ ಇದೆ. ಒಣಮರ, ಮರದ ಟೊಂಗೆ, ಎಲೆಗಳು, ಕೆರೆ ಏರಿಯ ಜಾಲಿಮರದ ತುಂಡುಗಳನ್ನು ಉರುವಲನ್ನಾಗಿ ಉಪಯೋಗಿಸುವ ದೊಡ್ಡ ಜನಸಂಖ್ಯೆ ದೇಶದಲ್ಲಿತ್ತು. ಬಯಲುಸೀಮೆ, ಮಲೆನಾಡಿನ ಮನೆಗಳಲ್ಲಿ ಬೆಲ್ಲ ತಯಾರಿಸಲು, ಅಡುಗೆಗೆ, ಸ್ನಾನಕ್ಕೆ ನೀರು ಕಾಯಿಸಲು ಕಟ್ಟಿಗೆಯ ಬಳಕೆ ಯಥೇಚ್ಛವಾಗಿ ನಡೆಯುತ್ತಿತ್ತು. ಮಳೆಗಾಲದ ದಿನಗಳಲ್ಲಿ ಒಣಗಿದ ಕಟ್ಟಿಗೆ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ, ಮಳೆಗಾಲ ಮುಗಿಯುವವರೆಗೆ ಬೇಕಾಗುವಷ್ಟು ಕಟ್ಟಿಗೆ, ತೆಂಗಿನ ಸೋಗೆ, ಚಿಪ್ಪುಗಳನ್ನು ಕೂಡಿಡಲಾಗುತ್ತಿತ್ತು. ಯಾವಾಗ ನೈಸರ್ಗಿಕ ಅನಿಲವನ್ನು ಸಿಲಿಂಡರ್‌ಗಳಲ್ಲಿ ತುಂಬಿ ಅಡುಗೆ ಮನೆಗಳಲ್ಲಿ ಬಳಸುವ ಪದ್ಧತಿ ಆರಂಭವಾಯಿತೋ ಆಗ ಕಾಡಿನ ಮರಗಿಡಗಳ ಮೇಲಿನ ಒತ್ತಡ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು.

ಕೋವಿಡ್ ಸಾಂಕ್ರಾಮಿಕಕ್ಕಿಂತ ಮುಂಚೆ, ದೇಶದಲ್ಲಿ ಅಡುಗೆ ಅನಿಲ ಬಳಸುತ್ತಿದ್ದ ಪ್ರತೀ ಕುಟುಂಬವೂ ಇದಕ್ಕಾಗಿ ದಿನವೊಂದಕ್ಕೆ ಕನಿಷ್ಠ ₹ 15ನ್ನು ಖರ್ಚು ಮಾಡುತ್ತಿತ್ತು. ಈಗ ಎರಡು ಪಟ್ಟು ಖರ್ಚು ಮಾಡಬೇಕಿದೆ. ತಮಿಳುನಾಡು ಮತ್ತು ಕರ್ನಾಟಕದಲ್ಲಿ ಗೃಹ ಬಳಕೆಗಾಗಿ ಕಡಿಮೆ ಇಂಧನ ಬಳಸುವ ಅಡುಗೆ ಒಲೆ ಒದಗಿಸುತ್ತಿರುವ 'ಸಸ್ಟೇನ್‌ಟೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್'ನ ಸ್ವಾತಿ ಭೋಗ್ಲೆ, ಕೋವಿಡ್ ನಂತರದ ದಿನಗಳಲ್ಲಿ ಬಹುತೇಕ ಕೃಷಿ ಕಾರ್ಮಿಕರ ಕುಟುಂಬಗಳ ತಲಾದಾಯ ತುಂಬಾ ಕಡಿಮೆಯಾಗಿದೆ, ಅಡುಗೆ ಅನಿಲದ ದರ ಏರಿಕೆ ಬಹುತೇಕ ಕುಟುಂಬಗಳಿಗೆ ನಿಲುಕದ ಖರ್ಚೇ ಆಗಿದೆ ಎನ್ನುತ್ತಾರೆ.

ಒಂದು ಲೆಕ್ಕಾಚಾರದ ಪ್ರಕಾರ, ಹಳ್ಳಿಯ ಜನ ತಮ್ಮ ಆದಾಯದ ಶೇ 6.7ರಷ್ಟನ್ನು ಅಡುಗೆ ಅನಿಲಕ್ಕಾಗಿ ಖರ್ಚು ಮಾಡುತ್ತಾರೆ. ಇದು ಅಡುಗೆ ಅನಿಲದ ಬಳಕೆ ಪ್ರಾರಂಭಿಸುವುದಕ್ಕಿಂತ ಮುಂಚಿನ ಖರ್ಚಿಗಿಂತ ಶೇ 40ರಷ್ಟು ಹೆಚ್ಚು. ಎರಡು ವರ್ಷಗಳ ಹಿಂದೆ ₹ 580ರಷ್ಟಿದ್ದ ಎಲ್‌ಪಿಜಿ ಸಿಲಿಂಡರ್‌ನ ಬೆಲೆ ಈಗ ₹ 1,000 ದಾಟಿದೆ. ತಮಿಳುನಾಡಿನ ಕೆಲವು ಪಟ್ಟಣಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಜನ ಈಗಲೂ ಅಡುಗೆಗಾಗಿ ಸೀಮೆಎಣ್ಣೆ ಬಳಸುತ್ತಿದ್ದಾರೆ. ಸಾರ್ವಜನಿಕ ಪಡಿತರ ಅಂಗಡಿಗಳಲ್ಲಿ ₹ 15ಕ್ಕೆ ಒಂದು ಲೀಟರ್ ಸೀಮೆಎಣ್ಣೆ ದೊರಕುತ್ತದೆ. ಇದೇ ಸೀಮೆಎಣ್ಣೆ ಕಾಳಸಂತೆಯಲ್ಲಿ ₹ 100- 120ಕ್ಕೆ ಒಂದು ಲೀಟರ್‌ನಂತೆ ಮಾರಾಟವಾಗುತ್ತಿದೆ.

ನಿಶ್ಚಿತ ಆದಾಯವಿರದ ರೈತರು, ಕೂಲಿ ಕಾರ್ಮಿಕರು ಒಣಸೌದೆಯನ್ನು ಬಳಸುತ್ತಾರೆ. ಬಿಹಾರ, ಉತ್ತರ ಪ್ರದೇಶದ ಗ್ರಾಮೀಣ ಜನರು ದನದ ಸೆಗಣಿಯಿಂದ ಮಾಡಿದ ಕುರುಳನ್ನು ಸುಟ್ಟು ಅಡುಗೆ ಮಾಡುತ್ತಾರೆ. ಉತ್ತರ ಭಾರತದ ಅನೇಕ ಮನೆಗಳಲ್ಲಿ ಅಡುಗೆಗೆ ಈಗಲೂ ಕಟ್ಟಿಗೆಯೇ ಉರುವಲಾಗಿದೆ. ಇದು ಅಪಾರ ಪ್ರಮಾಣದ ಹೊಗೆ ಹೊಮ್ಮಿಸುವುದರಿಂದ ಶ್ವಾಸಕೋಶಕ್ಕೆ ದೊಡ್ಡಮಟ್ಟದ ಹಾನಿಯಾಗುತ್ತಿದೆ.

ದೆಹಲಿಯ ಅಬ್ಸರ್ವರ್ ರಿಸರ್ಚ್ ಫೌಂಡೇಶನ್ ಪ್ರಕಾರ, ಹಿಂದಿನ ಎಂಟು ವರ್ಷಗಳ ಅವಧಿಯಲ್ಲಿ ಅಡುಗೆ ಅನಿಲದ ಬೆಲೆ ದುಪ್ಪಟ್ಟಾಗಿದೆ. ಈ ಅವಧಿಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಶೇ 48ರಷ್ಟು ಕಡಿಮೆಯಾದರೂ ನಮ್ಮಲ್ಲಿ ಏರಿಕೆ ಕಂಡ ಬೆಲೆಯೇ ಮುಂದುವರಿದಿದೆ. ಆರ್ಥಿಕ ಅನುಕೂಲ ಇರುವವರಿಗೆ ಸಿಲಿಂಡರ್ ಬೆಲೆ ಏರಿಕೆಯು ಹೆಚ್ಚಿನ ಹೊರೆ ಅನಿಸದೇ ಇರಬಹುದು. ಆದರೆ ಉಳಿದವರಿಗೆ ಸಂಕಷ್ಟ ಎದುರಾಗಿದೆ.

ಸರ್ಕಾರಿ ಲೆಕ್ಕದಂತೆ, ಈಗ 9 ಕೋಟಿ ಜನರಿಗೆ ಉಚಿತ ಅಡುಗೆ ಅನಿಲ ಸಂಪರ್ಕ ನೀಡಲಾಗಿದೆ. ಆದರೆ ಇವರಲ್ಲಿ ಒಂದು ಕೋಟಿ ಜನರಿಗೆ ಇಡೀ ವರ್ಷಕ್ಕೆ ಸಿಕ್ಕ ರೀಫಿಲ್ ಸಿಲಿಂಡರ್ ಬರೀ ಒಂದು! ಗ್ಯಾಸ್‌ನ ಸಹವಾಸವೇ ಬೇಡ ಎಂದು ಎಲ್‌ಪಿಜಿ ಬದಲಿಗೆ ಸೌದೆ ಉರಿಸುವುದರಿಂದ ಶೇ 81ರಷ್ಟು ಮಹಿಳೆಯರು ತೀವ್ರ ಕೆಮ್ಮಿನಿಂದ ಮತ್ತು ಶೇ 65ರಷ್ಟು ಮಹಿಳೆಯರು ಕಣ್ಣುರಿಯಿಂದ ಬಳಲುತ್ತಿದ್ದಾರೆ ಎಂದು ಮಧ್ಯಪ್ರದೇಶದ ಸ್ವಯಂಸೇವಾ ಸಂಸ್ಥೆಯೊಂದು ವರದಿ ಮಾಡಿದೆ. ಮನೆಯೊಳಗಿನ ಮಾಲಿನ್ಯದಿಂದ ವಾರ್ಷಿಕ ಆರು ಲಕ್ಷ ಜನ ಸಾವಿಗೀಡಾಗುತ್ತಾರೆ ಎಂದು ಲ್ಯಾನ್ಸೆಟ್ ನಿಯತಕಾಲಿಕ ವರದಿ ಮಾಡಿದೆ.

ಸೌದೆ, ಅಡುಗೆ ಅನಿಲದ ಬದಲಿಗೆ ಸೌರ ಒಲೆಗಳನ್ನು ಉಪಯೋಗಿಸಲು ಬಹಳಷ್ಟು ಅವಕಾಶಗಳಿವೆ. ರೀಚಾರ್ಜ್ ಮಾಡಬಲ್ಲ 'ಸೂರ್ಯ ನೂತನ್' ಎಂಬ ಸೌರ ಒಲೆಯೂ ಮಾರುಕಟ್ಟೆಗೆ ಬಂದಿದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು ನಿರ್ಮಿಸಿರುವ ಪರಿಸರ ಸ್ನೇಹಿ 'ಅಸ್ತ್ರ' ಒಲೆ ರಾಜ್ಯದ ಬಹುಸಂಖ್ಯೆಯ ಅಡುಗೆ ಮನೆಗಳಲ್ಲಿ ಬಳಕೆಯಲ್ಲಿದೆ. ಶಾಲೆ, ಆಸ್ಪತ್ರೆ, ಆಶ್ರಮಗಳಲ್ಲೂ ಜಾಗ ಪಡೆದಿರುವ ಅಸ್ತ್ರ ಒಲೆ ಕಡಿಮೆ ಖರ್ಚು ಮತ್ತು ಹೆಚ್ಚಿನ ಅನುಕೂಲ ಒದಗಿಸುತ್ತಿದೆ.

ಸುಮಾರು 50 ವರ್ಷಗಳ ಹಿಂದೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಾರಂಭವಾದ ಅಸ್ತ್ರ (ASTRA- ಅಪ್ಲಿಕೇಶನ್ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಫಾರ್ ರೂರಲ್ ಏರಿಯಾಸ್) ಈಗ ಸಿಎಸ್‌ಟಿ-ಸೆಂಟರ್ ಫಾರ್ ಸಸ್ಟೇನಬಲ್ ಟೆಕ್ನಾಲಜೀಸ್ ಹೆಸರಿನಲ್ಲಿ ಗ್ರಾಮೀಣ ಜನರ ಬದುಕಿನ ಸುಧಾರಣೆಗೆ ಬಿಡುವಿಲ್ಲದೆ ದುಡಿಯುತ್ತಿದೆ. ಆಗ ಸಂಸ್ಥೆಯ ನಿರ್ದೇಶಕರಾಗಿದ್ದ ವಿಜ್ಞಾನಿ ಸತೀಶ್ ಧವನ್, ವಿಜ್ಞಾನದಿಂದ ಸಮಾಜಕ್ಕೆ ಹೆಚ್ಚಿನ ನೆರವು ಸಿಗಬೇಕೆಂಬ ಕಾರಣಕ್ಕೆ ಅಸ್ತ್ರ ಒಲೆ ಪ್ರಾರಂಭಿಸಿದ್ದರು. ಈ ಒಲೆಗಳನ್ನು ಗ್ರಾಮೀಣ ಪ್ರದೇಶಕ್ಕಷ್ಟೇ ಅಲ್ಲ, ಬೆಂಗಳೂರು, ಮಂಡ್ಯದಂತಹ ನಗರಗಳ ವೃದ್ಧಾಶ್ರಮ, ಶಾಲೆ, ಹೋಟೆಲ್‌ಗಳಲ್ಲೂ ನಿರಂತರವಾಗಿ ಬಳಸಲಾಗುತ್ತಿದೆ. ಶಿರಸಿ ತಾಲ್ಲೂಕಿನ 25 ಹಳ್ಳಿಗಳ ಅನೇಕ ಮನೆಗಳಲ್ಲಿ ಸಿಎಸ್‌ಟಿಯಿಂದ ತರಬೇತಿ ಪಡೆದ ನುರಿತ ಕೆಲಸಗಾರರು ನಿರ್ಮಿಸಿರುವ ಒಲೆಗಳು ಅಡುಗೆಗೆ, ಬಿಸಿನೀರು ಕಾಯಿಸಲು ಬಳಕೆಯಾಗುತ್ತಿವೆ.

'ಅಸ್ತ್ರ ಒಲೆ ಬಂದಾಗಿನಿಂದ ಕಾಡಿನ ಕಟ್ಟಿಗೆ ಆಯುವುದನ್ನು ಕಡಿಮೆ ಮಾಡಿದ್ದೇನೆ' ಎನ್ನುವ ಶಿರಸಿಯ ಚಂದ್ರಕಲಾ, 'ಹೊಗೆ, ಘಾಟು ಇಲ್ಲದೆ ಅಡುಗೆಯಾಗುತ್ತಿದೆ, ಪಾತ್ರೆಗಳನ್ನು ಬಿಸಿನೀರಿನಲ್ಲಿ ತೊಳೆಯುವಷ್ಟು ಸೌಕರ್ಯ ಸಿಕ್ಕಿದೆ' ಎನ್ನುತ್ತಾರೆ. ಅಸ್ತ್ರ ಒಲೆಯಲ್ಲಿ ಮಾಡಿದ ಅಡುಗೆ ರುಚಿಯಾಗಿರುತ್ತದೆ ಮತ್ತು ಆಹಾರ ಪೋಷಕಾಂಶಗಳು ನಾಶಗೊಳ್ಳುವುದಿಲ್ಲ ಎನ್ನುವ ಕೆಂಗೇರಿ, ದೇವನಹಳ್ಳಿ, ಮಂಡ್ಯದ ಹೋಟೆಲ್ ಮಾಲೀಕರು, ಗ್ಯಾಸ್‌ಗಾಗಿ ಮಾಡುವ ಖರ್ಚಿನಲ್ಲಿ ಬಹಳಷ್ಟು ಹಣ ಉಳಿತಾಯವಾಗುತ್ತದೆ ಎನ್ನುತ್ತಾರೆ.

ಭೂಮಿಯ ಬಿಸಿ ತಡೆಯುವಲ್ಲಿ ಸುಧಾರಿತ ಹಾಗೂ ಸುಸ್ಥಿರ ತಂತ್ರಜ್ಞಾನ ಬಳಸುತ್ತೇವೆ ಎಂದು ಜಾಗತಿಕ ಒಪ್ಪಂದಕ್ಕೆ ಅನುಸಾರವಾಗಿ ಮಾತು ಕೊಟ್ಟಿರುವ ನಾವು, ಅಡುಗೆ ಮನೆಯ ಪರಿಸರವನ್ನು ಶುಚಿಯಾಗಿ ಇಟ್ಟುಕೊಳ್ಳಬೇಕಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳ ಪೈಕಿ ಶುದ್ಧ ಇಂಧನ, ಉತ್ತಮ ಆರೋಗ್ಯ, ಜೀವನಮಟ್ಟ ಸುಧಾರಣೆ ಕಡೆ ಒತ್ತು ನೀಡುವ ಕೆಲಸಗಳು ಗಂಭೀರವಾಗಿ ನಡೆಯಬೇಕಿದೆ. ಹಾಗಿದ್ದಾಗ, ಅಡುಗೆ ಅನಿಲದ ಬೆಲೆ ದುಬಾರಿ ಎಂಬ ಕಾರಣಕ್ಕಾಗಿ ಜನರು ತಮ್ಮ ಆರೋಗ್ಯ ಹಾಳು ಮಾಡುವ, ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಹಳೆಯ ಸಾಂಪ್ರದಾಯಿಕ ಇಂಧನ ಮೂಲಗಳತ್ತ ಮುಖ ಮಾಡುವುದನ್ನು ರಚನಾತ್ಮಕವಾಗಿ ತಡೆಯಬೇಕಿದೆ.



ಚುರುಮುರಿ



ಮಾರ್ಕ್ಸ್ ವ್ಯಾಧಿ

• ಸಿ.ಎನ್.ರಾಜು

ಗಂಡನ ಜೊತೆ ಜಗಳವಾಡಿ ಅನು ಮುನಿಸಿಕೊಂಡು ಮಲಗಿದ್ದಳು. 'ಗಂಡ ಹೆಂಡ್ತಿ ಜಗಳ ಉಂಡು ಮಲಗುವ ತನಕ, ದಯವಿಟ್ಟು ಉಂಡು ಮಲಗು...' ಎಂದು ಗಿರಿ ಹೋಟೆಲ್ ಊಟ ತಂದು ಉಣ್ಣಲು ಕೊಟ್ಟ.

ಮಗಳನ್ನು ಸೇರಿಸುವ ಸ್ಕೂಲಿನ ಆಯ್ಕೆ ವಿಚಾರವಾಗಿ ಗಂಡ ಹೆಂಡತಿ ನಡುವೆ ಜಗಳವಾಗಿತ್ತು.

'ಮಕ್ಕಳಿಗೆ ಮಾರ್ಕ್ಸ್ ಕೊಡೋದ್ರಲ್ಲಿ ಆ ಸ್ಕೂಲಿನವರು ಕಂಜೂಸು. ಈ ಸ್ಕೂಲಿನವರು ಧಾರಾಳವಾಗಿ ಮಾರ್ಕ್ಸ್ ಕೊಡ್ತಾರೆ, ಈ ಸ್ಕೂಲಿಗೇ ಸೇರಿಸೋಣ' ಅನ್ನೋದು ಅನು ವಾದ.

'ಹೆಚ್ಚು ಮಾರ್ಕ್ಸ್ ಕೊಡುವ ಸ್ಕೂಲಿನ ರಿಮಾರ್ಕ್ಸ್ ಬಗ್ಗೆನೂ ಯೋಚನೆ ಮಾಡು. ಮಾರ್ಕ್ಸ್ ಮೋಹ ಅಪಾಯಕಾರಿ, ಮಾರ್ಕ್ಸ್ ವ್ಯಾಧಿಗೆ ಮದ್ದಿಲ್ಲ' ಎಂದ ಗಿರಿ.

'ವಂತಿಗೆ ಜಾಸ್ತಿ ಕೊಡಬೇಕಾಗುತ್ತದೆ ಅಂತ ಹೆಚ್ಚು ಮಾರ್ಕ್ಸ್ ಕೊಡುವ ಸ್ಕೂಲ್ ಬೇಡ ಅಂತಿದ್ದೀರಿ' ಆಕ್ಷೇಪ ಮಾಡಿದಳು.

'ಶಾಲೆಯ ವಂತಿಗೆ ಮಕ್ಕಳ ಬುದ್ಧಿವಂತಿಕೆಗೆ ಮಾನದಂಡ ಅಲ್ಲ...'

'ಈಗ ಎಲ್ಲದಕ್ಕೂ ಮಾರ್ಕ್ಸೇ ಮಾನದಂಡ ಅಲ್ಲವೇನ್ರೀ, ಮಕ್ಕಳನ್ನು ಪ್ರೋತ್ಸಾಹಿಸಲು ಆ ಸ್ಕೂಲಿನವರು ಹೆಚ್ಚು ಮಾರ್ಕ್ಸ್ ಕೊಡ್ತಾರಂತೆ. ಎಸ್ಸೆಸ್ಸೆಲ್ಸಿ ಮಕ್ಕಳು ಪಾಸಾಗಲೆಂದು ಶಿಕ್ಷಣ ಇಲಾಖೆ ಹತ್ತು ಪರ್ಸೆಂಟ್ ಕೃಪಾಂಕ ಕೊಡೋದಿಲ್ಲವೆ ಹಾಗೇ'.

'ಮಕ್ಕಳ ಜೊತೆಗೆ ಶಿಕ್ಷಣ ಇಲಾಖೆನೂ ಪಾಸಾಗಬೇಕಲ್ಲ, ಅದಕ್ಕೋಸ್ಕರ ಕೃಪಾಂಕ ನೀಡಬಹುದು'.

'ಶಿಕ್ಷಣ ಇಲಾಖೆಯೇ ಕೃಪಾಂಕದ ಕೃಪೆ ಮಾಡಿರುವುದು ಶಿಕ್ಷಣ ಸಂಸ್ಥೆಗಳು ಧರ್ಮಾಂಕ ನೀಡಿ ಮಾನ್ಯತೆ ಹೆಚ್ಚಿಸಿಕೊಳ್ಳಲು ಪ್ರೋತ್ಸಾಹ ಕೊಟ್ಟಂತೆ ಆಗಿದೆ ಕಣ್ರೀ...'

'ಹಾಗೇ ಆಗಿದೆ. ಶಿಕ್ಷಣ ಇಲಾಖೆಯೇ ಮಾರ್ಕ್ಸ್ ವ್ಯಾಧಿಗೆ ಬಲಿಯಾದರೆ ಶಿಕ್ಷಣ ಸಂಸ್ಥೆಗಳು ಸುಮ್ಮನಿರುತ್ತವಾ? ಬಟ್ಟೆ ಅಂಗಡಿಗಳಲ್ಲಿ 30- 40 ಪರ್ಸೆಂಟ್ ಡಿಸ್ಕೌಂಟ್ ಸೇಲ್ ಪ್ರಕಟಿಸಿದಂತೆ ಶಾಲೆಗಳೂ ಹೆಚ್ಚಿನ ಧರ್ಮಾಂಕದ ಆಫರ್ ಅನೌನ್ಸ್ ಮಾಡಿ ಪೋಷಕರನ್ನು ಆಕರ್ಷಿಸುವ ಪರಿಸ್ಥಿತಿ ಬರಬಹುದು...' ಎಂದು ಗಿರಿ ಕಳವಳಗೊಂಡ.

ಸಂಗತ

ರೈತರ ಸಶಕ್ತಿಗೆ ಒಕ್ಕೂಟದ ಬಲ

ಕೃಷಿಕರಿಂದ ಕೃಷಿಕರಿಗಾಗಿ ಕೃಷಿಕರಿಗೋಸ್ಕರ ಒಕ್ಕೂಟ ಕಟ್ಟಿ ಅದಕ್ಕೆ ಕಾರ್ಪೊರೇಟ್ ಸ್ಥಾನಮಾನ ನೀಡುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕಿದೆ

• ಡಾ. ಮುರಲೀಧರ ಕಿರಣಕೆರೆ

ನಮ್ಮ ಕೃಷಿ ವಲಯ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ರೋಗ ಬಾಧೆ, ಕಾರ್ಮಿಕರ ಕೊರತೆ, ಬೆಳೆಗಳಿಗೆ ಸೂಕ್ತ ಬೆಲೆ ಸಿಗದಿರುವುದು, ಆಧುನಿಕ, ವೈಜ್ಞಾನಿಕ ಪದ್ಧತಿಗಳ ಅಳವಡಿಕೆಯಲ್ಲಿನ ನಿರಾಸಕ್ತಿ, ಮಾಹಿತಿ ಕೊರತೆ, ಮಧ್ಯವರ್ತಿಗಳಿಂದ ನಿರಂತರ ಶೋಷಣೆ, ಮಾರುಕಟ್ಟೆಯ ನಾಡಿಮಿಡಿತವನ್ನು ಅರಿಯುವಲ್ಲಿ ವೈಫಲ್ಯ, ಯುವಜನರ ಪಟ್ಟಣ ವ್ಯಾಮೋಹ... ಹೀಗೆ ಬೇಸಾಯ ಕ್ಷೇತ್ರದ ಪ್ರಸ್ತುತ ಆತಂಕಕಾರಿ ಪರಿಸ್ಥಿತಿಗೆ ಕಾರಣವಾಗುತ್ತಿರುವ ಹತ್ತಾರು ಅಂಶಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ಬಹುಮುಖ್ಯವಾಗಿ, ಜಾಗತಿಕ ತಾಪಮಾನದಲ್ಲಿನ ಏರಿಕೆ ತಂದೊಡ್ಡುತ್ತಿರುವ ಹವಾಮಾನದ ವೈಪರೀತ್ಯಗಳ ಜೊತೆಗೆ ಏಕ ಬೆಳೆಯ ಮೇಲಿನ ಅವಲಂಬನೆಯಿಂದಾಗಿಯೂ ಕೃಷಿಕರ ಆರ್ಥಿಕ ಸಂಕಟ ಉಲ್ಬಣಿಸುತ್ತಿದೆ!

ಬೇಸಾಯ ಕ್ಷೇತ್ರದ ಇಂತಹ ಹತ್ತಾರು ಬವಣೆಗಳಿಂದ ಕೃಷಿಕರನ್ನು ಮುಕ್ತಗೊಳಿಸಿ ಅವರನ್ನು ಸರ್ವವಿಧದಲ್ಲೂ ಸಶಕ್ತಗೊಳಿಸುವ ದಿಸೆಯಲ್ಲಿನ ದೊಡ್ಡ ಭರವಸೆ ರೈತ ಉತ್ಪಾದಕರ ಸಂಸ್ಥೆ (ಫಾರ್ಮರ್ಸ್ ಪ್ರೊಡ್ಯೂಸರ್ ಆರ್ಗನೈಸೇಷನ್– ಎಫ್‌ಪಿಒ). ಕೃಷಿಕರಿಂದ ಕೃಷಿಕರಿಗಾಗಿ ಕೃಷಿಕರಿಗೋಸ್ಕರ ಒಕ್ಕೂಟ ಕಟ್ಟಿ ಅದಕ್ಕೆ ಕಾರ್ಪೊರೇಟ್ ಸ್ಥಾನಮಾನ ನೀಡುವ ಸರ್ಕಾರದ ಈ ಮಹತ್ವಾಕಾಂಕ್ಷಿ ಯೋಜನೆ ಜಾರಿಯಾಗಿ ಆಗಲೇ ನಾಲ್ಕು ವರ್ಷಗಳಾಗಿದ್ದರೂ ಅನುಷ್ಠಾನದಲ್ಲಿ ಮಾತ್ರ ನಿರೀಕ್ಷಿತ ಪ್ರಗತಿ ಕಾಣಿಸುತ್ತಿಲ್ಲ.

ಇದು ಕಂಪನಿ ಕಾಯ್ದೆ 2013ರ ಅಡಿಯಲ್ಲಿ ನೋಂದಣಿಯಾದ ಕಂಪನಿಯಾಗಿದ್ದು, ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ಉತ್ಪನ್ನಗಳನ್ನು ಉತ್ಪಾದಿಸುವ ಪ್ರಾಥಮಿಕ ಉತ್ಪಾದಕರಾದ ರೈತರೇ ಇಲ್ಲಿನ ಷೇರುದಾರರು. ರಾಜ್ಯಗಳ ಸಹಕಾರಿ ಕಾಯ್ದೆಯಡಿಯಲ್ಲೂ ಸಂಸ್ಥೆಯನ್ನು ನೋಂದಾಯಿಸುವ ಅವಕಾಶವಿದೆ. ಪ್ರಾಥಮಿಕ ಕೃಷಿ ಸಹಕಾರಿ ಸಂಸ್ಥೆಗಳೂ ಒಗ್ಗೂಡಿ ಈ ನಿಯಮದಡಿ ಮಾನ್ಯತೆ ಪಡೆಯಬಹುದು.

500ರಿಂದ 1000 ಷೇರುದಾರರಿರುವ ಪ್ರತೀ ರೈತೋತ್ಪಾದಕ ಕಂಪನಿಯನ್ನು ಸದೃಢವಾಗಿ ಬೆಳೆಸುವ ದಿಸೆಯಲ್ಲಿ ಮೊದಲ ಮೂರು ವರ್ಷಗಳವರೆಗೆ ಸರ್ಕಾರದಿಂದ ₹ 30 ಲಕ್ಷದವರೆಗೆ ಆರ್ಥಿಕ ನೆರವು ಸಿಗುತ್ತದೆ. ರಾಜ್ಯದಲ್ಲಿ ತೋಟಗಾರಿಕೆ, ಜಲಾನಯನ, ಕೃಷಿಯಂತಹ ಇಲಾಖೆಗಳ ಪ್ರಾಯೋಜಕತ್ವದಲ್ಲಿ ಸಾವಿರಕ್ಕೂ ಅಧಿಕ ಉತ್ಪಾದಕರ ಸಂಸ್ಥೆಗಳು ಈಗಾಗಲೇ ಆರಂಭವಾಗಿವೆ. ಇದರಲ್ಲಿ ಹಲವು ಒಕ್ಕೂಟಗಳು ಮಾದರಿಯೆನಿಸುವಂತೆ ಅತ್ಯುತ್ತಮವಾಗಿ ವ್ಯವಹಾರ ನಡೆಸುತ್ತಾ ಷೇರುದಾರ ರೈತರ ಬಾಳಿನಲ್ಲಿ ಹೊಸ ಬೆಳಕು ಮೂಡಿಸುತ್ತಿವೆ.

ಎಫ್‌ಪಿಒ ವ್ಯಾಪ್ತಿ ಅಗಾಧವಾದದ್ದು. ರೈತರು ಅದರಲ್ಲಿಯೂ ಮುಖ್ಯವಾಗಿ ಸಣ್ಣ, ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರನ್ನು ಒಗ್ಗೂಡಿಸಿ ಕೃಷಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ವರ್ಗಾಯಿಸುವುದು, ಬೇಸಾಯಕ್ಕೆ ಅಗತ್ಯವಿರುವ ಬಿತ್ತನೆ ಬೀಜ, ರಸಗೊಬ್ಬರ, ಕಳೆನಾಶಕ, ಕೀಟನಾಶಕ, ಕೃಷಿ ಪರಿಕರ, ಯಂತ್ರೋಪಕರಣಗಳ ಸೌಲಭ್ಯವನ್ನು ಕಡಿಮೆ ದರದಲ್ಲಿ ಒದಗಿಸುವುದು, ಬೆಳೆಯ ಖರ್ಚು ಕಡಿತಗೊಳಿಸುವುದು, ಉತ್ಪಾದಕತೆಯನ್ನು ಸುಧಾರಿಸುವುದು, ಉತ್ಪನ್ನಗಳ ಮೌಲ್ಯವರ್ಧನೆ, ಮಾರುಕಟ್ಟೆ ಒದಗಿಸುವಲ್ಲಿಯೂ ಸಂಸ್ಥೆ ಸಹಕರಿಸುತ್ತದೆ. ರೈತರಿಗೆ ತರಬೇತಿ, ಸಾಲ ಸೌಲಭ್ಯ, ಬೆಳೆ ವಿಮೆ ಕಲ್ಪಿಸುವುದರ ಜೊತೆಗೆ ಉತ್ಪಾದಕತೆಯಲ್ಲಿ ಗುಣಮಟ್ಟ ಮತ್ತು ಸ್ಪರ್ಧಾತ್ಮಕ ಮನೋಭಾವ ಹೆಚ್ಚಿಸುವುದು, ಉತ್ಪನ್ನಗಳ ಸಮರ್ಪಕ ಸಂಗ್ರಹ, ಕೊಯ್ಲೋತ್ತರ ನಷ್ಟ ಕಡಿಮೆಗೊಳಿಸುವುದೂ ಕಂಪನಿಯ ಕಾರ್ಯವ್ಯಾಪ್ತಿಯಲ್ಲಿ ಅಡಕವಾಗಿರುವ ಪ್ರಮುಖ ಅಂಶಗಳು.



ಕಾರ್ಮಿಕರ ಕೊರತೆಯಿಂದ ಕೃಷಿ ಕ್ಷೇತ್ರ ಕಂಗೆಟ್ಟಿರುವ ಈ ಹೊತ್ತಿನಲ್ಲಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಿ, ರಿಯಾಯಿತಿ ದರದಲ್ಲಿ ಬಾಡಿಗೆಗೆ ನೀಡುವುದು, ಕುಶಲ ಕೃಷಿ ಕಾರ್ಮಿಕರನ್ನು ನೋಂದಾಯಿಸಿಕೊಂಡು ಕೃಷಿ ಕಾರ್ಯಗಳಿಗೆ ಸಕಾಲಕ್ಕೆ ಅವರ ಲಭ್ಯತೆಯನ್ನು ದೃಢಪಡಿಸುವಂತಹ ಕ್ರಮಗಳ ಮೂಲಕ ಷೇರುದಾರ ರೈತರ ಹಿತ ಕಾಪಾಡುವುದೂ ಸಂಸ್ಥೆಯ ಜವಾಬ್ದಾರಿ. ಕಂಪನಿ ಕಾಯ್ದೆಯ ಅನ್ವಯ ಲಾಭಾಂಶದ ವಿತರಣೆ, ಲೆಕ್ಕಪತ್ರಗಳ ಸಮರ್ಪಕ ನಿರ್ವಹಣೆ, ಪಾರದರ್ಶಕ ವಹಿವಾಟು, ನಿಯಮಗಳ ಪಾಲನೆ ಕಡ್ಡಾಯವಾಗಿದ್ದು, ದುರ್ನಡತೆ, ಹಣಕಾಸು ಅವ್ಯವಹಾರದಂತಹ ಸಂದರ್ಭದಲ್ಲಿ ನಿರ್ದೇಶಕ ಮಂಡಳಿಗೆ ಕಠಿಣ ಶಿಕ್ಷೆ ನಿಗದಿಪಡಿಸಲಾಗಿದೆ.

ತಮ್ಮ ಉತ್ಪನ್ನಗಳಿಗೆ ವೈಯಕ್ತಿಕ ನೆಲೆಯಲ್ಲಿ ಸೂಕ್ತ ಮಾರುಕಟ್ಟೆ ಕಂಡುಕೊಳ್ಳುವುದು ರೈತರಿಗೆ ಕಷ್ಟದ ಕೆಲಸ. ಉತ್ಪಾದಕರ ಸಂಘಟನೆಗಳಿದ್ದಾಗ ಮಾತ್ರ ಇದು ಸುಲಭ ಸಾಧ್ಯ. ಮುಖ್ಯ ಬೆಳೆಗಳಲ್ಲದೆ ಇತರ ನಿರ್ಲಕ್ಷಿತ, ಹಿತ್ತಲ ಬೆಳೆಗಳ ಮೌಲ್ಯವರ್ಧನೆಯೂ ದೊಡ್ಡ ಮಟ್ಟದಲ್ಲಿ ಆದಾಯ ತಂದುಕೊಡಬಲ್ಲದು. ಮಾವಿನಕಾಯಿ ಉಪ್ಪಿನಕಾಯಿ, ಹಲಸಿನ ಹಪ್ಪಳ, ಚಿಪ್ಸ್, ಹಲಸಿನಬೀಜದ ಹಿಟ್ಟು, ಹಸಿರು ಬಾಳೆಕಾಯಿ ಹುಡಿ, ಬಾಳೆಕಾಯಿ ಚಿಪ್ಸ್, ಅನಾನಸ್ ಉತ್ಪನ್ನ, ಜೀರಿಗೆ ಮೆಣಸು, ಅರಿಶಿನ, ಶುಂಠಿ ಪುಡಿ, ಜೇನುತುಪ್ಪ, ವೆನಿಲ್ಲಾ, ಲವಂಗ, ಜಾಯಿಕಾಯಿಯಂತಹ ಉಪಬೆಳೆಗಳಿಂದಲೂ ಉತ್ತಮ ವರಮಾನವಿದೆ. ಕಂಪನಿ ಮೂಲಕ ನಡೆಸುವ ವ್ಯವಹಾರದಿಂದ ತಮ್ಮದೇ ಬ್ರ್ಯಾಂಡ್ ಹೆಸರಿನಲ್ಲಿ ತಾವೇ ನಿಗದಿಪಡಿಸಿದ ದರದಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡುವ ರೈತರ ಕನಸೂ ಈಡೇರುವುದು!

ಹೌದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಜಾರಿಗೆ ತಂದಿರುವ ಈ ಮಹತ್ವಾಕಾಂಕ್ಷಿ ಯೋಜನೆ ಎಲ್ಲೆಡೆ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡರೆ, ನಮ್ಮ ಕೃಷಿರಂಗದ ಚಿತ್ರಣವೇ ಸಂಪೂರ್ಣ ಬದಲಾಗುವ ಆಶಾಭಾವನೆಯಿದೆ. ಉದ್ದಿಮೆಯ ಸ್ಥಾನಮಾನ ಮತ್ತು ಸವಲತ್ತುಗಳು ಹಳ್ಳಿಯಲ್ಲಿ ಉದ್ಯೋಗ ಸೃಷ್ಟಿಯ ಜೊತೆಗೆ ಸದೃಢ ಗ್ರಾಮಭಾರತದ ಕನಸನ್ನು ನನಸಾಗಿಸಬಲ್ಲವು. ಈ ದಿಸೆಯಲ್ಲಿ ವ್ಯಾಪಕ ಪ್ರಚಾರಾಂದೋಲನದ ಅಗತ್ಯವಿದೆ.

ವಾಚಕರ ವಾಣಿ

ಮತ ದೋಚುವ ಯತ್ನ: ಬೇಕು ಬಿಗಿ ಕ್ರಮ

ಜನರು ಚುನಾವಣಾ ಅಭ್ಯರ್ಥಿಗಳಿಂದ ಹಣ ಪಡೆದು ಮತ ಚಲಾವಣೆ ಮಾಡುವ ಕುರಿತು ಹೈಕೋರ್ಟ್ ಹೇಳಿರುವ ಎಚ್ಚರಿಕೆಯ ಮಾತುಗಳು (ಪ್ರ.ವಾ., ಏ. 7) ಸಕಾಲಿಕವಾಗಿವೆ. ಹೀಗೆ ಹಣ ಪಡೆದು ಮತ ಚಲಾಯಿಸುವುದರಿಂದ ಇಡೀ ಚುನಾವಣಾ ಪಾವಿತ್ರ್ಯವೇ ಹಾಳಾಗುತ್ತದೆ. ಹೀಗಾಗಿ, ತಮ್ಮ ಬಳಿ ಹಣವಿಲ್ಲದ, ಆದರೆ ನಿಜಕ್ಕೂ ಅರ್ಹರೇ ಆಗಿರುವ ಅನೇಕರು ಚುನಾವಣೆಗೆ ಸ್ಪರ್ಧಿಸಲಾಗದಂತಹ ಅಸಹಾಯಕತೆ ಉಂಟಾಗಿದೆ. ಹಣ ನೀಡಿ ಮತ ಪಡೆದ ಅಭ್ಯರ್ಥಿ, ಗೆದ್ದ ನಂತರ ತಾನು ಚುನಾವಣೆಯಲ್ಲಿ ಖರ್ಚು ಮಾಡಿದ ಹಣವನ್ನು ಮರಳಿ ಗಳಿಸುವ ಯತ್ನ ಮಾಡುತ್ತಾನೆಯೇ ವಿನಾ ಮತದಾರರ ಹಾಗೂ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸಲಾರ. ಈ ಸಂಗತಿ ಮತದಾರರಿಗೂ ಚೆನ್ನಾಗಿ ಗೊತ್ತಿದೆ. ಆದರೆ, ಮತದಾರರ ಹಣದ ಹಪಹಪಿಯನ್ನು ಗಮನಿಸಿಯೇ ಅಭ್ಯರ್ಥಿಗಳು ಹಣದ ಆಮಿಷ ಒಡ್ಡುತ್ತಾರೆ. ಬಹುತೇಕ ಎಲ್ಲ ಚುನಾವಣೆಗಳಲ್ಲೂ ಇದೊಂದು ವಿಷವರ್ತುಲವಾಗಿ ಪರಿಣಮಿಸಿದೆ. ಹಾಗಾಗಿ, ಹಣ ಪಡೆದು ಮತ ಚಲಾಯಿಸುವುದು ತಪ್ಪೆಂದು ಹೇಳುವಂತೆಯೇ ಹಣ ನೀಡಿ ಮತ ದೋಚುವ ಯತ್ನವೂ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿ, ಚುನಾವಣಾ ಆಯೋಗವು ಬಿಗಿ ಕ್ರಮಗಳನ್ನು ಜರುಗಿಸಬೇಕು. ಇಂಥ ಕ್ರಮಗಳಿಂದ ಮಾತ್ರ ಚುನಾವಣಾ ಪಾವಿತ್ರ್ಯವನ್ನು ಕಾಪಾಡಬಹುದು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಹುಂಡಿಯ ಹಣ ಅನ್ಯ ಬಳಕೆಗಲ್ಲ

ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದ ಹುಂಡಿಯ ಹಣವನ್ನು ಸಮುದಾಯ ಭವನ ನಿರ್ಮಾಣದಂತಹ ಜನೋಪಯೋಗಿ ಕೆಲಸಗಳಿಗೆ ಬಳಸುವ ಸ್ಥಳೀಯ ಶಾಸಕರ ನಡೆ ಮಾದರಿಯಾದದ್ದಲ್ಲ. ಅಲ್ಲದೆ ಭಕ್ತರು ತಮ್ಮ ಮನಸ್ಸಿನ ಸಂತೋಷಕ್ಕಾಗಿ ಹುಂಡಿಗೆ ಹಾಕುವ ಹಣವು ಭಕ್ತರಿಗೆ ಸೌಲಭ್ಯ ಕಲ್ಪಿಸಲು ಹಾಗೂ ದೇವಸ್ಥಾನದ ಮೂಲಸೌಕರ್ಯಗಳಿಗೆ ಉಪಯೋಗವಾಗಬೇಕೆ ವಿನಾ ಅನ್ಯ ವ್ಯವಸ್ಥೆಗಲ್ಲ.

ಭಕ್ತರು ತಾವು ಆರಾಧಿಸುವ ದೈವಕ್ಕಾಗಿ ದೇಗುಲಗಳ ಹುಂಡಿಗೆ ಅತಿಯಾಗಿ ಹಣ ಹಾಕುವುದು ಸರ್ವೇ ಸಾಮಾನ್ಯ. ಅದನ್ನು ಆ ದೇವಾಲಯಕ್ಕೇ ಮುಡಿಪಾಗಿಟ್ಟರೆ ಭಕ್ತರ ಮನವು ಆನಂದದಿಂದ ನಲಿಯುತ್ತದೆ. ಅದು ಬಿಟ್ಟು ಬೇರೆ ಕೆಲಸಗಳಿಗೆ ಉಪಯೋಗಿಸುವುದು ಸಲ್ಲದು. ಪ್ರಮುಖ ದೇವಸ್ಥಾನಗಳ ಹುಂಡಿಗಳಲ್ಲಿ ಸಂಗ್ರಹವಾಗುವ ಹಣವನ್ನು ಭಾರತದಲ್ಲಿನ ಬಡತನ ನಿರ್ಮೂಲನ ಕಾರ್ಯಗಳಿಗೆ ಬಳಸಿಕೊಂಡರೆ ತಪ್ಪಿಲ್ಲ ಎನ್ನಬಹುದೇ?

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಮತದಾರರ ವಿವೇಕ ಒರೆಗೆ ಹಚ್ಚಬೇಕಾದರೆ...

'ಸಮರ್ಥ, ಯೋಗ್ಯ ಹಾಗೂ ಅರ್ಹತೆ ಉಳ್ಳವರನ್ನು ಆಯ್ಕೆ ಮಾಡುವುದು ಬುದ್ಧಿವಂತರು ಮತ್ತು ವಿವೇಕಿಗಳೂ ಆಗಿರುವ ರಾಜ್ಯದ ಮತದಾರರ ಜವಾಬ್ದಾರಿ' ಎಂದು ನಾಗರಾಜ್ ಗೊನಲ್ ಹೇಳಿದ್ದಾರೆ (ವಾ.ವಾ. ಏ.7). ಆದರೆ ಮತದಾರರು ವಿವೇಕಿಗಳು ಹಾಗೂ ಬುದ್ಧಿವಂತರೇ ಆಗಿದ್ದರೂ ಯಾರು ಅಭ್ಯರ್ಥಿಯಾಗಬೇಕು ಎಂದು ನಿರ್ಧರಿಸುವ ಅವಕಾಶ ಅವರಿಗೆ ಇರುವುದಿಲ್ಲ. ಈ ವಿಶೇಷ ಅವಕಾಶವು ರಾಜಕೀಯ ಪಕ್ಷಗಳಿಗೆ ಮಾತ್ರ ಇದೆ.

ಈ ಪಕ್ಷಗಳು ಸಮರ್ಥ, ಯೋಗ್ಯ ಹಾಗೂ ಅರ್ಹತೆ ಉಳ್ಳವರನ್ನು ಅಭ್ಯರ್ಥಿಗಳನ್ನಾಗಿ ಮಾಡಿದಾಗ ಮಾತ್ರ ಅಂಥ ಅಭ್ಯರ್ಥಿಗಳು ಮತದಾರರ ಬುದ್ಧಿವಂತಿಕೆ ಹಾಗೂ ವಿವೇಕಕ್ಕೆ ಸವಾಲಾಗುತ್ತಾರೆ. ಎಲ್ಲಿಯವರೆಗೆ ಗೆಲ್ಲುವುದಷ್ಟೇ ಅಭ್ಯರ್ಥಿಯ ಆಯ್ಕೆಗೆ ಮಾನದಂಡವಾಗಿರುತ್ತದೋ ಅಲ್ಲಿಯವರೆಗೂ ಮತದಾರರ ವಿವೇಕ ಹಾಗೂ ಬುದ್ಧಿವಂತಿಕೆ ವ್ಯರ್ಥವೇ!

ಸಾಮಗ ದತ್ತಾತ್ರಿ, ಬೆಂಗಳೂರು

ಭಾವನಾತ್ಮಕ ನಂಟಿಗೆ ಆಘಾತ

ಅಗತ್ಯ ವಸ್ತುಗಳನ್ನು ಕೊಳ್ಳಲು ಮೊನ್ನೆ ಕಿರಾಣಿ ಅಂಗಡಿಗೆ ಹೋಗಿದ್ದೆ. ನಲವತ್ತು ವರ್ಷಗಳಿಂದ ಬಳಸುತ್ತಾ ಬಂದಿರುವ ಮೈಸೂರು ಸ್ಯಾಂಡಲ್ ಸೋಪ್‌ಗೆ ಅಭ್ಯಾಸಬಲದಿಂದ ಕೈ ಹಾಕಲು ಮುಂದಾದಾಗ ಮನಸ್ಸು ಹಿಂಜರಿಯಿತು. ಚನ್ನಗಿರಿಯ ಶಾಸಕರು ಮತ್ತು ಅವರ ಪುತ್ರನ ಮೇಲೆ ಕೇಳಿಬಂದಿರುವ ಆರೋಪಗಳ ನೆನಪಾಯಿತು.

ಬಾಲ್ಯದಲ್ಲಿ ಮನೆಯ ಹತ್ತಿರ ವಾಸಿಸುತ್ತಿದ್ದ ಪೊಲೀಸ್ ಕುಟುಂಬವೊಂದು ಮಗುವಿನ ಸ್ನಾನಕ್ಕೆಂದು ಮೈಸೂರು ಸ್ಯಾಂಡಲ್ ಸಾಬೂನನ್ನೇ ತರುವಂತೆ ತಾಕೀತು ಮಾಡಿ ನನಗೆ ಕಾಸು ಕೊಟ್ಟು ಕಳಿಸುತ್ತಿತ್ತು. ಅವರು ಹೇಳಿದಂತೆಯೇ ಅದನ್ನು ತಂದುಕೊಟ್ಟಾದ ಮೇಲೆ, ಅವರು ಎಸೆಯುತ್ತಿದ್ದ ಸೋಪಿನ ಕವರ್ ಹಾಗೂ ಅದರೊಳಗಿರುವ ಹಾಳೆಯನ್ನು ಪಡೆದುಕೊಳ್ಳಲು ಅಲ್ಲೇ ಹೊರಗೆ ಕಾದುಕೊಂಡಿರುತ್ತಿದ್ದೆ. ಶ್ರೀಗಂಧದ ಬೀಡು ಕರ್ನಾಟಕ. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) ನಮ್ಮ ಹೆಮ್ಮೆಯ ಸಂಸ್ಥೆ. ಹೀಗಾಗಿ ಅದರ ಉತ್ಪನ್ನಗಳ ಬಳಕೆಗೆ ಭಾವನಾತ್ಮಕವಾಗಿ ಅಂಟಿಕೊಂಡಿದ್ದ ನನ್ನಂಥವರಿಗೆ ಈಗ ಅದು ವಿವಾದದಲ್ಲಿ ಸಿಲುಕಿರುವುದು ಅತ್ಯಂತ ಬೇಸರದ ಸಂಗತಿ.

ಈರಪ್ಪ ಎಂ.ಕಂಬಳಿ, ಬೆಂಗಳೂರು

ನೀತಿ ಸಂಹಿತೆ: ಇರಲಿ ಮಾನವೀಯ ನೆಲೆ

ರಾಜಕೀಯ ಪಕ್ಷಗಳು ಮತದಾರರಿಗೆ ಆಮಿಷಗಳನ್ನು ಒಡ್ಡಬಾರದೆಂಬ ಕಾರಣಕ್ಕೆ ಚುನಾವಣಾ ಆಯೋಗವು ರಾಜ್ಯದಲ್ಲಿ ವಿವಿಧ ನಿರ್ಬಂಧಗಳನ್ನು ವಿಧಿಸಿರುವುದು ಸರಿಯಷ್ಟೆ. ಅದರಂತೆ, ಶಿಕಾರಿಪುರದಲ್ಲಿ ಇತ್ತೀಚೆಗೆ ನಡೆದ ಶ್ರೀ ಹುಚ್ಚರಾಯಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ರಾಜಕೀಯ ಪಕ್ಷಗಳು ಸ್ಪರ್ಧೆಗೆ ಬಿದ್ದು, ಪ್ರಸಾದದ ವ್ಯವಸ್ಥೆ ಮಾಡಬಹುದೆಂಬ ಕಾರಣಕ್ಕೆ ಅನ್ನಸಂತರ್ಪಣೆಯನ್ನು ನಿಷೇಧಿಸಲಾಗಿತ್ತು. ಈ ಜಾತ್ರೆಗೆ ಬರೀ ಶಿಕಾರಿಪುರ ಮಾತ್ರವಲ್ಲದೆ ಬೆಂಗಳೂರು, ಬೆಳಗಾವಿ, ವಿಜಯಪುರ, ಬಳ್ಳಾರಿಯಂತಹ ದೂರದ ಪ್ರದೇಶಗಳಿಂದಲೂ ಬಹಳಷ್ಟು ಭಕ್ತರು ಆಗಮಿಸಿದ್ದರು. ಜಾತ್ರೆ ಎನ್ನುವುದು ಭಕ್ತರ ನಂಬಿಕೆ, ಶ್ರದ್ಧಾಭಕ್ತಿಯ ದ್ಯೋತಕ. ಜಾತ್ರೆಗೆ ಬಂದವರು ದೇವರ ದರ್ಶನ, ಪೂಜೆ ಮಾಡಿಸಿಕೊಂಡು, ಪ್ರಸಾದ ಪಡೆದು ತೆರಳುವುದು ಸಂಪ್ರದಾಯ. ಆದರೆ, ಚುನಾವಣೆಯ ನೆಪದಲ್ಲಿ ಭಕ್ತರನ್ನು ಉಪವಾಸ ಕಳುಹಿಸುವುದು ಅಸಮರ್ಥನೀಯ. ಬಿರುಬೇಸಿಗೆಯಲ್ಲಿ ಪ್ರಸಾದವಿರಲಿ, ನೀರು, ಪಾನಕ ನೀಡುವುದಕ್ಕೂ ನಿರ್ಬಂಧ ವಿಧಿಸುವುದು ಅನಗತ್ಯ ಕ್ರಮ. ಹಾಗಿದ್ದ ಮೇಲೆ ಸ್ಥಳೀಯ ಸಂಸ್ಥೆಗಳ ನೆರವಿನಿಂದ ಆಡಳಿತವೇ ಪ್ರಸಾದ, ನೀರಿನಂತಹ ಸೌಲಭ್ಯಗಳ ವ್ಯವಸ್ಥೆ ಮಾಡಬಹುದಿತ್ತು. ಯಾವುದೇ ನೀತಿ ಸಂಹಿತೆಯು ಮಾನವೀಯ ನೆಲೆಯಲ್ಲಿ ಇರಬೇಕು ಹಾಗೂ ಪ್ರಾಯೋಗಿಕವಾಗಿ ಇರಬೇಕು. ಮುಂದಿನ ದಿನಗಳಲ್ಲಿ ಆಯೋಗವು ಇಂಥ ಅತಿರೇಕದ ಕ್ರಮಗಳತ್ತ ಗಮನಹರಿಸಲಿ.

ಚನ್ನು ಹಿರೇಮಠ, ರಾಣೆಬೆನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಒಳ ಮೀಸಲಾತಿ ವಿಚಾರದಲ್ಲಿ ದಲಿತ ಸಮುದಾಯಗಳ ಕೈ ಬೆರಳುಗಳಿಂದಲೇ ದಲಿತ ಸಮುದಾಯಗಳ ಕಣ್ಣಿಗೆ ಸರ್ಕಾರವು ತಿವಿದಿದೆ; ಸ್ಪೃಶ್ಯ, ಅಸ್ಪೃಶ್ಯ ಎನ್ನುವ ತಾರತಮ್ಯವನ್ನು ಅಳಿಸುವ ಬದಲು ಇನ್ನಷ್ಟು ಆಳಗೊಳಿಸುತ್ತಿದೆ ಎನ್ನುವ ಸಿಟ್ಟು ಎಲ್ಲಾ ದಲಿತರಿಗೂ ಅರ್ಥವಾಗಿ ಆಕ್ರೋಶ ಬಹಿರಂಗವಾಗಿ ಭುಗಿಲೆದ್ದಿದೆ. ಹಾಗೆಯೇ ಒಕ್ಕಲಿಗರು ಮತ್ತು ಲಿಂಗಾಯತ ಸಮುದಾಯಗಳನ್ನು ಕೇವಲ ಮುಸ್ಲಿಂ ದ್ವೇಷದ ಅಸ್ತ್ರವಾಗಿ ಬಳಸಿ ಬಿಸಾಡುತ್ತಿದೆ ಎನ್ನುವುದು ಎರಡೂ ಸಮುದಾಯಗಳಿಗೆ ಅರ್ಥವಾಗಿದೆ

ಹಿಂದುಳಿದ ಹಿಂದೂಗಳಿಗೆ ಬಿಜೆಪಿ ಮಾಡುತ್ತಿರುವ ಪರಮ ದ್ರೋಹ



ಕರ್ನಾಟಕ ಸರ್ಕಾರವು ಮೀಸಲಾತಿ ಪ್ರಮಾಣ ಹೆಚ್ಚಳ ಮತ್ತು ಮರುಹಂಚಿಕೆ ಮಾಡಿರುವುದು ಸರಿಯೇ?

ಪ್ರಜಾವಾಣಿ ಚರ್ಚೆ

• ಪ್ರಕಾಶ್ ರಾಥೋಡ್



ಮೀಸಲಾತಿ ಪಡೆಯುವ ಹಿಂದುಳಿದ ಹಿಂದೂಗಳನ್ನು ತನ್ನ ಹುಟ್ಟಿನಿಂದಲೇ ನಿರಂತರವಾಗಿ ಅವಮಾನಿಸುತ್ತಾ ಬಂದಿರುವ ಬಿಜೆಪಿ ಇವತ್ತು ತಾನೇ ಮೀಸಲಾತಿಯ ನಿಜವಾದ ಜನಕ ಎನ್ನುವಂತೆ ಎದೆ ತಟ್ಟಿಕೊಳ್ಳುತ್ತಿದೆ.

ಸಾಮಾಜಿಕವಾಗಿ, ಶೈಕ್ಷಣಿಕವಾಗಿ ವಂಚನೆಗೆ, ತುಳಿತಕ್ಕೆ ಒಳಗಾಗಿದ್ದ ಹಿಂದುಳಿದ ಹಿಂದೂಗಳು ಸ್ವಾತಂತ್ರ್ಯಪೂರ್ವದಿಂದಲೂ ಮೀಸಲಾತಿ ಎನ್ನುವ ಸಾಮಾಜಿಕ ನ್ಯಾಯದ ನೆರಳಲ್ಲಿ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಾ ಬಂದಿದ್ದಾರೆ. ಇವರನ್ನು ಪರಸ್ಪರರ ವಿರುದ್ಧ ಕಚ್ಚಾಡಿಸಿ ಕೆಲವು ಹಿಂದುಳಿದ ಸಮುದಾಯಗಳ ಕೈ ಬೆರಳುಗಳಿಂದ ಉಳಿದ ಹಿಂದುಳಿದ ಸಮಾಜಗಳ ಕಣ್ಣಿಗೆ ತಿವಿಯುವ, ದಲಿತರ ಕೈಬೆರಳುಗಳಿಂದಲೇ ದಲಿತರ ಕಣ್ಣುಗಳಿಗೆ ತಿವಿಯುವ ಒಡೆದು ಆಳುವ ನೀತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರ ವಿಕೃತವಾಗಿ ನಡೆಸುತ್ತಿದೆ.

ಶೇ 75ರಷ್ಟಿರುವ ಹಿಂದುಳಿದ ಹಿಂದೂಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅವಕಾಶಗಳನ್ನು ಕಿತ್ತುಕೊಳ್ಳುವ ಜತೆಗೆ ರಾಜಕೀಯ ಅವಕಾಶಗಳಿಗೆ ಶಾಶ್ವತ ಗೋರಿ ತೋಡುವ ಸಂಘ ಪರಿವಾರದ ಸನಾತನ ಸಂಚಿಗೆ ಸಮಾಜವಾದಿ ಹೋರಾಟಗಳಿಂದಲೇ ರಾಜಕೀಯವಾಗಿ ಬೆಳೆದ ಬಸವರಾಜ ಬೊಮ್ಮಾಯಿಯವರು ದಾಳ ಆಗಿರುವುದು ಅತ್ಯಂತ ಶೋಚನೀಯ.

ಭ್ರಷ್ಟಾಚಾರ, ದುರಾಡಳಿತದಲ್ಲಿ ಮುಳುಗಿ ಹೋಗಿದ್ದ ಬೊಮ್ಮಾಯಿ ಅವರ ಸರ್ಕಾರ ಚುನಾವಣೆ ಎದೆ ಮೇಲೆ ಬಂದಾಗ ಮೀಸಲಾತಿ ಎನ್ನುವ ಜೇನುಗೂಡಿಗೆ ಬೆಂಕಿ ಹಚ್ಚಿದೆ. ಆ ಮೂಲಕ ಹಿಂದುಳಿದ ಹಿಂದೂಗಳಲ್ಲೇ ಕಚ್ಚಾಟ ಎಬ್ಬಿಸಿ ತಾನು ಜೇನಿನ ಸವಿಯನ್ನು ಸವಿಯಬಹುದೆನ್ನುವ ಭ್ರಮೆಯಲ್ಲಿದೆ.

ಒಳ ಮೀಸಲಾತಿಯನ್ನು ಜಾರಿಗೆ ತಂದೇ ಬಿಟ್ಟಿದ್ದೇವೆ, ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದ ಮುಸ್ಲಿಂ ಸಮುದಾಯಗಳ ಪಾಲಿನ ಶೇ 4ರಷ್ಟು ಮೀಸಲಾತಿಯನ್ನು ಕಿತ್ತು ಒಕ್ಕಲಿಗರಿಗೆ ಮತ್ತು ಲಿಂಗಾಯತರಿಗೆ ಹಂಚಿಬಿಟ್ಟಿದ್ದೇವೆ, ಪಂಚಮಸಾಲಿಗಳ ಮೀಸಲಾತಿ ಬೇಡಿಕೆಯನ್ನು ಈಡೇರಿಸಿಬಿಟ್ಟಿದ್ದೇವೆ ಎಂದು ಭಾಷಣ ಮಾಡುತ್ತಿರುವ ರಾಜ್ಯ ಮತ್ತು ಕೇಂದ್ರದ ಸಚಿವರು ಸುಳ್ಳಿನ ಮೇಲೆ ಸುಳ್ಳುಗಳನ್ನು ಹೊಸೆಯುತ್ತಾ ಬಹಿರಂಗವಾಗಿ ನಿರ್ಲಜ್ಜತನಕ್ಕಿಳಿದಿದ್ದಾರೆ.

ಬಿಜೆಪಿ ನಾಯಕರ ಭಾಷಣಗಳಲ್ಲಿರುವ ಭರವಸೆಗಳು ಬಿಜೆಪಿ ಸರ್ಕಾರದ ಆದೇಶಗಳಲ್ಲಿ ಇಲ್ಲವೇ ಇಲ್ಲ. ಒಳ ಮೀಸಲಾತಿಗೆ ಸಂಬಂಧಪಟ್ಟಂತೆ ಕೇಂದ್ರಕ್ಕೆ ಬರೆದಿರುವ ಶಿಫಾರಸು ಪತ್ರವೇ ಇರಬಹುದು; ಸಚಿವ ಸಂಪುಟದ ತೀರ್ಮಾನಗಳೇ ಇರಬಹುದು; ಹಾಗೆಯೇ, ಮುಸ್ಲಿಮರಿಗೆ ಇದ್ದ ಶೇ 4ರಷ್ಟು ಮೀಸಲಾತಿಯನ್ನು ಅವರಿಂದ ಕಿತ್ತು ಒಕ್ಕಲಿಗರು ಮತ್ತು ಲಿಂಗಾಯತರಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತಿರುವುದೇ ಇರಬಹುದು; ಈ ಸಂಬಂಧ ಸಚಿವ ಸಂಪುಟದ ತೀರ್ಮಾನಗಳು, ಸರ್ಕಾರದ ಆದೇಶಗಳು, ಉಪ ಸಮಿತಿಯ ತೀರ್ಮಾನಗಳು ಒಂದಕ್ಕೊಂದು ತದ್ವಿರುದ್ಧವಾಗಿವೆ ಮತ್ತು ಸಂವಿಧಾನ ವಿರೋಧಿಯಾಗಿವೆ.

ಮೀಸಲಾತಿ ಪಟ್ಟಿಗೆ ಯಾವುದೇ ಸಮುದಾಯವನ್ನು ಸೇರಿಸಲು, ತೆಗೆಯಲು ಹಲವು ಮಾನದಂಡಗಳನ್ನು ಅನುಸರಿಸಬೇಕು. ಅಧ್ಯಯನಗಳು ನಡೆಯಬೇಕು, ಸಮೀಕ್ಷೆಗಳು, ಜನಗಣತಿಗಳ ಆಧಾರದಲ್ಲಿ ಸಂಗ್ರಹಿಸಿದ ವೈಜ್ಞಾನಿಕ ಅಂಕಿ ಅಂಶಗಳನ್ನು ಅಂಗೈಯಲ್ಲಿ ಇಟ್ಟುಕೊಂಡು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.

ಈ ಯಾವ ಮಾನದಂಡಗಳನ್ನೂ ಅನುಸರಿಸದೆ ಚುನಾವಣೆ ಘೋಷಣೆಗೆ 24 ಗಂಟೆ ಬಾಕಿ ಇರುವಾಗ ಸರ್ಕಾರವು ತೆಗೆದುಕೊಂಡ ತೀರ್ಮಾನಗಳು ಸಾಮಾಜಿಕ ನ್ಯಾಯದ ಹರಿಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪರಿಕಲ್ಪನೆಗೆ ವಿರುದ್ಧವಾದವು. ಹಾಗೆಯೇ ಮಿಲ್ಲರ್ ಆಯೋಗ, ನಾಗನಗೌಡ ಆಯೋಗ, ಹಾವನೂರು ಆಯೋಗ, ವೆಂಕಟಸ್ವಾಮಿ ಆಯೋಗ ಮತ್ತು ಚಿನ್ನಪ್ಪರೆಡ್ಡಿ ಆಯೋಗ ಕೊಟ್ಟ ವರದಿಗಳಿಗೆ ಸಂಪೂರ್ಣ ತದ್ವಿರುದ್ಧವಾಗಿವೆ.

ಬಿಜೆಪಿ ತನ್ನ ಪದಪಾಂಡಿತ್ಯ ಮತ್ತು ಪದ ಚಮತ್ಕಾರಗಳಿಂದ ಎಲ್ಲಾ ಸಮುದಾಯಗಳನ್ನೂ ಹೇಗೆ ಬಕ್ರಾ ಮಾಡುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ತಕ್ಷಣಕ್ಕೆ ಕೆಲವು ಸುಳ್ಳುಗಳನ್ನು ಪಟ್ಟಿ ಮಾಡಬಹುದು.

- ನಾವು ಒಳ ಮೀಸಲಾತಿಯನ್ನು ಜಾರಿ ಮಾಡಿಯೇ ಬಿಟ್ಟಿದ್ದೇವೆ ಎನ್ನುವ ಬಿಜೆಪಿ ಪರಿವಾರದ ನಾಯಕರು ಮರುಕ್ಷಣವೇ ಎ.ಜೆ.ಸದಾಶಿವ ಆಯೋಗದ ವರದಿಯನ್ನು ಮಾತ್ರ ಒಪ್ಪಿಕೊಂಡಿಲ್ಲ ಮತ್ತು ಜಾರಿ ಮಾಡಿಲ್ಲ ಎನ್ನುತ್ತಾರೆ
- ಎ.ಜೆ.ಸದಾಶಿವ ಆಯೋಗದ ವರದಿ ಒಪ್ಪಿಕೊಳ್ಳದೆ ಯಾವ ಆಧಾರದಲ್ಲಿ ಒಳ ಮೀಸಲಾತಿ ಜಾರಿ ಮಾಡಿದ್ದೀರಿ ಎಂದು ಕೇಳಿದರೆ, ಸಂಪುಟ ಉಪ ಸಮಿತಿ ಶಿಫಾರಸಿನಂತೆ ಜಾರಿ ಮಾಡಿದ್ದೇವೆ ಎನ್ನುತ್ತಾರೆ. ಉಪ ಸಮಿತಿ ಶಿಫಾರಸು ಏನು ಎನ್ನುವುದನ್ನು ಏಕೆ ಬಹಿರಂಗಗೊಳಿಸಿಲ್ಲ, ಅದನ್ನು ಬಹಿರಂಗಗೊಳಿಸಿ ಎಂದರೆ ಅದರಲ್ಲಿ ಹಲವು ಗೊಂದಲಗಳಿವೆ ಅದಕ್ಕೆ ಬಹಿರಂಗಗೊಳಿಸಿಲ್ಲ ಎನ್ನುತ್ತಾರೆ
- ಮುಸ್ಲಿಮರಿಗೆ ಕೊಟ್ಟಿದ್ದ ಶೇ 4ರಷ್ಟು ಧರ್ಮಾಧಾರಿತ ಮೀಸಲಾತಿಯನ್ನು ಕಿತ್ತು ದೇಶದಲ್ಲಿ ಧರ್ಮಾಧಾರಿತ ಮೀಸಲಾತಿ ನೀತಿಯನ್ನು ಅಳಿಸಿಹಾಕಿದ್ದೇವೆ ಎಂದು ಭಾಷಣ ಮಾಡುತ್ತಾರೆ. ಆದರೆ ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಈಗಲೂ ಮುಸ್ಲಿಮರಿದ್ದಾರೆ. ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಈ ಕ್ಷಣಕ್ಕೂ ಬೌದ್ಧರು, ದಿಗಂಬರ ಜೈನರು ಮತ್ತು ಕ್ರೈಸ್ತರು ಇದ್ದಾರೆ. 13 ರಾಜ್ಯಗಳಲ್ಲಿ ಈಗಲೂ ಮುಸ್ಲಿಮರು ಹಿಂದುಳಿದ ವರ್ಗಗಳ ಪಟ್ಟಿಯಲ್ಲೇ ಇದ್ದಾರಲ್ಲಾ ಹೇಗೆ ಎಂದು ಕೇಳಿದರೆ ಅದಕ್ಕೆ ಬಿಜೆಪಿ ಪಂಡಿತರ ಬಳಿ ಉತ್ತರವಿಲ್ಲ
- ಒಕ್ಕಲಿಗರು, ಲಿಂಗಾಯತರಿಗೆ ಮುಸ್ಲಿಮರ ಪಾಲಿನ ಶೇ 4ರಷ್ಟು ಮೀಸಲಾತಿ ಕಿತ್ತು ತಲಾ ಶೇ 2ರಂತೆ ಹಂಚಿ ಆಗಿ ಹೋಗಿದೆ ಎನ್ನುತ್ತಾರೆ. ಇದಕ್ಕೆ ಸಂವಿಧಾನದ ಮಾನ್ಯತೆ ಇಲ್ಲ. ಇದು ಯಾವುದೇ ಕಾರಣಕ್ಕೂ ಜಾರಿಗೆ ಬರಲು ಸಾಧ್ಯವೇ ಇಲ್ಲ ಎನ್ನುವುದು ಸರ್ಕಾರಕ್ಕೂ ಸ್ಪಷ್ಟವಾಗಿ ಗೊತ್ತಿದೆ. ಸರ್ಕಾರದ ಈ ತೀರ್ಮಾನಕ್ಕೆ ಏನು ಆಧಾರ ಎಂದು ಕೇಳಿದರೆ ಸಚಿವ ಸಂಪುಟ ಸಭೆ ತೆಗೆದುಕೊಂಡ ತೀರ್ಮಾನವೇ ಆಧಾರ ಎನ್ನುತ್ತಾರೆ. ಮೀಸಲಾತಿ ಕುರಿತಂತೆ ಕೇವಲ ಸಂಪುಟ ಸಭೆಯ ತೀರ್ಮಾನಕ್ಕೆ ನ್ಯಾಯಾಲಯಗಳ, ಸಂವಿಧಾನದ ಮಾನ್ಯತೆ ಇಲ್ಲ

ಹೀಗಾಗಿ ಬೊಮ್ಮಾಯಿ ಅವರ ಸರ್ಕಾರ ಚುನಾವಣೆ ಘೋಷಣೆಗೆ ಮುನ್ನ ತೆಗೆದುಕೊಂಡಿರುವ ಮೀಸಲಾತಿ ಕುರಿತಾದ ಎಲ್ಲಾ ತೀರ್ಮಾನಗಳೂ ಸಂವಿಧಾನ-ಬಾಹಿರವಾಗಿವೆ. ಮೀಸಲಾತಿ ಕುರಿತಂತೆ ಸುಪ್ರೀಂ ಕೋರ್ಟ್ ಹಾಗೂ ಸಂವಿಧಾನ ಪೀಠಗಳ ಈ ಹಿಂದಿನ ಆದೇಶಗಳ ಸ್ಪಷ್ಟ ಉಲ್ಲಂಘನೆಯಾಗಿವೆ. ಸರ್ಕಾರದ ಆದೇಶ ಮತ್ತು ಪತ್ರಗಳಲ್ಲಿರುವ ಪ್ರತಿ ಸುಳ್ಳನ್ನೂ ಎಳೆಎಳೆಯಾಗಿ ಬಿಚ್ಚಿಟ್ಟು ವಿವರಿಸಬಹುದಾಗಿದೆ. ಆದರೆ, ಈ ಸರ್ಕಾರ ರಾಜಕೀಯ ಉದ್ದೇಶಕ್ಕಾಗಿ ಮಾತ್ರ ಮೀಸಲಾತಿ ಎನ್ನುವ ಮೌಲ್ಯಕ್ಕೆ ಬೆಂಕಿ ಇಟ್ಟಿರುವುದರಿಂದ ರಾಜಕೀಯವಾಗಿಯೇ ಇದಕ್ಕೆ ಈ ಕ್ಷಣಕ್ಕೆ ಇಲ್ಲಿ ಉತ್ತರ ಕೊಡುವ ಪ್ರಯತ್ನ ಮಾಡಿದ್ದೇನೆ.

ಒಳ ಮೀಸಲಾತಿ ವಿಚಾರದಲ್ಲಿ ದಲಿತ ಸಮುದಾಯಗಳ ಕೈ ಬೆರಳುಗಳಿಂದಲೇ ದಲಿತ ಸಮುದಾಯಗಳ ಕಣ್ಣಿಗೆ ಸರ್ಕಾರವು ತಿವಿದಿದೆ; ಸ್ಪೃಶ್ಯ, ಅಸ್ಪೃಶ್ಯ ಎನ್ನುವ ತಾರತಮ್ಯವನ್ನು ಅಳಿಸುವ ಬದಲು ಇನ್ನಷ್ಟು ಆಳಗೊಳಿಸುತ್ತಿದೆ ಎನ್ನುವ ಸಿಟ್ಟು ಎಲ್ಲಾ ದಲಿತರಿಗೂ ಅರ್ಥವಾಗಿ ಆಕ್ರೋಶ ಬಹಿರಂಗವಾಗಿ ಭುಗಿಲೆದ್ದಿದೆ. ಹಾಗೆಯೇ ಒಕ್ಕಲಿಗರು ಮತ್ತು ಲಿಂಗಾಯತ ಸಮುದಾಯಗಳನ್ನು ಕೇವಲ ಮುಸ್ಲಿಂ ದ್ವೇಷದ ಅಸ್ತ್ರವಾಗಿ ಬಳಸಿ ಬಿಸಾಡುತ್ತಿದೆ ಎನ್ನುವುದು ಎರಡೂ ಸಮುದಾಯಗಳಿಗೆ ಅರ್ಥವಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣೆ ಕಾಲದ ಭಾಷಣದ ಸರಕಿಗಾಗಿ ಬೊಮ್ಮಾಯಿ ಸರ್ಕಾರ ಮಾಡಿದ ಫಾಸ್ಟ್ ಫುಡ್ಎ ನ್ನುವುದೂ ನಾಡಿನ ಜನತೆಗೆ ಅರ್ಥವಾಗಿದೆ. ಮೀಸಲಾತಿ ಕುರಿತಂತೆ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಮೊದಲು ಸರ್ವಪಕ್ಷ ಸಭೆ ಕರೆದು ಚರ್ಚಿಸುತ್ತೇವೆ ಎಂದು ಸರ್ಕಾರ ಸದನದಲ್ಲೇ ಭರವಸೆ ನೀಡಿತ್ತು. ಸದನಕ್ಕೆ ಕೊಟ್ಟ ಮಾತನ್ನೂ ಸರ್ಕಾರ ಉಲ್ಲಂಘಿಸಿ ಪಾರದರ್ಶಕತೆ ಇಲ್ಲದೆ ಕಳ್ಳನಂತೆ ವರ್ತಿಸಿದೆ.

ಅರ್ಧಂಬರ್ಧ ಕಾಮಗಾರಿ ಮುಗಿಸಿದ ಹೆದ್ದಾರಿಗಳನ್ನು, ಮೆಟ್ರೋ ನಿಲ್ದಾಣಗಳನ್ನು ಪ್ರಧಾನಿಯವರ ಕೈಯಿಂದ ಉದ್ಘಾಟಿಸಿ ನಗೆಪಾಟಲಿಗೆ ಈಡಾಗುವ ತರಾತುರಿಯ ಮೂರ್ಖತನದ ಕಪಟ ನಾಟಕವನ್ನು ಮೀಸಲಾತಿ ವಿಚಾರದಲ್ಲೂ ಸರ್ಕಾರ ಆಚರಿಸಿದ್ದು ಮಾತ್ರ ಸಾಮಾಜಿಕ ನ್ಯಾಯಕ್ಕೆ, ಅಂಬೇಡ್ಕರ್ ಅವರ ಆಶಯಗಳಿಗೆ, ಸಂವಿಧಾನಕ್ಕೆ, ಸುಪ್ರೀಂ ಕೋರ್ಟ್‌ಗೆ ಮಾಡಿದ ಅವಮಾನ. ಹಿಂದುಳಿದ ಹಿಂದೂಗಳಲ್ಲಿರುವ ಶೇ 75ರಷ್ಟು ಜನರ ಬದುಕಿನ ಅವಕಾಶವನ್ನು ಕಿತ್ತುಕೊಳ್ಳುತ್ತಿರುವ ಬಿಜೆಪಿಯೇ ನಿಜವಾದ ಹಿಂದೂ ವಿರೋಧಿ ಎನ್ನುವುದು ನಮಗೆಲ್ಲರಿಗೂ ಅರ್ಥವಾಗಿದೆ.


ಈ ಜನದ್ರೋಹಕ್ಕಾಗಿ ಬಿಜೆಪಿ ಪರಿವಾರ ಜನತಾ ನ್ಯಾಯಾಲಯದ ಕಟಕಟೆಗೆ ಬಂದು ನಿಂತಿದ್ದಾಗಿದೆ. ಜನತಾ ಜನಾರ್ದನನ ತೀರ್ಪು ಸದ್ಯದಲ್ಲೇ ಬರಲಿದೆ.

ಲೇಖಕ: ವಿಧಾನ ಪರಿಷತ್ ಸದಸ್ಯ, ಕಾಂಗ್ರೆಸ್ ಮುಖಂಡ

ಜೇನಿನ ಸಿಹಿ ಕೊಟ್ಟೆವು; ಇಲ್ಲವೆನ್ನುವವರು ಸತ್ಯಕ್ಕೆ ಅಪಚಾರ ಮಾಡದಿರಲಿ

'ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ, ಇಂದಲ್ಲ ನಾಳೆ ಫಲ ಕೊಡುವುದು' ಎಂಬ ದೇವನೂರ ಮಹಾದೇವ ಅವರ ಮಾತಿನಂತೆ ನಮ್ಮ ಸರ್ಕಾರ ಯೋಚಿಸುತ್ತಿದೆ; ಯೋಜಿಸುತ್ತಿದೆ. ನಾವು ತಂದಿರುವ ಒಳಮೀಸಲಾತಿಯೂ ಸೇರಿದಂತೆ ದಲಿತರ, ಪರಿಶಿಷ್ಟರ ಪರವಾದ ಯೋಜನೆಗಳು ಇಂದಲ್ಲ ನಾಳೆಯಾದರೂ ಫಲ ಕೊಡಲಿದೆ

• ಕೋಟ ಶ್ರೀನಿವಾಸ ಪೂಜಾರಿ



ಡಾ. ಬಿ.ಆರ್. ಅಂಬೇಡ್ಕರ್ ಅವರ ನಿಲುವು ಹಾಗೂ ಸಂವಿಧಾನದ ಒಟ್ಟು ಆಶಯವೇ ಸಮಬಾಳು ಮತ್ತು ಸಮ ಪಾಲು. ಸಾಮಾಜಿಕ ನ್ಯಾಯವೆಂದರೆ ಕೆಲವರಿಂದ ಕೆಲವರಿಗಾಗಿ ಅಲ್ಲ; ಅದರ ಬದಲು ಸರ್ವರನ್ನೊಳಗೊಂಡ ಸಮಾಜ ಕಟ್ಟುವಾಗ ಸಹಜವಾಗಿಯೇ ಪರ-ವಿರೋಧದ ಧ್ವನಿಗಳು ಮುನ್ನೆಲೆಗೆ ಬರುತ್ತವೆ. ಯಾರು ಏನೇ ಅನ್ನಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿವರು ಮೀಸಲಾತಿ ಕುರಿತು ಹಲವು ನಿರ್ಧಾರ ತೆಗೆದುಕೊಳ್ಳುವಾಗ ತಾವು ಕೈ ಹಾಕುತ್ತಿರುವುದು ಜೇನುಗೂಡಿಗೆ ಎಂಬುದು ಗೊತ್ತಿತ್ತು. ಹಾಗೆಂದು ಸವಾಲುಗಳಿಗೆ ಮಣಿದು ಹೆಜ್ಜೆ ಹಿಂದಿಡುವಂತವರು ಅಲ್ಲ. ಒಳ ಮೀಸಲಾತಿಯ ವಿಚಾರದಲ್ಲೂ ಸರ್ಕಾರದ ಕಣ್ಣೆದುರು ಇದ್ದಿದ್ದು, ಮುಂದಿನ ಶತಮಾನದ ಕರ್ನಾಟಕಕ್ಕೆ ಮೀಸಲಾತಿಯ ಅನುಕೂಲಗಳು ಎಲ್ಲರಿಗಾಗಿ ಎಂಬ ಆಶಯವನ್ನು ಅನುಷ್ಠಾನ ಮಾಡಬೇಕೆಂಬ ಇಚ್ಛಾಶಕ್ತಿ ಮತ್ತು ಕ್ರಿಯಾ ಶಕ್ತಿಯಷ್ಟೆ. ಹೀಗಾಗಿಯೇ, ಹಿಂದಿನ ಸರ್ಕಾರಗಳಂತೆ ಈ ವಿಷಯದಲ್ಲಿ ಪಲಾಯನದ ಮಾತುಗಳಾಡದೆ ಜಾರಿಯ ಸಂಕಲ್ಪ ಮಾಡಿತು. ಸರ್ಕಾರದ ನಿಲುವನ್ನು ಅಚ್ಚರಿಯಿಂದ ಗಮನಿಸಿದ ಪಕ್ಷದ ವರಿಷ್ಠರು, ಬೊಮ್ಮಾಯಿಯವರ ಇಂದಿನ ದಿನಗಳನ್ನು ದೇವರಾಜ ಅರಸುರವರ ಅಂದಿನ ದಿನಗಳೊಂದಿಗೆ ತಳಕು ಹಾಕಿ ನೋಡಿದರು. ಇದರಿಂದ ಅನುಷ್ಠಾನದ ದಾರಿ ಸುಗಮವಾಯಿತು.

ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳಲ್ಲಿ ಒಂದಷ್ಟು ಮಂದಿ ಅವಕಾಶ ಪಡೆದು ಬದುಕು ಕಟ್ಟಿಕೊಂಡರಾದರೂ ಬಹುತೇಕ ಬಡ ಸಮುದಾಯಗಳಿಗೆ ಅವಕಾಶ ಸಿಗಲಿಲ್ಲ ಎಂಬ ಕೂಗು, ನೋವು ನಿರಂತರವಾಗಿತ್ತು. ಆ ಕಾರಣಕ್ಕಾಗಿಯೇ ಸದಾಶಿವ ಆಯೋಗದ ವರದಿ ಜಾರಿ ಮಾಡಲು ಬೀದಿ ಹೋರಾಟ ನಿರಂತರವಾಗಿ ನಡೆದಿತ್ತು. ಪರಿಶಿಷ್ಟ ಜಾತಿಯವರ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಏರಿಸುವ ಐತಿಹಾಸಿಕ ತೀರ್ಮಾನ ಅನೇಕರಿಗೆ ನುಂಗಲಾರದ ತುತ್ತಾಗಿ, ಅವರು ಚಡಪಡಿಸುವುದನ್ನು ಕಂಡಿದ್ದೇವೆ. ಒಳ ಮೀಸಲಾತಿಯ ಬಗ್ಗೆ ಸರ್ಕಾರವನ್ನು ಟೀಕಿಸುವ ರಾಜಕೀಯ ಮುಖಂಡರು ಸಾಮಾಜಿಕ ನ್ಯಾಯದ ಆಶಯವನ್ನೇ ಮರೆತಿರಬೇಕು ಅಥವಾ ಉದ್ದೇಶಪೂರ್ವಕವಾಗಿಯೇ ಆತ್ಮ ವಂಚನೆ ಮಾಡಿಕೊಂಡು ಆಡಳಿತವನ್ನು ಛೇಡಿಸುವ ಮಟ್ಟ ತಲುಪಿದ್ದಾರೆ. 'ಚರಂಡಿ ಸ್ವಚ್ಛಗೊಳಿಸುವವರ ಮಕ್ಕಳು ಐಎಎಸ್ ಐಪಿಎಸ್ ಅಧಿಕಾರಿಗಳ ಮಕ್ಕಳ ಜೊತೆ ಸ್ಪರ್ಧೆ ಮಾಡುವುದು ಕಷ್ಟ. ಈ ಕಾರಣಕ್ಕೆ ಸಾಮಾಜಿಕ ಶ್ರೇಣಿಯಲ್ಲಿ ಅತಿಯಾಗಿ ಹಿಂದುಳಿದವರಿಗೆ ಒಳ ಮೀಸಲಾತಿಯ ಅಗತ್ಯವಿದೆ' ಎನ್ನುವುದು ಸದಾಶಿವ ಆಯೋಗದ ಕಳಕಳಿ. ಆಯಾ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುವುದು ಸಮಪಾಲು ದೃಷ್ಟಿಯಿಂದ ಸರಿ ಎಂದು ಆಯೋಗ ತನ್ನ ವರದಿಯಲ್ಲಿ ಪ್ರತಿಪಾದಿಸಿದೆ.

ಆದಾಗ್ಯೂ ಸದಾಶಿವ ಆಯೋಗದ ವರದಿಯನ್ನು ಮಾನ್ಯ ಮಾಡುವುದಕ್ಕಿಂತ ಭಿನ್ನವಾಗಿ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿ ರಚಿಸಿ, ಸಮಿತಿ ವರದಿ ಅನುಸಾರ ಮೀಸಲಾತಿ ಹಂಚಿಕೆ ಮಾಡಿದೆ. ಪರಿಶಿಷ್ಟ ಸಮುದಾಯದ 101 ಜಾತಿಗಳಿಗೆ ಶೇ 2ರಷ್ಟು ಮೀಸಲು ಹೆಚ್ಚಳ ಮಾಡಿದಾಗ ಧೃತಿಗೆಟ್ಟು ಸರ್ಕಾರವನ್ನು ಟೀಕಿಸಿದವರೇ, ಒಳಮೀಸಲಾತಿ ಕೊಟ್ಟ ಬಳಿಕ ರಾಜ್ಯ ಸರ್ಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಹರಸಾಹಸ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾತಿ ಹೆಚ್ಚು ಮಾಡಿದ್ದು, ಮಾತ್ರವಲ್ಲ ಅದರ ಅನುಷ್ಠಾನವನ್ನು ಬೊಮ್ಮಾಯಿ ಸರ್ಕಾರ ತನ್ನ ಹಂತದಲ್ಲಿ ಮಾಡಿಯೇ ಬಿಟ್ಟಿತು ಎಂಬ ಸತ್ಯವನ್ನು ಒಪ್ಪದಿರಲು ಸಾಧ್ಯವಿಲ್ಲ. ಕಳೆದ ಸಚಿವ ಸಂಪುಟದ ನಿರ್ಣಯ ಒಪ್ಪುವವರು, ಒಪ್ಪದೇ ಇರುವವರು ಹೊರ ಪ್ರಪಂಚದಲ್ಲಿ ಇಂದು ಕೂಡಾ ಸಾಕಷ್ಟು ಮಂದಿ ಇರಬಹುದು.

ಕಸದ ರಾಶಿಯೊಂದಿಗೆ ಬದುಕು ಕಟ್ಟಿಕೊಂಡು ಕೊಳಚೆಯೊಂದಿಗೆ ಬಡಿದಾಡುವ ಪೌರಕಾರ್ಮಿಕರನ್ನು ಕಾಯಂಗೊಳಿಸಿದಾಗ, ಸಂಭ್ರಮ ಪಟ್ಟವರು ಹಲವರಾದರೆ ತಪ್ಪು ಹುಡುಕುವವರು ಕೆಲವರಿದ್ದರು. ಕಾನೂನು ಏನೇ ಹೇಳಿದರೂ, ಮಲಹೊರುವ ಪದ್ಧತಿ ನಿಷೇಧವಿದ್ದರೂ ಕಟ್ಟಿಕೊಂಡಿದ್ದ ಕಕ್ಕಸ್ಸಿನ ಗುಂಡಿಗೆ ಇಳಿದು, ಉಸಿರುಗಟ್ಟಿ ಸತ್ತ ಜನರ ಮುಂದಿನ ಪೀಳಿಗೆಯಾದರೂ ಮೀಸಲಾತಿ ಸೌಲಭ್ಯ ಪಡೆಯಬೇಕಾದರೆ ಒಳ ಮೀಸಲಾತಿ ನೀಡದೆ ಬೇರೆ ದಾರಿ ಎಲ್ಲಿದೆ? ಎರಡು ವರ್ಷದ ಮಗುವೊಂದು ದೇವಳ ಪ್ರವೇಶಿಸಿದರೆ ಅಲ್ಲೂ ಅಸ್ಪೃಶ್ಯತೆ ಹೆಸರಲ್ಲಿ ವಾದ ಮಂಡಿಸುವ ಸಮಾಜದ ಬುದ್ಧಿವಂತರ ಮಧ್ಯೆ ನೊಂದವರಿಗೆ ಆತ್ಮಸ್ಥೈರ್ಯ ತುಂಬಲು ಒಂದಷ್ಟು ಪಾಲು ಹಂಚಿ ಕೊಟ್ಟರೆ ಸರ್ಕಾರ ಅಪರಾಧಿಯಾಗುವುದು ಹೇಗೆ? ದೇವರಾಜ ಅರಸು ಅವರು ಜಾರಿಗೆ ತಂದಿದ್ದ ಜೀತ ವಿಮುಕ್ತಿ ನೀತಿ, ಋಣ ಪರಿಹಾರ ಕಾಯ್ದೆ, ಉಳುವವನೇ ಹೊಲದೊಡೆಯನೆಂಬ ಯೋಜನೆಗಳೆಲ್ಲ ಇಲ್ಲದವರ ಪರವಾಗಿದ್ದವು. ಅರಸರು ಬಡವರ ಕರುಳಬಳ್ಳಿ-ಯಾಗಿ ಉಳಿದುಕೊಂಡದ್ದು ಇದೇ ಕಾರಣಕ್ಕೆ. ಅದನ್ನೇ ಇಂದಿನ ಮುಖ್ಯಮಂತ್ರಿ ಬೊಮ್ಮಾಯಿ ಮುಂದುವರಿಸಿದ್ದಾರೆ.

ಪ್ರತಿ ಹತ್ತು ವರ್ಷಗಳಿಗೊಮ್ಮೆ ಮೀಸಲಾತಿ ಮರು ನಿಗದಿಪಡಿಸಬೇಕೆಂಬ ನಿಯಮಗಳನ್ನು ಪಾಲಿಸಬೇಕಾದವರೂ ಬಲಾಢ್ಯರಿಗೆ ಬೆದರಿ ಸುಮ್ಮನುಳಿದರೆ ಅವಕಾಶ ವಂಚಿತರಿಗೆ ನ್ಯಾಯ ನೀಡುವವರಾರು? ಸರ್ಕಾರ ಮೀಸಲಾತಿ ವಿಚಾರದಲ್ಲಿ ಸ್ಪಷ್ಟ ಅಭಿಪ್ರಾಯವನ್ನು ಹೊಂದಿದೆ. ಮಾತ್ರವಲ್ಲ, ಜಯಪ್ರಕಾಶ್ ಹೆಗ್ಡೆಯವರ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನಂತೆ ವೀರಶೈವರಿಗೆ 2ಡಿ, ಒಕ್ಕಲಿಗರಿಗೆ 2ಸಿ ನಿಯಮಗಳನ್ನು ರೂಪಿಸಿದೆ.

ಮುಸ್ಲಿಂ ಜನಾಂಗಕ್ಕೆ ಮೀಸಲಾತಿ ತೆಗೆದಿದ್ದಾರೆ ಎಂದು ಕೆಲವರು ತಗಾದೆ ತೆಗೆದಿದ್ದಾರೆ. ಆದರೆ, ನಮ್ಮ ಸರ್ಕಾರ, ಕೇಂದ್ರ ಸರ್ಕಾರದ ಇಡಬ್ಲ್ಯುಎಸ್ ಮೀಸಲಾತಿಯಡಿ ಬಡ ಮುಸ್ಲಿಂ ಸಮುದಾಯವನ್ನು ಸೇರಿಸಿ ನ್ಯಾಯ ಒದಗಿಸಿರುವ ಆದೇಶವನ್ನು ಮರೆ ಮಾಚುವುದೇಕೆ? ಶಾಸನಾತ್ಮಕ ಅಡಚಣೆ ಇಲ್ಲದೆ ಮುಸ್ಲಿಮರು ಮೀಸಲಾತಿ ಲಾಭ ಪಡೆಯುವಂತಾಗುವುದಿಲ್ಲವೇ?

ಮೀಸಲಾತಿಯ ಫಲವನ್ನು ಸಮಾಜದ ಕಟ್ಟಕಡೆಯ ಕಡುಬಡವನೊಬ್ಬನಿಗೆ ತಲುಪಿಸಲು ಬೊಮ್ಮಾಯಿ ನೇತೃತ್ವದ ಸರ್ಕಾರ ಮುಂದಾದಾಗ, ನಾಡಿನ ಸಮಾಜೋದ್ಧಾರಕರು ತಾವು ಮಾತ್ರ ಎಂದು ಬಿಂಬಿಸಿಕೊಳ್ಳುವವರು ಸ್ವಾಗತಿಸಬಹುದೆಂಬ ನಿರೀಕ್ಷೆಯಿತ್ತು. ದುರದೃಷ್ಟವೆಂದರೆ, ಅಲ್ಲಲ್ಲಿ ಮೂಡಿರುವ ಅಪಸ್ವರದ ಹಿಂದೆ ರಾಜಕಾರಣದ ಊದು ಕೊಳವೆಗಳ ಪಾತ್ರ ಎದ್ದು ಕಾಣುತ್ತಿದೆ. ಬಿಜೆಪಿ ನೇತೃತ್ವದ ಸರ್ಕಾರವೇ ದೀನ ದುರ್ಬಲರಿಗೆ ಮೀಸಲಾತಿಯನ್ನು ಹಂಚಿಕೆ ಮಾಡಿದ್ದರಿಂದಾಗಿ ಕಮಲಪಕ್ಷವನ್ನು ದಮನಿತರ ಪರವಲ್ಲದ ಪಕ್ಷ ಎಂದು ಬಾಯಿ ಬಡಿದುಕೊಳ್ಳುತ್ತಿದ್ದವರ ಬೆನ್ನುಹುರಿಗೆ ನೋವಿನ ಸೆಳೆತ ತಂದಂತಾಗಿದೆ.

ಬಿಜೆಪಿ ಬ್ರಾಹ್ಮಣರ ಪಕ್ಷ ಎಂದು ಛೇಡಿಸಿ ಅಸ್ಪೃಶ್ಯ ಸಮುದಾಯದವರಿಂದ ಕರತಾಡನ ಮಾಡಿಸಿಕೊಂಡು ಕೇಕೆ ತೆಗೆದುಕೊಳ್ಳುತ್ತಿದ್ದವರು ಮೀಸಲಾತಿಯ ಹೆಚ್ಚಳ ಮತ್ತು ಒಳ ಮೀಸಲಾತಿಯ ಅನುಷ್ಠಾನ ನೋಡಿ ತಮ್ಮ ಬಾಯಿಗೆ ತಾವೇ ಬೆರಳಿಟ್ಟುಕೊಳ್ಳುವಂತಾಗಿದೆ. ಕರ್ನಾಟಕದ ರಾಜಕಾರಣದಲ್ಲಿ ಎಲ್ಲರನ್ನೂ ಸಂತೈಸುವ ಘೋಷಣೆಗಳು ಇರುತ್ತಿದ್ದವು. ಆದರೆ, ಸವಾಲು-ಟೀಕೆಗಳನ್ನು ದಿಟ್ಟವಾಗಿ ಎದುರಿಸಿ, ಬಂದದ್ದನ್ನು ಅನುಭವಿಸಿ ಮುಂದಡಿ ಇಡುವ ನಿರ್ಣಯ ಕೈಗೊಳ್ಳುತ್ತಿದ್ದುದು ಅಪರೂಪ. ಅಂತಹ ಅಪರೂಪದಲ್ಲಿ ಅಪರೂಪದ ಒಳಮೀಸಲಾತಿ ಹಂಚಿಕೆ ಹಾಗೂ ಕಾರ್ಯಾನುಷ್ಠಾನ. ಮುಖ್ಯಮಂತ್ರಿ ಬೊಮ್ಮಾಯಿಯವರು ಅಧಿಕಾರಕ್ಕೆ ಬಂದ ನಂತರವಷ್ಟೆ ಹಲವು ದಶಕಗಳಿಂದ ನನೆಗುದಿಗೆ ಬಿದ್ದಿದ್ದ ಮೀಸಲಾತಿ ಪ್ರಮಾಣದ ಹೆಚ್ಚಳದ ಧ್ವನಿಗೆ ಮುಕ್ತಿ ದೊರೆಯಿತು. ಪಿಟಿಸಿಎಲ್ ಕಾಯ್ದೆ ಮತ್ತು 7ಡಿ ತಿದ್ದುಪಡಿಗಾಗಿ ಕಾಯುತ್ತಿದ್ದೇವೆ ಎಂಬ ಪರಿಶಿಷ್ಟ ವರ್ಗಗಳ ಆಗ್ರಹಕ್ಕೆ ಮನ್ನಣೆ ನೀಡುವ ಭರವಸೆ ಬಜೆಟ್‌ನಲ್ಲಿ ಘೋಷಣೆಯಾಯಿತು.

'ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ, ಇಂದಲ್ಲ ನಾಳೆ ಫಲ ಕೊಡುವುದು' ಎಂಬ ದೇವನೂರ ಮಹಾದೇವ ಅವರ ಮಾತಿನಂತೆ ನಮ್ಮ ಸರ್ಕಾರ ಯೋಚಿಸುತ್ತಿದೆ; ಯೋಜಿಸುತ್ತಿದೆ. ನಾವು ತಂದಿರುವ ಒಳಮೀಸಲಾತಿಯೂ ಸೇರಿದಂತೆ ದಲಿತರ, ಪರಿಶಿಷ್ಟರ ಪರವಾದ ಯೋಜನೆಗಳು ಇಂದಲ್ಲ ನಾಳೆಯಾದರೂ ಫಲ ಕೊಡಲಿದೆ. ಅಸ್ಪೃಶ್ಯತೆಯ ಅವಮಾನಕ್ಕೆ ತುತ್ತಾಗಿರುವ ಸ್ಮಶಾನದಲ್ಲಿ ಶವ ಸುಡುವವರ ಕುಟುಂಬದ ಕೊನೆಯ ಮಗುವೊಂದು ತನ್ನ ಕಾಲ ಮೇಲೆ ತಾನು ನಿಂತು ಬದುಕು ಕಟ್ಟಿಕೊಳ್ಳಬಲ್ಲದು. ಪ್ರಪಂಚದ ಕಸ ಕೊಳಕುಗಳನ್ನೆಲ್ಲ ಮೈಮರೆತು ಸ್ವಚ್ಛಗೊಳಿಸಿ ನರಕಸದೃಶ ವಾತಾವರಣದಲ್ಲಿ ಬದುಕುತ್ತಿರುವ ಬಡವರ ಮಕ್ಕಳಿಗೆ ಒಳ ಮೀಸಲಾತಿಯ ಸಹಾಯದ ಸ್ಪರ್ಶ ಸಿಕ್ಕರೆ ಆ ಕುಟುಂಬದ ಹೆಣ್ಣು ಮಗುವೊಂದು ಇಂದಲ್ಲ ನಾಳೆ ಡಾಕ್ಟರ್, ಎಂಜಿನಿಯರ್ ಆದರೂ ಆಗಬಹುದು. ಇದಕ್ಕೆ ಬೊಮ್ಮಾಯಿ ಸರ್ಕಾರದ ಇಚ್ಛಾಶಕ್ತಿ ಕಾರಣ.

ಜೇನುಗೂಡಿಗೆ ಕೈ ಇಕ್ಕಿದ್ದು ಹೌದು, ಜೇನು ತಟ್ಟೆಯ ಮುಟ್ಟಿ ಸಿಹಿ ಜೇನು ತೆಗೆದು ಜೀವನದಲ್ಲಿ ಜೇನನ್ನು ಕಾಣದವರ ಬಾಯಿಗೆ ಒದಗಿಸಿದ್ದು ಸತ್ಯ. ಈ ಸಾಹಸವನ್ನು ಬಿಜೆಪಿ ಸರ್ಕಾರ ಮಾಡಿದೆ. ಅಲ್ಲ ಎನ್ನುವವರು ಸತ್ಯಕ್ಕೆ ಅಪಚಾರ ಮಾಡದಿರಲಿ.

ಲೇಖಕ: ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ಪದಬಂಧ 5282


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಗುರಿಯನ್ನು ಮುಟ್ಟಲು ಸಂಕಲ್ಪ ಮಾಡಿದವನು (5)
2. ಬಹಳ ಮುಖ್ಯವಾದುದು (3)
5. ಮಡಿವಂತ ನೀಡಿರುವ ಪ್ರತ್ಯುತ್ತರ (4)
7. ಮರ್ಯಾದೆ ಹೊಂದಿರುವ ಒಡೆಯ (4)
9. ವಿದ್ಯಾರ್ಹತೆಯ ಪ್ರಶಸ್ತಿ ನೀಡುವುದು (5)
13. ಮತದೊಳಗಿರುವ ಅಭಿಪ್ರಾಯ (4)
15. ಆನಂದಾನುಭವಕ್ಕೆ ಉಂಟಾಗಿರುವ ಅಡ್ಡಿ (4)
16. ಯಾರಿಗೂ ಗೊತ್ತಾಗದ ಗುಟ್ಟು (3)
17. ಕನ್ನಡಿಗನ ಲೈಬ್ರರಿ (5)

ಮೇಲಿಂದ ಕೆಳಕ್ಕೆ

1. ಅಧಿಕ ಸಂಖ್ಯಾತರ ಅಭಿಪ್ರಾಯ (4)
3. ತುಸುವೇ ಬೀರಿದ ಮಂದಹಾಸ (4)
4. ಗಾಯಕಿಗಾದ ಪೆಟ್ಟು (2)
6. ದಡಿಯ ಹಿಡಿದಿರುವ ವಾದ್ಯವಿಲ್ಲಿ ಉಲ್ಟಾ ಆಗಿದೆ (3)
8. ಜನರ ನಡುವಿರುವ ಸೇವಕ (3)
9. ಹೂವಿನಲ್ಲಿನ ಹುಡಿ (3)
10. ದಾರ ಹಿಡಿದಿರುವ ಉದಾರಿ (3)
11. ನರನು ಮಾಡಿರುವ ನಮನ (4)
12. ಒಳ್ಳೆಯ ಕಾಲವಿದು (4)
14. ವಿಷಯವನ್ನು ಬಲ್ಲವನು (2)



5281ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಧುಕರ 3.ಪಾರಂಗತ 5.ತಿಕ್ಕಲು 6.ನಿಯೋಗ 8.ಬಾವಲಿ 9.ನಯನ 10.ತ್ರಿಶಂಕು 12. ಚಾಳೀಸು 14.ಕಳೇಬರ 15.ಮನೋಹರ

ಮೇಲಿಂದ ಕೆಳಕ್ಕೆ: 1.ಮಯನಿ 2.ರತಿ 3.ಪಾಲು 4.ತಕಲಿ 7.ಗಜಗಮನ 8.ಬಾಜಾಬಜಂತ್ರಿ 9.ನರ್ತಕ 11.ಕುಬೇರ 12.ಚಾರ 13.ಸುಮ

ಸುಡೊಕು 5668

	2	1		8				
			1		6			
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8

5667 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಿತೀಯ ಗಂ. 10-11ನಕ್ಷತ್ರ: ಸ್ವಾತಿ ಗಂ. 13-59 ಯೋಗ: ವಜ್ರ ಗಂ. 23-58, ಕರಣ: ಗರಜೆ ಗಂ. 10-11, ಮೀನ ಮಾಸದ 24 ನೇ ದಿನ, ಮಳೆನಕ್ಷತ್ರ: ರೇವತಿ 3, ರಾಹುಕಾಲ : ಬೆಳಿಗ್ಗೆ 09-00 – 10-30ಸೂರ್ಯೋದಯ : 06-26 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 16 ರಂಜಾನ್
ದಿನ ವಿಶೇಷ : ಈಸ್ಟರ್ (ಹೋಳಿ), ಶನಿವಾರ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 9, 1

ಮೇಷ: ಕಾರ್ಯಕ್ಷೇತ್ರದಲ್ಲಿ ಶಕ್ತಿಯುತ ಅಧಿಕಾರ ಸ್ಥಾಪಿಸಲು ಅನುಕೂಲಕರ ಸಮಯ ನಿರ್ಮಾಣವಾಗಲಿದೆ. ಕುಟುಂಬದ ವ್ಯಕ್ತಿಗಳ ನಿರೀಕ್ಷೆಗಳನ್ನು ಸೂಕ್ಷ್ಮವಾಗಿ ತಿಳಿದು ಅದರಂತೆ ಬದುಕುವುದು ಸರ್ವಕ್ಷೇಮ.

ವೃಷಭ: ಪಾರಮಾರ್ಥಿಕವಾಗಿ ಸಾಧನೆಗಳೆಷ್ಟೇ ಇದ್ದರೂ ಸಮಾಜದಲ್ಲಿ ಬದುಕುವಾಗ ಲೌಕಿಕ ಜ್ಞಾನದ ಅಗತ್ಯ ಇದ್ದೇ ಇರಬೇಕೆಂಬುವುದನ್ನು ಸ್ಮರಿಸಿ. ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಉದಾಸೀನತೆ ತೋರಿಸಿಕೊಳ್ಳಬೇಡಿ.

ಮಿಥುನ: ಸ್ನೇಹಿತನ ಕೆಲವು ಅನಿರೀಕ್ಷಿತ ನಡೆ ಗುರುತಿಸಿ ಆತನ ಮಾನಸಿಕ ಖಿನ್ನತೆ ಬೆಳಕಿಗೆ ತರುವಂಥ ಕೆಲಸ ಮಾಡುವ ಸಾಧ್ಯತೆ ಇದೆ. ಭಗವಂತನ ಕೆಲವು ಮುನ್ಸೂಚನೆಗಳನ್ನು ಪರಾಮರ್ಶಿಸಿ ನೋಡಿ.

ಕರ್ಕಾಟಕ: ಸಾಮರಸ್ಯದ ಬದುಕನ್ನು ಮಕ್ಕಳಿಗೆ ಮನವರಿಕೆ ಮಾಡದ ಹೊರತು ಕುಟುಂಬದ ಕಲಹಗಳಿಗೆ ಇತ್ಯರ್ಥವಿಲ್ಲ. ಬುದ್ಧಿವಂತಿಕೆ ಉಪಯೋಗಿಸಿ ಗ್ರಾಹಕರಲ್ಲಿ ವ್ಯವಹರಿಸಿದರೆ ಲಾಭದ ದಿನವಾಗುತ್ತದೆ.

ಸಿಂಹ: ಹಗಲು ರಾತ್ರಿ ಎಂದೆನ್ನದೆ ಪಟ್ಟ ಶ್ರಮವು ಉತ್ತಮ ಫಲ ಶೀಘ್ರವಾಗಿ ನೀಡಲಿದೆ. ತೃಪ್ತಿಕರ ಜೀವನವನ್ನು ನಡೆಸುವುದು ಎಲ್ಲರಿಗೂ ಆದರ್ಶಪ್ರಾಯವಾಗಲಿದೆ. ವಿವಾಹದಂತಹ ಶುಭಕಾರ್ಯಗಳ ನಿರೀಕ್ಷೆ ಮಾಡಬಹುದು.

ಕನ್ಯಾ: ಕೃತಕವಾದ ನಗುವಿನ ಮುಖವಾಡ ಇಂದು ಕಳಚುವ ಸಾಧ್ಯತೆ ಇದೆ. ನವದಂಪತಿ ಪ್ರಯಾಣ ಮಾಡುವುದಿದ್ದಲ್ಲಿ ಬಹಳ ಮುಂಜಾಗ್ರತೆ ವಹಿಸಬೇಕು. ಮಾಡುವ ಕಾರ್ಯದಲ್ಲಿ ಆದಷ್ಟು ಲೋಪ ದೋಷ ಕಡಿಮೆಗೊಳಿಸಿ.

ತುಲಾ: ಮಗನು ಅನಿವಾರ್ಯ ಕಾರಣಗಳಿಂದ ಪರ ಊರಿಗೆ ತೆರಳುವುದು ದುಃಖಕರ ಸಂಗತಿಯಾಗಬಹುದು. ಹೂವಿನ ಗಿಡಗಳನ್ನು ನಿರ್ವಹಣೆ ಮಾಡಿ ಮಾರಾಟ ಮಾಡುವವರಿಗೆ ಹೆಚ್ಚಿನ ಹಣ ಸಂಪಾದನೆಯಾಗುತ್ತದೆ.

ವೃಶ್ಚಿಕ: ಪಿತ್ತದೋಷದಿಂದ ನಾನಾರೀತಿಯ ಕಾಯಿಲೆಗೆ ಒಳಗಾದವರು ಆಯುರ್ವೇದದ ಮೊರೆಹೋಗುವುದು ಸೂಕ್ತಕರ. ಬಾಲ ಕಲಾವಿದರಿಗೆ ಉತ್ತಮ ಹೆಸರು ಗಳಿಸಿಕೊಡುವುದು. ಸಣ್ಣಪ್ರಮಾಣದ ಪ್ರಯಾಣ ಮಾಡುವಿರಿ.

ಧನು: ಕೆಲವು ಜವಾಬ್ದಾರಿಗಳ ಭಾರ ಕಡಿಮೆ ಆದುದರಿಂದ ನಿರಾಳದ ಜೀವನ ನಡೆಸುವಿರಿ. ನಿಮ್ಮ ಇಷ್ಟವಾದ ದೇವಾಲಯ ಅಥವಾ ನಿಮ್ಮ ಮನೆದೇವರ ಸ್ಥಾನಗಳಿಗೆ ಭೇಟಿ ಕೊಡುವ ಯೋಗವಿದೆ.

ಮಕರ: ಮಾಡಿದ ಪ್ರಯಾಣದ ಪರಿಣಾಮ ದೇಹಾಯಾಸ ಹಾಗೂ ನೋವು ಅನುಭವಿಸುವಿರಿ. ಉರಿಯುವಂತಹ ಬೆಂಕಿಗೆ ತುಪ್ಪ ಸುರಿಯುವಂತಹ ಮಾತುಗಳನ್ನಾಡಿ ಸಂಗಾತಿಯೊಂದಿಗಿನ ಸಂಬಂಧ ಕೆಡಿಸಿಕೊಳ್ಳಬೇಡಿ.

ಕುಂಭ: ಕೆಲವು ದಿನಗಳ ಬಳಿಕ ಸಮಾನಮನಸ್ಕರ ಜತೆ ಕಳೆದ ಸಮಯವು ಹಲವು ತರದ ಜ್ಞಾನ ವರ್ಧನೆ ಮಾಡಿಕೊಳ್ಳಲು ಸಹಾಯಕಾರಿಯಾಗುತ್ತದೆ. ಬಾಲ್ಯದ ಕೆಲವು ಅಪಘಾತಗಳ ನೋವು ಮರುಕಳಿಸುವ ಸಾಧ್ಯತೆ ಇದೆ.

ಮೀನ: ಒಂದೇ ಸಮಯದಲ್ಲಿ ಹೆಚ್ಚಿನ ವಿಷಯಗಳ ಮೇಲೆ ಗಮನ ಹರಿಸುವ ನಿಮ್ಮತನ ನೀವು ಕಲೆ ಎಂದು ಭಾವಿಸಿದ್ದರೂ ಇತರರು ಚಂಚಲತೆ ಎಂದು ದೂಷಿಸುವ ಸಾಧ್ಯತೆ ಇದೆ. ಮಾತೃ ಸಂಬಂಧಿ ಆಸ್ತಿಗಳ ವ್ಯಾಜ್ಯ ಇತ್ಯರ್ಥ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT

REAL ESTATE SELLING

Agricultural Land

Ramanagar

AGRICULTURAL FARM Land Sale Near Ramanagar 1Acre 15Guntas, Beautiful Location 1,60,000 Per Gunta. Contact 9900115519

Commercial Building

Tumkur Road



COMMERCIAL BUILDING for Sale, 10,000 Sqft 40x60 SITE 'B' Khatha. Beside Nagasandra Metro IKEA. Rs. 4.5cr Negotiable. CALL : **9448311478, 9845219605.**

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Contact: 9663001940.

Flat

Kengeri

20X30 W/F Society site in Srigandakaval 3 bhk semi furnished flat-in BDA Indraprasta kengeri 9916693999

Malleshwaram

ONE BEDROOM APARTMENT FOR SALE 18TH CROSS MALLESWARAM NO CAR-PARK CALL: 9900648717 or 8017010808

Rajajinagar

LUXURY 3 Bed Room Flat for Sale in RajajiNagar, Price 1.5 Cr onwards, Contact: 9845497672, 9986840153

Farm House/ Land/ Resorts

Multiple Locations

NANDI HILLS rd 1/2 acre gated converted ekhata furnished 15 AC rooms resto cafe garden EV station conference AV studio ready occupy 9Cr Ph 7019346409

Commerical

BTM Layout

BTM LAYOUT Commercial Property 40X60 G+4 floor Rental Income monthly 3,15,000/-Price 6.5cr. Contact: 9945079777

Yelahanka

COMMERCIAL RENT/ Sale 20,000 Sqft Suitable Office, Co-working Space, School, College, Hospital, Indoor Games, Warehouse, Choultry Vidyaranyapura: 9844227303

HRBR Layout

KAMMANAHALLI Commercial 2000 Corner Site Built-up Basement, Ground, First, Second. 10 Crores Negotiable: 73493-22223

House

Banashankari

"VIDYAPEETA 30X40 demolition House 2,15,000,00/- Padmanabhanagar, 30x40 Four floors 2,60,00,000/- Banashankari 2nd Stage House. 9845286505"

BUILDING 3 BHK 20x30, 1.15cr. Banashankari 6th Stage 10th Block, Kodipalya. Mascot Constructions. 9945760765/ 9880909989.

Magadi Road

KAMAKSHIPALYA NEWLY built 1.5 year old, 8 houses + 1 Shop (15'x50') East Face, 'A' Khata, Getting 48000/- Rent, Rs. 1.10 Cr. Negotiable. 9845288310

Vijayanagar

RESIDENTIAL 2BHK 30x30 NE Corner 3units, Car parking Rental Income 40k Sale Anubavanagar: 6360634859/ 9035304455

Residential/ Commercial

Sadashiva Nagar

PRIME LOCATION OPPOSITE PARK VACANT PLOT 60X45 ACROSS SADASHIVANAGAR SWIMMING POOL SOUTH FACING CONTACT OWNER 9844018823

Banashankari

FOR SALE Residential House Corner site measuring 4680 sq.ft., of total built up area 20 Sqr. At Banashankari 2nd stage, Bangalore. Negotiable. No Brokers- Contact 9972590969

Sites

Nelamangala



INFOCITY NELAMANGALA READY TO BUILD PLOTS FOR EVERY DREAM HOME
BMRDA Approved Sites available @ Nelamangala. Easy access to PRR (Peripheral Ring Road)
Call: 8660981179, 9986896859

BMRDA/ NPA 30X50 East Facing Site Sale Jakkasandra, Near NH-4 Highway and Mangalore Highway: 8310681025

Anjanapura

ANJANAPURA 10TH Block 20×60 East Facing BDA Site For Sale Near Dayanada Sagar School Contact: 9845298419

Intl Airport Road

"PREMIUM PLOTS" for-Sale Gated Community with World-Class Amenities RERA Approved All Leading Banks funding, Ready-to Registration, near.Nandi Hills,Bang on State Highway. Contact: 9060185719/ 9060609166

Vishweshwariah Layout

SMV 4TH BLOCK BDA 30X40 West Facing Near 100Ft Road and 40x60 East Facing: 9964971895

Kempegowda Layout

30X40 BDA NPKL 5TH Block Behind Challaghatta Metro. 500mtr to Mysore road. Arkavathi alternative site. Owner:9620721143

Out-Station

LAND FOR Sale, well-maintained, scenic 30 acres land with excellent water source near Hebri, Udupi Dist. Karnataka, India. Plantation includes Arecanut, Coconut, Rubber, Jathi, Mangoes Pepper Teak-wood etc. A big shed and a house is in the property. Contact: Phone/ WhatsApp: +919846370905.

Rajarajeshwari Nagar

"AVAILABLE SITE Rajarajeshwarinagar BEML Layout 5th stage 40x65 South-facing 40 feet-Road near Ujwal Meredian Apartment. Contact: 9632788913"

Ramanagar

RESIDENTIAL CONVERTED Site Sale near Ramanagar 0.5Km from highway, attached to Rajeevgandhi Health University, 10890Sft, 1650/-P.Sft, Clear Title. Owner 9900115519

Kengeri

1200 SQFT. Site Sale, Jnanbharathi BDA Layout, Shirke Layout, kengeri Satellite Town, Bangalore. 11,000/- Sqft. Contact: 9980507126, 7019677126.

Yelahanka

PRE LAUNCHING, SAI MERIDIAN Premium SITES FOR SALE BBMP limits A Khata, Yelahanka, Kogilu to Kannur Main Road (New Airport Road) close to Reva University & Delhi Public School, Ready for Registration and Bank loan available. Call: 9900008338, 8549855644

REAL ESTATE BUYING

Real Estate Agents

Multiple Locations

"WANTED PURCHASE Sites/Houses/ Industrial/ Commercial Banashankari, Kanakapura Road, Jayanagar, J.P.Nagar, Bannergatta Road, BTM, HSR. 9845286505"

Sites

Banashankari

BDA SITES Wanted Arkavathy, Anjanapura Banshankari 6th stage Vishweswaraiah Kempegowda Any BDA Layout Call:9845062822 8660751654

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA`Sites Wanted. Contact: SAPTHAGIRI. 9900268073, 9448068073.

Rajarajeshwari Nagar

WANTED 40X60 Site or Old House at R.R.Nagar, Genuine Owners Please Call: 8884378079. Brokers Excuse.

Vishweshwariah Layout

-:BUYING/ SELLING:- 20x30,30x40, 40x60, 50x80 BDA sites at Vishveshwaraiah Layout, BSK 6th stage. Contact: 9844533371/ 9341733480

PUBLIC NOTICE

PUBLIC NOTICE

My clients have agreed to purchase all that Industrially converted lands (1) measuring 02 acres 25 guntas and 01 gunta kharab land, in survey No.150/1,(portion of old survey No.150) from its owner **Mrs. V. Sulakshna, wife of Mr. G. Venugopal** residing at No.11, Sulibele Main Road, Devanahalli Town - 562114 (2) (i) measuring 01 acre 09 guntas, in survey No.147/2, (portion of old survey No.147) (ii) measuring 0-34 guntas, in survey No.150/3, (portion of Old survey No.150/2) (iii) measuring 1 acre 08 guntas, in survey No. 147/3, (portion of Old survey No.147) (iv) measuring 0-34 guntas, in survey No.150/4, (portion of old survey No.150/2) from its owner **Mr. K. S. Manjunath, S/o Mr. T.Sonnappa,** residing at Kodihalli Village, Jadigenahalli Hobli, Hosakote Taluk, item No.(1) and (2) (i), (ii), (iii) (iv) in all measuring a total extent of 6 acres 30 guntas, situated at Vagata Village, Jadigenahalli Hobli, Hosakote Taluk, Bangalore Rural District, morefully described in the Schedule hereunder, who are representing that they are the sole and absolute owner/s of the said Industrially converted lands specified above and other than herself/himself no other person/s have any right, title, interest or charge over the Schedule property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/ their/objection/s with relevant documentary proof to the undersigned at the address given below within **TEN DAYS** from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the schedule property and my client will proceed to complete the Sale transaction.

SCHEDULE

1) All that piece of parcel of the Industrially converted land measuring Two acres Twenty Five guntas and one gunta of kharab land, in survey No.150/1, (portion of old survey No.150) situated at Vagata Village, Jadigenahalli Hobli, Hosakote Taluk, Bangalore Rural District and bounded on the: **East by:** Land bearing survey No.108, **West by:** Land bearing survey No.167, **North by:** Land bearing survey No.174, **South by:** Land bearing survey Nos.150/2, 150/3 and 150/4; 2) (i) All that piece of parcel of the Industrially converted land measuring 01 acre 09 guntas, in survey No.147/2, (portion of old survey No.147) situated at Vagata Village, Jadigenahalli Hobli, Hosakote Taluk, Bangalore Rural District and bounded on the: **East by:** Land bearing survey No.147/3; **West by:** Land bearing survey No.147/1; **North by:** Land bearing survey No.151; **South by:** Land bearing survey No.146; 2) (ii) All that piece of parcel of the Industrially converted land measuring 0-34 guntas, in survey No.150/3, (portion of Old survey No.150/2) situated at Vagata Village, Jadigenahalli Hobli, Hosakote Taluk, Bangalore Rural District and bounded on the: **East by:** Land bearing survey No.150/4; **West by:** Land bearing survey No.150/2; **North by:** Land bearing survey No.150/1; **South by:** Land bearing survey No.147; 2) (iii) All that piece of parcel of the Industrially converted land measuring 1 acre 08 guntas, in survey No. 147/3, (portion of Old survey No.147) situated at Vagata Village, Jadigenahalli Hobli, Hosakote Taluk, Bangalore Rural District and bounded on the: **East by:** Land bearing survey No.151; **West by:** Land bearing survey No.146; **North by:** Land bearing survey No.147; **South by:** Land bearing survey No.147/2 2) (iv) All that piece of parcel of the Industrially converted land measuring 0-34 guntas, in survey No.150/4, (portion of old survey No.150/2), situated at Vagata Village, Jadigenahalli Hobli, Hosakote Taluk, Bangalore Rural District and bounded on the: **East by:** Land bearing survey No.150/1; **West by:** Land bearing survey No.147; **North by:** Land bearing survey No.107; **South by:** Land bearing survey No.150/3;

A. NAGARAJA, Advocate,
No. 6, KHB Buildings, II Block, 13 th Cross, Indiranagar II Stage,
Bangalore: Bangalore - 560 038.
Dated:06.04.2023. Ph:9448067511.

RENTAL PROPERTIES

Accommodation Available

Commercial

BTM LAYOUT 1st Stage, Office Space For RENT 1900sqft, Ideal for IT Companies/ Bank & Others Contact:9448756558

Villas/Bunglows

3 BEDROOM fully furnished duplex villa with all amenities rent on long term, looking for corporate clients, Asha township, Doddagubbi. Expected rent Rs. 75,000. Contact: 9845065258

BUILDERS ESSENTIAL

Water Proofing

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

I, SANDEEP Kumar S/o. Ramsharan Residing at No.50/2,B B Desai Chawal Sainath Chowk, Takiya Ward Kurla West, Mumbai. have changed my name to MOHAMMED SALEEM & Changed Religion Hindu to Muslim. Vide affidavit dated 06.04.2023 Sworn before notary: S.R.Ravikumar, Bangalore

I,VANI H S D/o Sathyanaryayana Setty H S (Old & Other Old Names) R/at #GF2, Anuadi Comforts 39-42, Riches Garden Road Manjunath Nagar Bangalore-560016 Have Changed My Name to Vani Hema Satyanarayana Shetty D/o Satyanayayana Shetty Hema Srinivasa Shetty, W/o Celestine Anthuraj The New & Assumed Names,Vide Affidavit Dated 02-03-2023 Before Notary Deepa M, Bengaluru

MORE Classifieds Ads on Subsequent Pages

ಮತದಾರರ ಪಟ್ಟಿ ಪರಿಷ್ಕರಣೆ: ಹೈಕೋರ್ಟ್ ಸ್ಪಷ್ಟನೆ

ನಾಮಪತ್ರ ಸಲ್ಲಿಕೆವರೆಗೂ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆಗೆ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಮತದಾರರ ಪಟ್ಟಿ ಪರಿಷ್ಕರಣೆಗೆ ಅವಕಾಶವಿದೆ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಿಂದ ತಮ್ಮ ಹೆಸರನ್ನು ತೆಗೆದು ಹಾಕುವ ವಿಚಾರಕ್ಕೆ ಸಂಬಂಧಿಸಿದಂತೆ ಚುನಾವಣಾ ಆಯೋಗ ನೋಟಿಸ್ ನೀಡಿರುವುದನ್ನು ಆಕ್ಷೇಪಿಸಿ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಹಾಗೂ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಸ್ಪಷ್ಟಪಡಿಸಿದೆ.

'ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕರ ಹೆಸರನ್ನು ಆ ಕ್ಷೇತ್ರದ ಮತದಾರರ ಪಟ್ಟಿಯಿಂದ ತೆಗೆದುಹಾಕುವಂತಹ ಕಾರ್ಯವಾಗಬಾರದು. ಇಂತಹ ವಿಚಾರಗಳಲ್ಲಿ ಕೇಂದ್ರ ಚುನಾವಣಾ ಆಯೋಗ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು' ಎಂದು ನ್ಯಾಯಪೀಠ ಸಲಹೆ ನೀಡಿದೆ.

'ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಿದ ಕ್ಷೇತ್ರದಿಂದ ಸ್ಥಳಾಂತರಗೊಂಡವರ ಮತ್ತು ಮೃತಪಟ್ಟವರ ಹೆಸರು ತೆಗೆಯುವ ಮೂಲಕ ಪರಿಷ್ಕರಣೆ ಮಾಡಲು ಅವಕಾಶವಿಲ್ಲ' ಎಂಬ ಶಾಸಕರ ವಾದವನ್ನು ನ್ಯಾಯಪೀಠ ತಿರಸ್ಕರಿಸಿದೆ.

'ಮತದಾರರ ಪಟ್ಟಿ ಪರಿಷ್ಕರಣೆ ಒಂದು ನಿರಂತರ ಪ್ರಕ್ರಿಯೆ. ಪ್ರಜಾಪ್ರತಿನಿಧಿ ಕಾಯ್ದೆ-1950ರ ಕಲಂ 23ರ ಅನುಸಾರ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಮತದಾರರ ಪಟ್ಟಿ ಪರಿಷ್ಕರಿಸಲು ಅವಕಾಶವಿದೆ. ಆಯೋಗದ ಮುಂದೆ ಸಕಾರಣಗಳು ಇದ್ದರೆ ಅಂತಿಮ ಪಟ್ಟಿ ಪ್ರಕಟವಾದ ನಂತರವೂ ಮತದಾರರ ಪಟ್ಟಿ ಪರಿಷ್ಕರಣೆ ಮಾಡಬಹುದು' ಎಂದು ತಿಳಿಸಿದೆ.

ಪ್ರಕರಣವೇನು?: ಶಿವಾಜಿನಗರ ವಿಧಾನಸಭಾ ಕ್ಷೇತದ ಮತದಾರರ ಅಂತಿಮ ಪಟ್ಟಿಯನ್ನು 2023ರ ಜನವರಿ 15ರಂದು ಪ್ರಕಟಿಸಲಾಗಿತ್ತು. ಕ್ಷೇತ್ರದಿಂದ ಸ್ಥಳಾಂತರಗೊಂಡ ಮತ್ತು ಮೃತಪಟ್ಟವರ ಹೆಸರು ಮತದಾರರ ಪಟ್ಟಿಯಲ್ಲಿದೆ ಎಂದು ಸಾರ್ವಜನಿಕರಿಂದ ಆಕ್ಷೇಪಣೆ ವ್ಯಕ್ತವಾಗಿತ್ತು.

ಹೈಕೋರ್ಟ್ ಸೂಚನೆಯಂತೆ ಸ್ಥಳಾಂತರಗೊಂಡವರ ಹಾಗೂ ಮೃತಪಟ್ಟವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕುವ ಪ್ರಕ್ರಿಯೆಯನ್ನು ಆಯೋಗ ಆರಂಭಿಸಿತ್ತು. ಇದರ ಭಾಗವಾಗಿ ಕ್ಷೇತ್ರದಿಂದ ಸ್ಥಳಾಂತರಗೊಂಡ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯಿಂದ ಶಾಸಕ ರಿಜ್ವಾನ್ ಅರ್ಷದ್ ಅವರ ಹೆಸರು ತೆಗೆಯುವ ವಿಚಾರವಾಗಿ ನೋಟಿಸ್ ನೀಡಲಾಗಿತ್ತು. ಇದನ್ನು ಆಕ್ಷೇಪಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ರಿಜ್ವಾನ್, 'ಮತದಾರರ ಅಂತಿಮ ಪಟ್ಟಿ ಪ್ರಕಟಗೊಂಡ ನಂತರ ಪರಿಷ್ಕರಣೆ ಮಾಡಲು ಅವಕಾಶವಿಲ್ಲ' ಎಂಬ ವಾದ ಮಂಡಿಸಿದ್ದರು.

ಆಯೋಗದ ಸೂಚನೆ ಏನು?

'ಕ್ಷೇತ್ರದಿಂದ ಸ್ಥಳಾಂತರಗೊಂಡ ಮತ್ತು ಮೃತಪಟ್ಟವರ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸುವುದರಿಂದ ಚುನಾವಣೆ ವೇಳೆ ಸಾಕಷ್ಟು ಗೊಂದಲ ಸೃಷ್ಟಿಯಾಗಿ ಜನಾಕ್ರೋಶ ವ್ಯಕ್ತವಾಗಲು ಕಾರಣವಾಗಬಹುದು. ಚುನಾವಣೆಗೂ ಮುನ್ನ ಸ್ಥಳಾಂತರಗೊಂಡ ಮತ್ತು ಮೃತಪಟ್ಟವರ ಹೆಸರು ಪಟ್ಟಿ ಮಾಡಿ, ಸಂಬಂಧಪಟ್ಟ ಅಧಿಕಾರಿಗೆ (ಪ್ರಿಸೈಡಿಂಗ್ ಆಫೀಸರ್) ತಲುಪಿಸುವ ಮೂಲಕ ನಕಲಿ ಮತಗಳ ಚಲಾವಣೆ ಆಗುವುದನ್ನು ತಡೆಯಬೇಕು. ಆ ನಿಟ್ಟಿನಲ್ಲಿ ಆಯೋಗವು ಸೂಕ್ತ ಕೈಪಿಡಿ, ಮಾರ್ಗಸೂಚಿ ಅಥವಾ ಸುತೋಲೆಯನ್ನು ಹೊರಡಿಸಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

'ಚುನಾವಣಾ ಸಿದ್ಧತೆಗಳು ಕಾಯ್ದೆ, ನಿಯಮಗಳಿಗೆ ವಿರುದ್ಧವಾಗಿವೆ ಅಥವಾ ಅಕ್ರಮ ಹಾಗೂ ಏಪಕ್ಷೀಯವಾಗಿವೆ ಎಂಬುದು ದೃಢಪಡದ ಹೊರತು ನಿರ್ದಿಷ್ಟ ವಿಧಾನದಲ್ಲಿ ಚುನಾವಣೆ ನಡೆಸುವಂತೆ ಆಯೋಗಕ್ಕೆ ನ್ಯಾಯಾಲಯ ನಿರ್ದೇಶಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಈ ಅರ್ಜಿ ವಜಾಗೊಳಿಸಲಾಗುತ್ತಿದೆ' ಎಂದು ನ್ಯಾಯಪೀಠ ಹೇಳಿದೆ.

ವಿಮಾನದ ತುರ್ತು ಬಾಗಿಲು ತೆರೆಯಲು ಯತ್ನ: ಬಂಧನ

ದೇವನಹಳ್ಳಿ: ದೆಹಲಿಯಿಂದ ಬೆಂಗಳೂರಿಗೆ ಶುಕ್ರವಾರ ಬರುತ್ತಿದ್ದ ವಿಮಾನದಲ್ಲಿ 40 ವರ್ಷದ ಪ್ರಯಾಣಿಕನೊಬ್ಬ ವಿಮಾನದ ತುರ್ತು ಬಾಗಿಲು ತೆರೆಯಲು ಯತ್ನಿಸಿದ್ದು, ಆತನನ್ನು ಬಂಧಿಸಲಾಗಿದೆ.

ಬೆಳಿಗ್ಗೆ ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಇಂಡಿಗೊ ವಿಮಾನ ಯಾನ ಸಂಸ್ಥೆಯ(6ಇ 308) ವಿಮಾನವು ಹಾರಾಟ ಆರಂಭಿಸಿತ್ತು. ಹಾರಾಟ ಆರಂಭಿಸಿದ ಬಳಿಕ ಪ್ರತೀಕ್ ಎಂಬುವರು ಕುಡಿದ ಮತ್ತಿನಲ್ಲಿ ವಿಮಾನದ ತುರ್ತು ನಿರ್ಗಮನ ದ್ವಾರದ ಬಾಗಿಲು ತೆರೆಯಲು ಯತ್ನಿಸಿದ್ದಾರೆ. ಈ ವೇಳೆ ತುರ್ತು ಬಾಗಿಲಿನ ಫ್ಲಾಪ್ ತೆಗೆಯದಂತೆ ವಿಮಾನದಲ್ಲಿದ್ದ ಸಿಬ್ಬಂದಿ ಪ್ರಯಾಣಿಕನಿಗೆ ಎಷ್ಟೇ ತಿಳಿಹೇಳಿದರೂ, ಆತ ಮೂರು ಸಲ ಈ ಕೃತ್ಯಕ್ಕೆ ಮುಂದಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಬೆಳಿಗ್ಗೆ 10.43ರ ಸುಮಾರಿಗೆ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಲೇ ಪ್ರತೀಕ್ ಅವರನ್ನು ಬಂಧಿಸಲಾಗಿದೆ.

ಕಾನ್ಪುರ ಮೂಲದ ಪ್ರತೀಕ್, ಇ-ಕಾಮರ್ಸ್ ಕಂಪನಿಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ವಿಮಾನ ನಿಲ್ದಾಣದ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಸಲಾಗಿದೆ. ಯಾವುದೇ ಅಪಾಯ ಸಂಭವಿಸಿಲ್ಲ ಎನ್ನಲಾಗಿದೆ.

25 ಸಾವಿರ ಆರೋಗ್ಯ ಕೇಂದ್ರಗಳಿಗೆ ಸೌರವಿದ್ಯುತ್

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವ ಆರೋಗ್ಯ ದಿನಾಚರಣೆಯ ಅಂಗವಾಗಿ ಕರ್ನಾಟಕದ ಸೆಲ್ಕೊ ಫೌಂಡೇಷನ್ ಹಾಗೂ ಐಕಿಯಾ ಫೌಂಡೇಷನ್ 'ಆರೋಗ್ಯಕ್ಕಾಗಿ ಇಂಧನ' ಪರಿಕಲ್ಪನೆಯಡಿ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯವನ್ನು ಬಲಪಡಿಸುವ ಕಾರ್ಯಕ್ಕೆ ಚಾಲನೆ ನೀಡಿದೆ.




ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ರಾಷ್ಟ್ರೀಯ ಆರೋಗ್ಯ ಮಿಷನ್ ಹಾಗೂ ರಾಜ್ಯ ಆರೋಗ್ಯ ಇಲಾಖೆಗಳ ಸಹಕಾರದಲ್ಲಿ ಫೌಂಡೇಷನ್ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಸೌರವಿದ್ಯುತ್ ವ್ಯವಸ್ಥೆ ಅಳವಡಿಸಲಿದೆ. ನವದೆಹಲಿಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಸೆಲ್ಕೊ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರೀಶ್ ಹಂದೆ, ಈಶಾನ್ಯ ರಾಜ್ಯಗಳ ಸಚಿವಾಲಯದ ಕಾರ್ಯದರ್ಶಿ ಲೋಕ್‌ರಂಜನ್, ಅಟಲ್ ಇನೋವೇಷನ್ ಮಿಷನ್‌ನ ನಿರ್ದೇಶಕ ಚಿಂತನ್ ವೈಷ್ಣವ್ ಮತ್ತಿತರರು ಪಾಲ್ಗೊಂಡು ಯೋಜನೆಯ ರೂಪರೇಷೆಗಳ ಕುರಿತು ಮಾಹಿತಿ ನೀಡಿದರು.

ಸಂಪನ್ಮೂಲ ಕೊರತೆಯಿಂದ ಬಳಲುತ್ತಿರುವ ಮಣಿಪುರ, ಮೇಘಾಲಯ, ಒಡಿಶಾ ಸೇರಿದಂತೆ 12 ರಾಜ್ಯಗಳ 25 ಸಾವಿರ ಆರೋಗ್ಯ ಕೇಂದ್ರಗಳಿಗೆ 2026ರೊಳಗೆ ಸೌರವಿದ್ಯುತ್ ವ್ಯವಸ್ಥೆ ಒದಗಿಸಲಾಗುತ್ತದೆ. ಅದೇ ವೇಳೆ, ಈ ಕೇಂದ್ರಗಳಿಗೆ ಅಗತ್ಯ ವೈದ್ಯಕೀಯ ಹಾಗೂ ವಿದ್ಯುತ್ ಉಪಕರಣಗಳನ್ನು ಒದಗಿಸಲಾಗುತ್ತದೆ. ಸೆಲ್ಕೊ ಫೌಂಡೇಷನ್ 2021–22ನೇ ಸಾಲಿನಲ್ಲಿ 2 ಸಾವಿರ ಆರೋಗ್ಯ ಕೇಂದ್ರಗಳಿಗೆ ಸೌರ ವಿದ್ಯುತ್ ವ್ಯವಸ್ಥೆ ಕಲ್ಪಿಸಿದೆ.

ಹರೀಶ್ ಹಂದೆ ಮಾತನಾಡಿ, 'ಬಡ ಜನರಿಗೆ ಆರೋಗ್ಯ ಸೇವೆ ಒದಗಿಸುವ ಕೇಂದ್ರಗಳಲ್ಲಿ ಬದಲಾವಣೆಗೆ ನಾಂದಿ ಹಾಡುವ ಈ ಯೋಜನೆಯನ್ನು ಕೇಂದ್ರ ಸರ್ಕಾರ ಹಾಗೂ ಐಕಿಯಾ ಫೌಂಡೇಷನ್ ಸಹಯೋಗದಲ್ಲಿ ಅನುಷ್ಠಾನಗೊಳಿಸಲಿದ್ದೇವೆ. ಆರೋಗ್ಯ ವ್ಯವಸ್ಥೆಯ ಸುಧಾರಣೆಯ ಜತೆಗೆ ಮಾಲಿನ್ಯ ಪ್ರಮಾಣ ಸಹ ಕಡಿಮೆಯಾಗಲಿದೆ. ಮುಂದಿನ ದಿನಗಳಲ್ಲಿ ಇತರ ರಾಜ್ಯಗಳಿಗೆ ಈ ಉಪಕ್ರಮವನ್ನು ವಿಸ್ತರಿಸಲು ಉತ್ಸುಕರಾಗಿದ್ದೇವೆ' ಎಂದರು.

ಟೈಮ್ಸ್ ಪ್ರಭಾವಿಗಳ ಪಟ್ಟಿ: ಶಾರುಕ್‌ಗೆ ಮೊದಲ ಸ್ಥಾನ



ನವದೆಹಲಿ (ಪಿಟಿಐ): 'ಟೈಮ್ಸ್ ಮ್ಯಾಗಜೀನ್'ನ '100 ಪ್ರಭಾವಿ ವ್ಯಕ್ತಿ'ಗಳ ಪಟ್ಟಿಯಲ್ಲಿ ಬಾಲಿವುಡ್ ನಟ ಶಾರುಕ್ ಖಾನ್ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ.

ಅಮೆರಿಕದ ಈ ನಿಯತಕಾಲಿಕ ನಡೆಸುವ ಈ ವಾರ್ಷಿಕ ಸಮೀಕ್ಷೆಯಲ್ಲಿ ಓದುಗರು ಪ್ರಭಾವಿ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತಾರೆ. ಈ ಸಮೀಕ್ಷೆಯಲ್ಲಿ ಒಟ್ಟು 12 ಲಕ್ಷ ಮತಗಳಲ್ಲಿ ಶಾರುಕ್ ಖಾನ್ ಅವರು ಶೇ 4ರಷ್ಟು ಮತ ಗಳಿಸಿದ್ದಾರೆ

ದೇಶದ ಇಸ್ಲಾಮಿಕ್ ಆಡಳಿತದ ವಿರುದ್ಧವಾಗಿ ಪ್ರತಿಭಟನೆ ನಡೆಸುತ್ತಿರುವ ಇರಾನ್ ಮಹಿಳೆಯರು ಶೇ 3ರಷ್ಟು ಮತ ಪಡೆದು ಎರಡನೇ ಸ್ಥಾನದಲ್ಲಿದ್ದಾರೆ.

ಶಾರುಕ್ ಅವರು ನಾಯಕ ಪಾತ್ರದಲ್ಲಿ ನಟಿಸಿರುವ ಜನವರಿಯಲ್ಲಿ ಬಿಡುಗಡೆಯಾದ ಪಠಾಣ್ ಚಿತ್ರವು ಭಾರಿ ಯಶಸ್ಸು ಕಂಡಿದೆ. 4 ವರ್ಷಗಳ ನಂತರ ಶಾರುಕ್ ತೆರೆಮೇಲೆ ಕಾಣಿಸಿಕೊಂಡ ಈ ಸಿನಿಮಾ ಜಗತ್ತಿನಾದ್ಯಂತ ₹1,000 ಕೋಟಿಗೂ ಹೆಚ್ಚು ಗಳಿಕೆ ಮಾಡಿದೆ.

ಪಟಾಲಮ್ಮದೇವಿ ಜಾತ್ರೆ ಸಂಭ್ರಮ


ಪ್ರಜಾವಾಣಿ ವಾರ್ತೆ

ಯಲಹಂಕ: ಅದ್ದಿಗಾನಹಳ್ಳಿಯಲ್ಲಿ ಪಟಾಲಮ್ಮದೇವಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಅದ್ದಿಗಾನಹಳ್ಳಿ, ಸಾದೇನಹಳ್ಳಿ ಹಾಗೂ ತರಹುಣಿಸೆ ಗ್ರಾಮಗಳಲ್ಲಿ ಇದೇ ವೇಳೆ ರಥೋತ್ಸವ ನಡೆಯಿತು. ತಿಮ್ಮಸಂದ್ರ, ಮಾರಗೊಂಡನಹಳ್ಳಿ, ಅದ್ದೆ ವಿಶ್ವನಾಥಪುರ, ಚೊಕ್ಕನಹಳ್ಳಿ, ನಾಗದಾಸನಹಳ್ಳಿ, ಅಗ್ರಹಾರ ಹಾಗೂ ರಾಜಾನುಕುಂಟೆ ಗ್ರಾಮಗಳಿಂದ ಮಹಿಳೆಯರು ಆರತಿಗಳನ್ನು ಹೊತ್ತು ಮೆರವಣಿಗೆಯ ಮೂಲಕ ಅದ್ದಿಗಾನಹಳ್ಳಿಯಲ್ಲಿರುವ ಮೂಲ ದೇವಾಲಯದ ಬಳಿಗೆ ಬಂದರು.

ರಥ ಮತ್ತು ಪಟಾಲಮ್ಮ ದೇವಿಯ ಉತ್ಸವ ಮೂರ್ತಿಗೆ ಪೂಜೆ ನೆರವೇರಿಸಿದ ನಂತರ ಅದ್ದಿಗಾನಹಳ್ಳಿಯಿಂದ ಹೊರಟ ಮೆರವಣಿಗೆಯು ಒಂದೂವರೆ ಕಿಲೋಮೀಟರ್ ದೂರದಲ್ಲಿ ನೆಲೆಸಿರುವ ಪಟಾಲಮ್ಮ ದೇವಾಲಯದ ಬಳಿಗೆ ಆಗಮಿಸಿತು. ಬಳಿಕ ಆರತಿಗಳನ್ನು ಹೊತ್ತ ಮಹಿಳೆಯರು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿ ಆರತಿ ಬೆಳಗಿದರು.

ಸುತ್ತಮುತ್ತ ಗ್ರಾಮಗಳು ಹಾಗೂ ದೂರದ ಊರುಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು, ದೇವಿಯ ದರ್ಶನ ಪಡೆದರು.



ರಾಜಾನುಕುಂಟೆ ಸಮೀಪದ ಅದ್ದಿಗಾನಹಳ್ಳಿಯಲ್ಲಿ ಪಟಾಲಮ್ಮದೇವಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ತಪಾಸಣೆ ವೇಳೆ ಕಾರಿನಲ್ಲಿ ಎತ್ತುಗಳು ಪತ್ತೆ!

ಶಿವಮೊಗ್ಗ: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಇಲ್ಲಿನ ಸೋಮಿನಕೊಪ್ಪ ಚೆಕ್‌ಪೋಸ್ಟ್‌ನಲ್ಲಿ ಗುರುವಾರ ತಡರಾತ್ರಿ ವಾಹನ ತಪಾಸಣೆ ವೇಳೆ ಕಾರಿನಲ್ಲಿ 2 ಎತ್ತುಗಳನ್ನು ಸಾಗಿಸುತ್ತಿರುವುದು ಪತ್ತೆಯಾಗಿದೆ. ಕಾರಿನಲ್ಲಿ ಎರಡು ಎತ್ತುಗಳು ಇದ್ದು, ಒಂದು ಮೃತಪಟ್ಟಿದೆ. ರಾತ್ರಿ 1 ಗಂಟೆಯ ವೇಳೆ ರಿಡ್ಜ್ ಕಾರೊಂದು ಚೆಕ್‌ಪೋಸ್ಟ್ ಬಳಿ ಬಂದಿದೆ. ಪೊಲೀಸರನ್ನು ನೋಡುತ್ತಿದ್ದಂತೆಯೇ ಕಾರಿನಲ್ಲಿದ್ದ ಇಬ್ಬರು ಕಾರು ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದಾರೆ. ಅದನ್ನು ಗಮನಿಸಿದ ಪೊಲೀಸರು ಕಾರಿನ ಬಳಿ ಹೋಗಿ ತಪಾಸಣೆ ನಡೆಸಿದರು.

ಕಾರಿನ ಹಿಂಬದಿಯ ಸೀಟುಗಳನ್ನು ತೆಗೆದು ಎರಡು ಎತ್ತುಗಳ ಕಾಲು ಕಟ್ಟಿ ಒಂದರ ಮೇಲೆ ಒಂದನ್ನು ಮಲಗಿಸಲಾಗಿತ್ತು. ಪೊಲೀಸರು ಕೂಡಲೇ ಎತ್ತುಗಳ ರಕ್ಷಣೆಗೆ ಮುಂದಾದರು. ಆದರೆ, ಒಂದು ಎತ್ತು ಅಷ್ಟರಲ್ಲೇ ಮೃತಪಟ್ಟಿತ್ತು.

'ಆರ್‌.ವಿ.ಶಿಕ್ಷಣ ಸಂಸ್ಥೆಯ ಮೈಲಿಗಲ್ಲು' ಕಾರ್ಯಕ್ರಮ

ಮೌಲ್ಯಯುತ ಶಿಕ್ಷಣ ಅವಶ್ಯ: ಸಚಿವೆ ನಿರ್ಮಲಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣದಲ್ಲಿ ಮೌಲ್ಯ ಹಾಗೂ ನೀತಿ ಅಳವಡಿಸಿಕೊಳ್ಳದಿದ್ದರೆ ಅದು ಪರಿಪೂರ್ಣ ಶಿಕ್ಷಣವಾಗುವುದಿಲ್ಲ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಆರ್‌.ವಿ. ಶಿಕ್ಷಣ ಸಮೂಹವು ಶುಕ್ರವಾರ ಆಯೋಜಿಸಿದ್ದ 'ಶಿಕ್ಷಣ ಸಂಸ್ಥೆಯ ಮೈಲಿಗಲ್ಲು' ಎಂಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು .

'ಕೇವಲ ಪಠ್ಯಪುಸ್ತಕದ ಶಿಕ್ಷಣದಿಂದ ಕಲಿತು ಪದವಿ ಪಡೆದರೆ, ಅದು ಪರಿಪೂರ್ಣ ಆಗಿರುವುದಿಲ್ಲ. ಇಂದು ಮೌಲ್ಯಯುತ ಶಿಕ್ಷಣದ ಅವಶ್ಯಕತೆ ಹೆಚ್ಚಾಗಿದೆ' ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಮಾತನಾಡಿ, 'ಉತ್ತಮ ಭವಿಷ್ಯ ರೂಪಿಸಿಕೊಳ್ಳುವುದಕ್ಕೆ ಶಿಕ್ಷಣಕ್ಕಿಂತ ಬೇರೊಂದು ದಾರಿಯಿಲ್ಲ. ಶಿಕ್ಷಣಕ್ಕೆ ನೀಡುವ ಪ್ರಾಮುಖ್ಯತೆ ಆಧಾರದ ಮೇಲೆ ನಮ್ಮ ಭವಿಷ್ಯ ಅವಲಂಬಿತವಾಗಿದೆ' ಎಂದು ಹೇಳಿದರು.

ಆರ್‌ವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, 'ಇಲ್ಲಿ ಶಿಕ್ಷಣ ಪಡೆದ ಸಾಕಷ್ಟು ವಿದ್ಯಾರ್ಥಿಗಳು ವಿವಿಧ ದೇಶಗಳಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಆರ್‌.ವಿ ಶಿಕ್ಷಣ ಸಂಸ್ಥೆ ಮೊದಲಿಗೆ ಬಿ.ಇಡಿ ಕಾಲೇಜು ಆರಂಭಿಸಿದ್ದು, ಇಂದು ಉನ್ನತ ಶಿಕ್ಷಣದಲ್ಲೂ ಕ್ರಾಂತಿ ಮೂಡಿಸುತ್ತಿದೆ' ಎಂದು ಅವರು ಹೇಳಿದರು.

ನಿರ್ಮಲಾ ಸೀತಾರಾಮನ್ ಅವರು ಆರ್‌.ವಿ.ಕಾಲೇಜು ಆವರಣದಲ್ಲಿ ನಿರ್ಮಿಸಿರುವ ಜಿಮ್ ಉದ್ಘಾಟಿಸಿದರು. ಆರ್‌.ವಿ.ಶಿಕ್ಷಣ ಸಂಸ್ಥೆಯ ಎ.ವಿ. ಎಸ್‌.ಮೂರ್ತಿ, ಡಿ.ಪಿ.ನಾಗರಾಜ್, ಎನ್‌ಎಂಕೆಆರ್‌ವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಸ್ನೇಹಲತಾ ಜಿ. ನಾಡಿಗೇರ್ ಇದ್ದರು.



ನಗರದಲ್ಲಿ ಶುಕ್ರವಾರ 'ಆರ್‌.ವಿ. ಶಿಕ್ಷಣ ಸಂಸ್ಥೆಯ ಮೈಲಿಗಲ್ಲು' ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ (ಎಡದಿಂದ ಎರಡನೇಯವರು) ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. (ಎಡದಿಂದ) ಆರ್‌.ವಿ. ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಡಾ.ಸಿ.ವಿನೋದ್ ಹಯಗ್ರೀವ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ, ಆರ್‌.ವಿ.ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಎಂ.ಪಿ.ಶ್ಯಾಮ್, ಕಾರ್ಯದರ್ಶಿ ಡಾ.ಎ.ವಿ.ಮೂರ್ತಿ ಇದ್ದರು —ಪ್ರಜಾವಾಣಿ ಚಿತ್ರ

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1715(1710)
ಸೋಯಾ (ರಿಫೈಂಡ್)	₹1050(1065)
ಸೂರ್ಯಕಾಂತಿ (ರಿಫೈಂಡ್)	₹1075(1080)
ಪಾಮೋಲಿನ್	₹960(974)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹410
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹415

ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್‌ಗೆ ಲಾಭ

ಬೆಂಗಳೂರು: 'ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್' ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಒಟ್ಟು ₹ 12.07 ಕೋಟಿ ಲಾಭ ಗಳಿಸಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಡಾ.ಎಂ. ಆರ್. ವೆಂಕಟೇಶ್ ತಿಳಿಸಿದ್ದಾರೆ.

2022–23ರಲ್ಲಿ ಬ್ಯಾಂಕ್ ಒಟ್ಟು ₹ 4,938 ಕೋಟಿ ಮೊತ್ತದ ವಹಿವಾಟು ನಡೆಸಿದೆ. ಬ್ಯಾಂಕ್‌ನ ಒಟ್ಟು ಅನುತ್ಪಾದಕ ಆಸ್ತಿಯ (ಎನ್‌ಪಿಎ) ಪ್ರಮಾಣವು ಶೇ 4.10ರಷ್ಟು ಇದೆ, ನಿವ್ವಳ ಎನ್‌ಪಿಎ ಶೂನ್ಯ ಮಟ್ಟದಲ್ಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇನ್ನೋವಾ: ಬುಕಿಂಗ್ ತಾತ್ಕಾಲಿಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಯೊಟ ಕಿರ್ಲೋಸ್ಕರ್ ಮೋಟರ್ ಕಂಪನಿಯು 'ಇನ್ನೋವಾ ಹೈಕ್ರಾಸ್' ಮಾದರಿಯ ಜೆಡ್‌ಎಕ್ಸ್ ಮತ್ತು ಜೆಡ್‌ಎಕ್ಸ್(ಒ) ಅವತರಣಿಕೆಗಳ ಬುಕಿಂಗ್‌ಅನ್ನು ಶನಿವಾರದಿಂದ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಪೂರೈಕೆ ಸವಾಲುಗಳ ಕಾರಣದಿಂದಾಗಿ ಹೀಗೆ ಮಾಡಲಾಗಿದೆ. ಇನ್ನೋವಾ ಹೈಕ್ರಾಸ್‌ನ ಇತರ ಅವತರಣಿಕೆಗಳ ಬುಕಿಂಗ್ ಮುಂದುವರಿಯಲಿದೆ ಎಂದು ಕಂಪನಿಯು ಸ್ಪಷ್ಟಪಡಿಸಿದೆ.

ಶೇ 9–11ರವರೆಗೆ ಕಡಿಮೆ ಮಾಡಲು ಅವಕಾಶ: ಕ್ರಿಸಿಲ್ ರೇಟಿಂಗ್ಸ್ ಮಾಹಿತಿ

ತಗ್ಗಲಿದೆ ಸಿಎನ್‌ಜಿ, ಪಿಎನ್‌ಜಿ ಬೆಲೆ

ನವದೆಹಲಿ (ಪಿಟಿಐ): ನೈಸರ್ಗಿಕ ಅನಿಲದ ಬೆಲೆಯನ್ನು ನಿರ್ಧರಿಸುವ ಸೂತ್ರವನ್ನು ಕೇಂದ್ರವು ಪರಿಷ್ಕರಿಸಿರುವ ಪರಿಣಮವಾಗಿ, ಸಿಎನ್‌ಜಿ ಹಾಗೂ ಕೊಳವೆ ಮೂಲಕ ಮನೆಗಳಿಗೆ ತಲುಪಿಸುವ ಅಡುಗೆ ಅನಿಲದ (ಪಿಎನ್‌ಜಿ) ಬೆಲೆಯು ಶೇಕಡ 9ರಿಂದ ಶೇ 11ರವರೆಗೆ ಇಳಿಕೆ ಆಗಲಿದೆ.

ಆದರೆ, ಈ ಇಂಧನಗಳ ಬೆಲೆಯನ್ನು ನಿಯಂತ್ರಣ ದಿಂದ ಮುಕ್ತವಾಗಿಸಲಾಗಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. 'ಕಿರೀಟ್ ಪಾರಿಖ್ ಸಮಿತಿಯ ಪ್ರಮುಖ ಶಿಫಾರಸುಗಳನ್ನು ಸರ್ಕಾರವು ಒಪ್ಪಿಕೊಂಡಿರುವ ಕಾರಣ, ವಾಹನಗಳಲ್ಲಿ ಬಳಕೆ ಮಾಡುವ ಸಿಎನ್‌ಜಿ ಬೆಲೆಯನ್ನು ಹಾಗೂ ಮನೆಗಳಿಗೆ ಕೊಳವೆ ಮೂಲಕ ಪೂರೈಕೆ ಮಾಡುವ ಅಡುಗೆ ಅನಿಲದ ಬೆಲೆಯನ್ನು ಅನಿಲ ವಿತರಕರು ಶೇ 9ರಿಂದ ಶೇ 11ರವರೆಗೆ ಕಡಿಮೆ ಮಾಡಬಹುದು' ಎಂದು ಕ್ರಿಸಿಲ್ ರೇಟಿಂಗ್ಸ್ ಹೇಳಿದೆ.



ಬೆಲೆ ನಿಗದಿಗೆ ಹಿಂದಿನ ವ್ಯವಸ್ಥೆಯೇ ಮುಂದುವರಿದಿದ್ದರೆ ಬೆಲೆ ಹೆಚ್ಚಳವಾಗುವ ಸಾಧ್ಯತೆ ಇತ್ತು ಎಂದು ಕೂಡ ಅದು ಹೇಳಿದೆ. ಆದರೆ, ಈ ಇಂಧನಗಳ ಬೆಲೆಯನ್ನು 2027ರ ಸುಮಾರಿಗೆ ಸಂಪೂರ್ಣವಾಗಿ ನಿಯಂತ್ರಣಮುಕ್ತ ಆಗಿಸಬೇಕು ಎಂದು ಸಮಿತಿ ಮಾಡಿದ್ದ ಶಿಫಾರಸಿನ ವಿಚಾರದಲ್ಲಿ ಸರ್ಕಾರವು ಯಾವುದೇ ಕ್ರಮ ಕೈಗೊಂಡಿಲ್ಲ.

'ಬೆಲೆಯನ್ನು ನಿಯಂತ್ರಣದಿಂದ ಮುಕ್ತಗೊಳಿಸುವ ತೀರ್ಮಾನವನ್ನು ಕೇಂದ್ರವು ಮುಂದೂಡಿದೆಯೇ ಎಂಬುದು ಗೊತ್ತಾಗುತ್ತಿಲ್ಲ' ಎಂದು ಉದ್ಯಮದ ಮೂಲಗಳು ಹೇಳಿವೆ. ಅನಿಲವನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು. ಆದರೆ ಈ ಶಿಫಾರಸನ್ನು ಸರ್ಕಾರವು ಒಪ್ಪಿದೆಯೇ ಇಲ್ಲವೇ ಎಂಬುದು ಸ್ಪಷ್ಟವಾಗಿಲ್ಲ.

'ಹೊಸ ವ್ಯವಸ್ಥೆಯ ಅಡಿಯಲ್ಲಿ ಸಿಎನ್‌ಜಿ ಬೆಲೆಯು ಪೆಟ್ರೋಲ್, ಡೀಸೆಲ್‌ಗಿಂತ ಹಾಗೂ ಪಿಎನ್‌ಜಿ ಬೆಲೆಯು ದ್ರವೀಕೃತ ನೈಸರ್ಗಿಕ ಅನಿಲಕ್ಕಿಂತ ಶೇ 25ರಿಂದ ಶೇ 40ರವರೆಗೆ ಕಡಿಮೆ ವೆಚ್ಚದ್ದಾಗಲಿವೆ. ಹಳೆ ವ್ಯವಸ್ಥೆಯಲ್ಲಿ ಇವು ಶೇ 20ರಿಂದ ಶೇ 35ರವರೆಗೆ ಕಡಿಮೆ ವೆಚ್ಚದ್ದಾಗಿದ್ದವು' ಎಂದು ಕ್ರಿಸಿಲ್ ರೇಟಿಂಗ್ಸ್ ಹೇಳಿದೆ.

2023ರಲ್ಲಿ ವಿಶ್ವದ ಆರ್ಥಿಕ ಬೆಳವಣಿಗೆ ದರವು ಶೇ3ಕ್ಕಿಂತ ಕಡಿಮೆ ಇರುವ ನಿರೀಕ್ಷೆ ಇದೆ ಎಂದು ಐಎಂಎಫ್ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜಿವಾ ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆ: ಭಾರತ, ಚೀನಾ ಕೊಡುಗೆ ದೊಡ್ಡದು

ವಾಷಿಂಗ್ಟನ್ (ಪಿಟಿಐ): 2023ರಲ್ಲಿ ವಿಶ್ವದ ಆರ್ಥಿಕ ಬೆಳವಣಿಗೆ ದರವು ಶೇಕಡ 3ಕ್ಕಿಂತ ಕಡಿಮೆ ಇರುವ ನಿರೀಕ್ಷೆ ಇದೆ, ಭಾರತ ಮತ್ತು ಚೀನಾ ದೇಶಗಳು ವಿಶ್ವದ ಆರ್ಥಿಕ ಬೆಳವಣಿಗೆಯಲ್ಲಿ ಅರ್ಧದಷ್ಟು ಪಾಲು ಹೊಂದುವ ಸಾಧ್ಯತೆ ಇದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜಿವಾ ಹೇಳಿದ್ದಾರೆ.

ಮಂದಗತಿಯ ಆರ್ಥಿಕ ಚಟುವಟಿಕೆಯು ಬಹಳ ಕಾಲ ಮುಂದುವರಿಯಲಿದೆ. ಮುಂದಿನ ಐದು ವರ್ಷಗಳಲ್ಲಿ ಬೆಳವಣಿಗೆ ಪ್ರಮಾಣವು ಶೇಕಡ 3ಕ್ಕಿಂತ ಕಡಿಮೆ ಇರಲಿದೆ ಎಂದು ಅವರು ಅಂದಾಜಿಸಿದ್ದಾರೆ. ಮಂದಗತಿಯ ಆರ್ಥಿಕ ಬೆಳವಣಿಗೆಯು ಭಾರಿ ಏಟು, ಇದು ಕಡಿಮೆ ವರಮಾನದ ದೇಶಗಳ ಪಾಲಿಗೆ ಪರಿಸ್ಥಿತಿಯನ್ನು ಇನ್ನಷ್ಟು ವಿಷಮಗೊಳಿಸಲಿದೆ ಎಂದು ಎಚ್ಚರಿಸಿದ್ದಾರೆ. 'ಬಡತನ ಮತ್ತು ಹಸಿವಿನ ಸಮಸ್ಯೆಯು ಇನ್ನಷ್ಟು ಹೆಚ್ಚಾಗಬಹುದು' ಎಂದಿದ್ದಾರೆ.

ಆನ್‌ಲೈನ್ ವೇದಿಕೆ ಮೇಲೆ ತೂಗುಕತ್ತಿ

ಸರ್ಕಾರದ ನೀತಿಗೆ ಮಾಧ್ಯಮ ವಲಯದಿಂದ ವಿರೋಧ

ನವದೆಹಲಿ (ಪಿಟಿಐ): ಸುಳ್ಳು ಅಥವಾ ದಿಕ್ಕು ತಪ್ಪಿಸುವಂತಹ ವಿವರಗಳಿಂದ ಕೂಡಿದೆ ಎಂದು ಸರ್ಕಾರ ನಿಯೋಜನೆ ಮಾಡುವ ಫ್ಯಾಕ್ಟ್ ಚೆಕ್ ಘಟಕವು ಗುರುತಿಸುವ ಮಾಹಿತಿಯನ್ನು ಗೂಗಲ್, ಫೇಸ್‌ಬುಕ್, ಟ್ವಿಟರ್ ನಂತಹ ಆನ್‌ಲೈನ್ ವೇದಿಕೆಗಳು ಅಳಿಸಿಹಾಕದಿದ್ದರೆ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 79ರ ಅಡಿ ದತ್ತವಾದ ರಕ್ಷಣೆಯ ಹಕ್ಕನ್ನೂ ಅವುಗಳು ಕಳೆದುಕೊಳ್ಳಲಿವೆ. ಸರ್ಕಾರದ ಈ ನೀತಿಗೆ ಮಾಧ್ಯಮ ವಲಯದಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಯಾವುದೇ ಆನ್‌ಲೈನ್ ವೇದಿಕೆಗೆ ಕಾನೂನು ಪ್ರಕ್ರಿಯೆ ಎದುರಿಸಬಹುದಾದಂತಹ ಮಾಹಿತಿಯು ಮೂರನೇ ವ್ಯಕ್ತಿಯಿಂದ ಪೋಸ್ಟ್ ಆಗಿದ್ದರೆ ಆ ಆನ್‌ಲೈನ್ ವೇದಿಕೆಯು ಅದಕ್ಕೆ ಬಾಧ್ಯಸ್ಥವಾಗದಂತೆ ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಸೆಕ್ಷನ್ 79 ರಕ್ಷಣೆ ನೀಡುತ್ತದೆ.

ಸರ್ಕಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ (ಪಿಐಬಿ) ಫ್ಯಾಕ್ಟ್ ಚೆಕ್ ಮಾಡಿ ವಿವರ ಒದಗಿಸಲಿದೆ. ಈ ಕುರಿತು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ ಇಷ್ಟರಲ್ಲಿಯೇ ಅಧಿಸೂಚನೆ ಹೊರಡಿಸಲಿದೆ. ಫ್ಯಾಕ್ಟ್ ಚೆಕ್ ಕುರಿತು ಮಧ್ಯವರ್ತಿಗಳಾದ ಆನ್‌ಲೈನ್ ವೇದಿಕೆಗಳು ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ವಿವರವನ್ನೂ ಸಚಿವಾಲಯ ಒದಗಿಸಲಿದೆ.

> ಫ್ಯಾಕ್ಟ್ ಚೆಕ್ ಘಟಕ ನೀಡುವ ಮಾಹಿತಿ ನಿರಾಕರಿಸಿ ಸುದ್ದಿಯನ್ನು ಹಾಗೇ ನೀವು ಮುಂದುವರಿಸಬಲ್ಲಿರಿ. ಆದರೆ, ಬಾಧಿತನು ಕೋರ್ಟ್‌ಗೆ ಹೋದರೆ ನಿಮಗೆ ಸೆ.79ರ ರಕ್ಷಣೆ ಇಲ್ಲ.
>
> **ರಾಜೀವ್ ಚಂದ್ರಶೇಖರ್,** ಕೇಂದ್ರ ಐ.ಟಿ ಖಾತೆ ರಾಜ್ಯ ಸಚಿವ

> ಸೆನ್ಸರ್‌ಶಿಪ್ ಮತ್ತು ಪ್ರಜಾಪ್ರಭುತ್ವ ಒಟ್ಟಿಗೆ ಸಾಗಲು ಸಾಧ್ಯವಿಲ್ಲ. ಸರ್ಕಾರದ ನಡೆ ಪ್ರಜಾಪ್ರಭುತ್ವ ವಿರೋಧಿ ಮತ್ತು ಕಠೋರ
>
> **ಸೀತಾರಾಂ ಯೆಚೂರಿ,** ಸಿಪಿಎಂ ಪ್ರಧಾನ ಕಾರ್ಯದರ್ಶಿ

ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೊಸ ಐ.ಟಿ ನಿಯಮದ ಕುರಿತು ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಈ ನಿಯಮಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದು, 'ಇದೊಂದು ಪ್ರಜಾಪ್ರಭುತ್ವ ವಿರೋಧಿಯಾದ ಕಠೋರ ನಿರ್ಧಾರ' ಎಂಬ ಟೀಕೆ ವ್ಯಕ್ತವಾಗಿದೆ.

'ಸುಳ್ಳು ಸುದ್ದಿಯ ವಿರುದ್ಧ ಸಾರಿರುವ ಈ ಸಮರವು ವಾಕ್ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ ಎಂಬ ವಾದವನ್ನು ಒಪ್ಪಲಾಗದು' ಎಂದು ರಾಜೀವ್ ತಿರುಗೇಟು ನೀಡಿದ್ದಾರೆ.

'ಸೆಕ್ಷನ್ 79ರಡಿ ನೀವು ರಕ್ಷಣೆ ಬಯಸುವುದಾದರೆ ನೀವು ಅದಕ್ಕೆ ತಕ್ಕ ಹೊಣೆಯನ್ನು ನಿಭಾಯಿಸಲೇಬೇಕು. ಆ ಹೊಣೆ ಏನೆಂದರೆ ಸುಳ್ಳು ಮಾಹಿತಿ ಹರಡುವುದನ್ನು ತಡೆಯುವುದೇ ಆಗಿದೆ' ಎಂದು ಅವರು ಹೇಳಿದ್ದಾರೆ.

ಮಾಹಿತಿ ತಂತ್ರಜ್ಞಾನ ನಿಯಮಕ್ಕೆ ಮಾಡಿರುವ ಬದಲಾವಣೆಯನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಭಾರತೀಯ ಸಂಪಾದಕರ ಕೂಟವು ಆಗ್ರಹಿಸಿದೆ. ಈ ನಿಯಮ ಸೆನ್ಸರ್‌ಶಿಪ್‌ಗೆ ದಾರಿ ಮಾಡಿಕೊಡಲಿದೆ. ಅಲ್ಲದೆ, ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಿದೆ ಎಂದು ಕಳವಳ ವ್ಯಕ್ತಪಡಿಸಿದೆ.

ಸಿಪಿಎಂ ಸಹ ನಿಯಮ ಬದಲಾವಣೆಯನ್ನು ಬಲವಾಗಿ ವಿರೋಧಿಸಿದ್ದು, ಇದು ಪ್ರಜಾಪ್ರಭುತ್ವ ವಿರೋಧಿ ಕ್ರಮ ಎಂದು ಟೀಕಿಸಿದೆ.

ಕಿರಣ್ ರೆಡ್ಡಿ ಬಿಜೆಪಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಅವಿಭಜಿತ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್. ಕಿರಣ್ ಕುಮಾರ್ ರೆಡ್ಡಿ ಅವರು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಸಮ್ಮುಖದಲ್ಲಿ ಶುಕ್ರವಾರ ಇಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು.

ನಾಲ್ಕು ಬಾರಿ ಶಾಸಕರಾಗಿದ್ದ ಕಿರಣ್ ಕುಮಾರ್ ಅವರು ಕಳೆದ ತಿಂಗಳು ಕಾಂಗ್ರೆಸ್ ತೊರೆದಿದ್ದರು.

'ಅನಿಲ್‌ರನ್ನು ಕರಿಬೇವಿನಂತೆ ಎಸೆಯಲಿದೆ'

ತಿರುವನಂತಪುರ (ಪಿಟಿಐ): ಅನಿಲ್ ಆ್ಯಂಟನಿ ಬಿಜೆಪಿಗೆ ಸೇರ್ಪಡೆಗೊಳ್ಳುವ ಮೂಲಕ ತಪ್ಪು ನಿರ್ಧಾರ ತೆಗೆದುಕೊಂಡಿದ್ದಾರೆ ಎಂದಿರುವ ಅವರ ತಮ್ಮ ಅಜಿತ್ ಆ್ಯಂಟನಿ, 'ಬಿಜೆಪಿಯು ಅನಿಲ್ ಅವರನ್ನು ಬಳಸಿಕೊಂಡು ಬಳಿಕ ಕರಿಬೇವಿನ ಎಲೆಯಂತೆ ಹೊರಗೆಸೆಯಲಿದೆ' ಎಂದು ಶುಕ್ರವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಅನಿಲ್ ಅವರು ತಮ್ಮ ನಿರ್ಧಾರದ ಬಗ್ಗೆ ಕುಟುಂಬದವರಿಗೆ ಕಿಂಚಿತ್ ಸುಳಿವೂ ನೀಡಿರಲಿಲ್ಲ. ಅವರು ಬಿಜೆಪಿಗೆ ಸೇರ್ಪಡೆಗೊಂಡಿರುವ ಸುದ್ದಿಯನ್ನು ಸುದ್ದಿ ವಾಹಿನಿಗಳಲ್ಲಿ ನೋಡಿ ಆಘಾತಗೊಂಡೆವು' ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ನಾಯಕ ಎ.ಕೆ. ಆ್ಯಂಟನಿ ಅವರ ಪುತ್ರ ಅನಿಲ್ ಅವರು ಗುರುವಾರ ನವದೆಹಲಿಯಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು.



ಶುಭ ಶುಕ್ರವಾರ ಕೊಚ್ಚಿಯ ಚರ್ಚ್‌ನಲ್ಲಿ ಕ್ರೈಸ್ತ ಭಕ್ತರು ಶುಭ ಶುಕ್ರವಾರದ ಮೆರವಣಿಗೆಯಲ್ಲಿ ಭಾಗವಹಿಸಿದರು.

ಪಿಟಿಐ ಚಿತ್ರ

ಮುಂಬೈ ಧಾರಣೆ

ಶೇಂಗಾ

7–4–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1725(1720)
ಒಂದು ವಾರದ ಡೆಲಿವರಿ	1720(1715)
ಸೋಯಾ ಕಚ್ಚಾ	945(970)
ಪಾಮ್ ವಾರದ ಡೆಲಿವರಿ	958(972)
ಸೂರ್ಯಕಾಂತಿ ಎಣ್ಣೆ ಕಚ್ಚಾ	940(960)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60150(60275)
ಬೆಳ್ಳಿ ಕೆ.ಜಿ 74000(74000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹388-550
ದ್ವಿತಳಿ (ಬಿ.ವಿ)	₹300-631

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಕರಡುವಿನಲ್ಲಿ ಶಿಫಾರಸು

'ಭಾರತೀಯ ಜ್ಞಾನದ ಅರಿವು ನೀಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ವಿಕ್ರಮ ಬೇತಾಳ, ಪಂಚತಂತ್ರದ ಕಥೆಗಳು ಹಾಗೂ ಉಪನಿಷತ್ತುಗಳನ್ನು ಶಾಲಾ ಪಠ್ಯಗಳಲ್ಲಿ ಸೇರಿಸಬೇಕು. ಆ ಮೂಲಕ ಭಾರತೀಯ ಜ್ಞಾನದ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಬೇಕು' ಎಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) ಕರಡುವಿನಲ್ಲಿ ಶಿಫಾರಸು ಮಾಡಲಾಗಿದೆ. ಶಿಕ್ಷಣ ಸಚಿವಾಲಯವು ಇದಕ್ಕೆ ಸಂಬಂಧಿಸಿ ಜನರಿಂದ ಪ್ರತಿಕ್ರಿಯೆಗಳನ್ನು ಆಹ್ವಾನಿಸಿದೆ.

'ವಿವಿಧ ಜ್ಞಾನಶಾಖೆಗಳಿಗೆ ಭಾರತ ನೀಡಿದ ಕೊಡುಗೆಗಳನ್ನು ಪಠ್ಯದಲ್ಲಿ ಅಳವಡಿಸಬೇಕು. ಈ ಭಾರತೀಯ ಜ್ಞಾನವು ಐತಿಹಾಸಿಕ ಸತ್ಯಾಸತ್ಯತೆಗಳ ಆಧಾರದಲ್ಲಿ ರೂಪುಗೊಂಡಿವೆ. ಜೊತೆಗೆ, ಭಾರತೀಯ ಅನುಸಂಧಾನಕ್ಕೆ ಸಮಗ್ರತೆಯ ಗುಣವಿದೆ. ಈ ಅನುಸಂಧಾನವು ಒಂದು ವಿಷಯದ ಆಳವಾದ ಅಧ್ಯಯನಕ್ಕೆ ಸಹಾಯ ಮಾಡಲಿದೆ' ಎಂದು ಶಿಫಾರಸಿನಲ್ಲಿ ಹೇಳಲಾಗಿದೆ.

ಕೇವಲ ಇಷ್ಟೇ ಅಲ್ಲದೆ, ಮಕ್ಕಳ ಕಲಿಕಾ ತಂತ್ರಗಳ ಬಗ್ಗೆಯೂ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಪ್ರಸ್ತಾಪಿಸಿದೆ. 'ಆಟಿಕೆಗಳು, ಹಾಡುಗಳು, ಕುಣಿತ ಹಾಗೂ ಆಟಗಳು ಮಕ್ಕಳಿಗೆ ವಿಷಯಗಳನ್ನು ಅರ್ಥ ಮಾಡಿಸುವ ತಂತ್ರಗಳಾಗಬೇಕು' ಎಂದಿದೆ.

'ಯಮನನ್ನ ಪ್ರಶ್ನೆ ಮಾಡುವ, ಯಮನ ಜೊತೆ ಪ್ರಶ್ನೋತ್ತರ ನಡೆಸುವ ಕಠೋಪನಿಷತ್ತಿನ ನಚಿಕೇತನ ಕಥೆಗಳು ಪಠ್ಯಕ್ರಮದ ಭಾಗವಾಗಬೇಕು. 'ಸಾವಿನ ನಂತರ ಬದುಕು ಇದೆಯೇ ಅಥವಾ ಸಾವೇ ಕೊನೆಯೇ?' ಎಂದು ಸಾವು ಮತ್ತು ಬದುಕಿನ ಕುರಿತು ನಚಿಕೇತ ಎತ್ತುವ ಪ್ರಶ್ನೆಗಳು ಸರಳ ಎನ್ನಿಸಬಹುದು. ಆದರೆ, ಆ ಪ್ರಶ್ನೆಗಳು ಮೂಲಭೂತವಾದವು. ಜೊತೆಗೆ ಆದಿ ಶಂಕರಾಚಾರ್ಯ ಹಾಗೂ ಮಂಡನ ಮಿಶ್ರಾರಂಥವರ ನಡುವಿನ ಸಂವಾದಗಳೂ ಮಹತ್ವದ್ದಾಗಿವೆ' ಎಂದು ಶಿಫಾರಸಿನಲ್ಲಿ ಹೇಳಲಾಗಿದೆ.

'ಗಾಂಧಿಯ ಪರಿಸರ ಸಿದ್ಧಾಂತ ಕಲಿಸಿ': 'ವೇದ, ಉಪನಿಷತ್ತು, ಚರಕ ಸಂಹಿತ, ಮತ್ಸ್ಯ ಪುರಾಣ, ಪಂಚತಂತ್ರ ಹಾಗೂ ಜಾತಕದಂಥ ಗ್ರಂಥಗಳಲ್ಲಿ ಇರುವ 'ಭಾರತೀಯ ಪರಿಸರವಾದದ ಶಾಸ್ತ್ರೀಯ ಕಲ್ಪನೆ'ಗಳನ್ನು ಮಕ್ಕಳಿಗೆ ಪರಿಚಯಿಸಬೇಕು. ಇದಕ್ಕೆ ಪೂರಕವಾಗಿ ಮಹಾತ್ಮ ಗಾಂಧಿ ಹಾಗೂ ಅಮರ್ತ್ಯ ಸೇನ್ ಅವರ ಆಧುನಿಕ ಭಾರತೀಯ ಪರಿಸರ ಸಿದ್ಧಾಂತವನ್ನೂ ಹೇಳಿಕೊಡಬೇಕು. ಚಿಪ್ಕೊ ಚಳವಳಿ, ಹಸಿರು ಕ್ರಾಂತಿ ಹಾಗೂ ನವಧಾನ್ಯ ಸಂಸ್ಥೆಗಳ ಕುರಿತೂ ಮಕ್ಕಳಿಗೆ ಪಾಠ ಮಾಡಬೇಕು' ಎಂದು ಎನ್‌ಸಿಎಫ್ ತನ್ನ ಶಿಫಾರಸಿನಲ್ಲಿ ಹೇಳಿದೆ.

ಲಿಖಿತ ಪರೀಕ್ಷೆ ಬೇಡ: ಎನ್‌ಸಿಎಫ್ ಕರಡು

ನವದೆಹಲಿ (ಪಿಟಿಐ); ಪರೀಕ್ಷೆಗಳು 2ನೇ ತರಗತಿವರೆಗಿನ ಮಕ್ಕಳಿಗೆ ಸೂಕ್ತವಲ್ಲದ ಮೌಲ್ಯಮಾಪನ ವ್ಯವಸ್ಥೆಯಾಗಿದೆ. 3ನೇ ತರಗತಿಯಿಂದ ಲಿಖಿತ ಪರೀಕ್ಷೆಗಳನ್ನು ಪರಿಚಯಿಸಬೇಕು ಹಾಗೂ ಮೌಲ್ಯಮಾಪನ ವಿಧಾನಗಳು ಮಕ್ಕಳಿಗೆ ಹೆಚ್ಚುವರಿ ಹೊರೆಯನ್ನುಂಟು ಮಾಡಬಾರದು ಎಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) ಶಿಫಾರಸು ಮಾಡಿದೆ.

ತೀವ್ರಗೊಂಡ ಇಸ್ರೇಲ್–ಪ್ಯಾಲೆಸ್ಟೀನ್ ಸಂಘರ್ಷ

ಜೆರುಸಲೇಂ (ರಾಯಿಟರ್ಸ್/ ಎಎಫ್‌ಪಿ): ಮುಸ್ಲಿಮರ ಮೂರನೇ ಅತ್ಯಂತ ಪವಿತ್ರ ಸ್ಥಳವಾದ ಅಲ್–ಅಕ್ಸಾ ಮಸೀದಿ ಸಂಕೀರ್ಣದಲ್ಲಿ ಪ್ಯಾಲೆಸ್ಟೀನ್ ಮುಸ್ಲಿಮರು ಮತ್ತು ಇಸ್ರೇಲ್ ಪೊಲೀಸರ ನಡುವಣ ಸಂಘರ್ಷವು ಈಗ ತೀವ್ರ ಸ್ವರೂಪದ ಪಡೆದಿದೆ. ಪ್ಯಾಲೆಸ್ಟೀನ್ ಉಗ್ರರು ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದಾರೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಸಹ ಶುಕ್ರವಾರ ರಾಕೆಟ್ ದಾಳಿ ನಡೆಸಿದೆ.

ಇಸ್ರೇಲ್ ದಾಳಿಯ ಬೆನ್ನಲ್ಲೇ ವೆಸ್ಟ್‌ಬ್ಯಾಂಕ್ ಗಡಿಯಲ್ಲಿ ಪ್ಯಾಲಿಸ್ಟೀನ್‌ನ ವ್ಯಕ್ತಿಯೊಬ್ಬ ಗುಂಡಿನದಾಳಿ ನಡೆಸಿದ್ದಾನೆ. ಈ ದಾಳಿಯಲ್ಲಿ ಇಸ್ರೇಲ್‌ನ ಇಬ್ಬರು ಯುವತಿಯರು ಮೃತಪಟ್ಟಿದ್ದಾರೆ. ಯುವತಿಯರ ತಾಯಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ರಂಜಾನ್ ವ್ರತಾಚರಣೆ ಸಲುವಾಗಿ ಮಸೀದಿಯಲ್ಲಿ ಮುಸ್ಲಿಮರು ಸೇರಿದ್ದರು. ಅದೇ ಸಂದರ್ಭದಲ್ಲಿ ಮಸೀದಿ ಸಂಕೀರ್ಣದಲ್ಲೇ ಇರುವ ಯಹೂದಿಗಳ ಅತ್ಯಂತ ಪವಿತ್ರ ಧಾರ್ಮಿಕ ಸ್ಥಳ 'ಟೆಂಪಲ್ ಮೌಂಟ್'ನಲ್ಲಿ ಮೇಕೆ ಬಲಿ ನೀಡಲು ಮುಂದಾಗಿದ್ದರು. ಆಗ ಎರಡೂ ಸಮುದಾಯಗಳ ಮಧ್ಯೆ ಸಂಘರ್ಷ ನಡೆದಿತ್ತು. ಯಹೂದಿ ದೇಶ ಇಸ್ರೇಲ್‌ನ ಪೊಲೀಸರು, ಮಸೀದಿಯಲ್ಲಿದ್ದ ಮುಸ್ಲಿಮರ ಮೇಲೆ ದಾಳಿ ನಡೆಸಿದ್ದರು ಎಂದು ಬಿಬಿಸಿ ವರದಿ ಮಾಡಿದೆ.

ಪ್ಯಾಲೆಸ್ಟೀನ್ ಮುಸ್ಲಿಮರ ಮೇಲೆ ಇಸ್ರೇಲ್ ಪೊಲೀಸರ ದಾಳಿ ನಡೆದ ಬೆನ್ನಲ್ಲೇ, ಪ್ಯಾಲೆಸ್ಟೀನ್ ಉಗ್ರ ಸಂಘಟನೆ ಹಮಾಸ್ ತನ್ನ ಅಡಗುತಾಣಗಳಿಂದ ಇಸ್ರೇಲ್ ಮೇಲೆ ದಾಳಿ ನಡೆದಿತ್ತು. ಗಾಜಾಪಟ್ಟಿ ಮತ್ತು ಲೆಬನಾನ್‌ನ ಅಡಗುದಾಣಗಳಿಂದ ಒಟ್ಟು 34 ಕಿರು ಕ್ಷಿಪಣಿಗಳನ್ನು ಇಸ್ರೇಲ್‌ನತ್ತ ಉಡಾಯಿಸಲಾಗಿತ್ತು. ಇವುಗಳಲ್ಲಿ 25 ಕಿರು ಕ್ಷಿಪಣಿಗಳನ್ನು ಇಸ್ರೇಲ್ ಸೇನೆಯು ಆಗಸದಲ್ಲೇ ಹೊಡೆದುರುಳಿಸಿತ್ತು. ಎರಡು ಕ್ಷಿಪಣಿಗಳು ಇಸ್ರೇಲ್ ನೆಲವನ್ನು ತಲುಪಿದ್ದವು. ಈ ದಾಳಿಯಲ್ಲಿ ದಕ್ಷಿಣ ಇಸ್ರೇಲ್‌ನ ಒಂದು ಮನೆಗೆ ಹಾನಿಯಾಗಿತ್ತು.

ಸ್ಮಶಾನದಲ್ಲಿ 'ವೀರಂ' ರಕ್ತ ತರ್ಪಣ!

ಕಥೆ ಪ್ರಾರಂಭವಾಗುವುದೇ ಬೆಂಗಳೂರಿನ ಮಾರುಕಟ್ಟೆ ಗದ್ದುಗೆ ಯಾರಿಗೆ ಸಿಗಬೇಕೆಂದು? ದೇವ ಮತ್ತು ಗೋವಿಂದ ಎಂಬ ರೌಡಿ ಕಂ ರಾಜಕಾರಣಿಗಳ ನಡುವಿನ ಕಿತ್ತಾಟ. ಅವರ ನಡುವೆ ಸಿಕ್ಕಿಕೊಳ್ಳುವ ನಾಯಕನ ಭಾವ ಅಚ್ಯುತ್ ಕುಮಾರ್. ಈ ರೇಸಿನಲ್ಲಿ ಹತ್ತಾರು ಪಾತ್ರಗಳು ಬಂದು, ನಾಲ್ಕಾರು ಕೊಲೆಗಳು ನಡೆದು ಇದೊಂದು ಅಪ್ಪಟ ಆ್ಯಕ್ಷನ್ ಪ್ರಿಯರ ಸಿನಿಮಾ ಎಂಬುದನ್ನು ಆಗಾಗ ನೆನಪಿಸಿ ಹೋಗುತ್ತವೆ. ಅಣ್ಣನನ್ನು ಕಳೆದುಕೊಂಡ ಬೇಸರದಲ್ಲಿ ಸ್ಮಶಾನದಲ್ಲಿದ್ದ ನಾಯಕ ವೀರ, ಹೆಣದ ಬೆಂಕಿಯಲ್ಲಿದ್ದ ಕತ್ತಿಯನ್ನು ಎತ್ತಿಕೊಂಡು ಬಂದು ಹೊಡೆಯುವಾಗ ಇದೊಂದು ಊಹೆಗೂ ನಿಲುಕದ, ಬೇರೆಯದೇ ಪಂಕ್ತಿಯಲ್ಲಿ ನಿಲ್ಲಬಹುದಾದ ಮಾಸ್ ಸಿನಿಮಾ ಎನ್ನಿಸುವುದಂತೂ ಸುಳ್ಳಲ್ಲ!

ರಕ್ತಮಯ, ಕೆಂಪುಕೆಂಪಾದ ಸಿನಿಮಾದಲ್ಲೊಂದು ಮುಂಜಾನೆಯ ಹದವಾದ ಬಿಸಿಲು ಶ್ರುತಿ. ನಾಯಕನ ಅಕ್ಕನಾಗಿ ಇಬ್ಬರು ತಮ್ಮಂದಿರಿಗೆ ತಾಯಿ ಪ್ರೀತಿ ನೀಡುವ ಶ್ರುತಿ, ನಟನೆಯಿಂದ ಪ್ರೇಕ್ಷಕರನ್ನು ಆವರಿಸಿಕೊಂಡು ಬಿಡುತ್ತಾರೆ. ಆದರೆ ಸಿನಿಮಾದ ಕಥೆ ಆ ಭಾವನೆಯನ್ನು ಹಾಗೇ ಉಳಿಯಲು ಬಿಡುವುದಿಲ್ಲ ಮತ್ತು ತುಂಬ ಸನ್ನಿವೇಶಗಳಲ್ಲಿ ಈ ಭಾವುಕ ಪ್ರೀತಿ ತುರುಕಿರುವಂತೆ ಕಾಣುತ್ತದೆ.



'ವೀರಂ' ಚಿತ್ರದಲ್ಲಿ ಪ್ರಜ್ವಲ್ ದೇವರಾಜ್

ಖಳನಾಯಕನ ಅವತಾರದಲ್ಲಿ ಪ್ರವೇಶ ಪಡೆಯುವ ಶ್ರೀನಗರ ಕಿಟ್ಟಿ ನಾಯಕನ ಕಡೆಯವನು ಮತ್ತು ಒಳ್ಳೆಯವನು ಎಂದು ಜೀರ್ಣಿಸಿಕೊಳ್ಳಲು ಕೆಲಕಾಲ ಬೇಕಾಗುತ್ತದೆ. ರೌಡಿಯಾದರೂ ನಾಯಕನ ಒಳ್ಳೆ ಕೆಲಸಕ್ಕೆ ಬೆಂಬಲವಾಗಿ ನಿಲ್ಲುವ ಕಿಟ್ಟಿ ನಟನೆಯಿಂದ ವಾವ್ ಎನ್ನಿಸುವ ಹೊತ್ತಿಗೆ ಕೊಲೆಯಾಗಿಬಿಡುತ್ತಾರೆ. ತಮ್ಮ ಪಾತ್ರಕ್ಕೆ ಜೀವ ತುಂಬಿದ್ದ ಒಳ್ಳೆ ನಟನಿಗೆ ನಿರ್ದೇಶಕರು ಬಹಳ ಕಡಿಮೆ ಜಾಗ ನೀಡಿದರು ಎನ್ನಿಸುವುದು ಸುಳ್ಳಲ್ಲ.

ಮೊದಲ 30–40 ನಿಮಿಷ ಸಿನಿಮಾದಲ್ಲಿ ಕಥೆಯಾಗಿ ಒಂಥರ ಏನೂ ಘಟಿಸುವುದೇ ಇಲ್ಲ. ಅವರನ್ನು ಇವರು ಹೊಡೆದರು, ಇವರು ಅವರನ್ನು ಹೊಡೆದರು...ಯಾವುದಕ್ಕೂ ಗಟ್ಟಿಯಾದ ಕಾರಣವಾಗಲಿ, ದ್ವೇಷವಾಗಲಿ ಕಾಣ ಸಿಗುವುದೇ ಇಲ್ಲ. ಕಾಲೇಜು ಹುಡುಗನಿಗೆ ಪ್ರೇಯಸಿಯಾಗಿ ರಚಿತಾ ರಾಮ್ ಹಾಗೆ ಬಂದು, ಒಂದು ಹಾಡಿಗೆ ಕುಣಿದು ಹೀಗೆ ಹೋಗಿ, ಮತ್ತೆ ಹಾಗೆ ಬರುತ್ತಾರೆ ಎಂಬ ರೀತಿಯ ಪಾತ್ರ.

ಅನೂಪ್ ಸೀಳಿನ್ ಹಿನ್ನೆಲೆ ಸಂಗೀತ ಉತ್ತಮವಾಗಿದೆ. 'ಮೌನವೇ ಚೆನ್ನ' ಹಾಡು ಕಿವಿಗೆ ಹಿತವಾಗಿದೆ. ಲವಿತ್ ಕ್ಯಾಮೆರಾ ಕೈಚಳಕ ವರ್ಣಮಯವಾಗಿದೆ. ಸಿನಿಮಾ ಮಾಸ್ ಪ್ರಿಯರಿಗಾಗಿದ್ದರೂ ಕಥೆ ಇನ್ನಷ್ಟು ಗಟ್ಟಿಯಾಗಬೇಕಿತ್ತು. ಪ್ರಜ್ವಲ್–ರಚಿತಾ ಕೆಮಿಸ್ಟ್ರಿಯನ್ನು ಇನ್ನಷ್ಟು ಬಳಸಿಕೊಂಡು, ಶ್ರೀನಗರ ಕಿಟ್ಟಿಯನ್ನು ಇನ್ನೊಂದಷ್ಟು ಹೊತ್ತು ಉಳಿಸಿಕೊಳ್ಳಬಹುದಿತ್ತು. ನಗು ತರಿಸಲೆಂದು ಬರೆದ ಕೆಲವು ಸನ್ನಿವೇಶ, ಮಾತುಗಳು ಆ ಉದ್ದೇಶವನ್ನು ಈಡೇರಿಸುವುದೇ ಇಲ್ಲ. ಸಿನಿಮಾದ ಅವಧಿಯನ್ನು ಇನ್ನೊಂದು 15 ನಿಮಿಷ ಕತ್ತರಿಸಬಹುದಿತ್ತು.

ವಿನಾಯಕ ಕೆ.ಎಸ್

ನಾವು ನೋಡಿದ ಸಿನಿಮಾ

ಚಿತ್ರದ ಹೆಸರು
- ನಿರ್ಮಾಣ: ಶಶಿಧರ್ ಸ್ಟುಡಿಯೋಸ್
- ನಿರ್ದೇಶನ: ಖದರ್ ಕುಮಾರ್
- ತಾರಾಗಣ: ಪ್ರಜ್ವಲ್ ದೇವರಾಜ್, ರಚಿತಾ ರಾಮ್, ಶ್ರುತಿ, ಅಚ್ಯುತ್ ಕುಮಾರ್, ಶ್ರೀನಗರ ಕಿಟ್ಟಿ

ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮಣಿಸಿದ ಲಖನೌ ಸೂಪರ್‌ಜೈಂಟ್ಸ್

ಕೃಣಾಲ್ ಪಾಂಡ್ಯ ಆಲ್‌ರೌಂಡ್ ಆಟ



ಲಖನೌ ಸೂಪರ್ ಜೈಂಟ್ಸ್ ತಂಡದ ಕೃಣಾಲ್ ಪಾಂಡ್ಯ (ಎಡ) ಮತ್ತು ಕೆ.ಎಲ್‌.ರಾಹುಲ್ ರನ್ ಗಳಿಸಿದರು–ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- 18 ರನ್‌ಗಳಿಗೆ 3 ವಿಕೆಟ್ ಪಡೆದ ಕೃಣಾಲ್
- ಲಖನೌ ಸ್ಪಿನ್ನರ್‌ಗಳ ಮಿಂಚು
- ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ರಾಹುಲ್ ಬಳಗ

ಲಖನೌ (ಪಿಟಿಐ): ಕೃಣಾಲ್ ಪಾಂಡ್ಯ ಅವರು ಆಲ್‌ರೌಂಡ್ ಆಟದ ಮೂಲಕ ಲಖನೌ ಸೂಪರ್‌ಜೈಂಟ್ಸ್ ತಂಡಕ್ಕೆ ಎರಡನೇ ಗೆಲುವು ತಂದಿತ್ತರು.

ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೆ.ಎಲ್.ರಾಹುಲ್ ಬಳಗ ಐದು ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮಣಿಸಿತು. ಏಡನ್ ಮರ್ಕರಂ ನೇತೃತ್ವದ ತಂಡಕ್ಕೆ ಎದುರಾದ ಸತತ ಎರಡನೇ ಸೋಲು ಇದು.

ಮೊದಲು ಬ್ಯಾಟ್ ಮಾಡಿದ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 121 ರನ್‌ಗಳ ಸಾಧಾರಣ ಮೊತ್ತ ಪೇರಿಸಿದರೆ, ಲಖನೌ ತಂಡ 16 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 127 ರನ್ ಗಳಿಸಿತು.

ಮೊದಲು ಬೌಲಿಂಗ್‌ನಲ್ಲಿ (18ಕ್ಕೆ 3) ಕೈಚಳಕ ಮೆರೆದ ಕೃಣಾಲ್, ಆ ಬಳಿಕ ಬ್ಯಾಟ್ ಮೂಲಕವೂ ಮಿಂಚಿ (34 ರನ್, 23 ಎ.) ತಂಡದ ಗೆಲುವಿನಲ್ಲಿ ಗಮನ ಸೆಳೆದರು.

ಸಾಧಾರಣ ಗುರಿ ಬೆನ್ನಟ್ಟಿದ ಲಖನೌ ತಂಡಕ್ಕೆ ಕೈಲ್ ಮೇಯರ್ಸ್ (15) ಮತ್ತು ರಾಹುಲ್ (35 ರನ್, 31 ಎ.) ಮೊದಲ ವಿಕೆಟ್‌ಗೆ 35 ರನ್ ಸೇರಿಸಿದರು. ಮೇಯರ್ಸ್ ಹಾಗೂ ದೀಪಕ್ ಹೂಡಾ (7) ಅಲ್ಪ ಅಂತರದಲ್ಲಿ ವಿಕೆಟ್ ಒಪ್ಪಿಸಿದರು.

ಆದರೆ ರಾಹುಲ್‌ಗೆ ತಕ್ಕ ಸಾಥ್ ನೀಡಿದ ಕೃಣಾಲ್, ಮೂರನೇ ವಿಕೆಟ್‌ಗೆ 55 ರನ್ ಸೇರಿಸಿದರು. ಅಬ್ಬರದ ಆಟವಾಡಿದ ಅವರು ನಾಲ್ಕು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಎರಡನೇ ಗೆಲುವು ಪಡೆದ ಲಖನೌ ತಂಡ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಕೃಣಾಲ್ ಕೈಚಳಕ: ಇದಕ್ಕೂ ಮುನ್ನ ದೊಡ್ಡ ಮೊತ್ತ ಕಲೆಹಾಕುವ ಯೋಜನೆಯೊಂದಿಗೆ ಕಣಕ್ಕಿಳಿದ ಸನ್‌ರೈಸರ್ಸ್ ತಂಡದ ಲೆಕ್ಕಾಚಾರವನ್ನು ಎಡಗೈ ಸ್ಪಿನ್ನರ್ ಕೃಣಾಲ್ ತಲೆಕೆಳಗು ಮಾಡಿದರು.

ಅನ್ಮೋಲ್‌ಪ್ರೀತ್ ಸಿಂಗ್ ಜೊತೆಗೆ ಇನಿಂಗ್ಸ್ ಆರಂಭಿಸಿದ ಮಯಂಕ್ ಅಗರವಾಲ್ ಕೇವಲ ಎಂಟು ರನ್ ಗಳಿಸಿದರು. ಮೂರನೇ ಓವರ್‌ನಲ್ಲಿ ಕೃಣಾಲ್ ಹಾಕಿದ ಎಸೆತವನ್ನು ಡ್ರೈವ್ ಮಾಡಲು ಧಾವಂತ ತೋರಿದ ಮಯಂಕ್ ಕವರ್ಸ್‌ನಲ್ಲಿದ್ದ ಸ್ಟೋಯಿನಿಸ್‌ಗೆ ಕ್ಯಾಚಿತ್ತರು.

ಅನ್ಮೋಲ್‌ಪ್ರೀತ್ ಜೊತೆಗೂಡಿದ ರಾಹುಲ್ ತ್ರಿಪಾಠಿ (35; 41ಎ) ತಾಳ್ಮೆಯ ಜೊತೆಯಾಟವಾಡಿದರು. ಎರಡನೇ ವಿಕೆಟ್‌ಗೆ 29 ರನ್ ಸೇರಿಸಿದರು. ತಂಡದ ಇನಿಂಗ್ಸ್‌ಗೆ ಶಕ್ತಿ ತುಂಬಲು ಪ್ರಯತ್ನಿಸಿದರು. ಆದರೆ ಈ ಜೊತೆಯಾಟಕ್ಕೂ ಕೃಣಾಲ್ ತಡೆಯೊಡ್ಡಿದರು.

ಇನಿಂಗ್ಸ್‌ನ ಎಂಟನೇ ಓವರ್ ಬೌಲಿಂಗ್ ಮಾಡಿದ ಕೃಣಾಲ್ ಸತತ ಎರಡು ಎಸೆತಗಳಲ್ಲಿ ಅನ್ಮೋಲ್‌ಪ್ರೀತ್ ಮತ್ತು ಏಡನ್ ಮರ್ಕರಂ ವಿಕೆಟ್‌ಗಳನ್ನು ಕಬಳಿಸಿದರು. ಈ ಟೂರ್ನಿಯಲ್ಲಿ ನಾಯಕ ಮರ್ಕರಂ ಅವರಿಗೆ ಇದು ಮೊದಲ ಪಂದ್ಯ.

ಇದರಿಂದಾಗಿ ತಂಡದ ರನ್‌ಗಳಿಕೆಯ ವೇಗ ಕುಂಠಿತವಾಯಿತು. ಹ್ಯಾರಿ ಬ್ರೂಕ್ (3 ರನ್) ಅವರಿಗೆ ಲೆಗ್ ಸ್ಪಿನ್ನರ್ ರವಿ ಬಿಷ್ಣೋಯಿ ಪೆವಿಲಿಯನ್ ಮಾರ್ಗ ತೋರಿಸಿದರು.

ವಾಷಿಂಗ್ಟನ್ ಸುಂದರ್ (16; 28ಎ) ಮತ್ತು ಅಬ್ದುಲ್ ಸಮದ್ (ಔಟಾಗದೆ 21, 10ಎ, 4X1, 6X2) ತಂಡದ ಮೊತ್ತವು ನೂರರ ಗಡಿ ದಾಟಲು ನೆರವಾದರು. ಅನುಭವಿ ಸ್ಪಿನ್ನರ್ ಅಮಿತ್ ಮಿಶ್ರಾ (23ಕ್ಕೆ 2) ಕೂಡ ಮಿಂಚಿದರು. ವಾಷಿಂಗ್ಟನ್ ಸುಂದರ್ ಮತ್ತು ಆದಿಲ್ ರಶೀದ್ ಅವರ ವಿಕೆಟ್ ಗಳಿಸಿದರು. ಇದರಿಂದಾಗಿ ತಂಡವು ಸಾಧಾರಣ ಮೊತ್ತ ಗಳಿಸಿತು.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 8ಕ್ಕೆ 121 (20 ಓವರ್‌ಗಳಲ್ಲಿ)
ಅನ್ಮೋಲ್‌ಪ್ರೀತ್ ಎಲ್‌ಬಿಡಬ್ಲ್ಯು ಬಿ ಕೃಣಾಲ್ 31 (26ಎ, 4X3, 6X1)
ಮಯಂಕ್ ಸಿ ಸ್ಟೋಯಿನಿಸ್ ಬಿ ಕೃಣಾಲ್ 8(7ಎ, 4X1)
ತ್ರಿಪಾಠಿ ಸಿ ಅಮಿತ್ ಬಿ ಯಶ್ 35 (41ಎ, 4X4)
ಮರ್ಕರಂ ಬಿ ಕೃಣಾಲ್ 0 (1ಎ)
ಹ್ಯಾರಿ ಸ್ಟಂಪ್ಡ್ ಪೂರನ್ ಬಿ ಬಿಷ್ಣೋಯಿ 3 (4ಎ)
ವಾಷಿಂಗ್ಟನ್ ಸಿ ಹೂಡಾ ಬಿ ಅಮಿತ್ 16 (28ಎ)
ಸಮದ್ ಔಟಾಗದೆ 21 (10ಎ, 4X1, 6X2)
ಆದಿಲ್ ಸಿ ಹೂಡಾ ಬಿ ಅಮಿತ್ 4 (3ಎ, 4X1)
ಉಮ್ರಾನ್ ರನೌಟ್ (ಹೂಡಾ/ಉನದ್ಕತ್) 0 (0)
ಭುವನೇಶ್ವರ್ ಔಟಾಗದೆ 0 (0)
ಇತರೆ: 3 (ಬೈ 1, ವೈಡ್ 2)
ವಿಕೆಟ್ ಪತನ: 1–21 (ಮಯಂಕ್ ಅಗರವಾಲ್; 2.5), 2–50 (ಅನ್ಮೋಲ್‌ಪ್ರೀತ್ ಸಿಂಗ್; 7.5), 3–50 (ಏಡನ್ ಮರ್ಕರಂ; 7.6), 4–55 (ಹ್ಯಾರಿ ಬ್ರೂಕ್; 8.6), 5–94 (ರಾಹುಲ್ ತ್ರಿಪಾಠಿ; 17.2), 6–104 (ವಾಷಿಂಗ್ಟನ್ ಸುಂದರ್; 18.3), 7–108 (ಆದಿಲ್ ರಶೀದ್; 18.6), 8–109 (ಉಮ್ರಾನ್ ಮಲಿಕ್; 19.1)
ಬೌಲಿಂಗ್: ಕೈಲ್ ಮೇಯರ್ಸ್ 1–0–5–0, ಜಯದೇವ್ ಉನದ್ಕತ್ 3–0–26–0, ಕೃಣಾಲ್ ಪಾಂಡ್ಯ 4–0–18–3, ಯಶ್ ಠಾಕೂರ್ 3–0–24–1, ರವಿ ಬಿಷ್ಣೋಯಿ 4–0–16–1, ದೀಪಕ್ ಹೂಡಾ 1–0–8–0, ಅಮಿತ್ ಮಿಶ್ರಾ 4–0–23–2

ಲಖನೌ ಸೂಪರ್ ಜೈಂಟ್ಸ್ 5ಕ್ಕೆ 127 (16 ಓವರ್‌ಗಳಲ್ಲಿ)
ಮೇಯರ್ಸ್ ಸಿ ಮಯಂಕ್ ಬಿ ಫಾರೂಕಿ 13 (14ಎ, 4X2)
ರಾಹುಲ್ ಎಲ್‌ಬಿಡಬ್ಲ್ಯು ರಶೀದ್ 35 (31ಎ, 4X4)
ದೀಪಕ್ ಸಿ ಮತ್ತು ಬಿ ಭುವನೇಶ್ವರ್ 7 (8ಎ, 6X1)
ಕೃಣಾಲ್ ಸಿ ಅನ್ಮೋಲ್‌ಪ್ರೀತ್ ಬಿ ಉಮ್ರಾನ್ 34 (23ಎ, 4X4, 6X1)
ಸ್ಟೊಯಿನಿಸ್ ಔಟಾಗದೆ 10 (13ಎ, 4X2)
ರೊಮಾರಿಯೊ ಎಲ್‌ಬಿಡಬ್ಲ್ಯು ರಶೀದ್ 0 (1ಎ)
ಪೂರನ್ ಔಟಾಗದೆ 11 (6ಎ, 4X1, 6X1)
ಇತರೆ: 17 (ಬೈ 2, ವೈಡ್ 15)
ವಿಕೆಟ್ ಪತನ: 1-35 (ಕೈಲ್ ಮೇಯರ್ಸ್, 4.3), 2-45 (ದೀಪಕ್ ಹೂಡಾ, 5.6), 3-100 (ಕೃಣಾಲ್ ಪಾಂಡ್ಯ, 12.2), 4-114 (ಕೆ. ಎಲ್.ರಾಹುಲ್, 14.1), 5-114 (ರೊಮಾರಿಯೊ ಶೆಫರ್ಡ್, 14.2)
ಬೌಲಿಂಗ್: ಭುವನೇಶ್ವರ್ ಕುಮಾರ್ 2–0–19–1, ವಾಷಿಂಗ್ಟನ್ ಸುಂದರ್ 1–0–11–0, ಫಜಲ್‌ಹಕ್ ಫಾರೂಕಿ 3–0–13–1, ಏಡನ್ ಮರ್ಕರಂ 2–0–14–0, ಆದಿಲ್ ರಶೀದ್ 3–0–23–2, ಟಿ.ನಟರಾಜನ್ 3–0–23–0, ಉಮ್ರಾನ್ ಮಲಿಕ್ 2–0–22–1

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 5 ವಿಕೆಟ್ ಜಯ

‘ಬ್ಯಾಟರ್‌ಗಳು ತಾಳ್ಮೆ ವಹಿಸಬೇಕಿತ್ತು’

ಕೋಲ್ಕತ್ತ (ಪಿಟಿಐ): ‘ನೈಟ್ ರೈಡರ್ಸ್ ಸ್ಪಿನ್ ದಾಳಿಯನ್ನು ಸಮರ್ಥವಾಗಿ ಎದುರಿಸುವಲ್ಲಿ ನಮ್ಮ ಬ್ಯಾಟರ್‌ಗಳು ವಿಫಲವಾದ್ದರಿಂದ ಸೋಲು ಅನುಭವಿಸಿದೆವು’ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟಿಂಗ್ ಕೋಚ್ ಸಂಜಯ್ ಬಾಂಗರ್ ಹೇಳಿದ್ದಾರೆ.

‘ವಿರಾಟ್ ಕೊಹ್ಲಿ ಮತ್ತು ಫಫ್ ಡುಪ್ಲೆಸಿ ಅವರು ಸ್ಪಿನ್ನರ್‌ಗಳ ಎದುರು ಸಂಯಮದಿಂದ ಆಡಬೇಕಿತ್ತು. ಆರಂಭದಲ್ಲೇ ಭರ್ಜರಿ ಹೊಡೆತಗಳಿಗೆ ಮುಂದಾಗುವ ಅವಶ್ಯಕತೆ ಇರಲಿಲ್ಲ’ ಎಂದು ಪಂದ್ಯದ ಬಳಿಕ ಪ್ರತಿಕ್ರಿಯಿಸಿದ್ದಾರೆ.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಗುರುವಾರ ನಡೆದಿದ್ದ ಪಂದ್ಯದಲ್ಲಿ ಬೆಂಗಳೂರಿನ ತಂಡ, ಕೋಲ್ಕತ್ತ ನೈಟ್ ರೈಡರ್ಸ್ ಕೈಯಲ್ಲಿ 81 ರನ್‌ಗಳಿಂದ ಸೋತಿತ್ತು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಲಖನೌ	3	2	1	0	4	1.358
ಗುಜರಾತ್	2	2	0	0	4	0.700
ಪಂಜಾಬ್	2	2	0	0	4	0.333
ಕೋಲ್ಕತ್ತ	2	1	1	0	2	2.056
ರಾಜಸ್ಥಾನ	2	1	1	0	2	1.675
ಚೆನ್ನೈ	2	1	1	0	2	0.036
ಬೆಂಗಳೂರು	2	1	1	0	2	-1.256
ಡೆಲ್ಲಿ	2	0	2	0	0	-1.703
ಮುಂಬೈ	1	0	1	0	0	-1.981
ಹೈದರಾಬಾದ್	2	0	2	0	0	-2.867

*ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ವುಡ್	ಲಖನೌ	8

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಋತುರಾಜ್	ಚೆನ್ನೈ	149

ಆರ್‌ಸಿಬಿಗೆ ವೈಶಾಖ, ಪಾರ್ನೆಲ್

ನವದೆಹಲಿ (ಪಿಟಿಐ): ಗಾಯಗೊಂಡಿರುವ ರೀಸ್ ಟಾಪ್ಲಿ ಮತ್ತು ರಜತ್ ಪಾಟಿದಾರ್ ಅವರ ಬದಲಿಗೆ ದಕ್ಷಿಣ ಆಫ್ರಿಕಾದ ವೇಯ್ನ್ ಪಾರ್ನೆಲ್ ಮತ್ತು ಕರ್ನಾಟಕದ ವೈಶಾಖ ವಿಜಯಕುಮಾರ್ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ಫೀಲ್ಡಿಂಗ್ ಸಂದರ್ಭ ಟಾಪ್ಲಿ ಗಾಯಗೊಂಡಿದ್ದರು. ಅವರು ಭುಜನೋವಿನಿಂದ ಬಳಲುತ್ತಿದ್ದಾರೆ.

ಹಿಮ್ಮಡಿ ಗಾಯಕ್ಕೆ ಒಳಗಾಗಿರುವ ಪಾಟಿದಾರ್ ಮೊದಲ ಪಂದ್ಯದಲ್ಲಿ ಕಣಕ್ಕಿಳಿದಿರಲಿಲ್ಲ. ಅವರು ಐಪಿಎಲ್ ಟೂರ್ನಿಯಿಂದಲೇ ಹೊರಗುಳಿದಿದ್ದಾರೆ.

ಐಪಿಎಲ್‌ನಲ್ಲಿ 26 ಪಂದ್ಯಗಳನ್ನು ಆಡಿರುವ ಪಾರ್ನೆಲ್ ಅವರಿಗೆ ₹75 ಲಕ್ಷ ಕೊಟ್ಟು ಆರ್‌ಸಿಬಿ ತನ್ನದಾಗಿಸಿಕೊಂಡಿದೆ.

ದೇಶಿ ಕ್ರಿಕೆಟ್‌ನಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸುವ ವೈಶಾಖ ಅವರು, 14 ಟಿ–20 ಪಂದ್ಯಗಳನ್ನು ಆಡಿದ್ದು, 22 ವಿಕೆಟ್ ಪಡೆದಿದ್ದಾರೆ. ವೈಶಾಖ ಅವರಿಗೆ ಆರ್‌ಸಿಬಿ ₹ 20 ಲಕ್ಷ ನೀಡಿದೆ.

ಕಷ್ಟಗಳ ಹಾದಿಯಲ್ಲಿ ಸುಯಶ್ ಯಶಸ್ಸು



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸುಯಶ್ ಶರ್ಮಾ

ನವದೆಹಲಿ (ಪಿಟಿಐ): ಕೆಳಮಧ್ಯಮ ವರ್ಗದ ಕುಟುಂಬದ ಸುಯಶ್ ಶರ್ಮಾ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಸ್ಥಾನ ಪಡೆಯುವ ಮಟ್ಟಕ್ಕೆ ಬೆಳೆದದ್ದು ಯಶೋಗಾಥೆ.

ದೆಹಲಿಯ ಭಜನಪುರದ ಸುಯಶ್ ಅವರಿಗೆ ಸ್ಥಳೀಯ ಕ್ರಿಕೆಟ್ ಆಡಳಿತ ವ್ಯವಸ್ಥೆಯಿಂದ ಯಾವುದೇ ಬಗೆಯ ಸಹಾಯ ದೊರೆಯಲಿಲ್ಲ. ದೆಹಲಿ ಕ್ರಿಕೆಟ್ ‘ಭ್ರಷ್ಟಾಚಾರ’ದ ವಾತಾವರಣದಲ್ಲಿ ಪ್ರತಿಭೆ ಗುರುತಿಸುವವರು ಯಾರೂ ಇರಲಿಲ್ಲ. ಅವರಿಗೆ ‘ಗಾಡ್‌ಫಾದರ್’ ಕೂಡ ಇರಲಿಲ್ಲ. ಕ್ಯಾನ್ಸರ್‌ನಿಂದ ಜೀವನ್ಮರಣದ ಹೋರಾಟ ನಡೆಸುತ್ತಿರುವ ತಂದೆಯನ್ನು ನೋಡಿಕೊಳ್ಳುವ ಜವಾಬ್ದಾರಿಯೂ ಈ ಉದ್ದಕೂದಲಿನ ಹುಡುಗನದ್ದು.


ಆದರೆ ಈ ಯಾವ ಕಷ್ಟಗಳಿಗೂ ಮಣಿಯದೇ ತಮ್ಮ ಗುರಿಯತ್ತ ಗಮನವಿಟ್ಟರು. ಅವರ ಪರಿಶ್ರಮಕ್ಕೆ ಫಲ ಸಿಕ್ಕಿತು. ಗುರುವಾರ ಈಡನ್ ಗಾರ್ಡನ್‌ನಲ್ಲಿ ಆರ್‌ಸಿಬಿಯ ಪ್ರಮುಖ ಬ್ಯಾಟರ್‌ಗಳಾದ ದಿನೇಶ್ ಕಾರ್ತಿಕ್, ಅನುಜ್ ರಾವತ್ ಮತ್ತು ಆಲ್‌ರೌಂಡರ್ ಕರ್ಣ ಶರ್ಮಾ ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಇದರಿಂದಾಗಿ ಕೋಲ್ಕತ್ತ ತಂಡಕ್ಕೆ 81 ರನ್‌ಗಳ ಜಯಸಾಧನೆ ಸುಗಮವಾಯಿತು.

‘ಸುಯಶ್ ಸಾಧನೆಯ ಹಾದಿ ಸುಗಮವಾಗಿರಲಿಲ್ಲ. ದೆಹಲಿ ಮಾಜಿ ಕ್ರಿಕೆಟಿಗ ಸುರೇಶ್ ಬಾತ್ರಾ ಅವರ ವಿದ್ಯಾರ್ಥಿಯಾಗಿದ್ದಾರೆ ಸುಯಶ್. ಆದರೆ ಸುರೇಶ್ ಅವರು ಕೋವಿಡ್‌ಗೆ ಬಲಿಯಾದರು. ನಂತರ ಸುಯಶ್ ನನ್ನ ಬಳಿ ತರಬೇತಿಗಾಗಿ ಬಂದರು. ನಮ್ಮ ಮದ್ರಾಸ್ ಕ್ಲಬ್ ಪರವಾಗಿ ಡಿಡಿಸಿಎ ಲೀಗ್‌ನಲ್ಲಿ ಮತ್ತು ರನ್ ಸ್ಟಾರ್ ಕ್ಲಬ್ ಪರವಾಗಿ ಮುಕ್ತ ಟೂರ್ನಿಗಳಲ್ಲಿ ಆಡುವ ಅವಕಾಶ ಕೊಟ್ಟೆವು’ ಎಂದು ದೆಹಲಿಯ ಕ್ರಿಕೆಟ್ ಕೋಚ್ ರಣಧೀರ್ ಸಿಂಗ್ ಹೇಳಿದರು.

ಸುಯಶ್ ಇದುವರೆಗೆ ರಣಜಿ ಟ್ರೋಫಿ, ವಿಜಯ್ ಹಜಾರೆ ಅಥವಾ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಗಳಲ್ಲಿ ಆಡಿಲ್ಲ. ನೇರವಾಗಿ ಐಪಿಎಲ್‌ಗೆ ಲಗ್ಗೆಯಿಟ್ಟಿದ್ದಾರೆ. ಅವರು ರೆಡ್‌ಬಾಲ್ ಕ್ರಿಕೆಟ್‌ನಲ್ಲಿ ಆಡಬೇಕು ಎಂಬುದು ರಣಧೀರ್ ಸಿಂಗ್ ಅಭಿಪ್ರಾಯ. 16ನೇ ಆವೃತ್ತಿಯ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಸುಯಶ್ ಅವರನ್ನು ಕೋಲ್ಕತ್ತ ತಂಡವು ಮೂಲ ಬೆಲೆಗೆ (₹ 20 ಲಕ್ಷ) ಖರೀದಿಸಿತ್ತು.

ರೋಹಿತ್ –ಧೋನಿ ಮುಖಾಮುಖಿ

ಮುಂಬೈ– ಚೆನ್ನೈ ಸೂಪರ್ ಕಿಂಗ್ಸ್ ಹಣಾಹಣಿ ಇಂದು



ಮಹೇಂದ್ರಸಿಂಗ್ ಧೋನಿ



ರೋಹಿತ್ ಶರ್ಮಾ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಹಾಲಿ ಮತ್ತು ಮಾಜಿ ನಾಯಕರಿಬ್ಬರ ಹಣಾಹಣಿಗೆ ವಾಂಖೆಡೆ ಕ್ರೀಡಾಂಗಣ ವೇದಿಕೆಯಾಗಲಿದೆ.

ಶನಿವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ರೋಹಿತ್ ಶರ್ಮಾ ನಾಯಕತ್ವದ ಮುಂಬೈ ಇಂಡಿಯನ್ಸ್ ಹಾಗೂ ಮಹೇಂದ್ರಸಿಂಗ್ ಧೋನಿ ನೇತೃತ್ವದ ಚೆನ್ನೈ ಸೂಪರ್ ಕಿಂಗ್ಸ್ ಸೆಣಸಲಿವೆ. ಮುಂಬೈ ತಂಡವು ತನ್ನ ಮೊದಲ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಪರಾಭವಗೊಂಡಿತ್ತು. ಈಗ ತವರಿನ ಪಂದ್ಯದಲ್ಲಿ ಗೆಲುವಿನ ಖಾತೆ ತೆರೆಯುವ ಛಲದಲ್ಲಿದೆ.

ಧೋನಿ ಬಳಗವು ಎರಡು ಪಂದ್ಯಗಳನ್ನು ಆಡಿದೆ. ಅದರಲ್ಲಿ ಮೊದಲನೇ ಪಂದ್ಯ ಸೋತಿತ್ತು. ತನ್ನ ತವರಿನಂಗಳದಲ್ಲಿ ನಡೆದಿದ್ದ ಎರಡನೇ ಪಂದ್ಯದಲ್ಲಿ ಜಯಿಸಿತ್ತು. ಚೆನ್ನೈ ಬ್ಯಾಟರ್‌ಗಳು ಅಮೋಘವಾಗಿ ಆಡಿದ್ದರು. ಆದರೆ, ಬೌಲರ್‌ಗಳ ನಿರ್ವಹಣೆ ಉತ್ತಮವಾಗಿರಲಿಲ್ಲ. ಇತರೆ ರನ್‌ಗಳನ್ನು ಬಹಳಷ್ಟು ಪ್ರಮಾಣದಲ್ಲಿ ಕೊಟ್ಟಿದ್ದರು. ಅದರಿಂದಾಗಿ ಸಿಟ್ಟಿಗೆದ್ದಿದ್ದ ಧೋನಿ ತಮ್ಮ ಬೌಲರ್‌ಗಳಿಗೆ ಖಡಕ್ ಎಚ್ಚರಿಕೆ ಕೊಟ್ಟಿದ್ದರು.

‘ಪ್ರದರ್ಶನ ಹೀಗೆ ಮುಂದುವರೆದರೆ ಹೊಸ ನಾಯಕನ ತಂಡದಲ್ಲಿ ಆಡಬೇಕಾಗಬಹುದು’ ಎಂದು ಪತ್ರಿಕಾಗೋಷ್ಠಿಯಲ್ಲಿ ಧೋನಿ ಹೇಳಿದ್ದರು. ಅದರಿಂದಾಗಿ ದೀಪಕ್ ಚಾಹರ್, ತುಷಾರ್ ದೇಶಪಾಂಡೆ ಸೇರಿದಂತೆ ಉಳಿದ ಬೌಲರ್‌ಗಳು ತಮ್ಮ ಕೌಶಲ ಸರಿಪಡಿಸಿಕೊಂಡು ಕಣಕ್ಕಿಳಿಯುವ ನಿರೀಕ್ಷೆ ಇದೆ. ಲಯ ಕಂಡುಕೊಳ್ಳುವ ಒತ್ತಡದಲ್ಲಿರುವ ಮುಂಬೈನ ಬ್ಯಾಟರ್‌ಗಳಾದ ರೋಹಿತ್, ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್ ಹಾಗೂ ಟಿಮ್ ಡೇವಿಡ್ ಅವರನ್ನು ಕಟ್ಟಿಹಾಕುವಲ್ಲಿ ಬೌಲರ್‌ಗಳು ಯಶಸ್ವಿಯಾದರೆ ಧೋನಿ ಕೆಂಗಣ್ಣಿನಿಂದ ತಪ್ಪಿಸಿಕೊಳ್ಳಬಹುದು.

ಆದರೆ ಮುಂಬೈ ಬೌಲರ್‌ಗಳು ಆರ್‌ಸಿಬಿ ಎದುರು ತೋರಿದ ಪ್ರದರ್ಶನವನ್ನು ಇಲ್ಲಿಯೂ ಮುಂದುವರಿಸಿದರೆ ಜಯದ ಹಾದಿ ಕಠಿಣವಾಗಬಹುದು. ಏಕೆಂದರೆ ಚೆನ್ನೈನ ಆರಂಭಿಕ ಬ್ಯಾಟರ್ ರುತುರಾಜ್ ಗಾಯಕವಾಡ ಎರಡು ಅರ್ಧಶತಕ ಗಳಿಸಿ ಅಮೋಘ ಲಯದಲ್ಲಿದ್ದಾರೆ. ಅವರೊಂದಿಗೆ ಡೆವೊನ್ ಕಾನ್ವೆ, ಅಂಬಟಿ ರಾಯುಡು, ಆಲ್‌ರೌಂಡರ್ ಮೋಯಿನ್ ಅಲಿ ಮತ್ತು ರವೀಂದ್ರ ಜಡೇಜ ಅವರು ತಮ್ಮ ನೈಜ ಆಟಕ್ಕೆ ಮರಳಿದರೆ ಮುಂಬೈ ಬೌಲಿಂಗ್ ಪಡೆಗೆ ಕಠಿಣವಾಗಬಹುದು.

ವಾಂಖೆಡೆ ಕ್ರೀಡಾಂಗಣದ ಪಿಚ್‌ನಲ್ಲಿ ಕೂಡ ರನ್‌ಗಳ ಹೊಳೆ ಹರಿಯುವ ನಿರೀಕ್ಷೆ ಇದೆ. ಈ ಆವೃತ್ತಿಯಲ್ಲಿ ಇಲ್ಲಿ ನಡೆಯುತ್ತಿರುವ ಮೊದಲ ಪಂದ್ಯ ಇದಾಗಿದೆ.

ಐಪಿಎಲ್ ಸಾಧನೆ

ತಂಡ	ಪ್ರಶಸ್ತಿ	ರನ್ನರ್ಸ್ ಅಪ್
ಮುಂಬೈ	5	1
ಚೆನ್ನೈ	4	5

ಧೋನಿ ಸಿಕ್ಸರ್?: ಈ ಐಪಿಎಲ್‌ನಲ್ಲಿ ಚೆನ್ನೈ ಆಡಿರುವ ಎರಡೂ ಪಂದ್ಯಗಳಲ್ಲಿ ಮಹೇಂದ್ರಸಿಂಗ್ ಧೋನಿ ಸಿಕ್ಸರ್‌ಗಳನ್ನು ಸಿಡಿಸಿ ಅಭಿಮಾನಿಗಳ ಸಂತಸ ಹೆಚ್ಚಿಸಿದ್ದರು. ವಾಂಖೆಡೆ ಕ್ರೀಡಾಂಗಣದಲ್ಲಿಯೂ ಅವರು ‘ಭುಜಬಲ’ ಮೆರೆಯುವ ನಿರೀಕ್ಷೆಯಲ್ಲಿ ಅಭಿಮಾನಿಗಳಿದ್ದಾರೆ.

ಇಲ್ಲಿ 2011ರಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಧೋನಿ ವಿಜಯದ ಸಿಕ್ಸರ್ ಹೊಡೆದಿದ್ದರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್.

ತಂಡಗಳು: ಮುಂಬೈ ಇಂಡಿಯನ್ಸ್: ರೋಹಿತ್ ಶರ್ಮಾ (ನಾಯಕ), ಸೂರ್ಯಕುಮಾರ್ ಯಾದವ್, ಟಿಮ್ ಡೇವಿಡ್, ಡಿವಾಲ್ಡ್ ಬ್ರೆವಿಸ್, ತಿಲಕ್ ವರ್ಮಾ, ಇಶಾನ್ ಕಿಶನ್ (ವಿಕೆಟ್‌ಕೀಪರ್), ಟ್ರಿಸ್ಟನ್ ಸ್ಟಬ್ಸ್, ವಿಷ್ಣು ವಿನೋದ್, ಕ್ಯಾಮರಾನ್ ಗ್ರೀನ್, ಅರ್ಜುನ್ ತೆಂಡೂಲ್ಕರ್, ರಮಣದೀಪ್ ಸಿಂಗ್, ಶಮ್ಸ್ ಮಲಾನಿ, ರಿಲೀ ಮೆರೆಡಿತ್, ನೆಹಲ್ ವದೇರಾ, ಹೃತಿಕ್ ಶೊಕೀನ್, ಅರ್ಷದ್ ಖಾನ್, ಡಾನ್ ಜಾನ್ಸೆನ್, ಪಿಯೂಷ್ ಚಾವ್ಲಾ, ಕುಮಾರ ಕಾರ್ತಿಕೇಯ, ರಾಘವ್ ಗೋಯಲ್, ಜೋಫ್ರಾ ಆರ್ಚರ್, ಜೇಸನ್ ಬೆಹ್ರನ್‌ಡಾರ್ಫ್, ಆಕಾಶ್ ಮಧವಾಲ್.
ಚೆನ್ನೈ ಸೂಪರ್ ಕಿಂಗ್ಸ್: ಮಹೇಂದ್ರಸಿಂಗ್ ಧೋನಿ (ನಾಯಕ–ವಿಕೆಟ್‌ಕೀಪರ್), ಡೆವೊನ್ ಕಾನ್ವೆ, ರುತುರಾಜ್ ಗಾಯಕವಾಡ, ಅಂಬಟಿ ರಾಯುಡು, ಮೋಯಿನ್ ಅಲಿ, ಬೆನ್ ಸ್ಟೋಕ್ಸ್, ರವೀಂದ್ರ ಜಡೇಜ, ಅಜಿಂಕ್ಯ ರಹಾನೆ, ಸಿಸಾಂದ ಮಗಾಲ, ಶಿವಂ ದುಬೆ, ಡ್ವೇನ್ ಪ್ರಿಟೋರಿಯಸ್, ಅಜಯ್ ಮಂಡಲ್, ನಿಶಾಂತ್ ಸಿಂಧು, ರಾಜವರ್ಧನ್ ಹಂಗರಗೇಕರ್, ಮಿಚೆಲ್ ಸ್ಯಾಂಟನರ್, ಸುಬ್ರಾಂಶು ಸೇನಾಪತಿ, ಸಿಮರ್‌ಜೀತ್ ಸಿಂಗ್, ಮಥೀಷಾ ಪಥಿರಾಣಾ, ಮಹೇಶ್ ತೀಕ್ಷಣ, ಭಗತ್ ವರ್ಮಾ, ಪ್ರಶಾಂತ್ ಸೋಳಂಕಿ, ಶೇಖ್ ರಶೀದ್, ತುಷಾರ್ ದೇಶಪಾಂಡೆ.

ರಾಜಸ್ಥಾನ ರಾಯಲ್ಸ್ ಎದುರು ಪೈಪೋಟಿ ಇಂದು

ಬ್ಯಾಟಿಂಗ್ ಸಾಮರ್ಥ್ಯ ಸುಧಾರಣೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಚಿತ್ತ



ಸಂಜು ಸ್ಯಾಮ್ಸನ್– ಎಎಫ್‌ಪಿ ಚಿತ್ರ

ಗುವಾಹಟಿ (ಪಿಟಿಐ): ಬ್ಯಾಟಿಂಗ್ ಸಾಮರ್ಥ್ಯ ಸುಧಾರಿಸಿಕೊಳ್ಳುವತ್ತ ಚಿತ್ತ ನೆಟ್ಟಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಐಪಿಎಲ್ ಟೂರ್ನಿಯಲ್ಲಿ ಶನಿವಾರ ರಾಜಸ್ಥಾನ ರಾಯಲ್ಸ್ ಸವಾಲು ಎದುರಿಸಲಿದೆ.

ವೇಗಿಗಳಾದ ಮಾರ್ಕ್ ವುಡ್ (ಲಖನೌ ಸೂಪರ್ ಜೈಂಟ್ಸ್) ಹಾಗೂ ಅಲ್ಜರಿ ಜೋಸೆಫ್ (ಗುಜರಾತ್ ಟೈಟನ್ಸ್) ಅವರು ಮೊದಲೆರಡು ಪಂದ್ಯಗಳಲ್ಲಿ ಡೆಲ್ಲಿ ತಂಡದ ಪೃಥ್ವಿ ಶಾ ಮತ್ತು ಸರ್ಫರಾಜ್ ಖಾನ್ ಅವರನ್ನು ಕಟ್ಟಿಹಾಕಿದ್ದರು.

ಈ ಪಂದ್ಯದಲ್ಲಿ ರಾಜಸ್ಥಾನ ವೇಗಿಗಳಾದ ಟ್ರೆಂಟ್ ಬೌಲ್ಟ್, ಜೇಸನ್ ಹೋಲ್ಡರ್ ಮತ್ತು ಕೆ.ಎಂ. ಆಸಿಫ್ ಅವರ ಸವಾಲಿಗೆ ಡೆಲ್ಲಿ ಬ್ಯಾಟರ್‌ಗಳು ಸಜ್ಜಾಗಬೇಕಿದೆ. ಇವರು ಗಂಟೆಗೆ 130 ಕಿಲೊ ಮೀಟರ್ ವೇಗದ ಆಸುಪಾಸಿನಲ್ಲಿ ಚೆಂಡು ಎಸೆಯುವ ಸಾಮರ್ಥ್ಯವುಳ್ಳವರು. ಆರ್. ಅಶ್ವಿನ್, ಯಜುವೇಂದ್ರ ಚಾಹಲ್ ಅವರು ಸ್ಪಿನ್‌ನಲ್ಲಿ ಮೋಡಿ ಮಾಡಬಹುದು.

ತಂಡದ ನಾಯಕ ಡೇವಿಡ್ ವಾರ್ನರ್, ಯಶ್ ಧುಲ್, ರಿಪಲ್ ಪಟೇಲ್ ಮತ್ತು ಲಲಿತ್ ಯಾದವ್ ರಟ್ಟೆಯರಳಿಸಿದರೆ ಡೆಲ್ಲಿ ಗೆಲುವಿನ ಕನಸು ನನಸಾಗಬಹುದು.

ರಾಜಸ್ಥಾನ ತಂಡದ ಯಶಸ್ವಿ ಜೈಸ್ವಾಲ್ ಮತ್ತು ನಾಯಕ ಸಂಜು ಸ್ಯಾಮ್ಸನ್ ಉತ್ತಮ ಲಯದಲ್ಲಿದ್ದಾರೆ. ಜೋಸ್ ಬಟ್ಲರ್ ಗಾಯಗೊಂಡಿದ್ದು, ಈ ಪಂದ್ಯದಲ್ಲಿ ಆಡುತ್ತಿಲ್ಲ.

ಡೆಲ್ಲಿಯ ಬೌಲರ್‌ಗಳಾದ ಖಲೀಲ್ ಅಹಮದ್, ಆ್ಯನ್ರಿಚ್ ನಾಕಿಯಾ ಮತ್ತು ಕುಲದೀಪ್ ಯಾದವ್ ಅವರ ಸವಾಲಿಗೆ ಸಜ್ಜಾಗುವ ಉತ್ಸಾಹ ಅವರದು.

ತಾನಾಡಿದ ಎರಡು ಪಂದ್ಯಗಳ ಪೈಕಿ ರಾಜಸ್ಥಾನ ತಲಾ ಒಂದು ಗೆಲುವು ಮತ್ತು ಸೋಲು ಕಂಡಿದ್ದು, ಈ ಹಣಾಹಣಿಯಲ್ಲಿ ಗೆಲುವಿನ ನೆಚ್ಚಿನ ತಂಡ ಎನಿಸಿದೆ.

ಡೆಲ್ಲಿ ತಂಡವು ಆಡಿದ ಎರಡೂ ಪಂದ್ಯಗಳಲ್ಲೂ ನಿರಾಸೆ ಅನುಭವಿಸಿತ್ತು. ಈ ಪಂದ್ಯದಲ್ಲಿ ಜಯದ ವಿಶ್ವಾಸ ಆ ತಂಡದ್ದು.

ಪಂದ್ಯ ಆರಂಭ: ಮಧ್ಯಾಹ್ನ 3.30



ಪ್ರಶಸ್ತಿ ಗೆದ್ದ ವರ್ಲ್‌ವಿಂಡ್ ಕ್ರಿಕೆಟರ್ಸ್ ತಂಡ (ಎಡದಿಂದ ಬಲಕ್ಕೆ), ನಿಂತವರು: ಸಯಾನ್ ಅರ್ಜುನ್, ಅನ್ಷುಲ್ ಅಗರವಾಲ್, ಕೌಶಿಕ್ ನಾಯರ್, ಎಸ್. ಅಭಿಷೇಕ್, ಎಸ್. ದಿವಿನ್, ಹಿಮಾಂಶು ರೆಡ್ಡಿ, ಸಿ.ಆರ್. ಕುಮಾರಸ್ವಾಮಿ, ಎಸ್. ಸಂಜಯ್, ಎನ್. ಸಮರ್ಥ್, ಶ್ರೇಯಾಂಕ್ ಸಾಗರ್, ಎಂ. ರಿಷಭ್. ಕುಳಿತವರು: ರಾಹುಲ್ ಘೋಷ್, ಕೆ.ವಿ. ಭರತ್, ಅರವಿಂದ್ ಶ್ರೀನಾಥ್, ಆರ್. ಪ್ರಕಾಶ್ (ಅಧ್ಯಕ್ಷ), ರಾಹುಲ್ ಮೆನನ್ (ಕಾರ್ಯದರ್ಶಿ), ಕುಶಾಲ್ ಕಟಾರ (ನಾಯಕ), ಅನುರಾಜ್ ಪಣಿಕ್ಕರ್

ವರ್ಲ್‌ವಿಂಡ್ ಕ್ರಿಕೆಟರ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಲ್‌ವಿಂಡ್ ಕ್ರಿಕೆಟರ್ಸ್ ತಂಡದವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಗುಂಪು ಒಂದರ ನಾಲ್ಕನೇ ಡಿವಿಷನ್ ಮೆಟ್ರೊ ಶೀಲ್ಡ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಗ್ರೀನ್ ಸ್ಪೋರ್ಟ್ಸ್ ವಿಲೇಜ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ವರ್ಲ್‌ವಿಂಡ್ 21 ರನ್‌ಗಳಿಂದ ಮಿನರ್ವ ಕ್ರಿಕೆಟ್ ಕ್ಲಬ್ ತಂಡವನ್ನು ಪರಾಭವಗೊಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವರ್ಲ್‌ವಿಂಡ್ ಕ್ರಿಕೆಟರ್ಸ್: 43.2 ಓವರ್‌ಗಳಲ್ಲಿ 146. ಮಿನರ್ವ ಸಿಸಿ: 27.4 ಓವರ್‌ಗಳಲ್ಲಿ 93. ಎರಡನೇ ಇನಿಂಗ್ಸ್: ವರ್ಲ್‌ವಿಂಡ್ ಕ್ರಿಕೆಟರ್ಸ್: 30 ಓವರ್‌ಗಳಲ್ಲಿ 7 ವಿಕೆಟ್‌ಗೆ 159. ಮಿನರ್ವ: 29.3 ಓವರ್‌ಗಳಲ್ಲಿ 191 (ರಮೇಶ್ ಎಸ್.27, ವರುಣ್ ಅನ್ನದಾನಿ 46, ಭಾರ್ಗವ್ ಕೆ.ಪಿ. 29; ಶ್ರೇಯಾಂಕ್ ಸಾಗರ್ 59ಕ್ಕೆ 6). ಫಲಿತಾಂಶ: ವರ್ಲ್‌ವಿಂಡ್ ಕ್ರಿಕೆಟರ್ಸ್‌ಗೆ 21 ರನ್‌ಗಳ ಜಯ ಮತ್ತು ಪ್ರಶಸ್ತಿ

ಹಾಕಿ ತಂಡಗಳಿಗೆ ನೆರವು ಸಿಬ್ಬಂದಿ ನೇಮಕ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ಆ್ಯಂಟನಿ ಫರಿ ಮತ್ತು ದಕ್ಷಿಣ ಆಫ್ರಿಕಾದ ರೆಟ್ ಹಾಲ್ಕೆಟ್ ಅವರು ಕ್ರಮವಾಗಿ ಭಾರತದ ಮಹಿಳಾ ಮತ್ತು ಪುರುಷರ ಹಾಕಿ ತಂಡಗಳ ಅನಾಲಿಟಿಕಲ್ ಕೋಚ್‌ಗಳಾಗಿ ನೇಮಕಗೊಂಡಿದ್ದಾರೆ. ಹಾಕಿ ಇಂಡಿಯಾ ಶುಕ್ರವಾರ ಈ ವಿಷಯ ತಿಳಿಸಿದೆ.

ತಂಡಗಳ ಇನ್ನುಳಿದ ನೆರವು ಸಿಬ್ಬಂದಿಯನ್ನೂ ರಾಷ್ಟ್ರೀಯ ಫೆಡರೇಷನ್ ಪ್ರಕಟಿಸಿದೆ.

ಪುರುಷರ ತಂಡದ ವೈಜ್ಞಾನಿಕ ಸಲಹೆಗಾರರಾಗಿ ಆಸ್ಟ್ರೇಲಿಯಾದ ಅಲನ್ ಟಾನ್ ನೇಮಕವಾಗಿದ್ದು, ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಅವರೊಂದಿಗೆ ಕಾರ್ಯನಿರ್ವಹಿಸಲಿದ್ದಾರೆ.

ಫರಿ ಅವರ ಮಾರ್ಗದರ್ಶನದಲ್ಲಿ ಕೆನಡಾ ಪುರುಷರ ತಂಡವು 2016ರ ರಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿತ್ತು. ಅಲ್ಲದೆ ಜಪಾನ್ ಮಹಿಳಾ ತಂಡವು 2018ರಲ್ಲಿ ಚೊಚ್ಚಲ ಏಷ್ಯನ್ ಗೇಮ್ಸ್ ಚಿನ್ನದ ಪದಕ ಜಯಿಸಿತ್ತು.

ಭಾರತ ಮಹಿಳಾ ತಂಡದ ಮುಖ್ಯ ಕೋಚ್ ಜಾನೆಕ್ ಶಾಪ್‌ಮನ್ ಅವರೊಂದಿಗೆ ಫರಿ ಕಾರ್ಯನಿರ್ವಹಿಸಲಿದ್ದಾರೆ.

ಕ್ರಿಕೆಟ್ ಟೆಸ್ಟ್: ಬಾಂಗ್ಲಾದೇಶಕ್ಕೆ ನಿರೀಕ್ಷಿತ ಜಯ

ಮೀರ್‌ಪುರ್, ಬಾಂಗ್ಲಾದೇಶ (ಎಪಿ): ಐರ್ಲೆಂಡ್ ವಿರುದ್ಧದ ಏಕೈಕ ಟೆಸ್ಟ್ ಪಂದ್ಯವನ್ನು ಬಾಂಗ್ಲಾದೇಶ ತಂಡ, ನಾಲ್ಕನೇ ದಿನವಾದ ಶುಕ್ರವಾರ ಊಟದ ವಿರಾಮ ಕಳೆದು ಕೆಲವೇ ಹೊತ್ತಿನಲ್ಲಿ ಏಳು ವಿಕೆಟ್‌ಗಳಿಂದ ಗೆದ್ದುಕೊಂಡಿತು.

ಮೊದಲ ಇನಿಂಗ್ಸ್‌ನಲ್ಲಿ ಶತಕ (126) ಬಾರಿಸಿದ್ದ ವಿಕೆಟ್ ಕೀಪರ್ ಮುಷ್ಫಿಕುರ್ ರಹೀಮ್ ಔಟಾಗದೇ 51 ರನ್ ಹೊಡೆದು ತಂಡವನ್ನು ಗೆಲುವಿನ ಹಾದಿಯಲ್ಲಿ ನಡೆಸಿದರು.

ಗೆಲುವಿಗೆ 137 ರನ್ ಗಳಿಸಬೇಕಾಗಿದ್ದ ಬಾಂಗ್ಲಾದೇಶ 27.1 ಓವರುಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ಗುರಿತಲುಪಿತು.

ಐರ್ಲೆಂಡ್ ತಂಡ, ಲೋರ್ಕನ್ ಟಕರ್ (108) ಅವರ ಶತಕದ ಆಟದಿಂದಾಗಿ ಈ ಪಂದ್ಯವನ್ನು ನಾಲ್ಕನೇ ದಿನಕ್ಕೆ ಒಯ್ಯುವಲ್ಲಿ ಯಶಸ್ವಿಯಾಗಿತ್ತು.

ಸಂಕ್ಷಿಪ್ತ ಸ್ಕೋರ್: ಐರ್ಲೆಂಡ್ ಮೊದಲ ಇನಿಂಗ್ಸ್ 214 ಮತ್ತು ಎರಡನೇ ಇನಿಂಗ್ಸ್ 116 ಓವರುಗಳಲ್ಲಿ 292 (ಮೆಕ್‌ಬ್ರೈನ್ 72; ತೈಜುಲ್ ಇಸ್ಲಾಂ 90ಕ್ಕೆ 4) ಬಾಂಗ್ಲಾದೇಶ ಮೊದಲ ಇನಿಂಗ್ಸ್ 369 ಮತ್ತು ಎರಡನೇ ಇನಿಂಗ್ಸ್ 27.1 ಓವರುಗಳಲ್ಲಿ 3 ವಿಕೆಟ್‌ಗೆ 138 (ಮುಷ್ಫಿಕರ್ ರಹೀಂ ಔಟಾಗದೇ 51)

ಉಕ್ರೇನ್ ಸ್ಪರ್ಧಿಗಳ ಒಲಿಂಪಿಕ್ಸ್ ಕನಸು ನುಚ್ಚುನೂರಾಗುವ ಆತಂಕ

ಈಜುಗಾರ್ತಿಯರ ಭವಿಷ್ಯ ತೂಗುಯ್ಯಾಲೆಯಲ್ಲಿ



ಅಭ್ಯಾಸ ನಡೆಸುತ್ತಿರುವ ವ್ಲಾಡಿಸ್ಲಾವಾ (ಎಡ) ಮತ್ತು ಮರಿನಾ ಅಲೆಕ್ಸಿಯೆವಾ– ಎಎಫ್‌ಪಿ ಚಿತ್ರ

ಕೀವ್ (ರಾಯಿಟರ್ಸ್): ಮುಂದಿನ ವರ್ಷ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ ಕ್ರೀಡೆಗಳ ಸಿದ್ಧತೆಗಾಗಿ ಉಕ್ರೇನ್‌ನ ಆರ್ಟಿಸ್ಟಿಕ್ ಈಜುಗಾರ್ತಿಯರಾದ ಮರಿನಾ ಮತ್ತು ವ್ಲಾಡಿಸ್ಲಾವಾ ಅಲೆಕ್ಸಿಯೆವಾ ವರ್ಷಗಳಿಂದ ಕಠಿಣ ತರಬೇತಿ ಪಡೆಯುತ್ತಿದ್ದಾರೆ. ಆದರೆ ಈಗ ಸರ್ಕಾರ ತಳೆದಿರುವ ನಿರ್ಧಾರದಿಂದ ಕೂಟದಲ್ಲಿ ಸ್ಪರ್ಧಿಸಬೇಕೆನ್ನುವ ಅವರ ಕನಸು ನುಚ್ಚುನೂರಾಗುವ ಆತಂಕ ಎದುರಾಗಿದೆ.

ಒಲಿಂಪಿಕ್ಸ್‌ನ ಅರ್ಹತಾ ಟೂರ್ನಿಗಳಲ್ಲಿ ರಷ್ಯಾದ ಸ್ಪರ್ಧಿಗಳು ಕಣಕ್ಕಿಳಿದರೆ, ತನ್ನ ಅಥ್ಲೀಟ್‌ಗಳಿಗೆ ಅವಕಾಶ ನೀಡದೇ ಇರಲು ಉಕ್ರೇನ್ ಸರ್ಕಾರ ನಿರ್ಧರಿಸಿದೆ.

ಕಳೆದ ವರ್ಷ ಉಕ್ರೇನ್ ಮೇಲೆ ದಾಳಿ ಆರಂಭವಾದ ಬಳಿಕ ನಿಷೇಧ ಎದುರಿಸುತ್ತಿರುವ ರಷ್ಯಾ ಹಾಗೂ ಬೆಲಾರೂಸ್ ದೇಶದ ಅಥ್ಲೀಟ್‌ಗಳಿಗೆ ತಟಸ್ಥವಾಗಿ ಸ್ಪರ್ಧಿಸಲು ಅವಕಾಶ ನೀಡಬೇಕೆಂದು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ (ಐಒಸಿ) ಶಿಫಾರಸು ಮಾಡಿದೆ.

ಮುಂಬರುವ ಒಲಿಂಪಿಕ್ಸ್‌ನಲ್ಲಿ ರಷ್ಯಾ ಮತ್ತು ಬೆಲಾರೂಸ್ ತಂಡಗಳ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಐಒಸಿ ಪ್ರತ್ಯೇಕ ನಿರ್ಧಾರ ತೆಗೆದುಕೊಳ್ಳಲಿದೆ. ಆ ದೇಶದ ಕ್ರೀಡಾಪಟುಗಳಿಗೆ ಅವಕಾಶ ಮಾಡಿಕೊಟ್ಟರೆ ತಾನು ಕೂಟವನ್ನು ಬಹಿಷ್ಕರಿಸುವುದಾಗಿ ಉಕ್ರೇನ್ ಬೆದರಿಕೆ ಹಾಕಿದೆ.

‘ಒಂದೊಮ್ಮೆ ಅವರು (ರಷ್ಯಾದ ಅಥ್ಲೀಟ್‌ಗಳು) ಹೋದರೆ, ನಾವು ಹೋಗುವುದಿಲ್ಲ. ನಾವು ಅವರನ್ನು ಭೇಟಿಯಾಗಬಯಸುವುದಿಲ್ಲ. ಅವರ ಸ್ಪರ್ಧೆ ತಡೆಯಲು ಫೆಡರೇಷನ್‌ಗಳು ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಒತ್ತಾಯಿಸುತ್ತಾರೆ ವ್ಲಾಡಿಸ್ಲಾವಾ.

ಅವಳಿ ಸಹೋದರಿಯರಾದ 21 ವರ್ಷದ ಮರಿನಾ ಮತ್ತು ವ್ಲಾಡಿಸ್ಲಾವಾ, ರಷ್ಯಾ ದಾಳಿ ಆರಂಭಿಸಿದ ಸಂದರ್ಭದಲ್ಲಿ ಕೀವ್‌ನಿಂದ ಪೂರ್ವಭಾಗದ ನಗರ ಹಾರ್ಕಿವ್‌ಗೆ ಪಲಾಯನ ಮಾಡಿದ್ದರು.

2021ರ ಟೋಕಿಯೊ ಒಲಿಂಪಿಕ್ಸ್‌ನ ತಂಡ ವಿಭಾಗದಲ್ಲಿ ಈ ಸಹೋದರಿಯರು ಕಂಚು ಗೆದ್ದಿದ್ದರು.

ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ

ನಾಲ್ಕರ ಘಟ್ಟಕ್ಕೆ ಪ್ರಿಯಾಂಶು



ಪ್ರಿಯಾಂಶು ರಾಜಾವತ್

ಆರ್ಲಿಯನ್ಸ್, ಫ್ರಾನ್ಸ್ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಭಾರತದ ಪ್ರಿಯಾಂಶು ರಾಜಾವತ್ ಅವರು ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ ಪ್ರಿಯಾಂಶು 21-18, 21-18ರಿಂದ ಚೀನಾ ತೈಪೆಯ ಚಿ ಯು ಜೆನ್ ಅವರನ್ನು ಪರಾಭವಗೊಳಿಸಿದರು. 44 ನಿಮಿಷಗಳಲ್ಲಿ ಪಂದ್ಯವನ್ನು ತಮ್ಮದಾಗಿಸಿಕೊಂಡರು. ಪ್ರಿಯಾಂಶು ಅವರಿಗೆ ಸೆಮಿಫೈನಲ್‌ನಲ್ಲಿ ಐರ್ಲೆಂಡ್‌ನ ನಹತ್ ಎನ್‌ಗುಯೆನ್ ಸವಾಲು ಎದುರಾಗಿದೆ.

ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಪ್ರಿಯಾಂಶು ಅವರು ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಮಣಿಸಿದ್ದರು.

ಪುರುಷರ ಡಬಲ್ಸ್‌ನ ಎರಡನೇ ಸುತ್ತಿನಲ್ಲಿ ಭಾರತದ ಎಂ.ಆರ್. ಅರ್ಜುನ್ ಮತ್ತು ಧ್ರುವ ಕಪಿಲ ಜೋಡಿಯು 21-15, 17-21, 21-16ರಿಂದ ಜಪಾನ್‌ನ ಕೆನ್ಯಾ ಮಿತ್ಸುಹಶಿ ಮತ್ತು ಹಿರೋಕಿ ಒಕಮುರಾ ಎದುರು ಗೆದ್ದರು.

ಮಹಿಳಾ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಜರ್ಮನಿಯ ಯುವೊನ್ ಲೀ 21-18, 21-12ರಿಂದ ಇಂಡೊನೇಷ್ಯಾದ ಪುತ್ರಿ ಕುಸುಮ ವರ್ಧಿನಿ ಅವರನ್ನು ಮಣಿಸಿದರು.

ಬಿಸಿಸಿಐ ಅಪೆಕ್ಸ್ ಸಮಿತಿ ಸಭೆ ನಾಳೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಪೆಕ್ಸ್ ಕೌನ್ಸಿಲ್ ಸಭೆಯು ಭಾನುವಾರ ನಡೆಯಲಿದೆ.

ಭಾರತದ ಆತಿಥ್ಯದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ದ್ವಿಪಕ್ಷೀಯ ಕ್ರಿಕೆಟ್ ಸರಣಿಗಳ ಮಾಧ್ಯಮ ಪ್ರಸಾರ ಹಕ್ಕು ಹಾಗೂ ಭಾರತ ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ನೇಮಕ ಕುರಿತು ಚರ್ಚೆ ನಡೆಯಲಿದೆ.

ಹೋದ ವರ್ಷದ ಬಿಡ್‌ನಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮಾಧ್ಯಮ ಪ್ರಸಾರ ಹಕ್ಕುಗಳು ₹ 48,390 ಕೋಟಿಗೆ ಮಾರಾಟವಾಗಿದ್ದವು. ಇದರಿಂದಾಗಿ 2023-2027ರ ಅವಧಿಯ ಅಂತರರಾಷ್ಟ್ರೀಯ ಸರಣಿಗಳ ಹಕ್ಕುಗಳಿಗೂ ದೊಡ್ಡ ಮೊತ್ತ ಲಭಿಸುವ ನಿರೀಕ್ಷೆ ಇದೆ.

ವಯಾಕಾಮ್ -18 ಸಂಸ್ಥೆಯು ಕಣಕ್ಕಿಳಿಯುವುದರಿಂದ ಸ್ಟಾರ್ ಮತ್ತು ಸೋನಿ ಸೇರಿದಂತೆ ಮೂರು ಮಾಧ್ಯಮ ದಿಗ್ಗಜರ ನಡುವೆ ಪೈಪೋಟಿ ಏರ್ಪಡುವುದು ಬಹುತೇಕ ಖಚಿತವಾಗಿದೆ.

ಐಪಿಎಲ್‌ನಲ್ಲಿ ಬ್ರಾಡ್‌ಕಾಸ್ಟ್ ಮತ್ತು ಡಿಜಿಟಲ್ ಹಕ್ಕುಗಳನ್ನು ಪ್ರತ್ಯೇಕವಾಗಿ ಬಿಡ್ ಮಾಡಿತ್ತು. ಅದರಿಂದಾಗಿ ದೊಡ್ಡ ಮೊತ್ತದ ಆದಾಯವು ಮಂಡಳಿಗೆ ಲಭಿಸಿತ್ತು.

ಸ್ವದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಕ್ರಿಕೆಟ್ ಸರಣಿಗಳ ಪ್ರಸಾರ ಹಕ್ಕುಗಳಿಗಾಗಿ ಈ ಹಿಂದೆ ಸ್ಟಾರ್ ಸಂಸ್ಥೆಯು ₹ 6,138.1 ಕೋಟಿ ನೀಡಿತ್ತು. ಅದರೊಂದಿಗಿನ ಒಪ್ಪಂದವು ಮಾರ್ಚ್ 31ರಂದು ಮುಗಿದಿದೆ.

ಮಹಿಳಾ ಕ್ರಿಕೆಟ್ ತಂಡವು ಈಚೆಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿತ್ತು. ಆ ಸಂದರ್ಭದಲ್ಲಿ ತಂಡಕ್ಕೆ ಮುಖ್ಯ ಕೋಚ್ ಇರಲಿಲ್ಲ. ನಿಕಟಪೂರ್ವ ಕೋಚ್ ರಮೇಶ್ ಪೊವಾರ್ ಅವರ ಕಾರ್ಯಾವಧಿಯು ಕಳೆದ ಡಿಸೆಂಬರ್‌ನಲ್ಲಿ ಮುಗಿದಿತ್ತು. ಬ್ಯಾಟಿಂಗ್ ಕೋಚ್ ಹೃಷಿಕೇಶ್ ಕಾನಿಟ್ಕರ್ ಅವರಿದ್ದರು.

ಭಾರತದಲ್ಲಿ ಇದೇ ವರ್ಷ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಆಯೋಜನೆಗೆ ತಗುಲಲಿರುವ ತೆರಿಗೆಯಲ್ಲಿ ರಿಯಾಯಿತಿ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸುವ ಕುರಿತು ಸಭೆಯಲ್ಲಿ ಚರ್ಚಿಸುವ ಸಾಧ್ಯತೆ ಇದೆ.

ಆಟಗಾರರ ಒಪ್ಪಂದ, ಬಿಸಿಸಿಐ ಅಧಿಕಾರಿಗಳ ಪರಿಷ್ಕೃತ ನಿಯಮಾವಳಿ ಮತ್ತು 2023-24ರ ದೇಶಿ ಕ್ರಿಕೆಟ್ ವೇಳಾಪಟ್ಟಿ, ಜೆರ್ಸಿ ಪ್ರಾಯೋಜಕತ್ವ ಕುರಿತು ಚರ್ಚೆ ನಡೆಯಲಿವೆ.

ಮಹಿಳಾ ಕ್ರಿಕೆಟ್: ಜೌನ್‌ಪುರ ವಿ.ವಿ.ಗೆ ಸುಲಭ ಜಯ

ಪ್ರಜಾವಾಣಿ ವಾರ್ತೆ

ಮೈಸೂರು: ಉತ್ತರ ಪ್ರದೇಶದ ಜೌನಪುರ ವಿಬಿಎಸ್‌ಪಿ ವಿಶ್ವವಿದ್ಯಾಲಯ ತಂಡ, ಇಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ 129 ರನ್‌ಗಳಿಂದ ಆಂಧ್ರ ವಿಶ್ವವಿದ್ಯಾಲಯ ವಿರುದ್ಧ ಸುಲಭ ಜಯ ಪಡೆಯಿತು.

ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಜೌನ್‌ಪುರದ ತಂಡ 25 ಓವರುಗಳಲ್ಲಿ 5 ವಿಕೆಟ್‌ಗೆ 193 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಗುರುವಾರ ಶಿವಾಜಿ ವಿಶ್ವವಿದ್ಯಾಲಯ ವಿರುದ್ಧದ ಪಂದ್ಯದಲ್ಲಿ ಶತಕ (100) ಬಾರಿಸಿದ್ದ ಶಿವಪ್ರಿಯಾ ಈ ಪಂದ್ಯದಲ್ಲಿ 46 ರನ್‌ಗಳ ಕಾಣಿಕೆಯಿತ್ತರು. ಶೋಭಾ ದೇವಿ (44) ಹಾಗೂ ಶಿಪ್ರಾ ಗಿರಿ (38) ಕೂಡ ಉಪಯುಕ್ತ ಕಾಣಿಕೆ ನೀಡಿದರು.

ಇದಕ್ಕೆ ಉತ್ತರವಾಗಿ ಆಂಧ್ರ ವಿ.ವಿ ತಂಡ 17.2 ಓವರ್‌ನಲ್ಲಿ 64 ರನ್‌ಗೆ ಕುಸಿಯಿತು. ಅಂಜಲಿ ಸಿಂಗ್ ಮತ್ತು ಸೊನಾಲಿ ಸಿಂಗ್ ತಲಾ ಮೂರು ವಿಕೆಟ್ ಪಡೆದರು.

ಅಮೃತಸರದ ಗುರುನಾನಕ್ ದೇವ್ ವಿಶ್ವವಿದ್ಯಾಲಯ ತಂಡವು ಜೈಪುರದ ರಾಜಸ್ಥಾನ ವಿಶ್ವವಿದ್ಯಾಲಯದ ಎದುರು 10 ವಿಕೆಟ್‌ಗಳ ನಿರಾಯಾಸ ಗೆಲುವು ಸಾಧಿಸಿತು. ಪುಣೆಯ ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯವು 36 ರನ್‌ಗಳಿಂದ ಹರಿಯಾಣದ ರೋಹ್ಟಕ್‌ನ ಮಹರ್ಷಿ ದಯಾನಂದ ವಿಶ್ವವಿದ್ಯಾಲಯ ತಂಡವನ್ನು ಮಣಿಸಿತು. ಪುಣೆ ತಂಡದ ಈಶ್ವರಿ ಸಾವಕಾರ್ ಅರ್ಧ ಶತಕ (59 ರನ್) ಸಿಡಿಸಿ ಗಮನ ಸೆಳೆದರು.



ಜೆರ್ಸಿ ಧರಿಸಿದ ಮಕ್ಕಳ ಸಂಭ್ರಮ

ಬಿಎಫ್‌ಸಿಯಿಂದ ಜೆರ್ಸಿ ದೇಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಚಾಂಪಿಯನ್ಸ್‌ಗಾಗಿ ಸಿದ್ಧಪಡಿಸಿದ್ದ ಟೀಶರ್ಟ್‌ಗಳನ್ನು ಬಡಮಕ್ಕಳಿಗೆ ದೇಣಿಗೆಯಾಗಿ ನೀಡಿದೆ. ಈ ಕಾರ್ಯಕ್ಕಾಗಿ ಪುಮಾ ಕಂಪನಿಯೊಂದಿಗೆ ಫ್ರಾಂಚೈಸ್ ಕೈ ಜೋಡಿಸಿದೆ.

ಈ ಬಾರಿಯ ಐಎಸ್‌ಎಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಬಿಎಫ್‌ಸಿ ತಂಡವು ಎಟಿಕೆ ಮೋಹನ್ ಬಾಗನ್ ಎದುರು ಸೋತು ರನ್ನರ್ಸ್‌ಅಪ್ ಆಗಿತ್ತು. ಹೀಗಾಗಿ 'ಚಾಂಪಿಯನ್ಸ್' ಹೆಸರಿನಲ್ಲಿ ಮೊದಲೇ ಸಿದ್ಧಪಡಿಸಿದ್ದ ತಂಡದ ಜೆರ್ಸಿಗಳು ಉಪಯೋಗಕ್ಕೆ ಬಂದಿರಲಿಲ್ಲ. ಈಗ ಅವುಗಳನ್ನು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ನೀಡಲಾಗಿದೆ. ತಂಡದ ಸಾಮಾಜಿಕ ಜಾಲತಾಣಗಳಲ್ಲಿ ಈ ಕುರಿತು ವಿಡಿಯೊ ಹಂಚಿಕೊಳ್ಳಲಾಗಿದೆ.

ಹಾಕಿ: ಫೈನಲ್‌ಗೆ ಕುಲ್ಲೇಟಿರ, ಕುಪ್ಪಂಡ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಕುಲ್ಲೇಟಿರ ಹಾಗೂ ಕುಪ್ಪಂಡ (ಕೈಕೇರಿ) ತಂಡಗಳು ಅಪ್ಪಚೆಟ್ಟೋಳಂಡ ಕಪ್‌ಗಾಗಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟವು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ, ಕುಲ್ಲೇಟಿರ ತಂಡದವರು ಶುಕ್ರವಾರ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ 4-3 ಗೋಲುಗಳಿಂದ ನೆಲ್ಲಮಕ್ಕಡ ತಂಡದ ವಿರುದ್ಧ ರೋಚಕ ಜಯ ಸಾಧಿಸಿದರು.

ಕುಲ್ಲೇಟಿರ ತಂಡದ ಪರ ಯಶಿಕ್ ಹಾಗೂ ನೆಲ್ಲಮಕ್ಕಡ ಪರ ಮೊಣ್ಣಪ್ಪ ಅವರು ಒಂದೊಂದು ಗೋಲು ಗಳಿಸಿದ್ದು, ನಿಗದಿ ಅವಧಿಯ ಆಟ ಸಮಬಲಗೊಂಡಿತ್ತು. ಪೆನಾಲ್ಟಿ ಶೂಟೌಟ್‌ನಲ್ಲಿ ಕುಲ್ಲೇಟಿರ ತಂಡದ ನಾಚಪ್ಪ, ಯತಿನ್ ಹಾಗೂ ಚಿಟ್ಟಿಯಪ್ಪ ಗೋಲು ಬಾರಿಸಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು.

ಕುಪ್ಪಂಡ (ಕೈಕೇರಿ) ತಂಡದವರು ಮತ್ತೊಂದು ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 4-2 ಗೋಲುಗಳಿಂದ ಪಳಂಗಂಡ ವಿರುದ್ಧ ಜಯ ಸಾಧಿಸಿದರು.

ಟೂರ್ನಿಯ ಫೈನಲ್ ಪಂದ್ಯ ಭಾನುವಾರ ನಡೆಯಲಿದೆ.

ಚೆಟ್ರಿ ಪಡೆಗೆ ಶ್ರೀನಿಧಿ ಡೆಕ್ಕನ್ ಸವಾಲು

ಕೋಯಿಕ್ಕೋಡ್ (ಪಿಟಿಐ): ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಎಫ್‌ಸಿ ತಂಡವು ಇಲ್ಲಿ ಶನಿವಾರ ನಡೆಯಲಿರುವ ಮೊದಲ ಪಂದ್ಯದಲ್ಲಿ ಶ್ರೀನಿಧಿ ಡೆಕ್ಕನ್ ಎಫ್‌ಸಿಯನ್ನು ಎದುರಿಸಲಿದೆ.

ನಾಲ್ಕು ವರ್ಷಗಳ ಬಳಿಕ ನಡೆಯುತ್ತಿರುವ ಟೂರ್ನಿಯಲ್ಲಿ 16 ತಂಡಗಳು ಭಾಗವಹಿಸುತ್ತಿದ್ದು, ಐಎಸ್‌ಎಲ್‌ನ 11 ಮತ್ತು ಐ ಲೀಗ್‌ನ 5 ತಂಡಗಳಿವೆ. 'ಎ' ಗುಂಪಿನ ಮತ್ತೊಂದು ಪಂದ್ಯದಲ್ಲಿ ಪಂಜಾಬ್ ಎಫ್‌ಸಿ- ಕೇರಳ ಬ್ಲಾಸ್ಟರ್ಸ್ ಸೆಣಸಲಿವೆ.

ಬಿಎಫ್‌ಸಿ-ಶ್ರೀನಿಧಿ ಡೆಕ್ಕನ್
ಪಂದ್ಯ ಆರಂಭ: ಸಂಜೆ 5
ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್

ಉದಕಮಂಡಲ ರೇಸ್

ರೊಮಾಲ್ಡೊ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ ಪೊಲೀಸ್ ಟ್ರೋಫಿಯು ಮೊದಲನೇ ಡಿವಿಷನ್ ಶನಿವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೊಮಾಲ್ಡೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11:00 ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಟಮ್ ಷವರ್ 4, ಬೆಲ್ಲಾ ಅಮೋರ್ 9, ಫೆನಿ 8
2ನೇ ರೇಸ್: ನೈಟ್‌ಜಾರ್ 3, ಬ್ಲ್ಯಾಕ್ ಲೇಬಲ್ 5, ಪ್ಯಾರಿಷ್ ಓ'ಕೊನೊರ್ 2
3ನೇ ರೇಸ್: ಸುಪ್ರೀಮ್ ಗ್ರ್ಯಾಂಡ್ಯೂರ್ 10, ಮಲ್ಟಿವೇವ್ 4, ಫ್ಲರ್ಟಿ ಹಾರ್ಟ್ 7
4ನೇ ರೇಸ್: ಕಿಂಗ್ಸ್ ಷೋ 2, ಡ್ಯಾನ್ಸಿಂಗ್ ಕ್ವೀನ್ 6, ವಿಸಾಕ 4
5ನೇ ರೇಸ್: ಗ್ಲೋರಿಯಸ್ ಲೆಜೆಂಡ್ 2, ಬಿಗ್ ಟೆಷರ್ 7, ರಾಯಲ್ ಕಿಡ್ 6
6ನೇ ರೇಸ್: ರೊಮಾಲ್ಡೊ 8, ಫರ್ನೆಟ್ ಬ್ರ್ಯಾಂಕ 2, ರಿಯಾನ್ನಾನ್ 4
7ನೇ ರೇಸ್: ಸ್ಲೈಂಟೊ 3, ಮ್ಯಾಜಿಕಲ್ ವಿಶ್ 2, ಎಂಪರರ್ ಅಶೋಕ 6

ಉತ್ತಮ ಬೆಟ್: ಸ್ಲೈಂಟೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಕೌಂಟಿ ಕ್ರಿಕೆಟ್ ಪೂಜಾರ ಶತಕ

ಹೋವ್, ಬ್ರಿಟನ್ (ಪಿಟಿಐ): ಭಾರತದ ಚೇತೇಶ್ವರ ಪೂಜಾರ ಅವರು ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಸೊಗಸಾದ ಶತಕ ಗಳಿಸಿದರು.

ಸಸೆಕ್ಸ್ ತಂಡವನ್ನು ಮುನ್ನಡೆಸುತ್ತಿರುವ ಅವರು ಡರ್ಹಮ್ ವಿರುದ್ಧದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶುಕ್ರವಾರ 115 ರನ್ ಕಲೆಹಾಕಿದರು. 163 ಎಸೆತಗಳನ್ನು ಎದುರಿಸಿದ ಅವರು 13 ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು.

ಸಸೆಕ್ಸ್ ತಂಡ ಎರಡನೇ ದಿನದಾಟದಲ್ಲಿ 9 ವಿಕೆಟ್‌ಗಳಿಗೆ 332 ರನ್ ಗಳಿಸಿದೆ. ಡರ್ಹಮ್ ಮೊದಲ ಇನಿಂಗ್ಸ್‌ನಲ್ಲಿ 376 ರನ್ ಗಳಿಸಿತ್ತು.